ಶ್ರೀ ಕೆ. ಎಚ್. ಪಾಟೀಲ್ (ಆಹಾರ ಮತ್ತು ಅರಣ್ಯ ಮಂತ್ರಿಗಳು).—ಉತ್ತರ (ಅ) ರೇಷನ್ ಕಾರ್ಡುಗಳು ೩,೪೮,೩೨೨ (ಸೆಪ್ಟೆಂಬರ್ ೧೯೭೩ರ ವರೆಗೆ).

	ಅಕ್ಕಿ	...	೨,[illegible]೦೦ ಟನ್ನುಗಳು
	ಗೋಧಿ	...	೪,೦೦೦ ಟನ್ನುಗಳು
	ಸಕ್ಕರೆ	...	೨೪,೦೦೦ ಕ್ವಿಂಟಾಲುಗಳು (ಅಂದಾಜಿನ ಮೇಲೆ)
(ಆ)	ಅಕ್ಕಿ	...	೫೦೦ ಗ್ರಾಂಗಳು (ಒಂದು ಯೂನಿಟ್ಟಿಗೆ)
	ಗೋಧಿ	...	೮೫೦ ಗ್ರಾಂಗಳು ,,
	ಸಕ್ಕರೆ	...	೫೦೦ ಗ್ರಾಂಗಳು ,,

(ಇ) ದೇಶದಲ್ಲಿ ಆಗಾಗ್ಗೆ ಅತಿವೃಷ್ಟಿ ಅನಾವೃಷ್ಟಿ ಸಂಭವಿಸುತ್ತಿರುವುದರಿಂದ ಯಾವಾಗ ಆಹಾರ ಸ್ವಾವಲಂಬನೆಯಾಗುವುದೆಂದು ಹೇಳಲು ಸಾಧ್ಯವಿಲ್ಲ. ಆದಾಗ್ಯೂ ಆಹಾರ ಸಮಸ್ಯೆಗಳನ್ನು ಬಗೆಹರಿಸಲು ಸರ್ಕಾರವು ತಕ್ಕ ಸೂಕ್ತಕ್ರಮಗಳನ್ನು ಕೈಕೊಂಡಿದೆ. ಸರ್ಕಾರದ ವಶದಲ್ಲಿರುವ ದಾಸ್ತಾನುಗಳನ್ನು ನ್ಯಾಯ ಬೆಲೆಯ ಅಂಗಡಿಗಳ ಮೂಲಕ ವ್ಯವಸ್ಥಿತ ರೀತಿಯಲ್ಲಿ ವಿತರಣೆ ಮಾಡುವುದರ ಜೊತೆಗೆ ನೆರೆಹೊರೆಯ ರಾಜ್ಯಗಳಿಂದ ಹೆಚ್ಚು ಹೆಚ್ಚಾಗಿ ಆಹಾರ ಪದಾರ್ಥಗಳನ್ನು ತರಿಸಿ ಹಂಚುವ ಏರ್ಪಾಡು ಮಾಡಲಾಗಿದೆ.

ಮಣ್ಣಗನಹಳ್ಳಿ ಸುತ್ತಮುತ್ತಲಿನ ಕಾಮಗಾರಿಗಳು

೬೯. ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್ (ಸಿರ್ಸಿ).—ಮಾನ್ಯ ಕಾಮಗಾರಿ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು ದಯೆವಿಟ್ಟು ಈ ವಿಷಯಗಳನ್ನು ತಿಳಿಸುವರೆ :—

(ಅ) ೧೯೭೩ ಫೆಬ್ರುವರಿ ಮಾಹೆಯಲ್ಲಿ ರಾಮನಗರದ ಡಿವಿಜನ್ ಎಕ್ಸಿಕ್ಯೂಟೀವ್‌ರವರು ಮಣ್ಣಗನಹಳ್ಳಿ ಗ್ರಾಮಕ್ಕೆ ಭೇಟಿ ನೀಡಿ ಕೆಲವು ಅವಶ್ಯಕ ಕಾಮಗಾರಿಗಳನ್ನು ಪರಿಶೀಲಿಸಿದ್ದು ನಿಜವೆ ;

(ಆ) ಅವರು ಪರಿಶೀಲಿಸಿದ ಕಾಮಗಾರಿಗಳು ಯಾವ್ಯಾವು, ಈ ಬಗ್ಗೆ ಇಲಾಖೆಯವರು ತೆಗೆದುಕೊಂಡ ಕಾರ್ಯಕ್ರಮಗಳಾವುವು ?

ಶ್ರೀ ಎಚ್. ಎಂ. ಚನ್ನಬಸಪ್ಪ (ಕಾಮಗಾರಿ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು).—

ಉತ್ತರ : (ಅ) ಹೌದು.

(ಆ) ಪರಿಶೀಲಿಸಿದ ನೀರಾವರಿ ಕಾಮಗಾರಿಗಳು	ಇಲಾಖೆ ತೆಗೆದುಕೊಂಡ ಕ್ರಮ
ಒಂತಲುಕುಪ್ಪೆಕೆರೆ ಕೋಡಿ ಹಳ್ಳಕ್ಕೆ ಕಟ್ಟಿದ್ದ ಪೈಪು ಕ್ರಾಸಿಂಗ್ ಪ್ರವಾಹದಿಂದ ಕಿತ್ತು ಹೋಗಿದ್ದು ಕಾಮಗಾರಿ.	ರಿಪೇರಿ ಕೆಲಸ ನಡೆಯುತ್ತಿದೆ.
ಮಣ್ಣಗನಹಳ್ಳಿ ಹತ್ತಿರ ಪಿಕ್‌ಅಪ್ ರಿಪೇರಿ ಕೆಲಸ	ರಿಪೇರಿ ಕೆಲಸ ನಡೆಯುತ್ತಿದೆ.

BUDGET ESTIMATES FOR 1974–75 DEMANDS FOR GRANTS

DEMAND Nos. 5,6 and 36 (Debate Continued)

† ಶ್ರೀ ಎನ್. ಹುಚ್ಚಮಾಸ್ತಿಗೌಡ (ಕಂದಾಯ ಶಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ ನಿನ್ನೆ ರೆವಿನ್ಯೂ ಬೇಡಿಕೆಗಳ ಮೇಲೆ ಮಾನ್ಯ ಸದಸ್ಯರು ಒಳ್ಳೆಯ ಉತ್ತಮವಾದಂತಹ ಸಲಹೆಗಳನ್ನು ಕೊಟ್ಟಿದ್ದಾರೆ, ಮತ್ತು ಇರತಕ್ಕ ದೋಷಗಳನ್ನು ಎತ್ತಿ ತೋರಿಸಿದ್ದಾರೆ. ಅದಕ್ಕಾಗಿ ನಾನು ಮೊಟ್ಟಮೊದಲು ಅವರನ್ನು ವಂದಿಸುತ್ತೇನೆ. ಈ ಇಲಾಖೆಯ ಬಗ್ಗೆ ಅನೇಕ ಸದಸ್ಯರು ಹೇಳಿದಹಾಗೆ ಮತ್ತು ನಮ್ಮೆಲ್ಲರಿಗೂ ಗೊತ್ತಿರುವಹಾಗೆ ಇದು ಬಹಳಕಾಲದಿಂದ ಬಂದಿರತಕ್ಕಂಥ ಒಂದು ಇಲಾಖೆ. ಹಿಂದೆ ಕಮಿಷನರ್‌ರವರು ಮಹಾರಾಜರ ಪ್ರತಿನಿಧಿ ಎಂದು ಹೇಳುತ್ತಾ ಇರತಕ್ಕಂಥ ಕಾಲ ಇತ್ತು. ಅವರನ್ನಾಗ್ಗೆ ಡಿಸ್ಟ್ರಿಕ್ಟಿನ ದೊರೆಯೆಂದು, ಕರೆಯುತ್ತಿದ್ದರು ಈ ಇಲಾಖೆ ಅಷ್ಟು ಹಳೆಯದು. ಇಲಾಖೆಯು ನಡೆದುಬಂದ ಹಾಗೆ ಅದರಲ್ಲಿ

(ಶ್ರೀ ಎನ್. ಹುಚ್ಚಮಾಸ್ತಿಗೌಡ)

ಇರತಕ್ಕ ದೋಷಗಳನ್ನು ನಿವಾರಣೆ ಮಾಡಿ, ಸಾಮಾನ್ಯ ಜನತೆಗೆ ಬೇಕಾದಂತಹ ಅನುಕೂಲಗಳನ್ನು ಮಾಡಿಕೊಡುವುದಕ್ಕೆ ಪ್ರಯತ್ನ ನಡೆದಿಲ್ಲವೆಂದು ನಾನು ಹೇಳುವುದಿಲ್ಲ. ಒಳ್ಳೆಯ ಪ್ರಯತ್ನಗಳು ಆಗಿವೆ ಅನೇಕ ಕೆಲಸಗಳನ್ನು ಮಾಡಿದ್ದಾರೆ, ಅನುಭವವುಳ್ಳ ಅಧಿಕಾರಿಗಳನ್ನು ಜಿಲ್ಲಾಧಿಕಾರಿಗಳನ್ನಾಗಿ ನೇಮಕಮಾಡಿ ಉತ್ತಮ ಕೆಲಸಮಾಡಿ ಜನರಿಗೆ ಇರತಕ್ಕ ಕಷ್ಟಗಳನ್ನು ನಿವಾರಣೆ ಮಾಡುವುದಕ್ಕೆ ಒಳ್ಳೆಯ ಪ್ರಯತ್ನಗಳು ನಡೆದಿದೆ. ಹಿಂದೆ ಹಳೆಮೈಸೂರು ಭಾಗದಲ್ಲಿ ರೆವಿನ್ಯೂ ಖಾತೆಯನ್ನು ವಹಿಸಿಕೊಂಡಂತ ಮಂತ್ರಿಗಳು ನೇರವಾಗಿ ಜಿಲ್ಲಾಧಿಕಾರಿಗಳಿಗೆ ಸಲಹೆಗಳನ್ನು ಕೊಟ್ಟು ಜನಗಳಿಗೆ ಉಂಟಾಗಿರತಕ್ಕ ತೊಂದರೆಗಳನ್ನು ಅರಿತು ಪರಿಹಾರ ಮಾಡುವುದಕ್ಕೆ ಒಂದೇ ಸಮನೆ ಪ್ರಯತ್ನ ಮಾಡಿದ್ದಾರೆ ಆದರೆ ಕೆಲವು ದೋಷಗಳು ಇಂದೂಕೂಡ ಇಲ್ಲದೆ ಇಲ್ಲ ಸಾಮಾನ್ಯಜನರು ತಲ್ಲೂಕು ಕಛೇರಿಗಳಲ್ಲಿ ಅಥವಾ ಅಸಿಸ್ಟೆಂಟ್ ಕಮೀಷನರ ಕಛೇರಿಗಳಲ್ಲಿ ಮತ್ತು ಜಿಲ್ಲಾ ಡೆಪ್ಯುಟಿ ಕಮೀಷನರ ಕಛೇರಿಗಳಲ್ಲಿ ಅವರಿಗೆ ಬೇಕಾದಂತ ಕೆಲಸಗಳನ್ನು ಸುಲಭವಾಗಿ ಮಾಡಿಕೊಳ್ಳುವುದಕ್ಕೆ ಇಂದೂ ಕೂಡ ತೊಂದರೆಗಳಿವೆ. ಕೆಲವು ಕೆಲಸಗಳು ವರ್ಷಾನುಗಟ್ಟಲೆ ಬಾಕಿ ನಿಂತಿದ್ದು ಅದರಲ್ಲೂ ಮುಖ್ಯವಾಗಿ ಗ್ರಾಮಾಂತರ ಪ್ರದೇಶಗಳಲ್ಲಿರುವ ಬಡವರಿಗೆ ನಿವೇಶನಗಳನ್ನು ಹಂಚತಕ್ಕ ಸಂದರ್ಭಗಳಲ್ಲಿ ನಡೆಯಬೇಕಾದಂತಹ ಕೆಲಸಕಾರ್ಯಗಳು ಹತ್ತಾರು ವರ್ಷಗಳಾದರೂ ಹಾಗೆಯೇ ಉಳಿದಿರತಕ್ಕ ಪ್ರಸಂಗಗಳು ಇವೆ ಈ ಸರ್ಕಾರ ಅಸ್ತಿತ್ವಕ್ಕೆ ಬಂದಕೂಡಲೇ ಜಿಲ್ಲಾಧಿಕಾರಿಗಳು ಎಷ್ಟೆಷ್ಟು ವರ್ಷದ ಕೆಲಸಗಳು ಬಾಕಿ ಇವೆ ಎನ್ನುವುದನ್ನು ಮಾಡಿ ಪಟ್ಟಿ ತೋರಿಸಿದಾಗ ೨೦ ವರ್ಷದ ಕೆಲವು ಕೇಸುಗಳು ಪೆಂಡಿಂಗ್ ಇದ್ದುದು ಸ್ಪಷ್ಟವಾಗಿ ಕಂಡುಬಂತು. ರೆವಿನ್ಯೂ ಇಲಾಖೆಯಲ್ಲಿ ಹಳೆ ಬಾಕಿ ಕೆಲಸ ನಡೆಯಬೇಕಾದುದು ಬಹಳ ಇದೆ ಎನ್ನುವುದರಲ್ಲಿ ಸಂಶಯವಿಲ್ಲ ಇನ್ನು ಮಾನ್ಯ ಸದಸ್ಯರು ಕೆಲವು ವಿಷಯಗಳನ್ನು ಹೇಳಿದರು, ಸರ್ವೆ ಡಿಪಾರ್ಟ್‌ಮೆಂಟ್ ರೆವಿನ್ಯೂ ಇಲಾಖೆಯ ಜೊತೆಗೆ ಹೊಂದಿಕೊಂಡು ಕೆಲಸ ಮಾಡದೆ ಇರುವುದರಿಂದ ಅಲ್ಲಿ ಕೆಲಸಗಳು ಬಾಕಿ ಬಹಳ ನಿಂತಿಬಿಟ್ಟು ರೈತವರ್ಗಕ್ಕೆ ಬಹಳ ತೊಂದರೆಯಾಗುತ್ತಿದೆ ಎಂದು ತಿಳಿಸಿದರು. ನಾನು ಸರ್ವೆ ಇಲಾಖೆಯಲ್ಲಿ ಕೆಲಸಕಾರ್ಯಗಳು ವಿಳಂಬವಾಗುತ್ತಾ ಇರುವುದನ್ನು ಕೂಲಂಕಷವಾಗಿ ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದೇನೆ ಕೆಲವಾರು ಕಛೇರಿಗಳಿಗೆ ಬೇಟಿಕೊಟ್ಟು ಅಲ್ಲಿರತಕ್ಕ ವಿದ್ಯಮಾನಗಳನ್ನು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡಿ ಅಂಕಿಅಂಶಗಳನ್ನು ತರಿಸಿಕೊಂಡೆ. ೧೯೨೦ನೇ ಇಸವಿಯಲ್ಲಿ ಅಕ್ವೈರ್ ಆಗಿರತಕ್ಕಂಥ ಒಂದು ಭೂಮಿ ಇಲ್ಲಿಯವರೆಗೂ ದುರಸ್ತು ಆಗಿ ಆಕಾರಬಂದು ರಿಜಿಸ್ಟರ್‌ನಲ್ಲಿ ಬಾರದೆ ಇರತಕ್ಕ ಉದಾಹರಣೆ ಉಂಟು. ಹೀಗೆ ನಾನು ನೋಡಿದ್ದರಲ್ಲಿ ಪ್ರತಿಯೊಂದು ಎ.ಎಸ್.ಎಲ್.ಆರ್ ವಿಷಯದಲ್ಲಿ ಸಾವಿರಾರು ಹಳೆಬಾಕಿ ಕಂಡುಬಂದಿವೆ. ಅವುಗಳನ್ನೆಲ್ಲ ವಿಲೆ ಮಾಡಲಿಕ್ಕೆ ಏನು ಕಾರ್ಯಕ್ರಮ ತೆಗೆದುಕೊಂಡರೆ ಈ ದೋಷ ನಿವಾರಣೆ ಮಾಡುವುದಕ್ಕೆ ಸಾಧ್ಯವೆಂದು ಕೂಡ ನಾನು ಆಲೋಚನೆ ಮಾಡಿದ್ದೇನೆ.

ಸರ್ವೆ ಡಿಪಾರ್ಟ್‌ಮೆಂಟಿನಲ್ಲಿ ಈ ಸರ್ಕಾರ ಬಂದ ಕೂಡಲೇ ಮುನ್ನೂರು ಜನ ಸರ್ವೇಯರ್ಸ್‌ಗಳನ್ನು ತೆಗೆದುಕೊಂಡು ಅವರಿಗೆ ಶಿಕ್ಷಣ ಕೊಟ್ಟು ಅವರನ್ನು ಕೆಲಸಕ್ಕೆ ಕಳಿಸಿದ್ದೇವೆ. ಮತ್ತೆ ಈ ವರ್ಷ ಐನೂರು ಜನ ಸರ್ವೆಯರ್‌ಗಳನ್ನು ತಗೆದುಕೊಂಡು ಬಾಕಿ ಕೆಲಸಗಳನ್ನು ಪೂರೈಸುವುದಕ್ಕೋಸ್ಕರ ಆದಷ್ಟು ಬೇಗ ಪ್ರಯತ್ನ ಮಾಡಬೇಕು ಎಂದು ಕೆಲಸ ಮಾಡುತ್ತಿದ್ದೇವೆ, ಅಂತೂ ಈ ಎರಡೂ ಇಲಾಖೆಗಳಲ್ಲಿ ಆ ತರಹ ಹಳೆಯ ಬಾಕಿ ನಿಂತಿರುವುದು ಕಣ್ಣಿಗೆ ಸ್ಪಷ್ಟವಾಗಿ ಕಾಣುತ್ತದೆ. ಇದನ್ನು ಬಗೆಹರಿಸುವುದಕ್ಕೆ ಸರ್ವ ಪ್ರಯತ್ನವನ್ನು ನಾವು ಮಾಡಬೇಕಾಗಿದೆ, ಈ ದಿಶೆಯಲ್ಲಿ ನಾವು ಕೈಗೊಂಡಿರತಕ್ಕ ಕೆಲವು ಕಾರ್ಯಕ್ರಮಗಳನ್ನು ಕೂಡ ನಾನು ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ ಇದಕ್ಕೆ ಮುಂಚಿತವಾಗಿ ಮಾನ್ಯ ಸದಸ್ಯರು ಹೇಳಿರತಕ್ಕಂಥ ಕೆಲವು ಟೀಕೆಗಳಿಗೆ ಉತ್ತರ ಕೊಡುತ್ತಾ ಹೋದರೆ ಅವರಲ್ಲಿ ಈ ಸಮಸ್ಯೆಗಳನ್ನು ಹೇಗೆ ಬಗೆಹರಿಸಬೇಕು ಆದರ ಬಗ್ಗೆ ಏನು ಪ್ರಯತ್ನ ನಡೆದಿದೆ ಎಂಬುದನ್ನೂ ಕೂಡ ತಿಳಿಸುವುದಕ್ಕೆ ಸಾಧ್ಯವಾಗುತ್ತದೆ ಮೊಟ್ಟಮೊದಲು ಮಾತನಾಡಿದ ಶ್ರೀಮಾನ್ ಮಾದೇಗೌಡರು ದೇವಸ್ಥಾನದ ಆಡಳಿತದ ಬಗ್ಗೆ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಆ ಮಾನ್ನೇ ಮಾನ್ಯ ಸದಸ್ಯರು ಅನೇಕರು ನಮ್ಮ ಸಂಸ್ಕೃತಿ ಬಗ್ಗೆ ಒಂದೆರಡು ಮಾತುಗಳನ್ನಾಡಿ, ಅನೇಕ ಜನ ಈ ಸಮಾಜದಲ್ಲಿ ಹಿಂದೆ ಬಿದ್ದಿರತಕ್ಕ ಜನಕ್ಕೆ ಸಮಾಜ ಸುಧಾರಣೆ, ದೇವಸ್ಥಾನಗಳು ಕೆಲವು ಬದಲಾವಣೆಗಳನ್ನು ಮಾಡುವ ಮುಖಾಂತರ ಆಗಬೇಕು ಎನ್ನುವುದನ್ನು ಹೇಳಿದರು. ಈ ದಿಶೆಯಲ್ಲಿ ಏನೇನು ನಡೆದಿದೆ ಎಂಬುದನ್ನು ಮಾನ್ಯ ಸಭೆಯ ಮುಂದೆ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಅನೇಕ ವರ್ಷಗಳ ಹಿಂದೆ ರಾಜಮಹಾರಾಜರುಗಳು, ಪಾಳೆಯಗಾರರು ಅನೇಕ ಜನ ಜಮೀನ್‌ದಾರರು ದೇವಸ್ಥಾನಕ್ಕೆ ಜಮೀನನ್ನು ಮಾನ್ಯವಾಗಿ ಹಾಕಿ ಅದರಿಂದ ಬರತಕ್ಕ ವರಮಾನದಿಂದ ದೇವಸ್ಥಾನಗಳ ಕೆಲಸ ನಡೆಯಬೇಕು ಎನ್ನುವ ಅಭಿಪ್ರಾಯವನ್ನು ಇಟ್ಟುಕೊಂಡು ಕೆಲಸ ಮಾಡಿದ್ದಾರೆ ಈ ದಿವಸ ಈ ಪರಿಸ್ಥಿತಿಗೆ ತಕ್ಕಂಥ ದೇವಾಲಯದ ಹೆಸರಿನಲ್ಲಿ ಇರತಕ್ಕ ಭೂಮಿಯನ್ನು ಯಾರು ವ್ಯವಸಾಯ ಮಾಡುತ್ತಿದ್ದಾರೆಯೋ, ಪೂಜಾರಿ ಮಾಡುತ್ತಾ ಇದ್ದರೆ ಅದು ಪೂಜಾರಿಗೆ ಆಗಬೇಕು, ಬೇರೆ ಗೇಣಿದಾರರು ವ್ಯವಸಾಯ ಮಾಡುತ್ತಾ ಇದ್ದರೆ

ಅವರಿಗೆ ಆ ಜಮೀನು ಕೊಡಬೇಕು ಎಂದು ತೀರ್ಮಾನ ಮಾಡಿದ್ದೇವೆ. ಆ ತೀರ್ಮಾನ ಮಾಡಿರುವುದರಿಂದ ದೇವಸ್ಥಾನಕ್ಕೆ ಬರತಕ್ಕ ವರಮಾನ ನಿಂತು ಹೋಗುತ್ತದೆ. ಸರ್ಕಾರ ಇದನ್ನು ಆಲೋಚನೆ ಮಾಡಿ ದೇವಸ್ಥಾನಗಳಲ್ಲಿ ನಡೆಯಬೇಕಾದ ಕೈಂಕರ್ಯಗಳು ನಿಲ್ಲಬಾರದು ಎನ್ನುವ ದೃಷ್ಟಿಯಿಂದ ಗೇಣಿ ಶಾಸನದ ಪ್ರಕಾರವಾಗಿ ಆ ಭೂಮಿಯಿಂದ ಎಷ್ಟು ಗೇಣಿ ಬರಬೇಕಾಗಿದೆಯೋ ಅಷ್ಟು ಹಣವನ್ನು ತಸ್ತೀಕ್ ರೂಪದಲ್ಲಿ ಸಾರೋದ್ಧಾರವಾಗಿ ಕೊಟ್ಟುಕೊಂಡು ಹೋಗಬೇಕು ಎಂದು ನಾವು ತೀರ್ಮಾನ ಮಾಡಿದ್ದೇವೆ, ಅದರಂತೆ ೧ನೇ ಜುಲೈ ೧೯೭೦ನೇ ಇಸವಿಯಿಂದ ಕಾನೂನು ಪ್ರಕಾರವಾಗಿ ಈ ಭೂಮಿಗಳಿಂದ ಎಷ್ಟು ಗೇಣಿ ಬರಬೇಕಾಗಿದೆಯೋ ಅದನ್ನು ಈ ದಿವಸ ದೇವಸ್ಥಾನಗಳಿಗೆ ತಸ್ತೀಕಾಗಿ ಕೊಡಬೇಕು ಎಂದು ತೀರ್ಮಾನವಾಗಿದೆ. ಅಲ್ಲಲ್ಲಿ ಅಧಿಕಾರಿಗಳು ಯಾವ ಯಾವ ದೇವಸ್ಥಾನಕ್ಕೆ ಎಷ್ಟು ಬರಬೇಕು ಎಂಬುದನ್ನು ತಿಳಿಸಿ ತಸ್ತೀಕು ಪಡೆದು ಕೈಂಕರ್ಯವನ್ನು ನಡಿಸಿಕೊಂಡು ಹೋಗುವುದಕ್ಕೆ ಸಹಾಯ ಮಾಡಬೇಕಾಗುತ್ತದೆ. ಆ ರೀತಿ ಮಾಡುತ್ತಿದ್ದಾರೆ ಅಲ್ಲಲ್ಲಿ ಅಧಿಕಾರಿಗಳು ಕೂಡಲೆ ಬರೆದು ತಸ್ತೀಕನ್ನು ಸರ್ಕಾರದಿಂದ ಪಡೆಯಬೇಕೆಂದು ಈಗಾಗಲೇ ತಿಳುವಳಿಕೆ ಕೊಟ್ಟಿದೆ ಆದುದರಿಂದ ಈ ದೇವಸ್ಥಾನಗಳ ಕೆಲಸ ನಿಂತು ಹೋಗುತ್ತದೆ ಎಂಬ ಭಯ ಇರಬೇಕಾದುದು ಇಲ್ಲ ಎಂದು ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಅವರು ಬನ್ನೂರಿನ ದೇವಸ್ಥಾನದ ವಿಷಯ ತಿಳಿಸಿದರು ೬೦ ಪಲ್ಲ ಗುತ್ತಿಗೆ ಬರುತ್ತಾ ಇತ್ತು, ಅಲ್ಲಿ ಉತ್ಸವ ನಡೆಯುತ್ತಾ ಇಲ್ಲ ಎಂದು ಅದರ ಬಗ್ಗೆ ವಿವರ ತಿಳಿದು ಕೊಳ್ಳುವುದಕ್ಕೆ ಪ್ರಯತ್ನ ಮಾಡಿದೆ. ವಿವರ ಸಿಕ್ಕಲಿಲ್ಲ. ನಾನು ಆದಷ್ಟು ಬೇಗ ಒಂದೆರಡು ದಿವಸದಲ್ಲಿ ತಿಳಿದುಕೊಂಡು ಮಾನ್ಯ ಸದಸ್ಯರಿಗೆ ತಮ್ಮ ಮೂಲಕ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಧರ್ಮದರ್ಶಿಗಳ ನೇಮಕದ ವಿಷಯದಲ್ಲಿ ಅನೇಕ ಜನ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದರು. ನಮ್ಮ ರಾಜ್ಯದಲ್ಲಿ ಒಟ್ಟು ಸುಮಾರು ೩೫ ಸಾವಿರ ದೇವಾಲಯಗಳು ಇವೆ. ಅದರಲ್ಲಿ ಮೇಜರ್, ಮೈನರ್ ಮತ್ತು ವಿಲೇಜ್ ಇನ್‌ಸ್ಟಿಟ್ಯೂಷನ್ಸ್ ಎಂದು ಹೇಳಿ ಸಾಮಾನ್ಯವಾಗಿ ಮೂರು ಭಾಗ ಮಾಡಿದ್ದೇವೆ. ವಿಲೇಜ್ ಇನ್‌ಸ್ಟಿಟ್ಯೂಷನ್‌ಗೆ ಧರ್ಮದರ್ಶಿಗಳನ್ನು ನೇಮಕ ಮಾಡತಕ್ಕ ಪದ್ಧತಿ ಇಲ್ಲ. ಮೈನರ್ ಇನ್‌ಸ್ಟಿಟ್ಯೂಷನ್ಸ್ ಮತ್ತು ಮೇಜರ್ ಇನ್ಸಿಟ್ಯೂಷನ್ಸ್‌ಗೆ ನೇಮಕ ಮಾಡತಕ್ಕ ಪದ್ಧತಿ ಇವೆ. ಈ ಇನ್ಸಿಟ್ಯೂಷನ್‌ಗಳಿಗೆ ಧರ್ಮದರ್ಶಿಗಳನ್ನು ನೇಮಕ ಮಾಡುವಾಗ ಒಬ್ಬ ಹರಿಜನರನ್ನು ಕಡ್ಡಾಯವಾಗಿ ಹಾಕಲೇಬೇಕು ಎನ್ನುವ ನಿಯಮ ಇದೆ. ಅದರಂತೆ ಅಲ್ಲಿ ಹರಿಜನರನ್ನು ಹಾಕುತ್ತಿದ್ದಾರೆ. ಆದುದರಿಂದ ಅವರು ದೇವಸ್ಥಾನಗಳ ಒಳಗೆ ಹೋಗುವುದಕ್ಕೆ ಅವಕಾಶಗಳು ಇಲ್ಲ ಅವರನ್ನು ಹಾಕುತ್ತಾ ಇಲ್ಲ ಎನ್ನುವ ವಾದ ಸರಿಯಾದುದು ಅಲ್ಲ. ಆ ರೀತಿ ಕಾನೂನು ಇದೆ, ಅಲ್ಲಿ ಲೋಪ ಬರದಹಾಗೆ ಹಾಕುತ್ತಿದ್ದಾರೆ ಎನ್ನುವ ವಿಶ್ವಾಸ ಇದೆ. ನಾನು ಎಲ್ಲಾ ಸಂದರ್ಭಗಳಲ್ಲಿಯೂ ನೋಡಿದ್ದೇನೆ. ಒಬ್ಬ ಹರಿಜನ ಗಿರಿಜನರಿಗೆ ಸಂಬಂಧಪಟ್ಟವರನ್ನು ಅದರಲ್ಲೂ ಅಸ್ಪೃಶ್ಯರನ್ನು ಹಾಕಲೇಬೇಕೆಂಬ ನಿಯಮ ಇರುತ್ತದೆ ಮತ್ತು ಅಲ್ಲಿ ಹಾಕುತ್ತಾ ಇದ್ದಾರೆ ಇನ್ನು ಧರ್ಮದರ್ಶಿಗಳನ್ನು ನೇಮಕ ಮಾಡುವಲ್ಲಿ ಮಾನ್ಯ ಸದಸ್ಯರು ಕೆಲವರು ಹೇಳಿದರು ಅದಕ್ಕೆ ರಾಜಕೀಯ ಗೊಡವೆ ಇಲ್ಲದೆ ಇರತಕ್ಕವರನ್ನು ಅಲ್ಲಿ ಹಾಕಬೇಕು ಎಂದು, ಅಲ್ಲಿ ನೇಮಕ ಮಾಡುವಾಗ ಜಿಲ್ಲಾಧಿಕಾರಿಗಳಿಗೆ ಮೈನರ್ ಇನ್‌ಸ್ಟಿಟ್ಯೂಷನ್ಸ್ ಸಬ್‌ಡಿವಿಜನ್ ಆಫೀಸರಿಗೆ 'ಮೇಜರ್ ಇನ್ಸಿಟ್ಯೂಷನ್ ನೇಮಕ ಮಾಡುವ ಅಧಿಕಾರ ಇದೆ. ಈಗ ನೇಮಕ ಮಾಡುವ ಸಂದರ್ಭದಲ್ಲಿ ರಾಜಕೀಯ ದೃಷ್ಟಿಯಿಂದ ಹಾಕುತ್ತಾರೆ ಎನ್ನುವ ಭಾವನೆ ಇರಬೇಕಾದುದಿಲ್ಲ. ಆದರೆ ಈಗಿನ ಕಾಲದಲ್ಲಿ ರಾಜಕೀಯ ಒತ್ತಡಕ್ಕೆ ಒಳಗಾಗದೆ ಇರತಕ್ಕವರು ಬಹಳ ಅಪರೂಪ. ದೇವರಲ್ಲಿ ಭಕ್ತಿ ವಿಶ್ವಾಸ ಇಟ್ಟು, ಈ ಸಂಸ್ಥೆಗಳಲ್ಲಿ ಚೆನ್ನಾಗಿ ಕೆಲಸ ನಡೆಯಬೇಕು ಎನ್ನುವ ವಿಶ್ವಾಸವುಳ್ಳವರನ್ನು ಹಾಕಬೇಕು ಎಂದು ಅಧಿಕಾರಿಗಳಿಗೆ ಸ್ಪಷ್ಟವಾಗಿ ತಿಳಿಸಿದ್ದೇನೆ. ಆ ನೇಮಕ ಮಾಡುವಾಗ ಅಕಸ್ಮಾತ್ ಒಂದು ರಾಜಕೀಯ ಪಕ್ಷದಲ್ಲಿ ಇದ್ದರೆ, ರಾಜಕೀಯ ಉದ್ದೇಶಕ್ಕೋಸ್ಕರ ಹಾಕಿದ್ದಾರೆ ಎಂದು ತಿಳಿಯಬಾರದು. ಎಡಿಯೂರು ದೇವಸ್ಥಾನದಲ್ಲಿ ಧರ್ಮದರ್ಶಿಗಳನ್ನು ಹಾಕುವಾಗ ಮೊದಲು ಇದ್ದ ತಿಪಟೂರು ಎಂ.ಎಲ್.ಎ ಹಾಕದೆ ತುರುವೇಕೆರೆ ಎಂ.ಎಲ್.ಎ ಹಾಕಿದ್ದರು. ಕಾರಣ ಇದ್ದವರೇ ಇರಬೇಕೆಂಬ ನಿಯಮ ಇಲ್ಲ.

ಶ್ರೀ ಟಿ. ಎಂ. ಮಂಜುನಾಥ್.— ತಮ್ಮ ಗಮನಕ್ಕೆ ಕೊಡುತ್ತೇನೆ. ಎಡೆಯೂರು ಸಿವ ಲಿಂಗೇಶ್ವರ ದೇವಸ್ಥಾನಕ್ಕೆ ಯಾರಿಗೆ ದೇವರ ಬಗ್ಗೆ ಭಕ್ತಿ ವಿಶ್ವಾಸ ಇದೆ, ಅಂಥವರನ್ನು ನೇಮಕ ಮಾಡತಕ್ಕದು ಎಂದು ಜಿಲ್ಲಾಧಿಕಾರಿಗಳು ಹೇಳಿದ್ದಾರೆ. ನಾನು ನೇರವಾಗಿ ಪ್ರಶ್ನೆ ಹಾಕುತ್ತೇನೆ ಜಿಲ್ಲಾಧಿಕಾರಿಗಳು ಪಟ್ಟಿಯನ್ನು ಕಳಿಸಿದ್ದಾರೆ. ಎಡಿಯೂರು ಸಿದ್ದಲಿಂಗೇಶ್ವರನ ಭಕ್ತಾಧಿಗಳು ಹುಬ್ಬಳ್ಳಿ, ಧಾರವಾಡ, ಗದಗನಲ್ಲಿ ಇದ್ದಾರೆ. ಅಲ್ಲಿ ಛತ್ರ ಕಟ್ಟಿಸಬೇಕಾದರೆ: ಅಭಿವೃದ್ಧಿ ಕಾರ್ಯ ಆಗಬೇಕಾದರೆ, ದೇವಸ್ಥಾನದ ದುಡ್ಡನ್ನು, ಎತ್ತಬೇಕಾದರೆ ಜಿಲ್ಲಾಧಿಕಾರಿಗಳ ಆದೇಶವನ್ನು ತೆಗೆದುಕೊಂಡು ಮಾಡುತ್ತಾರೆ ಎಂದು ವರದಿಯಲ್ಲಿ ಹೇಳಿದರು. ಮಾನ್ಯಮಂತ್ರಿಯವರು ಹಿರಿಯರು ಇದ್ದಾರೆ, ದೇವರಲ್ಲಿ ಭಕ್ತಿ ಇದೆ. ಈಗ ನೇಮಕ ಮಾಡಿರತಕ್ಕ ಸದಸ್ಯರು ಎಷ್ಟು ದೇವಸ್ಥಾನಗಳಿಗೆ ಹೋಗಿದ್ದಾರೆ, ದೇವಸ್ಥಾನದ ಕಮಿಟಿಗೋಸ್ಕರ ಎಷ್ಟು ಹಣ ಕೊಟ್ಟಿದ್ದಾರೆ, ಎಷ್ಟು ದಾನ ಮಾಡಿದ್ದಾರೆ, ಎಷ್ಟು ಶ್ರಮಿಸಿದ್ದಾರೆ ಎನ್ನತಕ್ಕ ಹಿನ್ನೆಲೆಯಲ್ಲಿ ತೆಗೆದುಕೊಳ್ಳಬೇಕು. ದೇವಸ್ಥಾನವನ್ನು ವಿರೋಧ ಮಾಡತಕ್ಕಂಥವರು ಈ ಕಮಿಟಿಯಲ್ಲಿ ಹಾಕಿದರೆ ಏನಾಗುತ್ತದೆ?

ಶ್ರೀ ಎನ್. ಹುಚ್ಚಮಾಸ್ತಿಗೌಡ.— ಮಾನ್ಯ ಮಂಜುನಾಥ್‌ರವರಿಗೆ ಸಮರ್ಪಕವಾದ ರೀತಿಯಲ್ಲಿ ಮಾಡುವುದಕ್ಕೆ ಸಾಧ್ಯ ಇಲ್ಲದೆ ಇರಬಹುದು. ನಾನೂ ಅದೇ ಕ್ಷೇತ್ರದಿಂದ ಬರತಕ್ಕವನು, ಅಲ್ಲಿ ದೇವರ ಸೇವೆ ಯಾವರೀತಿ ನಡೆಯಬೇಕು, ಕಾರ್ಯಕ್ರಮ ಹೇಗೆ ನಡಯಬೇಕು ಎಂದು ನಾನೇ ಆಸಕ್ತಿ ವಹಿಸಿ ಕೆಲಸಮಾಡ ತಕ್ಕವನು, ಅದಕ್ಕೆ ಮಂಜುನಾಥ್‌ರವರ ಉಪದೇಶ ಅನಾವಶ್ಯಕ.

1–00 P.M.

ಶ್ರೀ ಟಿ. ಎಂ. ಮಂಜುನಾಥ್.— ಅವರಿಗೆ ಎಷ್ಟರಮಟ್ಟಿಗೆ ಗೌರವವಿದೆಯೋ ನನಗೂ ಅಷ್ಟೇ ಗೌರವ ಇದೆ.

ಅಧ್ಯಕ್ಷರು.— ಗೌರವ ಅಳತೆ ಮಾಡಿಕೊಳ್ಳುವ ಸ್ಥಳ ಇದಲ್ಲ, ಬೇರೆ ಕಡೆ ಇದೆ. ಯಾರು ಯಾರಿಗೆ ಎಷ್ಟೆಷ್ಟು ಗೌರವ ಇದೆ ಎನ್ನುವುದನ್ನು ಅಲ್ಲಿ ಹೋಗಿ ಕೇಳಿಕೊಳ್ಳಿ. ತಮಗೆ ಅಭಿರುಚಿ ಇರುವ ಹಾಗೆ, ತಮ್ಮ ಮನಸ್ಸಿನಂತೆ ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಅವರು ಹೇಳುತ್ತಿದ್ದಾರೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.— ಅಲ್ಲಿಗೆ ಭಕ್ತಾದಿಗಳು ಯಾವ ಯಾವ ಕಡೆಯಿಂದ ಬರುತ್ತಾರೆ' ಯಾರು ಇದಕ್ಕೆ ಧನಸಹಾಯ ಮಾಡುತ್ತಾರೆ. ಯಾರು ಉಳಿದ ರೀತಿಯಲ್ಲಿ ಸಹಾಯಕರಾಗಿದ್ದಾರೆ ಎನ್ನುವುದು ಕೂಡ ನನಗೆ ಗೊತ್ತು. ಅದನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಕೆಲಸವನ್ನು ಮಾಡಿದ್ದೇವೆ.

ಶ್ರೀ ಕೆ. ಎಚ್. ಹನುಮೇಗೌಡ.— ಆ ಕ್ಷೇತ್ರದ ಶಾಸಕರನ್ನು ಬಿಟ್ಟು ಬೇರೆಯವರನ್ನು ಹಾಕಿದ್ದಾರೆ.

ಅಧ್ಯಕ್ಷರು.— ಅವರು ಉತ್ತರ ಕೊಡಬೇಕೋ ಬೇಡವೋ?

ಶ್ರೀ ಎನ್. ಹುಚ್ಚಮಾಸ್ತಿಗೌಡ.— ನನಗೆ ಇರುವುದಕ್ಕಿಂತ ಹೆಚ್ಚಿಗೆ ಆಸಕ್ತಿ ಅವರಿಗೆ ಇರುವ ಹಾಗೆ ಹೇಳುತ್ತಾರೆ. ನಾನು ಅಲ್ಲಿ ಹುಟ್ಟಿ, ಬೆಳೆದು, ಲಕ್ಷಾಂತರ ಜನ ಭಕ್ತಾದಿಗಳ ಮಧ್ಯೆ ಇರತಕ್ಕವನು. ಮಾನ್ಯ ಸದಸ್ಯರು ಶಾಸಕರಾಗುವುದಕ್ಕಿಂತ ಮುಂಚೆ ಅಲ್ಲಿ ಯಾವರೀತಿ ಕೆಲಸಕಾರ್ಯಗಳು ನಡೆಯಬೇಕು, ಯಾರು ಇದ್ದರೆ ನಡೆಯುತ್ತದೆ ಎಂದು ಪ್ರಯತ್ನಮಾಡಿ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಒಂದು ಸಮಿತಿ ರಚನೆಮಾಡಿ, ಇತ್ತೀಚೆಗೆ ಅದರ ವರಮಾನ ಜಾಸ್ತಿಯಾಗಿ ಕೆಲಸ ನಡೆಯುವ ಹಾಗೆ ಕಾರ್ಯಕ್ರಮ ಕೈಗೊಂಡಿದ್ದೇವೆ. ಆದರೆ ಮಾನ್ಯ ಸದಸ್ಯರು ನಾಗಮಂಗಲದಿಂದ ಬರತಕ್ಕ ಪ್ರತಿನಿಧಿಗಳು, ತಿಪಟೂರಿನಿಂದ ಬರತಕ್ಕ ಪ್ರತಿನಿಧಿಗಳು ಇಲ್ಲ ಎಂದು ಹೇಳುತ್ತಾರೆ. ಅವರನ್ನು ಏಕೆ ಹಾಕಬೇಕು ಎಂದು ನಾನು ಕೇಳುತ್ತೇನೆ. ಎಲ್ಲೆಲ್ಲಿ ಭಕ್ತಾದಿಗಳು ಇದ್ದಾರೆ, ಅವರು ಇಲ್ಲದೆ ಬಾಕಿಯವರು ಬಹಳ ಜನ ಇದ್ದಾರೆ. ತಿಪಟೂರು, ನಾಗಮಂಗಲ, ತುರುವೇಕೆರೆ, ನರಗುಂದ್, ನವಲ್‌ಗುಂದ್, ಗದಗ್, ಕೃಷ್ಣರಾಜನಗರದಿಂದ ಹಾಕಿದ್ದಾರೆ. ಎಲ್ಲೆಲ್ಲಿ ಭಕ್ತಾದಿಗಳು ಇದ್ದಾರೆ, ಅವರು ಮೊದಲಿನಿಂದ ಸೇವೆಯನ್ನು ಮಾಡಿಕೊಂಡುಬಂದಿದ್ದಾರೆ ಎನ್ನುವುದನ್ನೆಲ್ಲಾ ಯೋಚನೆಮಾಡಿಕೊಂಡು ಒಂದು ಸಮಿತಿ ರಚನೆಯಾಗಿದೆ. ಯಾರೋ ಕೆಲವರು ಇಲ್ಲ. ಆದುದರಿಂದ ತಪ್ಪು ಎಂದು ಹೇಳಿದರೆ, ಅದನ್ನು ಒಪ್ಪಿಕೊಳ್ಳುವುದಕ್ಕೆ ಸಿದ್ಧವಾಗಿಲ್ಲ. ದೇವಸ್ಥಾನದ ಕೆಲಸಕಾರ್ಯಗಳು ಚೆನ್ನಾಗಿ ನಡೆಯಬೇಕು ಎನ್ನುವ ಬಗ್ಗೆ ನನಗೆ ಸಾಕಾದಷ್ಟು ಆಸ್ಥೆ ಇದೆ. ಆದಕ್ಕೆ ತಕ್ಕಷ್ಟು ವ್ಯವಸ್ಥೆ ನಾವು ಮಾಡಿದ್ದೇವೆ. ಬಿಳಿರಂಗನ ಬೆಟ್ಟ, ಮಾದೇಶ್ವರ ಬೆಟ್ಟ, ಮೇಲುಕೋಟೆ ದೇವಸ್ಥಾನಗಳಿಗೆ ಡಿವಿಜನಲ್ ಕಮೀಷನರ್ ಮಟ್ಟದ ಒಂದು ಕಮಿಟಿ ಮಾಡಿತ್ತು. ಅವರು ವರದಿ ಕೊಟ್ಟಿಲ್ಲ ಎಂದು ಹೇಳಿದರು. ಅವರು ವರದಿ ಕೊಟ್ಟಿದ್ದಾರೆ. ಆ ವರದಿ ಪ್ರಕಾರ ಆ ಸಂಸ್ಥೆಯಿಂದ ಹಣ ಒದಗಿಸುವುದಕ್ಕೆ ಸಾಧ್ಯವಿರತಕ್ಕದ್ದು ಮಾದೇಶ್ವರನ ಬೆಟ್ಟಕ್ಕೆ ಮಾತ್ರ. ಅವರು ಒಂದು ದೊಡ್ಡ ಯೋಜನೆ ಹಾಕಿದ್ದಾರೆ ಲಕ್ಷಗಟ್ಟಲೆ ಹಣ ಬೇಕಾದಂಥ ರೀತಿಯಲ್ಲಿ ಅವರು ಯೋಜನೆ ಹಾಕಿದ್ದಾರೆ. ಅದರಂತೆ ಮಾಡಬೇಕಾದರೆ ಸುಮಾರು ೩೫ರಿಂದ ೪೦ ಲಕ್ಷ ರೂಪಾಯಿ ಮೇಲುಕೋಟೆ ದೇವಸ್ಥಾನದ ಅಭಿವೃದ್ಧಿಗೆ ಬೇಕು. ೧೫–೨೦ ಲಕ್ಷ ರೂಪಾಯಿ ಬಿಳಿರಂಗನ ಬೆಟ್ಟಕ್ಕೆ ಬೇಕು. ಸುಮಾರು ೧೦–೧೪ ಲಕ್ಷ ರೂಪಾಯಿ ಮಾದೇಶ್ವರ ಬೆಟ್ಟಕ್ಕೆ ಬೇಕು. ಮಾದೇಶ್ವರ ಬೆಟ್ಟಕ್ಕೆ ಮಾತ್ರ ಈ ಕೆಲಸ ಪೂರ್ಣವಾಗಿ ಈ ಯೋಜನೆ ಪ್ರಕಾರ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಉಳಿದ ಬಿಳಿಗಿರಿ ರಂಗನಬೆಟ್ಟ, ಮತ್ತು ಮೇಲುಕೋಟೆ ದೇವಸ್ಥಾನಗಳಲ್ಲಿ ಪೂರಾ ಕೆಲಸಗಳನ್ನು ಮಾಡುವುದಕ್ಕೆ ಆಗದೇ ಇದ್ದರೆ, ಬೇರೆ ಬೇರೆ ಇಲಾಖೆಗಳಿಂದ ಕೆಲವು ಕೆಲಸಗಳನ್ನು ಮಾಡಿಸಬೇಕು ಎಂದು ಈಗಾಗಲೇ ತೀರ್ಮಾನವಾಗಿದೆ. ಆ ರೀತಿಯಾಗಿ ಬೇರೆ ಬೇರೆ ಇಲಾಖೆಗಳಿಂದ ಸ್ವಲ್ಪಮಟ್ಟಿಗೆ ಕೆಲಸ ನಡೆದಿದೆ ಇನ್ನೂ ಹೆಚ್ಚಿಗೆ ಏನು ಮಾಡುವುದಕ್ಕೆ ಸಾಧ್ಯವಿದೆ ಎನ್ನುವುದನ್ನು ಸರ್ಕಾರ ಪರಿಶೀಲನೆ ಮಾಡುತ್ತಾ ಇದೆ. ಹಣ ಒದಗಿದ ಹಾಗೆಲ್ಲಾ ಹೆಚ್ಚು ಕೆಲಸಗಳನ್ನು ಕಾಲಮಿತಿಯೊಳಗೆ ಮಾಡಬೇಕು ಎಂದು ಸರ್ಕಾರದ ಉದ್ದೇಶ ಇದೆ. ಆ ರೀತಿ ಕೆಲಸಮಾಡಬೇಕು ಎಂದು ಯೋಚನೆ ಮಾಡಿದ್ದೇವೆ. ದೇವಸ್ಥಾನಗಳ ವಿಷಯದಲ್ಲಿ ಇನ್ನೂ ಕೆಲವು ವಿಷಯಗಳನ್ನು ಮಾನ್ಯಸದಸ್ಯರು

ಹೇಳಿದ್ದಾರೆ, ಅದು ಏನೆಂದರೆ, ಅರ್ಚಕರನ್ನು ನೇಮಿಸತಕ್ಕ ಕಾಲದಲ್ಲಿ ಯಾವರೀತಿ ನೇಮಕ ಮಾಡಬೇಕು ಎಂದು ಮಾನ್ಯ ಸದಸ್ಯರು ತಿಳಿಸಿದ್ದಾರೆ. ಈ ನೇಮಕದ ವಿಷಯದಲ್ಲಿ ಅವರು ಸಲಹೆ ಮಾಡುವ ರೀತಿಯಲ್ಲಿ ಮದ್ರಾಸ್‌ನಲ್ಲಿ ಯಾವರೀತಿ ಇದೆ. ಕೇರಳದಲ್ಲಿ ಯಾವರೀತಿ ಇದೆ, ಆ ಮಾರ್ಗವನ್ನು ಅನುಸರಿಸಿ ಎಂದೆಲ್ಲಾ ಮಾನ್ಯ ಸದಸ್ಯರು ಸಲಹೆ ಮಾಡಿದ್ದಾರೆ. ಮದ್ರಾಸಿನಲ್ಲಿ ಎಲ್ಲಾ ಜನಾಂಗದವರು ನೇಮಕ ಮಾಡುವುದಕ್ಕೆ ಸಹಾಯಕರಾಗಬೇಕು ಮತ್ತು ಯಾವರೀತಿಯಲ್ಲೂ ಇತರರನ್ನು ನೇಮಕ ಮಾಡುವುದಕ್ಕೆ ಅಡ್ಡಿಯಾಗ ಬಾರದು. ಅವರ ಉಪಯೋಗ ಇದ್ದರೂ ಕೂಡ ಮುಖ್ಯವಾದುದು ಅಲ್ಲಿ ಎರಡು ವಿಷಯಗಳು. ಒಂದು ಅನುವಂಶಿಕವಾಗಿ ಬದಲಾವಣೆ ಮಾಡುವುದಕ್ಕೆ ಅವಕಾಶ ಇರಬಾರದು. ಎರಡನೆಯದು ಎಲ್ಲಾ ಕೋಮಿ ನವರಿಗೂ ಅರ್ಚಕರಾಗುವುದಕ್ಕೆ ಅವಕಾಶ ಇರಬೇಕು ಎನ್ನುವುದು ಈ ವಿಷಯದಲ್ಲಿ ಅನುವಂಶಿಕವಾಗಿ ನೇಮಕವಾಡತಕ್ಕದ್ದು ಅವಶ್ಯಕವಿಲ್ಲ ಎನ್ನುವುದನ್ನು ಸುಪ್ರೀಂಕೋರ್ಟ್ ಒಪ್ಪಿಕೊಂಡಿದೆ ಅದರಂತೆ ಮಾಡು ವುದಕ್ಕೆ ಅಡ್ಡಿ ಇಲ್ಲ. ಆದರೆ ಎಲ್ಲಾ ಕೋಮಿನರನ್ನೂ ಮಾಡಬೇಕು ಎನ್ನುವ ವಿಷಯದಲ್ಲಿ ಕೆಲವು ಅನೂ ಚಾನವಾಗಿ ಬಂದಂಥ ಪದ್ಧತಿಗಳು ಇವೆ, ಆ ಪದ್ಧತಿಗಳನ್ನು ಅನುಸರಿಸಲೇಬೇಕು ಎನ್ನುವುದು ಸುಪ್ರೀಂ ಕೋರ್ಟಿನ ತೀರ್ಮಾನ ಇದೆ, ಅದು ಯಾವರೀತಿ ಇದೆ ಎಂದರೆ : "In a Saivite or a Vaishnavite temple, the appointment of an Archak will have to be made from a specified denomination, sect or group in accordance with the direction of the Agamas governing those temples Failure to do so would not only be contrary to section 28(1) which requires the trustees to follow the usage of the temple but would also inteferе with the religious practices, the inevitable result of which would be to define the 'Image' " (AIR July 1972) ಎಂದು ತೀರ್ಮಾನವಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ — ನಮ್ಮ ಕುಟುಂಬದಲ್ಲಿ ಪೂಜೆ ಮಾಡುವ ಅಭ್ಯಾಸವಿಲ್ಲ. ಸಂಪ್ರದಾಯ ವಿಲ್ಲ ಅದಕ್ಕೆ ಇತಿಹಾಸವಿಲ್ಲ, ನಿಮ್ಮ ಯಾವ ಪುರಾತನ ಕಾಲದಿಂದ ಪೂಜೆ ಮಾಡಿಕೊಂಡು ಬಂದ ಕುಟುಂಬ ಕ್ಕಿಂತ, ನಾನು ಪೂಜೆ ಮಾಡಿತೋರಿಸುತ್ತೇನೆ. ಈ ತೀರ್ಮಾನದ ಪ್ರಕಾರ ನನ್ನನ್ನು ಯಾವರೀತಿ ಡಿಬಾರ್ ಮಾಡುತ್ತೀರಿ ಹೇಳಿ?

ಶ್ರೀ ಎನ್. ಹುಚ್ಚಮಾಸ್ತಿಗೌಡ,— ಅದಕ್ಕೆ ನಾನು ಡಿಬಾರ್‌ಮಾಡುತ್ತಾ ಇಲ್ಲ. ಸುಪ್ರೀಂಕೋರ್ಟ್ ರಾಜ್ಯಾಂಗ ಶಾಸನವನ್ನು ತಿದ್ದುಪಡಿ ಮಾಡಬೇಕಾದಂಥ ಅವಶ್ಯಕತೆ ಇದೆ. ಅದನ್ನು ಮಾಡಬೇಕು ಎಂದು ಹೇಳುತ್ತೇನೆ. ತಮಿಳುನಾಡು ಸರ್ಕಾರದವರು ಕೇಳುತ್ತಾ ಇದ್ದಾರೆ, ಆ ಪರಿಸ್ಥಿತಿ ಅಲ್ಲಿ ಅಷ್ಟರಲ್ಲೇ ಇದೆ. ಕೇರಳದಲ್ಲಾದರೂ ಕೂಡ ಬೇರೆ ಬೇರೆ ಜನಾಂಗದವರಿಗೆ ಆಗಮ ಶಾಸ್ತ್ರದಲ್ಲಿ ಶಿಕ್ಷಣ ಪಡೆಯುವುದಕ್ಕೆ ಅವ ಕಾಶ ಮಾಡಿಕೊಟ್ಟಿದ್ದಾರೆ. ಅವರು ಎಷ್ಟು ಜನ ನೇಮಕಮಾಡಿದ್ದಾರೆ, ಯಾವರೀತಿಯಲ್ಲಿ ಆಗಿದೆ ಎನ್ನು ವುದನ್ನು ತಿಳಿದುಕೊಳ್ಳಬೇಕು. ನಾವೂ ಕೂಡ ಈ ವಿಷಯದಲ್ಲಿ ಅನುವಂಶಿಕವಾಗಿ ಬಂದಿರತಕ್ಕ ಪದ್ಧತಿ ಯನ್ನು ಅನುಸರಿಸಬೇಕು ಎನ್ನುವ ಅಭಿಪ್ರಾಯ ನಮ್ಮ ಸರ್ಕಾರಕ್ಕೆ ಇಲ್ಲ. ಆದರೆ ಬೇರೆ ಬೇರೆ ಯಾವುದೇ ಕೋಮಿನವರು ಆಗಿರಲಿ, ಅವರಿಗೆ ಆಗಮಶಾಸ್ತ್ರದಲ್ಲಿ ಶಿಕ್ಷಣ ಕೊಟ್ಟು, ಯಾವ ಯಾವ ದೇವಸ್ಥಾನಗಳಲ್ಲಿ ಯಾವ ಯಾವ ಸಂಪ್ರದಾಯಗಳನ್ನು ಅನುಸರಿಸುತ್ತಿದ್ದಾರೆ ಅದರಂತೆ ನಡೆಸಿಕೊಂಡು ಹೋಗುವ ಅವಕಾಶ ಇರಬೇಕು ಎನ್ನುವ ಉದ್ದೇಶ ಇದೆ. ಇಷ್ಟರಮಟ್ಟಿಗೆ ಸುಪ್ರೀಂಕೋರ್ಟಿನ ತೀರ್ಮಾನ ಸಹಾಯಕವಾಗಿದೆ ಎನ್ನುವುದನ್ನು ಲಕ್ಷ್ಯದಲ್ಲಿಟ್ಟು ಸರ್ಕಾರ ತೀರ್ಮಾನ ತೆಗೆದುಕೊಳ್ಳಬೇಕಾಗಿದೆ,

ಶ್ರೀ ಕಾಗೋಡು ತಿಮ್ಮಪ್ಪ. — ದೇವರ ಪೂಜೆ ಮಾಡಬೇಕು, ಆಗಮಶಾಸ್ತ್ರ ಹೇಳಬೇಕು ಎಂದು ಎಲ್ಲಿ ಇದೆ?

ಶ್ರೀ ಎನ್. ಹುಚ್ಚಮಾಸ್ತಿಗೌಡ.— ಇದರ ಬಗ್ಗೆ ಹಿಂದೆ ಒಂದು ಸಾರಿ ಸಭೆಯಲ್ಲಿ ಹೇಳಿದೆ ಯಾವ ಶಾಸ್ತ್ರವನ್ನೂ ಅನುಸರಿಸದೆ ದೇವರನ್ನು ಒಲಿಸಿಕೊಳ್ಳುವುದಕ್ಕೆ ಸಾಧ್ಯ ಎನ್ನುವುದಕ್ಕೆ ಬೇಕಾದಷ್ಟು ಉದಾ ಹರಣೆಗಳು ಇವೆ. ಆದರೂ ದೇವಸ್ಥಾನದಲ್ಲಿ ಬರತಕ್ಕ ಭಕ್ತಾದಿಗಳ ಮನಸ್ಸಿಗೆ ತೃಪ್ತಿಯಾಗುವ ಹಾಗೆ ಕ್ರಮ ವಾಗಿ ಪೂಜೆ ನಡೆಸಬೇಕಾದುದು ಅವಶ್ಯಕ. ವೇದಗಳಲ್ಲಿ ದೇವರನ್ನು ಒಲಿಸಿಕೊಳ್ಳುವುದಕೋಸ್ಕರವಾಗಿ ಯಾವ ಮಾರ್ಗ ಅನುಸರಿಸಬೇಕೆಂಬುದನ್ನು ಹೇಳಿದ್ದಾರೆ. ಹಾಗೂ ಅನೇಕರು ಅನೇಕ ವಿಧದಲ್ಲಿ ದೇವರನ್ನು ಒಲಿಸಿಕೊಂಡಿದ್ದಾರೆ. ಕೆಲವು ಜನರಿದ್ದಾರೆ ಅವರ ಮೈ ಮೇಲೆ ಬಟ್ಟೆ ಇರುವುದಿಲ್ಲ, ಹುಚ್ಚನ ಹಾಗೆ ಕಾಣು ತ್ತಾರೆ ಅಂಥವರು ಭಗವಂತನ ಸಮೀಪ್ಯದಲ್ಲಿರುತ್ತಾರೆ ಎಂದು ನಮ್ಮ ಹಿರಿಯರು ಹೇಳುತ್ತಾರೆ, ಭಗವಂತ ನನ್ನು ಒಲಿಸಿಕೊಳ್ಳುವುದಕ್ಕೂ ನಡೆಯುತಕ್ಕ ಪೂಜೆಗೂ ಸಂಬಂಧವನ್ನು ಕಲ್ಪಿಸಬಾರದು.

ಶ್ರೀ ಕಾಗೋಡು ತಿಮ್ಮಪ್ಪ.— ಹಿಂದೆ ಬಸವಣ್ಣನವರು ಶುದ್ಧ ಕನ್ನಡದಲ್ಲಿಯೇ ಜನರಿಗೆ ಒಪ್ಪಿಗೆಯಾಗುವ ರೀತಿಯಲ್ಲಿ ಹೇಳಿದರು. ಸಂಸ್ಕೃತದಲ್ಲಿಯೇ ವೇದವನ್ನು ಪಠಣ ಮಾಡಿ ದೇವರನ್ನು ಪೂಜಿಸಬೇಕೆಂದು ಏನೂ ಇಲ್ಲ. ಸಂಸ್ಕೃತ ಭಾಷೆ ಎಷ್ಟು ಜನಕ್ಕೆ ಅರ್ಥವಾಗುತ್ತದೆ? ಆದುದರಿಂದ ಜನರಿಗೆ ಅರ್ಥವಾಗುವ ರೀತಿಯಲ್ಲಿ, ಸುಲಭ ರೀತಿಯಲ್ಲಿ ಹೇಳಬೇಕಾದರೆ ಕನ್ನಡದ ಪದಗಳನ್ನು ಉಪಯೋಗಿಸಿ ಹೇಳುವುದಕ್ಕೆ ಅವಕಾಶ ಮಾಡಿಕೊಡಿ.

ಶ್ರೀ ಎಸ್. ಹುಚ್ಚಮಾಸ್ತಿಗೌಡ.— ಈ ವಿಷಯದಲ್ಲಿ ನನ್ನ ಅಭ್ಯಂತರವೇನೂ ಇಲ್ಲ. ಆದರೆ ಆಗಮ ಶಾಸ್ತ್ರಗಳನ್ನೆಲ್ಲಾ ಕನ್ನಡದಲ್ಲಿ ತರ್ಜುಮೆ ಮಾಡಿದರೆ ಆಗ ಸುಲಭವಾಗಿ ಕಲಿತುಕೊಳ್ಳುವುದಕ್ಕೆ ಸಾಧ್ಯ ಆದರೆ ಅದನ್ನು ಏತಕ್ಕೆ ಮಾಡಲಿಲ್ಲ?

ಶ್ರೀ ಕೊಣಂದೂರು ಲಿಂಗಪ್ಪ.— ತಮಿಳುನಾಡಿನಲ್ಲಿ ಎಲ್ಲವನ್ನೂ ತಮಿಳಿನಲ್ಲಿ ಅನುವಾದ ಮಾಡುತ್ತಿದ್ದಾರೆ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಮಾನ್ಯ ಮಂತ್ರಿಗಳು ಮನೆಯಲ್ಲಿ ಪೂಜೆ ಮಾಡುವಾಗ ಕನ್ನಡದಲ್ಲಿಯೇ ಪೂಜೆ ಮಾಡುತ್ತಾರೆ ಏನೆಂದರೆ, ' ದೀನ ನಾನು, ಸಮಸ್ತ ಲೋಕದೊಡೆಯ ನೀನು'' ಎಂದು ಹೇಳಿಬಿಟ್ಟು, ಅವರ ಇಲಾಖೆಗೆ ಬಂದಾಗ ಮಾತ್ರ ಬೇರೆ ತರಹ ನಡೆದುಕೊಳ್ಳುತ್ತಾರೆ. ಇದು ತಪ್ಪು. ಅವರು ಹೇಳುವುದು ಒಂದು ಮಾಡುವುದು ಒಂದು.

ಶ್ರೀ ಕಾಗೋಡು ತಿಮ್ಮಪ್ಪ.— ಮಾನ್ಯ ಕೆ. ವಿ. ಪುಟ್ಟಪ್ಪನವರ ಮಗನ ಲಗ್ನದಲ್ಲಿ ಪೂಜಾರಿಯನ್ನು ಕರೆಸಿ ಧಾರೆ ಮಾಡಲಿಲ್ಲ. ಅವರು ಸಂಸ್ಕೃತ ಪದವನ್ನು ಉಪಯೋಗಿಸಲಿಲ್ಲ ಅವರೇ ಕನ್ನಡದಲ್ಲಿ ಕಟ್ಟಿದಂಥ ಕೆಲವು ಶ್ಲೋಕಗಳನ್ನು ಹೇಳಿದರು.

ಅಧ್ಯಕ್ಷರು.— ಇಷ್ಟು ಕಷ್ಟದಲ್ಲಿ ಪೂಜೆ ಮಾಡಬೇಕೆಂದು ಯಾರು ಹೇಳಿದ್ದಾರೆ? ಮಾಡದೇ ಇದ್ದರೂ ಆಯಿತು.

ಶ್ರೀ ಎಸ್. ಹುಚ್ಚಮಾಸ್ತಿಗೌಡ.—ಮನೆಯಲ್ಲಿ ದೇವರ ಪೂಜೆ ಮಾಡುಕೊಳ್ಳುವುದಕ್ಕೂ ದೇವರನ್ನು ಒಲಿಸಿಕೊಳ್ಳುವುದಕ್ಕೆ, ಮಾಡುವ ವಿಧಾನಕ್ಕೂ ಮೊದಲಿನಿಂದಲೂ ಅನೂಚಾನವಾಗಿ ಬಂದಿರತಕ್ಕ ಪದ್ಧತಿ ಇದೆ, ಯಾವುದು ಹಿಂದಿನಿಂದ ನಡೆದುಕೊಂಡು ಬಂದಿದೆ ಅವನ್ನು ಉಳಿಸಿಕೊಂಡು ಬಂದಿದ್ದಾರೆ. ಈಗಲೂ ಅದನ್ನೇ ಉಳಿಸಿಕೊಂಡು ಹೋಗಬೇಕೆಂದು ಅನೇಕರ ಅಭಿಪ್ರಾಯವಿದೆ. ಮಾನ್ಯ ಕಾಗೋಡು ತಿಮ್ಮಪ್ಪನವರು ಮತ್ತಿತರ ಸದಸ್ಯರು ಕನ್ನಡದಲ್ಲಿ ಪೂಜೆ ಮಾಡಬೇಕೆಂದು ಹೇಳಿದರು ಅದನ್ನು ಒಪ್ಪಿಕೊಳ್ಳೋಣ. ಆದರೆ ಯಾವುದಕ್ಕೂ ಒಂದು ವಿಧಾನ ಇದೆ, ಈಗ ಶಾಸನ ಸಭೆ ನಡೆಯಬೇಕಾದರೂ ಒಂದು ವಿಧಾನವಿದೆ, ನಿಯಮವಿದೆ, ಅದೇ ರೀತಿ ಯಾವುದಾದರೂ ಕೆಲಸ ಮಾಡಬೇಕಾದರೆ ವಿಧಿ ನಿಯಮಗಳು ಅವಶ್ಯಕ. ಹಿಂದಿನಿಂದ ಯಾವ ರೀತಿ ನಡೆದುಕೊಂಡು ಬಂದಿದೆಯೋ ಅದೇ ರೀತಿ ನಡೆಸಿಕೊಂಡು ಹೋಗಬೇಕಾಗಿದೆ, ಸಂಸ್ಕೃತ ಇಲ್ಲದಿದ್ದರೆ ಕನ್ನಡದಲ್ಲಿ ಆಗುವವರೆಗೂ ಹಳೆಯ ಪದ್ಧತಿಯನ್ನೇ ಅನುಸರಿಸಿಕೊಂಡು ಹೋಗಬೇಕಾಗಿದೆ.

ಶ್ರೀ ಕೊಣಂದೂರು ಲಿಂಗಪ್ಪ. ಇದು ಆಗುವುದು ಯಾವಾಗ? ೨೫ ವರ್ಷಗಳಾಯಿತು ಸ್ವಾತಂತ್ರ್ಯ ಬಂದು.

ಶ್ರೀ ಎಸ್. ಎಚ್. ಪುಟ್ಟರಂಗನಾಥ್.—ಹಳ್ಳಿಗಳಲ್ಲಿ ಎಷ್ಟೋ ಜನ ಪೂಜೆ ಮಾಡುತ್ತಾರೆ ಅವರಿಗೆ ಆಗಮ ಶಾಸ್ತ್ರಗೊತ್ತಿದೆ ಎಂದು ಹೇಳುತ್ತೀರಾ?

ಶ್ರೀ ಎಸ್. ಹುಚ್ಚಮಾಸ್ತಿಗೌಡ.—ಮಾನ್ಯ ಸದಸ್ಯರಿಗೂ ಗೊತ್ತಿದೆ. ಅನೇಕ ಕಡೆ ಯಾವ ವಿದ್ಯಾಭ್ಯಾಸವೂ, ಅಕ್ಷರಾಭ್ಯಾಸವೂ ಮಾಡದೆ ಇರತಕ್ಕಂಥವರು ನಮ್ಮ ಮುಜರಾಯಿ ದೇವಸ್ಥಾನಗಳಲ್ಲಿ ಪೂಜೆ ಮಾಡಿಸುತ್ತಿದ್ದಾರೆ. ಹರಿಜನರೂ ಇದ್ದಾರೆ ಎಲ್ಲಾ ಜಾತಿಯವರೂ ಇದ್ದಾರೆ. ತುರುವೇಕೆರೆ ತಾಲ್ಲೂಕಿನ ಒಂದು ದೇವಸ್ಥಾನದಲ್ಲಿ ಹರಿಜನರೇ ಪೂಜೆ ಮಾಡುತ್ತಾರೆ ಅದು ಮಾನ್ಯ ಸದಸ್ಯರಾದ ಶಿವಣ್ಣನವರಿಗೆ ಗೊತ್ತು. ಇದೇ ತರಹ ಅನೇಕ ಕಡೆ ಹರಿಜನ ಪೂಜೆ ಮಾಡುವಂಥವರೂ ಇದ್ದಾರೆ ಹರಿಜನ ಪೂಜೆ ಮಾಡತಕ್ಕಂಥ ಕಡೆಗೆ ಭಕ್ತಾದಿಗಳು ಬರತಕ್ಕಂಥವರಲ್ಲಿ, ಬ್ರಾಹ್ಮಣರೂ, ಕ್ಷತ್ರಿಯರೂ, ವೈಶ್ಯರೂ ಇದ್ದಾರೆ.

ಹಿಂದೆಲ್ಲಾ, ಶಾಸ್ತ್ರದಲ್ಲಿಯಾಗಲೀ ವೇದಗಳಲ್ಲಿಯಾಗಲೀ, ಪುರಾಣದಲ್ಲಿಯಾಗಲೀ ಅವು ಎಲ್ಲಾ ಸಂಸ್ಕೃತದಲ್ಲಿದ್ದವು. ಇತ್ತೀಚೆಗೆ ಸಾಮಾನ್ಯ ಜನರ ಸಂಖ್ಯೆ ಲಕ್ಷಗಟ್ಟಲೆ ಕೋಟಿಗಟ್ಟಲೆ ಆದಮೇಲೆ ದೇವಭಾಷೆ ಎಲ್ಲರಿಗೂ ಅಭ್ಯಾಸವಾಗಲಿಲ್ಲ. ಕನ್ನಡ ಕೂಡ ಗೊತ್ತಿಲ್ಲದೇ ಇರತಕ್ಕಂಥ ಜನರೂ ಇದ್ದಾರೆ.

ಕೋಟಿಗಟ್ಟಲೆಯಲ್ಲಿ ಕನ್ನಡ ಭಾಷೆಯನ್ನು ಓದಲು ಬರೆಯಲು ಬಾರದೇ ಇರುವಂತವರೂ ಇದ್ದಾರೆ. ಆದುದರಿಂದ ಸಾಮಾನ್ಯ ಜನರ ಸಮಾಜದಲ್ಲಿ ಸ್ಥಿತಿ ಹೇಗೆ ಇದೆ ಅದಕ್ಕೆ ಅನುಗುಣವಾಗಿ ಆಗಬೇಕಾದದ್ದು ಅವಶ್ಯಕವೆಂದು ಕಂಡು ಬಂದಿದೆ. ಅದಕ್ಕಾಗಿ ಮುಂದಿನ ಕ್ರಮವನ್ನು ಏನೇನು ತೆಗೆದುಕೊಳ್ಳಬೇಕೋ ಅದೆಲ್ಲವನ್ನೂ ಸರ್ಕಾರ ತೆಗೆದುಕೊಳ್ಳುವುದಕ್ಕೆ ಆಲೋಚನೆ ಮಾಡಬೇಕಾಗುತ್ತದೆ.

ಇನ್ನು ಮಾನ್ಯ ಸದಸ್ಯರನೇಕರು ಕೆಲವಾರು ವಿಷಯಗಳನ್ನು ತಿಳಿಸಿದ್ದಾರೆ. ಹಳ್ಳಿಗಾಡಿನಲ್ಲಿ ಕೆಲಸ ಮಾಡತಕ್ಕ ಪಟೇಲರು, ಶ್ಯಾನುಭೋಗರು, ತೋಟಿ ತಳವಾರರಿಂದ ಹಿಂದೆ ಯಾವ ರೀತಿಯಲ್ಲಿ ಸುವ್ಯವಸ್ಥಿತವಾಗಿ ಕೆಲಸವನ್ನು ತೆಗೆದುಕೊಳ್ಳುತ್ತಿದ್ದರೋ ಅದೇ ರೀತಿ ಪುನಃ ತೆಗೆದುಕೊಳ್ಳಬೇಕೆನ್ನುವುದು ಬಹಳ ಜನರ ಅಭಿಪ್ರಾಯವಾಗಿದೆ. ಶ್ಯಾನುಭೋಗರನ್ನು ತೆಗೆದಾಗ ಅವರ ಅನುವಂಶಕ ಹಕ್ಕನ್ನು ತೆಗೆಯಬೇಕೇ ಎನ್ನುವ ಬಗ್ಗೆ ತೀರ್ಮಾನ ಕೈಗೊಂಡಮೇಲೆ ಅವರಲ್ಲಿ ಕೆಲವರನ್ನು ಆರಿಸಿ ಅವರಿಗೆ ವಿದ್ಯಾಭ್ಯಾಸವನ್ನು ಕೊಡಿಸಿ ವಿಲೇಜ್ ಅಕೌಂಟೆಂಟ್ಸ್ ಆಗಿ ನೇಮಕ ಮಾಡಲಾಗಿದೆ ನೇಮಕ ಆಗಿರುವುದರಲ್ಲಿ ಅನೇಕ ಮಾನ್ಯ ಸಭೆಯ ಸದಸ್ಯರು ಹೇಳಿದ್ದಾರೆ ಹಿಂದಿನ ಶ್ಯಾನುಭೋಗರೇ ಚೆನ್ನಾಗಿದ್ದರು, ಈಗಿನ ವಿಲೇಜ್ ಅಕೌಂಟೆಂಟ್ ಲೆಕ್ಕ ಮಾಡುವುದಕ್ಕೂ ಬರುವುದಿಲ್ಲವೆಂದು ಹೇಳಿದರು. ಈಗಾಗಲೇ ಅದರ ಬಗ್ಗೆ ಅಂತಿಮವಾದ ತೀರ್ಮಾನ ಆಗಿ ಹೋಗಿರುವುದರಿಂದ, ಪುನಃ ಹಳಬರನ್ನು ನೇಮಕ ಮಾಡುವುದಕ್ಕೆ ಬರುವುದಿಲ್ಲ. ಈಗಿರುವವರಿಂದಲೇ ಕೆಲಸ ಚೆನ್ನಾಗಿ ನಡೆಯುವ ವ್ಯವಸ್ಥೆ ಮಾಡಬೇಕಾಗಿದೆ. ಅದಕ್ಕಾಗಿ ಕೆಲವರಿಗೆ ಶಿಕ್ಷಣ ಕೊಡುತ್ತಿದ್ದೇವೆ. ಎಲ್ಲರಿಗೂ ಶಿಕ್ಷಣ ಕೊಡಬೇಕಾದ ಅವಶ್ಯಕವಿದೆ. ಶಿಕ್ಷಣ ಕೊಡುವುದರ ಜೊತೆ ಅವರು ಗ್ರಾಮದಲ್ಲಿ ವಾಸ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕಾಗಿದೆ. ಅವರು ಗ್ರಾಮದಲ್ಲಿಯೇ ಇದ್ದು ಅವರಿಗೆ ನೇಮಿಸತಕ್ಕಂಥ ಕೆಲಸಗಳನ್ನೆಲ್ಲಾ ಮಾಡಿಕೊಂಡು ಹೋಗುವುದಕ್ಕೆ ಅವಕಾಶ ಮಾಡಿಕೊಡಬೇಕಾಗಿದೆ. ಈಗ ಏನಾಗಿದೆ ಎಂದರೆ ಅವರಿಗೆ ವಾಸಕ್ಕೆ ಮನೆ ಸಿಕ್ಕುವುದಿಲ್ಲ. ಇದರಿಂದ ಅವರು ತಾಲ್ಲೂಕ್ ಹೆಡ್ ಕ್ವಾಟರ್ಸ್‌ಗಳಲ್ಲಿ ವಾಸ ಮಾಡಿಕೊಂಡು ಇರುತ್ತಾರೆ. ಹಳ್ಳಿಯಲ್ಲಿ ಇರುವುದಕ್ಕೆ, ವಾಸಕ್ಕೆ ಯೋಗ್ಯವಾದ ಮನೆ ಸಿಕ್ಕುವುದಿಲ್ಲ ಎಂಬ ನೆಪವನ್ನು ಹೂಡಿ ಹಳ್ಳಿಯಲ್ಲಿ ಇರುವುದಕ್ಕೆ ತಪ್ಪಿಸಿಕೊಳ್ಳುತ್ತಿದ್ದಾರೆ. ಅದಕ್ಕಾಗಿ ಈಗ ಸರ್ಕಾರದವರು ಏನು ಆಲೋಚನೆ ಮಾಡುತ್ತಿದ್ದಾರೆಂದರೆ, ಹೌಸಿಂಗ್ ಬೋರ್ಡಿನ ಮುಖಾಂತರವಾಗಲೀ, ಎಲ್. ಐ. ಸಿ ಯ ಮುಖಾಂತರವಾಗಲೀ ಲೋನನ್ನು ಪಡೆದು ಅವರಿಗೆ ಮನೆಗಳನ್ನು ವಿಲೇಜ್ ಅಕೌಂಟೆಂಟ್ಸ್‌ಗೆ, ಟೀಚರ್ಸ್‌ಗೆ ಮನೆಗಳನ್ನು ಕಟ್ಟಿಸಿಕೊಡಬೇಕೆಂಬ ದಿಶೆಯಲ್ಲಿ ಸರ್ಕಾರ ಆಲೋಚನೆ ಮಾಡುತ್ತಿದೆ. ಇದನ್ನು ಕಾರ್ಯರೂಪಕ್ಕೆ ತರುವುದಕ್ಕೆ ಸರ್ವ ಪ್ರಯತ್ನ ಮಾಡುವುದಕ್ಕೆ ಇಷ್ಟಪಡುತ್ತೇವೆ

ಇನ್ನು ಇವರ ಹಾಗೆ ಪಟೇಲರ ಹಾಗೂ ತೋಟಿತಳವಾರರ ನೇಮಕಾತಿ ವಿಷಯದಲ್ಲಿ ಏನಾದರೂ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದಕ್ಕೆ, ತೀರ್ಮಾನ ತೆಗೆದುಕೊಳ್ಳಬೇಕೆಂದು ಸಲಹೆ ಕೊಟ್ಟಿದ್ದಾರೆ. ಈ ವಿಷಯದಲ್ಲಿ ಈಗಾಗಲೇ ಪಟೇಲರು ಸಮ್ಮೇಳನಗಳನ್ನು ಮಾಡಿ ಸರ್ಕಾರದವರ ಗಮನಕ್ಕೆ ತಂದಿದ್ದಾರೆ.

ಶ್ರೀ ಬಿ. ವಿ. ಕಕ್ಕಿಲಾಯ.—ಪಂಚಾಯಿತಿ ಸಕ್ರೆಟರಿ ಮತ್ತು ಗ್ರಾಮದ ಲೆಕ್ಕ ಬರೆಯುವವರು ಈ ಎರಡು ಹುದ್ದೆ ಬೇರೆ ಮಾಡಬೇಕು.

ಶ್ರೀ ಎನ್. ಹುಚ್ಚಮಾಸ್ತಿಗೌಡ.— ಮಾನ್ಯ ಕಕ್ಕಿಲಾಯ ಅವರು ಆ ವಿಷಯ ಹೇಳಿದ್ದಾರೆ, ಈಗ ಸುಮಾರು ೯ ಸಾವಿರ ಗ್ರಾಮ ಪಂಚಾಯಿತಿಗಳು ಇವೆ. ಈಗ ನೇಮಿಸತಕ್ಕದ್ದು ೯,೮೪೦ ವಿಲೇಜ್ ಅಕೌಂಟೆಂಟ್‌ಗಳು, ಅವರ ಜೊತೆಗೆ ಇನ್ನು ೯,೦೦೦ ಜನ ಪಂಚಾಯಿತಿ ಸೆಕ್ರೆಟರಿಗಳನ್ನು ನೇಮಿಸಿದರೆ ಪಂಚಾಯಿತಿಗಳಿಗೆ ಈ ಹೊರೆಯನ್ನು ಹೊರತಕ್ಕ ಶಕ್ತಿ ಇದೆಯೇ ಇಲ್ಲವೇ ಎನ್ನುವುದನ್ನು ನಾವು ಆಲೋಚನೆ ಮಾಡಬೇಕು. ಪಂಚಾಯಿತಿಗಳಿಗೆ ಭೂ ಕಂದಾಯದಲ್ಲೇ ೩೦ ರಷ್ಟು ಕೊಡುತ್ತಾ ಇರುವುದರಿಂದ ಆ ಪಂಚಾಯಿತಿಗಳು ಉಳಿದಿವೆ. ಪ್ರತಿಯೊಂದು ಪಂಚಾಯಿತಿಗೂ ಪ್ರತ್ಯೇಕವಾಗಿ ಒಬ್ಬರನ್ನು ಸೆಕ್ರೆಟರಿ ಕೆಲಸಕ್ಕೋಸ್ಕರ ನೇಮಿಸುವುದಾದರೆ, ಆ ಪಂಚಾಯಿತಿಗೆ ಬರುವ ವರಮಾನ ಎಲ್ಲಾ ಸಂಬಳ ಕೊಡುವ ಪರಿಸ್ಥಿತಿಗೆ ಬರುತ್ತದೆ. ಆ ಗ್ರಾಮದಲ್ಲಿ ಯಾವ ಅಭಿವೃದ್ಧಿ ಕೆಲಸ ನಡೆಯುವುದಕ್ಕೆ ಅವಕಾಶವಾಗುವುದಿಲ್ಲ.

ಶ್ರೀ ಕೆ. ಹೆಚ್. ಹನುಮೇಗೌಡ.—ವಿಲೇಜ್ ಅಕೌಂಟೆಂಟ್‌ಗಳನ್ನು ಅಪಾಯಿಂಟ್ ಮಾಡಿದ್ದೀರಾ, ಅವರ ಸಂಬಳ ವರ್ಷಕ್ಕೆ ಸುಮಾರು ಎರಡುವರೆ ಸಾವಿರ ರೂಪಾಯಿ ಆಗುತ್ತದೆ. ಕಲೆಕ್ಟ್ ಮಾಡಬೇಕಾಗಿರುವ ಕಂದಾಯ ಸುಮಾರು ಒಂದೂವರೆ ಅಥವಾ ಎರಡು ಸಾವಿರ ರೂಪಾಯಿ ಇರುತ್ತದೆ. ಅವರಿಗೆ ಸಾಕಷ್ಟು ಕೆಲಸ ಕೊಡದೆ, ಇಲ್ಲದ ವ್ಯವಹಾರಗಳಿಗೆ ಅವಕಾಶ ಮಾಡಿಕೊಡುವ ಬದಲು ಅವರಿಗೆ ವರ್ಕ್ ಲೋಡ್ ಏನು ಎಂದು ಗೊತ್ತುಮಾಡಬೇಕು. ಇಲ್ಲದಿದ್ದರೆ ಅಷ್ಟೇ ಕಂದಾಯ ವಸೂಲು ಮಾಡುವ ಬದಲು ವಸೂಲು ಮಾಡದೆ ಬಡಪಾಯಿ ರೈತರಿಗೆ ಬಿಟ್ಟುಬಿಡುವುದು ಒಳ್ಳೆಯದು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅದು ಮಾನ್ಯ ಸದಸ್ಯರ ಅಭಿಪ್ರಾಯ ಆಯಿತು. ಅದಕ್ಕೆ ತದ್ವಿರುದ್ಧವಾಗಿ ಅಭಿಪ್ರಾಯ ಬೇರೆಯವರು ವ್ಯಕ್ತಪಡಿಸಿದ್ದಾರೆ. ಇದು ಎಷ್ಟರ ಮಟ್ಟಿಗೆ ಸಾಧ್ಯ ಎನ್ನುವುದನ್ನು ಯೋಚನೆ ಮಾಡಬೇಕು.

ಶ್ರೀ ಕೋಣಂದೂರು ಲಿಂಗಪ್ಪ.—ಭೂ ಕಂದಾಯ ಕಂದಾಚಾರದ ಪದ್ಧತಿ, ಅದನ್ನು ಏತಕ್ಕೆ ಕೈ ಬಿಡಬಾರದು ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅದು ಬೇರೆ ಪ್ರಶ್ನೆ ಆಯಿತು. ಪ್ರತ್ಯೇಕವಾಗಿ ಗ್ರಾಮಪಂಚಾಯಿತಿಗಳಿಗೆ, ಸೆಕ್ರೆಟರಿ ನೇಮಕ ಮಾಡಬೇಕು, ಪಟೇಲರ ನೇಮಕ ಮಾಡಬೇಕು, ತೋಟಿ ತಳವಾರರನ್ನು ನೇಮಕ ಮಾಡಬೇಕು ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ.

ಶ್ರೀ ದೊಡ್ಡತಿಮ್ಮಯ್ಯ.—ಸರ್ವೀಸ್ ನಾವು ಅಬಾಲಿಷನ್ ಆಕ್ಟ್ ಪಾಸ್ ಮಾಡಿದ್ದೀರಿ. ತೋಟಿಗಳನ್ನು ರದ್ದು ಮಾಡಿದ್ದೀರಿ. ತೋಟಿ ಕೆಲಸ ರದ್ದಾಗಿದ್ದರೂ ಕೂಡ ಬಲತ್ಕಾರವಾಗಿ ಅವರಿಂದ ಕೆಲಸ ಮಾಡಿಸುತ್ತಿದ್ದಾರೆ, ಇದಕ್ಕೆ ಏನು ಉಪಾಯ ಕಂಡುಹಿಡಿಯುತ್ತೀರಾ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅವರ ಸೇವಾ ಅವಧಿ ರದ್ದಾಗಿದೆ ಆದರೆ ಇರತಕ್ಕ ಜಮೀನುಗಳನ್ನು ಅವರಿಗೆ ಕೊಡಬೇಕು ಎಂದು ತೀರ್ಮಾನವಾಗಿದೆ, ಅವರಿಂದ ಬಲತ್ಕಾರವಾಗಿ ಕೆಲಸ ಮಾಡಿಸಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಕಾನೂನು ಸಹಾಯ ಅವರಿಗೆ ಇರುವಾಗ ಬಲಾತ್ಕಾರವಾಗಿ ಏತಕ್ಕೆ ಮಾಡಬೇಕು? ಅದನ್ನು ತಪ್ಪಿಸುವುದಕ್ಕೆ ಸಮಾಜ ಸುಧಾರಕರು ಪ್ರಯತ್ನ ಮಾಡಬೇಕು ಮಾನ್ಯ ಸದಸ್ಯರು ರಾಜಕೀಯ ಪಕ್ಷಗಳಲ್ಲಿ ಸ್ವಂತ ಅಭಿಪ್ರಾಯ ವ್ಯಕ್ತಪಡಿಸುವುದಕ್ಕೆ ಆಗದೇ ಮೌನವಾಗಿ ಹಲ್ಲು ಕಚ್ಚಿಕೊಂಡು ಪಕ್ಷದ ತೀರ್ಮಾನಕ್ಕೆ ಒಪ್ಪಿಕೊಳ್ಳಬೇಕಾಗಿದೆ. ಅಂಥ ಸಂದರ್ಭದಲ್ಲಿ ಸ್ವತಂತ್ರ ಹೋಯಿತು ಎಂದು ಹೇಳಿದರೆ ಹೇಗೆ ಆಗುತ್ತದೆ. ಕಾನೂನು ಪ್ರಕಾರ ಬಲತ್ಕಾರವಾಗಿ ಮಾಡಿಸಿಕೊಳ್ಳುವುದಕ್ಕೆ ಅವಕಾಶವಿಲ್ಲ. ಹಾಗಿರುವಾಗ ಬಲತ್ಕಾರವಾಗಿ ಮಾಡಿಸುತ್ತಾ ಇದ್ದಾರೆ ಎಂದರೆ, ನಾವು ಏನು ಸಹಾಯ ಮಾಡುವುದಕ್ಕಾಗುವುದಿಲ್ಲ. ಸ್ಪಷ್ಟವಾಗಿ ಅವರಿಗೆ ಇರತಕ್ಕ ಸ್ವತಂತ್ರ ಅದು ಪಟೇಲರನ್ನು ನೇಮಿಸುವ ವಿಷಯದಲ್ಲಿ ಕೂಡ ಈಗಾಗಲೇ ಸರ್ಕಾರದವರು ಆಲೋಚನೆ ಮಾಡಿ ಪಟೇಲರನ್ನು ತೋಟಿಗಳನ್ನು ಹಾಗೆ ಉಳಿಸಿಕೊಳ್ಳುವುದು ಅವಶ್ಯಕ ಇಲ್ಲವೆ ಎಂಬುದನ್ನು ಯೋಚನೆ ಮಾಡಿದ್ದಾರೆ. ಅದಕ್ಕೆ ಒಂದು ಮಸೂದ ಕಾನೂನು ಸಿದ್ಧವಾಗಿದೆ. ಅದು ಸಭೆಯ ಮುಂದೆ ಬಂದಾಗ ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಬಹುದು ಅವರನ್ನು ಇಟ್ಟುಕೊಳ್ಳುವುದಾದರೆ ಯಾವ ರೀತಿ ಅವರಿಗೆ ಸಂಬಳವಾಗಲಿ ಅಥವಾ ಪೋಟಿಗೆಯಾಗಲಿ ಎಷ್ಟು ಕೊಡಬೇಕು ಯಾವರೀತಿ ಕೊಡಬೇಕು ಎಂಬ ತೀರ್ಮಾನವನ್ನು ಸಭೆ ಕೈಗೊಳ್ಳಬೇಕಾಗುತ್ತದೆ. ಇನ್ನು ಭೂ ಸುಧಾರಣೆಗೆ ಸಂಬಂಧಪಟ್ಟ ಹಾಗೆ ಕೆಲವು ಅರ್ಜಿಗಳನ್ನು ಹೊರಡಿಸಿ ಎಷ್ಟೆಷ್ಟು ಪತ್ರಗಳನ್ನು ವಿಲೇವಾರಿ ಮಾಡುವುದಕ್ಕೆ ಪರಭಾರೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ ಎಂದು ಮಾನ್ಯ ಸದಸ್ಯರು ಕೇಳಿದರು. ೪,೫೦೦ ಚಿಲ್ಲರೆ ಕಾಗದಗಳು ಬಂದಿವೆ, ಅವುಗಳಲ್ಲಿ ಬಹುತೇಕ ಅಪ್ಪಣೆಕೊಟ್ಟಿದೆ. ಮಾನ್ಯ ಸದಸ್ಯರು ಈ ಪ್ರಮಾಣ ಪತ್ರ ತೆಗೆದುಕೊಂಡು ಅವರಿಗೆ ಪರ್‌ಮಿಷನ್ ಕೊಟ್ಟಿದ್ದಾರೆ. ಆ ಪರ್‌ಮಿಷನ್ ಪತ್ರದಲ್ಲಿ ಸರ್ಕಾರಿ ಮಟ್ಟಕ್ಕೆ ಬಂದು ಖರ್ಚುಮಾಡಬೇಕಾದಂಥ ಅವಶ್ಯಕತೆ ಏನು ಇದೆ, ಪ್ರಮಾಣ ಪತ್ರದ ಆಧಾರದ ಮೇಲೆ ಪರ್‌ಮಿಷನ್ ಕೊಡುವುದು ಆಗಿದ್ದರೆ ಸಬ್ ರಿಜಿಸ್ಟ್ರಾರ್ ಮಾಡಬಹುದು ಎಂದು ಹೇಳಿದರು. ಪ್ರಮಾಣ ಪತ್ರದ ಆಧಾರದ ಮೇಲೆ ಅವರಿಗೆ ಪರ್‌ಮಿಷನ್ ಕೊಡಬೇಕು ಎಂದು ಇರಲಿಲ್ಲ. ಮೊದಲು ಪ್ರತಿ ತಾಲ್ಲೂಕಿನ ತಾಹಸೀಲ್ದಾರರು ಆಸ್ತಿ ಎಷ್ಟು ಇದೆ ಮಾರುವುದು ತೆಗೆದು ಕೊಳ್ಳುವುದು ಕಾನೂನಿನ ವಿರುದ್ಧವಾಗುತ್ತದೆಯೋ ಎಂದು ತಿಳಿದುಕೊಳ್ಳಬೇಕು ಎನ್ನುವ ಉದ್ದೇಶ ಇತ್ತು. ಆ ರೀತಿ ಮಾಡಿದರೆ ೨-೩ ತಿಂಗಳು ಆಗಿ ಇದರ ಉದ್ದೇಶ ಸಫಲವಾಗುವುದಿಲ್ಲ ಎನ್ನುವುದು ಕಂಡು ಬಂದಾಗ ಪ್ರಮಾಣ ಪತ್ರದ ಆಧಾರದ ಮೇಲೆ ಪರ್‌ಮಿಷನ್ ಕೊಟ್ಟಿದ. ಆದರೆ ಪ್ರಮಾಣ ಪತ್ರದಲ್ಲಿ ಮುಖ್ಯವಾಗಿ ಅಲ್ಲಿ ಗೇಣಿದಾರರು ಯಾರು ಇಲ್ಲ, ಗೇಣಿದಾರನಿಗೆ ಆ ಭೂಮಿ ಮಾರುವುದರಿಂದ ಯಾವ ಅಡ್ಡಿಯಾಗುವುದಿಲ್ಲ ಎನ್ನುವುದು ಒಂದನೆಯದು. ಎರಡನೆಯದು ಸೀಲಿಂಗ್ ಏರಿಯಾಕ್ಕೆ ಹೆಚ್ಚಿಗೆ ಜಮೀನು ಇಲ್ಲ ಉಂಟು ಎನ್ನುವುದು ಕೂಡ ತಿಳಿದುಕೊಳ್ಳಬೇಕಾಗುತ್ತದೆ. ಈ ರೀತಿ ಪ್ರಮಾಣ ಪತ್ರ ತೆಗೆದುಕೊಂಡು ಪರ್‌ಮಿಷನ್ ಕೊಟ್ಟಿದೆ. ಮುಂದೆ ಪ್ರಮಾಣ ಪತ್ರಕ್ಕೆ ವಿರುದ್ಧವಾಗಿ ಏನಾದರೂ ಅವನ ಆಸ್ತಿ ಇರುವುದಾಗಲಿ, ಗೇಣಿದಾರರು ಇರುವುದಾಗಲಿ, ಕಂಡುಬಂದರೆ ಅದರ ಮೇಲೆ ಅವನಿಗೆ ಶಿಕ್ಷೆಯಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ಪ್ರಮಾಣ ಪತ್ರದಲ್ಲಿ ವಿವರಗಳು ಕೊಡದೆ ಹೋದರೆ ಏನು ಆಗುತ್ತದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ತಪ್ಪು ಹೇಳಿದರೆ, ಪೂರ್ತಿ ವಿವರ ಕೊಡದೆ ಇದ್ದರೆ, ಟ್ರಿಬ್ಯೂನಲ್ ಮುಂದೆ ಬರತಕ್ಕ ಸಂದರ್ಭದಲ್ಲಿ ಸೀಲಿಂಗ್ ಏರಿಯಾ ಹೆಚ್ಚಾಗಿ ಇರುವ ಜಮೀನನ್ನು ಪರಬಾರೆ ಮಾಡಿದ್ದರೆ, ಕಾನೂನು ಪ್ರಕಾರ ಅವನಿಗೆ ಶಿಕ್ಷೆಯಾಗುತ್ತದೆ. ಅದರ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಭೂಮಿ ಹಂಚಿಕೆ ವಿಷಯದಲ್ಲಿ ಭೂಮಿಯನ್ನು ಹಂಚಿದಾಗ ಯಾರು ಯಾರಿಗೆ ಎಷ್ಟೆಷ್ಟು ಕೊಡಬೇಕು, ಅದನ್ನು ಕ್ರಮವಾಗಿ ಕೊಟ್ಟಿದ್ದಾರೆಯೋ ಇಲ್ಲವೇ ಎನ್ನುವ ಪ್ರಶ್ನೆಯನ್ನು ಕೂಡ ಮಾನ್ಯ ಸದಸ್ಯರು ಅನೇಕರು ಎತ್ತಿದ್ದಾರೆ. ಕಳೆದ ವರ್ಷ ೫೭ ಸಾವಿರ ಎಕರೆ ಭೂಮಿ ಕೊಟ್ಟಿದ್ದರಲ್ಲಿ ಕಾನೂನು ಪ್ರಕಾರವಾಗಿ ೫೦ ಭಾಗ ಹರಿಜನ ಗಿರಿಜನರಿಗೆ, ಉಳಿದವರಿಗೆ ಎಷ್ಟು ಕೊಡಬೇಕು ಎಂದು ವಿಧೇಯಕವಾಗಿದೆಯೋ ಅವರ ಪ್ರಕಾರ ಕೊಟ್ಟಿದೆ. ಅವಕ್ಕೆ ವಿರುದ್ಧವಾಗಿ ಕೊಡುವಂಥ ಸಂದರ್ಭ ಇಲ್ಲ. ಅಲ್ಲಿ ಸಮಿತಿಗಳು ಕೆಲಸ ಮಾಡುತ್ತಾ ಇವೆ. ಸಮಿತಿಯವರ ತೀರ್ಮಾನದ ಮೇಲೆ ಮಾಡುವುದರಿಂದ ಸಮಿತಿಯವರು ನಿಯಮಾವಳಿಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಮಾಡಿದ್ದಾರೆ ಎನ್ನುವ ವಿಶ್ವಾಸ ಇದೆ. ಆದುದರಿಂದ ಅದರಲ್ಲಿ ಏನು ದೋಷ ನನಗೆ ಕಂಡುಬಂದಿಲ್ಲ. ಇನ್ನು ಕೊರಮ, ಕೊಂಚೆ ಮತ್ತು ತೀರಾ ಅಲ್ಪಸಂಖ್ಯಾತ ಕೋಮಿನವರಿಗೆ ಜಮೀನು ಸಿಕ್ಕಿದೆಯೋ ಇಲ್ಲವೇ ಎಂದು ಮಾನ್ಯ ಸದಸ್ಯರು ಕೇಳಿದರು. ಕೆಲವು ನಿಯಮಾವಳಿಗಳು ಇವೆ, ಹರಿಜನ ಗಿರಿಜನರಿಗೆ ಎಷ್ಟು ಕೊಡಬೇಕು ಭೂಮಿ ಇಲ್ಲದೇ ಇರುವವರಿಗೆ ಎಷ್ಟು ಭಾಗ ಸಲ್ಲಬೇಕು, ಮಿಲಿಟರಿಯಲ್ಲಿ ಕೆಲಸ ಮಾಡುವವರಿಗೆ ಎಷ್ಟು ಭಾಗ ಸಲ್ಲಬೇಕು, ರಾಜಕೀಯ ಸ್ವಾತಂತ್ರ್ಯಸ್ಥರಿಗೆ ಎಷ್ಟು ಕೊಡಬೇಕು ಎಂದು ರೂಲ್ಸ್ ಪ್ರಕಾರ ಕೊಟ್ಟಿದ್ದೇವೆ. ಇಂತಹ ಜಾತಿಗಳಿಗೆ ಎಷ್ಟು ಕೊಟ್ಟಿದೆ ಎಂದು ಹೇಳಬೇಕಾದರೆ ಅಂಕಿಸಂಖ್ಯೆ ಸಂಗ್ರಹಿಸಿ ಹೇಳಬೇಕು.

ಶ್ರೀ ಕಾಗೋಡು ತಿಮ್ಮಪ್ಪ.—ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ಗೆ ಯಾವ ರೀತಿ ಪ್ರಿಫರೆನ್ಸ್ ಕೊಡುತ್ತೀರಿ, ಅದೇ ರೀತಿ ನೊಮಾಡಿಕ್ ಮತ್ತು ಸೆಮಿನೊಮಾಡಿಕ್ಸ್ ಟ್ರೈಬ್ಸಿಗೂ ಪ್ರಿಫರೆನ್ಸ್ ಕೊಡುವುದು ಒಳ್ಳೆಯದು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗ ಇರತಕ್ಕ ರೀತಿಯಲ್ಲಿ ೧೦೦ ಕ್ಕೆ ೪೦ ರಷ್ಟು ಭಾಗ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ ಟ್ರೈಬ್ಸ್ ಆಗುತ್ತದೆ. ಉಳಿದಿದ್ದನ್ನು ಇಷ್ಟು ಪರ್ಸೆಂಟ್ ಕೊಡಬೇಕು ಎಂದು ಗೊತ್ತು ಮಾಡಿದೆ. ಸೆಮಿ ನೊಮಾಡಿಕ್ ಮತ್ತು ನೊಮಾಡಿಕ್ ಟ್ರೈಬ್ಸ್ ಭೂಮಿ ಇಲ್ಲದೆ ಇರುವ ವರ್ಗದಲ್ಲಿ ಬರುವುದರಿಂದ, ಅವರಿಗೂ ಭೂಮಿ ಸಿಕ್ಕಿದೆ ಎಂದು ನನ್ನ ಭಾವನೆ ಆದರೆ ಕೆಲವು ವೇಳೆ ವ್ಯವಸಾಯ ಮಾಡದೇ ಇರತಕ್ಕವನು ಎನ್ನುವ ದೃಷ್ಟಿಯಿಂದ ಏನಾದರೂ ನೊಮಾಡಿಕ್ ಟ್ರೈಬ್ಸ್‌ಗೆ ಸಿಕ್ಕದೆ ಇರಬಹುದು ಎಂದು ತಿಮ್ಮಪ್ಪನವರಿಗೆ ಸಂದೇಹ ಇರಬಹುದು.

ಆದರೆ ಅವರು ಅರ್ಜಿ ಹಾಕಿ ಭೂಮಿಸಾಗುವಳಿ ಮಾಡುತ್ತಿದ್ದಾರೆ ಎಂದು ಕಂಡುಬಂದಾಗ ಆ ಕಮಿಟಿಯವರು ಅದನ್ನು ಅವರಿಗೆ ಕೊಡುವುದಕ್ಕೆ ಯಾವ ಅಡ್ಡಿಯೂ ಇಲ್ಲ ಸಮಿಟ್ರೈಬ್ಸ್ ಮತ್ತು ನಾಮೆಡಿಕ್ ಟ್ರೈಬ್ಸನವರಿಗೂ ಕೂಡ ಈಗ ಇರತಕ್ಕಂಥ ರೂಲ್‌ನಲ್ಲೇ ಜಮೀನು ಕೊಡುವುದಕ್ಕೆ ಬರುತ್ತದೆ. ಈ ಜಮೀನು ಹಂಚುವಾಗ ಮೊದಲನೇ ಪ್ರಿಫರೆನ್ಸ್ ಷೆಡ್ಯೂಲ್ಡ್ ಕ್ಯಾಸ್ಟ್ಸ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸಿ ಮತ್ತು ಎರಡನೇ ಪ್ರಿಫರೆನ್ಸ್ ಲ್ಯಾಂಡಲೆಸ್ ಪೀಪಲ್ಸ್‌ಗೆ ಅಂತ ಇದೆ.

೧-೩೧ ಪಿ. ಎಂ.

ಶ್ರೀ ಕಾಗೋಡು ತಿಮ್ಮಪ್ಪ : ಲ್ಯಾಂಡ್‌ಲೆಸ್ ಪೀಪಲ್‌ನಲ್ಲಿ ಬೇರೆಯವರೂ ಬರುತ್ತಾರೆ.

ಶ್ರೀ ಎನ್, ಹುಚ್ಚಮಾಸ್ತಿಗೌಡ ; ಲ್ಯಾಂಡ್‌ಲೆಸ್ ಪೀಪಲ್‌ನಲ್ಲಿ ಸೆಮಿ ಟ್ರೈಬ್ಸ್ ಮತ್ತು ನೊಮಾಡಿಕ್ ಟ್ರೈಬ್ಸ್ ಅವರಿಗೂ ಜಮೀನು ಕೊಡಬಹುದು. ಆದರೆ ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಲ್ಯಾಂಡ್‌ಲೆಸ್ ಪೀಪಲ್‌ಗೆ ಪ್ರಿಫರೆನ್ಸ್ ಕೊಡಬೇಕು ಎಂದು ಹೇಳುತ್ತಾರೆ ಅದನ್ನು ಆಲೋಚನೆ ಮಾಡೋಣ.

ಇನ್ನು ಶ್ರೀಮಾನ್ ಜಿ ಪುಟ್ಟಸ್ವಾಮಿಯವರು ಕಳಸದ ಕಲ್ಯಾಣ ಮಂಟಪದ ವಿಷಯ ತಿಳಿಸಿದರು. ಮೊದಲು ಇದರ ಸೈಟ್ಟು ಬದಲಾವಣೆ ಆಗಬೇಕಾಗಿದ್ದುದರಿಂದ ಅದರ ಅಂದಾಜು ತಯಾರಾಗಿಲ್ಲ. ಈಗ ಇದನ್ನು ಕಳುಹಿಸಿಕೊಟ್ಟಿದ್ದೇವೆ. ಅದು ಬಂದ ಕೂಡಲೇ ಆದಷ್ಟು ಬೇಗ ತೆಗೆದು ಕೊಳ್ಳುತ್ತೇವೆ.

ಶ್ರೀ ಜಿ. ಪುಟ್ಟಸ್ವಾಮಿ : ದೇವಸ್ಥಾನದ ಕಲ್ಯಾಣಮಂಟಪವನ್ನು ಯಾರು ಕಟ್ಟಿಸುತ್ತಾರೆ ?

ಶ್ರೀ ಎನ್. ಹುಚ್ಚಮಾಸ್ತಿಗೌಡ : ಅದನ್ನು ಕಟ್ಟಿಸುವುದಕ್ಕೆ ಯಾರನ್ನೂ ಕೇಳಬೇಕಾಗಿಲ್ಲ. ದೇವಸ್ಥಾನದಲ್ಲೇ ದುಡ್ಡು ಇದೆ. ಅವರು ಕಟ್ಟಿಸುತ್ತಾರೆ.

(ಶ್ರೀ ಎನ್. ಹುಚ್ಚಮಾಸ್ತಿಗೌಡ)

ಇನ್ನು ದೇವಸ್ಥಾನಕ್ಕೆ ಬರಬೇಕಾದ ಗಂಧದಮರದ ಹಣ ಬಂದಿಲ್ಲ. ಸರ್ಕಾರವೇ ಅದನ್ನು ಉಪಯೋಗಿಸಿಕೊಂಡು ಬಾಕಿ ಹಣ ಕೊಟ್ಟಿಲ್ಲ ಎಂದು ಶ್ರೀಮಾನ್ ಪುಟ್ಟಸ್ವಾಮಿಯವರು ಹೇಳಿದರು, ಈ ಬಗ್ಗೆ ಹೇಳುವುದಾದರೆ ೧೯೬೦-೬೧ನೇ ಇಸವಿಯಲ್ಲಿ ಆ ಹಣ ಪೂರ್ತಾ ಬಂದಿದೆ ಎಂದು ಗೊತ್ತಾಗಿದೆ. ಮತ್ತು ಇದರ ಜೊತೆಗೆ ದೇವಸ್ಥಾನಕ್ಕೆ ಇನ್ನೂ ಬರಬೇಕಾದ ಹಣ ಇದ್ದರೆ ಅದನ್ನು ಕೊಡಿಸುವುದಕ್ಕೆ ವ್ಯವಸ್ಥೆ ಮಾಡುತ್ತೇನೆ.

ಇನ್ನು ಕಾಫಿ ರಿಜಿಸ್ಟ್ರೇಷನ್ ಸರ್ಟಿಫಿಕೇಟ್‌ನ್ನು ಬೇಗ ಕೊಡಬೇಕು ಮಾನ್ಯ ಸದಸ್ಯರು ಸಲಹೆ ಮಾಡಿದರು. ಈಗ ಕಾಫಿ ರಿಜಿಸ್ಟ್ರೇಷನ್ ಸರ್ಟಿಫಿಕೇಟ್ಸ್ ಬಗ್ಗೆ ಹೇಳುವುದಾದರೆ ನಾನು ಒಂದು ಸಾರಿ ವೀರರಾಜಪೇಟೆ ತಾಲ್ಲೂಕು ಆಫೀಸಿಗೆ ಹೋಗಿ ನೋಡಿದಾಗ ಸಾವಿರಾರು ಗಟ್ಟಲೆ ಅರ್ಜಿ ಹಾಗೆಯೇ ಉಳಿದಿತ್ತು. ನಾನು ಅಲ್ಲಿಂದ ಬಂದಮೇಲೆ ಕಾಫಿ ಬೆಳೆಯತಕ್ಕಂಥ ಪ್ರದೇಶಗಳಲ್ಲಿ ಕಾಫಿ ರಿಜಿಸ್ಟ್ರೇಷನ್ ಸರ್ಟಿಫಿಕೇಟ್ಸ್‌ನ್ನು ಬೇಗ ಕೊಡಬೇಕು ಎಂದು ತಿಳುವಳಿಕೆ ಕೊಟ್ಟೆ. ಅದರಂತೆ ಈಗಾಗಲೇ ಸಾಕಷ್ಟು ಆ ಸರ್ಟಿಫಿಕೇಟ್ಸ್ ವಿತರಣೆಯಾಗಿದೆ ಮತ್ತು ಇತ್ತೀಚೆಗೆ ಒಂದು ಪ್ರಾವಿಷನಲ್ ಸರ್ಟಿಫಿಕೇಟ್ ಇದ್ದರೆ ಕಾಫಿಬೋರ್ಡಿನಿಂದ ಸಾಲ ವಗೈರೆ ಸಿಕ್ಕುವ ಹಾಗೆ ಅವಕಾಶ ಮಾಡಿಕೊಳ್ಳಬಹುದು. ಈ ಬಗ್ಗೆ ಅವರಿಗೆ ಸರ್ಕ್ಯುಲರ್ ರೂಪದಲ್ಲಿ ಒಂದು ಆದೇಶವನ್ನು ಕಳುಹಿಸಿಕೊಟ್ಟಿದೆ.

ಇನ್ನು ಮಾನ್ಯ ಪುಟ್ಟಸ್ವಾಮಿಯವರು ಹೇಳಿದರು ಅಕ್ವಿಸಿಷನ್ ಮಾಡುವ ಸಂದರ್ಭದಲ್ಲಿ ಹರಿಜನೇತರರ ಜಮೀನನ್ನು ಬಿಟ್ಟು ಹರಿಜನರ ಜಮೀನುಗಳನ್ನು ಅಕ್ವೈರ್ ಮಾಡಿದ್ದಾರೆ ಎಂದು ಇದಕ್ಕೆ ಆಧಾರ ಏನು ಇದೆಯೋ ಏನೋ ನನಗೆ ಗೊತ್ತಿಲ್ಲ,

ಶ್ರೀ ಜಿ. ಪುಟ್ಟಸ್ವಾಮಿ : ಸ್ವಾಮಿ, ಮಂಡ್ಯ ಜಿಲ್ಲೆಯಲ್ಲಿ ಈರೀತಿ ಮಾಡಿದ ಅನೇಕ ನಿದರ್ಶನಗಳು ಇವೆ. ಅವುಗಳಿಗೆ ಸಂಬಂಧಪಟ್ಟ ರಿಕಾರ್ಡ್‌ನ್ನು ಈ ಸಭೆಯ ಮುಂದೆ ಇಟ್ಟರೆ ಅದನ್ನು ನಾನು ರುಜುವಾತು ಮಾಡುತ್ತೇನೆ,

ಶ್ರೀ ಎನ್. ಹುಚ್ಚಮಾಸ್ತಿಗೌಡ : ಈ ಮಾತು ನಿರಾಧಾರವಾದ ಗಾಳಿ ಮಾತು. ಏತಕ್ಕೆಂದರೆ ಈ ಅಕ್ವಿಸಿಷನ್ ಬಗ್ಗೆ ಏನು ಮಾಡಬೇಕು ಎಂದು ಎಲ್ಲಾ ಡೆಪ್ಯೂಟಿ ಕಮೀಷನರಿಗೂ ತಿಳುವಳಿಕೆ ಕೊಟ್ಟಿದ್ದೇನೆ. ಲ್ಯಾಂಡ್‌ಲೆಸ್ ಪೀಪಲ್‌ಗೆ ಸೈಟುಗಳನ್ನು ಕೊಡುವಾಗ ಎಲ್ಲಾ ಊರುಗಳಿಗೂ ಹೋಗಿ ಸ್ಥಳಗಳನ್ನು ನೋಡಿಕೊಂಡು ಬರಬೇಕು ಎಂದು ಹೇಳಿದ್ದೇನೆ. ಉದಾಹರಣೆಗೆ ನಾನು ಕೆಲವು ಸೈಟುಗಳನ್ನು ನೋಡಿದ್ದೇನೆ. ಕೆಲವು ಊರುಗಳಲ್ಲಿ ಏನು ಮಾಡಿದ್ದಾರೆ ಎಂದರೆ ವಿಲೇಜ್ ಎಕ್ಸ್‌ಟೆನ್‌ಷನ್‌ಗೋಸ್ಕರ ಕೆಲವು ಜಮೀನುಗಳನ್ನು ಅಕ್ವೈರ್ ಮಾಡಿಕೊಳ್ಳಲಾಗಿದೆ. ಆ ಬಗ್ಗೆ ತಕರಾರು ಬಂದಾಗ ಆ ಸ್ಥಳವನ್ನು ಅಜಮಾಯಿಷಿ ಮಾಡಿ. ಅದನ್ನು ಬಿಟ್ಟು ಬೇರೆ ಜಮೀನನ್ನು ಅಕ್ವೈರ್ ಮಾಡಿ ತೆಗೆದುಕೊಳ್ಳಿ ಎಂದು ಹೇಳಿದೆ. ಅದಕ್ಕೆ ಮಾನ್ಯ ಸದಸ್ಯರು ಹರಿಜನರ ಜಮೀನನ್ನು ತೆಗೆದುಕೊಳ್ಳುತ್ತಿದ್ದಾರೆ ಎನ್ನುವ ಮಾತು ಹೇಳಿದರೆ ಅವರು ವಿಷಯ ತಿಳಿದು ಹೇಳಿದ್ದಾರೋ ತಿಳಿಯದೇ ಹೇಳಿದ್ದಾರೋ ಗೊತ್ತಿಲ್ಲ. ಮತ್ತು ಈ ಬಗ್ಗೆ ಎಲ್ಲೆಲ್ಲಿ ಡಿಸ್ಪ್ಯೂಟ್ ಇದೆ ಅವುಗಳನ್ನು ಬಿಟ್ಟು ಉಳಿದ ಜಮೀನನ್ನು ತೆಗೆದುಕೊಂಡು ತೀರ್ಮಾನ ಮಾಡಬೇಕೆಂದು ಡೆಪ್ಯೂಟಿ ಕಮೀಷನರಿಗೆ ಆದೇಶ ಕೊಟ್ಟಿದೆ. ಇನ್ನು ೨೦-೩೦ ಸ್ಥಳಗಳಲ್ಲಿ ವಿಶೇಷವಾದಂಥ ವ್ಯಾಜ್ಯಗಳು ಇದ್ದಂಥ ಕಡೆಯಲ್ಲಿ ಅವುಗಳನ್ನು ಬಂದು ನೋಡುತ್ತೇನೆ ಎಂದು ತಿಳಿಸಿದ್ದೇನೆ. ಉಳಿದುದೆಲ್ಲವನ್ನೂ ಡೆಪ್ಯೂಟಿ ಕಮೀಷನರು ಇತ್ಯರ್ಥ ಮಾಡುತ್ತಿದ್ದಾರೆ. ಆದುದರಿಂದ ಈಬಗ್ಗೆ ಮಾನ್ಯ ಪುಟ್ಟಸ್ವಾಮಿಯವರು ಹೇಳುವುದಕ್ಕೆ ಯಾವ ಆಧಾರವುಲ್ಲ. ಇದರಲ್ಲಿ ನಿಜಾಂಶ ಅವರಿಗೆ ತಿಳಿದರೆ ಗೊತ್ತಾಗುತ್ತದೆ.

ಶ್ರೀ ಜಿ. ಪುಟ್ಟಸ್ವಾಮಿ : ಮಂಡ್ಯ ಜಿಲ್ಲೆಯಲ್ಲಿ ಅಕ್ವಿಸಿಷನ್ ಮಾಡಿರುವ ಪೇಪರನ್ನು ಸಭೆಯ ಮುಂದೆ ಇಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ : ಬೇಕಾಗಿದರೆ ಈ ಮಾನ್ಯ ಸಭೆಯ ಮುಂದೆ ಇಡುತ್ತೇನೆ. ಆ ಪೇಪರ್ ಮಂಡ್ಯದಲ್ಲೇ ಇದೇ. ಅವರು ನೋಡಬಹುದು ಅದರಲ್ಲೇನೂ ಅಡ್ಡಿ ಇಲ್ಲ. ಈ ಸಭೆಯ ಸದಸ್ಯರಿಗೆ ಮುಚ್ಚುಮರೆ ಮಾಡತಕ್ಕಂಥದ್ದಾಗಲಿ ಯಾವುದು ಏನೂ ಇಲ್ಲ. ತಾವು ಅದನ್ನು ನೋಡಿದರೆ ಅದರಲ್ಲಿ ನಿಜಾಂಶ ಎಷ್ಟು ಇದೆ, ಸುಳ್ಳು ಎಷ್ಟು ಎನ್ನುವುದು ಗೊತ್ತಾಗುತ್ತದೆ.

ಇನ್ನು ಗೋಮಾಳದ ಜಮೀನನ್ನು ಹಂಚತಕ್ಕ ಸಂದರ್ಭದಲ್ಲಿ ಕೆಲವು ಅವ್ಯವಸ್ಥೆ ಇದೆ ಆದರಿಂದ ನಮಗೆ ಗೌರವ ಬರುವುದಿಲ್ಲ ಎಂದು ಹೇಳಿದರು. ಮತ್ತು ಇನ್ನೂ ಒಂದುಮಾತ್ತು ಹೇಳಿದರು ಕೆಲವು ವಿಷಯದಲ್ಲಿ ಗುಮಾಸ್ತರುಗಳು ಏನು ಬರೆದು ಇಡುತ್ತಾರೋ ಅದರಂತೆ ತೀರ್ಮಾನ ಮಾಡುತ್ತಾರೆಂದು

ಹೇಳಿದರು, ಈ ಬಗ್ಗೆ ಗುಮಾಸ್ತನೂ ಕೂಡ ಯಾವರೀತಿಯಾಗಿ ಇಡಬೇಕು ಎಂದು ಅಧಿಕಾರಿಗಳಿಗೆ ತಿಳಿಸಲಾಗಿದೆ. ಈ ಜಮೀನನ್ನು ಹಂಚುವಾಗ ಯಾವರೀತಿ ಮಾಡಬೇಕು ಎಂದು ಅಧಿಕಾರಿಗಳಿಗೆ ಈಗಾಗಲೇ ತಿಳಿಸಲಾಗಿದೆ, ಆಯಾಯ ತಾಲ್ಲೂಕಿನಲ್ಲಿ ಎಷ್ಟೆಷ್ಟು ಜಮೀನು ಇದೆ, ಮತ್ತು ತಾಲ್ಲೂಕಿಗೆ ಸೇರಿರುವ ಗ್ರಾಮದಲ್ಲಿ ಎಷ್ಟೆಷ್ಟು ಜಮೀನು ಇದೆ ಈ ಬಗ್ಗೆ ಎಷ್ಟು ಅರ್ಜಿಗಳು ಬಂದಿವೆ ಅದನ್ನು ಅಧಿಕಾರಿಗಳು ತೆಗೆದುಕೊಂಡು ಆ ಸ್ಥಳಕ್ಕೆ ಖುದ್ದಾಗಿ ಹೋಗಿ ಪರಿಶೀಲನೆ ಮಾಡಬೇಕು ಎಂದು ಹೇಳಿದ್ದೇನೆ. ಕೆಲವು ವೇಳೆ ಏನಾಗುತ್ತದೆ ಎಂದರೆ ಗಂಡನ ಹೆಸರಿನಲ್ಲಿ ಜಮೀನು ಇದ್ದರೆ ಹೆಂಡತಿ ಅರ್ಜಿ ಹಾಕಿರುತ್ತಾಳೆ, ಅಥವಾ ಹೆಂಡತಿ ಹೆಸರಿನಲ್ಲಿ ಖಾತೆ ಇದ್ದರೆ ಮಕ್ಕಳು ಅರ್ಜಿ ಹಾಕಿರುತ್ತಾರೆ ಅಥವಾ ಅಣ್ಣನ ಹೆಸರಿನಲ್ಲಿ ಖಾತೆ ಇದ್ದರೆ ತಮ್ಮ ನಾನು ಲ್ಯಾಂಡ್‌ಲೆಸ್ ಅಂತ ಅರ್ಜಿ ಹಾಕಿರುತ್ತಾನೆ. ಇಂಥಾವೆಲ್ಲಾ ಅರ್ಜಿಗಳು ಬರುವುದರಿಂದ ತಾಸೀಲ್ದಾರರು ಮತ್ತು ರೆವಿನ್ಯೂ ಇನ್‌ಸ್ಪೆಕ್ಟರ್ ಇಬ್ಬರೂ ಆ ಸ್ಥಳಕ್ಕೆ ಹೋಗಿ ಆ ಜಮೀನಿನ ಖಾತೆ ಯಾರ ಹೆಸರಿನಲ್ಲಿ ಇದೆ. ಎನ್ನುವುದನ್ನು ಖುದ್ದಾಗಿ ಪರಿಶೀಲನೆ ನಡೆಸಿ ಇದರಲ್ಲಿ ಜನಿಯುನ್ ಕೇಸ್ ಯಾವುದು ಎಂದು ನೋಡಿಬಿಟ್ಟು ನ್ಯಾಯ ಇಲ್ಲದೇ ಇರುವ ಅರ್ಜಿಗಳನ್ನು ಅಲ್ಲೇ ಕೈಬಿಟ್ಟು, ನ್ಯಾಯವಾಗಿರುವ ಅರ್ಜಿಗಳನ್ನು ಸಮಿತಿಯ ಮುಂದೆ ಇಡಬೇಕು ಎಂದು ಅಧಿಕಾರಿಗಳಿಗೆ ತಿಳಿಸಿದ್ದೇನೆ. ಆ ಕಮಿಟಿಯ ಸದಸ್ಯರು ಒಂದೊಂದು ಊರಿನಲ್ಲಿ ಎಷ್ಟೆಷ್ಟು ಜಮೀನು ಇದೆ. ಯಾರ್ಯಾರಿಗೆ ಕೊಡಬೇಕು, ರೂಲ್ಸ್ ಪ್ರಕಾರ ಮಾಡಿದರೆ ಯಾವ ತೊಂದರೆಯೂ ಆಗುವುದಿಲ್ಲ. ಇದು ಬಿಟ್ಟು ಅವರು ಇಂಥಾ ಒಂದು ಅರ್ಜಿ ತೆಗೆದುಕೊಂಡು ಬನ್ನಿ ಗುಮಾಸ್ತರಿಗೆ ಹೇಳಿದರೆ ಆ ಗುಮಾಸ್ತರು ಆ ಒಂದು ಅರ್ಜಿ ಜೊತೆಗೆ ಇನ್ನೂ ೪ ಅರ್ಜಿ ಸೇರಿಸುತ್ತಾರೆ ಹೀಗೆ ಮಾಡಿದರೆ ಆರೀತಿ ಆಗುವುದಿಲ್ಲ. ಈ ಕಮಿಟಿಯಲ್ಲಿ ಕೆಲಸಮಾಡ ತಕ್ಕಂಥ ಮಾನ್ಯ ಸದಸ್ಯರೂ ಕೂಡ ಗ್ರಾಮವಾರು ಎಷ್ಟೆಷ್ಟು ಅರ್ಜಿ ಬಂದಿದೆ ಅಷ್ಟನ್ನೂ ಪರಿಶೀಲಿಸಿ ಆ ಬಗೆ ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಶ್ರೀಮಾನ್ ಕೆಕ್ಕಿಲಾಯ ಅವರು ಬಂಟವಾಳದಲ್ಲಿ ಗೇಣಿದಾರರನ್ನು ಹೊರ ಹಾಕತಕ್ಕಂಥ ಪ್ರಸಂಗಗಳು ಬಂದಿವೆ. ಈ ಬಗ್ಗೆ ಕೋರ್ಟ್‌ನಲ್ಲಿ ತೀರ್ಮಾನವಾಗಿದ್ದರೂ ಕೂಡ ಈರೀತಿ ಆಗಿದೆ. ಎಂದು ಹೇಳಿದ್ದಾರೆ. ಆದರೆ ಕೋರ್ಟಿನಲ್ಲಿ ತೀರ್ಮಾನವಾಗಿರುವುದನ್ನು ನಾವು ಈಗ ಏನು ಮಾಡುವುದಕ್ಕೆ ಬರುವುದಿಲ್ಲ. ಆದರೆ ಕೋರ್ಟ್ ಮುಖಾಂತರ ತೀರ್ಮಾನ ಆದುದನ್ನು ತಪ್ಪಿಸುವುದಕ್ಕೆ ಯಾವರೀತಿ ಪ್ರಯತ್ನ ಮಾಡಿದರೆ ಗೇಣಿದಾರನಿಗೆ ಅನುಕೂಲವಾಗುತ್ತದೆ ಎನ್ನುವುದನ್ನು ಆಲೋಚನೆ ಮಾಡಬೇಕು. ಏತಕ್ಕೆಂದರೆ ಗೇಣಿದಾರನಿಂದ ಆ ಜಮೀನನ್ನು ಕಿತ್ತು ಬಿಡಿಸುವುದಕ್ಕೆ ಸಾಧ್ಯವಿಲ್ಲದಿದ್ದರೂಕೂಡ ಆ ಜಮೀನು ಅವನ ಸ್ವಾಧೀನದಲ್ಲಿ ಇದ್ದರೆ ಜಮೀನ್ದಾರನಿಗೆ ಅರ್ಜಿ ಕೊಟ್ಟು ಕೋರ್ಟಿನ ಮುಖಾಂತರ ತಪ್ಪಿಸುವುದಕ್ಕೆ ಅದನ್ನು ಯಾವರೀತಿ ಮಾಡಬಹುದು ಎನ್ನುವುದನ್ನು ಸರ್ಕಾರ ಆಲೋಚನೆ ಮಾಡುತ್ತಿದೆ. ಆ ಬಗ್ಗೆ ಸರ್ಕಾರ ಆದಷ್ಟು ಬೇಗ ತೀರ್ಮಾನ ಮಾಡುತ್ತದೆ,

ಇನ್ನು ಅಡಿಕೆ ಬೆಳೆ ಮೇಲೆ ಹಾಕಿರತಕ್ಕಂಥ ಕಂದಾಯ ಬಹಳ ದುಬಾರಿಯಾಗಿದೆ. ಒಟ್ಟು ಆದಾಯದ ಮೇಲೆ ಶೇಕಡ ೪೦ರಷ್ಟು ಹಾಕಿರುವುದು ಸರಿಯಲ್ಲ, ಅದನ್ನು ಶೇಕಡ ೨೦ರಷ್ಟಕ್ಕೆ ಇಳಿಸಬೇಕು ಎಂದು ಮಾನ್ಯ ಸದಸ್ಯರು ತಿಳಿಸಿದ್ದಾರೆ. ಅದನ್ನು ಕೂಡ ಸರ್ಕಾರದವರು ಆಲೋಚನೆಮಾಡಿ, ಈಗಾಗಲೇ ಆ ಬಗ್ಗೆ ಒಂದು ಮುಸದಾ ಕಾನೂನನ್ನು ತಯಾರು ಮಾಡಿದ್ದೇವೆ. ಅದನ್ನು ಈ ಸಭೆಯ ಮುಂದೆ ಇಟ್ಟಾಗ ಮಾನ್ಯ ಸದಸ್ಯರು ಅದನ್ನು ಪರಿಶೀಲನೆ ಮಾಡಬಹುದು.

ಇನ್ನು ಮಲಪ್ರಭಾದಲ್ಲಿ ದುರ್ವ್ಯವಹಾರ ನಡೆಸಿರುವವರ ಮೇಲೆ ನೇರವಾದ ಕ್ರಮ ತೆಗೆದುಕೊಳ್ಳಬೇಕೆಂದು ಶ್ರೀಮಾನ್ ಬಣಕಾರ ಅವರು ತಿಳಿಸಿದರು ಈಗಾಗಲೇ ಅದನ್ನು ವಿಚಾರಣೆ ಮಾಡಿ, ಅದರಲ್ಲಿ ಪ್ರೇಮಾಫೆಸಿ ಕೇಸ್ ಇದ್ದುದ್ದರಿಂದ ಸಂಬಂಧಪಟ್ಟ ಇಬ್ಬರು ಅಧಿಕಾರಿಗಳನ್ನು ಈಗಾಗಲೇ ಸಸ್ಪೆಂಡ್ ಮಾಡಿದೆ ಈಗ ವಿಜಲೆನ್ಸ್ ಕಮಿಷನ್‌ನಿಂದ ಎನ್‌ಕ್ವೈರಿಯಾಗುತ್ತಿದೆ. ಅದು ಮುಗಿದಮೇಲೆ ಅಂತ್ಯ ತೀರ್ಮಾನ ತೆಗೆದುಕೊಳ್ಳುತ್ತೇವೆ.

ಇನ್ನು ನೀರಾವರಿ ತೆರಿಗೆ ವಿಷಯದಲ್ಲಿ ಮಾನ್ಯ ಸದಸ್ಯರು ಅನೇಕರು ತಮ್ಮ ಆತಂಕವನ್ನು ವ್ಯಕ್ತಪಡಿಸಿದರು. ಈಗ ಆಕಾರಬಂದಿದೆ ರಿಜಿಷ್ಟರ್ ಎಂದು ಇರುತ್ತದೆ. ಅದರಲ್ಲಿ ಪ್ರತಿಯೊಂದು ವಿವರಗಳೂ ಇರುತ್ತದೆ. ಯಾವಯಾವ ಭೂಮಿಗೆ ಮಳೆಯ ನೀರಿನ ಆಶ್ರಯದಲ್ಲಿ ನೀರು ಸಿಗುತ್ತಿದೆ ಯಾವಯಾವ ಭೂಮಿಗೆ ಕೆರೆ ನೀರಿನ ಆಶ್ರಯ ಸಿಗುತ್ತಿದೆ ಎಂಬುದನ್ನು ವಿವರವಾಗಿ ಅದರಲ್ಲಿ ಬರೆದಿರುತ್ತದೆ. ಇದನ್ನು ಇತ್ತೀಚೆಗೆ ಬರೆದಿಲ್ಲ; ಬಹಳ ವರ್ಷಗಳ ಹಿಂದೆ ಬರೆದಿರುವುದು ಅದರ ಪ್ರಕಾರ ಕೆರೆಯ ಆಶ್ರಯದಿಂದ ನೀರು ಪಡೆಯುತ್ತಿದ್ದರೆ ಅದಕ್ಕೆ ಡ್ರೈ ಕಾಪೂನೆಂಟ್ ಟ್ಯಾಕ್ಸ್‌ಹಾಕಿ, ಜೊತೆಗೆ ವಾಟರ್‌ರೇಟ್ ಹಾಕಿದೆ. ಮಳೆಯ ನೀರಿನ ಆಶ್ರಯ ಎಂದು ಬರೆದಿದ್ದರೆ ಮತ್ತು ಅದು ತರೀ ಜಮೀನು ಆಗಿದ್ದರೆ ಅದಕ್ಕೆ ತರಿ ಕಂದಾಯ ಹಾಕಲಾಗುತ್ತಿದೆ. ಮಲೆನಾಡು ಭಾಗದಲ್ಲಿ ವಿಶೇಷವಾದ ಪರಿಸ್ಥಿತಿ ಇದೆ. ಅಲ್ಲಿ ಸಣ್ಣಸಣ

(ಶ್ರೀ ಎಸ್. ಹುಚ್ಚಮಾಸ್ತಿಗೌಡ)

ಕೆರೆಗಳೇ ಜಾಸ್ತಿ. ಅವುಗಳ ಕ್ಯಾಪ್ಯಾಸಿಟಿ ೫ರಿಂದ ೧೦ ಯೂನಿಟ್ಸ್ ಇರುತ್ತದೆ. ಆ ನೀರಿನಿಂದ ೫೦ ಎಕರೆಗೆ ನೀರಾವರಿಯಾಗುತ್ತದೆ. ಯಾವ ರೀತಿ ಎಂದರೆ, ಮಳೆಯಾಗುವಾಗ ಆ ಕೆರೆಗಳ ನೀರಿನ ಅವಶ್ಯಕತೆ ರೈತರಿಗೆ ಬೇಕಾಗುವುದಿಲ್ಲ. ಆದರೆ ಮಳೆ ನಿಂತುಹೋಗಿ, ಬತ್ತದ ಬೆಳೆ ಬರಲು ಇನ್ನೂ ೧೫-೨೦ ದಿವಸಗಳ ಕಾಲವಿದ್ದರೆ, ಆಗ ಕೆರೆ ನೀರಿನ ಆಶ್ರಯ ಪಡೆದುಕೊಳ್ಳುತ್ತಾರೆ. ನಾನು ತೀರ್ಥಹಳ್ಳಿ ಮುಂತಾದ ಕಡೆ ಹೋಗಿ ನೋಡಿದ್ದೇನೆ ಅಲ್ಲಿಯ ರೈತರು ಈ ಕೆರೆಗಳ ನೀರಿನ ಆಶ್ರಯ ಪಡೆದುಕೊಂಡಿದ್ದಾರೆ, ಆ ರೀತಿ ಪಡೆದುಕೊಳ್ಳದಿದ್ದರೆ ಅವರ ಗದ್ದೆ ಯಾವ ರೀತಿ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಕೆರೆಯ ನೀರಿನ ಸಹಾಯವನ್ನು ಪಡೆದುಕೊಳ್ಳುತ್ತಿರುವುದರಿಂದ ನೀರಿನ ತೆರಿಗೆ ಹಾಕಬೇಕಾಗುತ್ತದೆ, ಕೆಲವು ಕಡೆಗಳಲ್ಲಿ ಕೆರೆಗಳಲ್ಲಿ ಹೂಳು ತುಂಬಿ ಅವುಗಳ ಸಹಾಯ ರೈತರಿಗೆ ಸಿಕ್ಕದಿರಬಹುದು. ಅಂತಹ ಸಂದರ್ಭಗಳಲ್ಲಿ ನಮ್ಮ ಇಂಜಿನಿಯರುಗಳು ಮತ್ತು ರೆವಿನ್ಯೂ ಅಧಿಕಾರಿಗಳು ಸ್ಥಳ ಅಜಮಾಯಿಷಿ ಮಾಡಿ, ಅಲ್ಲಿ ನೀರು ಇಲ್ಲ ಎಂದು ಸರ್ಕಾರಕ್ಕೆ ವರದಿ ಮಾಡಿದರೆ, ನೀರಿನ ತೆರಿಗೆಯನ್ನು ವಜಾ ಮಾಡತಕ್ಕಂಥ ಸಂದರ್ಭ ಬರಬಹುದು. ನಾನು ಮಲೆನಾಡಿನ ಭಾಗದಲ್ಲಿ ಪ್ರವಾಸ ಮಾಡುವಾಗ ಅನೇಕ ಜನ ರೈತರು ನನ್ನ ಬಳಿ ಬಂದು ಕೆಲವು ಕೆರೆಗಳಲ್ಲಿ ಹೂಳು ತುಂಬಿರುವ ವಿಷಯ ತಿಳಿಸಿದರು. ಆಗ ನಾನು ಅಧಿಕಾರಿಗಳಿಗೆ ಅಂತಹ ವಿಶೇಷ ಸಂದರ್ಭಗಳಿದ್ದರೆ ಅದನ್ನು ಸರ್ಕಾರಕ್ಕೆ ವರದಿ ಮಾಡಿ ಎಂದು ತಿಳಿಸಿದ್ದೇನೆ.

ಶ್ರೀ ಕೆ. ಹೆಚ್. ಹನುಮೇಗೌಡ : ನಿಮ್ಮ ಅಧಿಕಾರಿಗಳು ರೈತರು ನಾಟಿ ಹಾಕಿದ ಕೂಡಲೆ ಸರ್ಕಾರಕ್ಕೆ ವರದಿ ಮಾಡಿಬಿಡುತ್ತಾರೆ. ಅದು ಸರಿಯಲ್ಲ; ಬೆಳೆ ಬಂದಮೇಲೆ ವರದಿ ಮಾಡುವಂತೆ ಅವರಿಗೆ ತಾವು ತಿಳಿಸಬೇಕು.

ಶ್ರೀ ಎಸ್. ಹುಚ್ಚಮಾಸ್ತಿಗೌಡ : ಕೆಲವು ಸಂದರ್ಭಗಳಲ್ಲಿ ಕೆರೆಯಲ್ಲಿ ನೀರು ತುಂಬಿದೆ ಬತ್ತದ ಬೆಳೆಗೆ ನೀರು ಸಾಕಾಗದೆ, ಬತ್ತದ ಬೆಳೆ ಹಾಳಾಗಬಹುದು. ಅಂತಹ ಸಂದರ್ಭದಲ್ಲಿ ಸಂಬಂಧಪಟ್ಟ ರೈತರು ಬೆಳೆ ಆಗಿಲ್ಲ ಎಂದು ತಿಳಿಸಿದರೆ, ಎಕ್ಸಿಕ್ಯುಟಿವ್ ಇಂಜಿನಿಯರ್ ಮತ್ತು ರೆವಿನ್ಯೂ ಅಧಿಕಾರಿಯವರು ಬಂದು ಸ್ಥಳ ಅಜಮಾಯಿಷಿ ಮಾಡಿ ಬೆಳೆಯಾಗಿಲ್ಲ ಎಂದು ಸರ್ಕಾರಕ್ಕೆ ವರದಿ ಮಾಡುತ್ತಾರೆ. ಆಗ ವಾಟರ್ ರೇಟನ್ನು ವಜಾ ಮಾಡಲಾಗುತ್ತದೆ.

ಶ್ರೀ ಕೆ. ಎಚ್. ಹನುಮೇಗೌಡ : ನೂರಾರು ಕೆರೆಗಳು ಇರುತ್ತವೆ. ಅವುಗಳ ಪೈಕಿ ಅನೇಕ ಕೆರೆಗಳಲ್ಲಿ ನೀರು ಇರುವುದಿಲ್ಲ. ನೀರು ಇದ್ದರೂ ಪೂರ್ತಾ ಬೆಳೆಗೆ ಸಾಕಾಗದೆ ಬೆಳೆ ಹಾಳಾಗುತ್ತದೆ. ಅಂತಹ ಸಂದರ್ಭದಲ್ಲಿ ರೈತರು ರೆವಿನ್ಯೂ ಆಫೀಸರ್ ಮತ್ತು ಎಕ್ಸಿಕ್ಯುಟಿವ್ ಇಂಜಿನಿಯರ್ ಇಬ್ಬರನ್ನೂ ಒಂದು ಕಡೆ ಸೇರಿಸಿ ಕರೆದುಕೊಂಡು ಹೋಗಿ ತೋರಿಸುವುದು ಕಷ್ಟವಾಗುತ್ತದೆ. ಆದಕಾರಣ ಅಧಿಕಾರಿಗಳೇ ಹೋಗಿ ನೋಡಿ ವರದಿ ಮಾಡಬೇಕು.

ಶ್ರೀ ಎಸ್. ಹುಚ್ಚಮಾಸ್ತಿಗೌಡ : ತಾವು ಹೇಳುವ ಪ್ರಕಾರ ಕೆರೆಯ ನೀರಿನ ಆಶ್ರಯದಲ್ಲಿರುವ ಎಲ್ಲ ಜಮೀನುಗಳ ಮೇಲಿನ ನೀರಿನ ತೆರಿಗೆಯನ್ನು ತೆಗೆದುಬಿಡುವ ಯೋಚನೆ ಮಾಡಬೇಕಾಗುತ್ತದೆ. ಆದರೆ ಆ ರೀತಿ ಮಾಡುವುದಕ್ಕಾಗುವುದಿಲ್ಲ. ಆದರೆ ಎಲ್ಲಿ ಬೆಳೆಯಾಗಿಲ್ಲ ಎಂದು ಕಂಡುಬರುತ್ತದೋ, ಅಂತಹ ಸಂದರ್ಭಗಳಲ್ಲಿ ಸರ್ಕಾರಕ್ಕೆ ವರದಿ ಮಾಡಬೇಕು ಮತ್ತು ಅಂತಹ ಜಮೀನುಗಳ ಮೇಲೆ ವಾಟರ್ ರೇಟ್ ಹಾಕಬಾರದು ಎಂದು ಸ್ಪಷ್ಟವಾಗಿ ಅಧಿಕಾರಿಗಳಿಗೆ ತಿಳಿಸಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ : ಈಗ ಯಾವ ಯಾವ ಕೆರೆಗಳಲ್ಲಿ ಎಷ್ಟೆಷ್ಟು ನೀರು ನಿಲ್ಲುತ್ತದೆ, ಆ ನೀರಿನಿಂದ ಎಷ್ಟೆಷ್ಟು ಎಕರೆಗಳಿಗೆ ನೀರಾವರಿಯಾಗುತ್ತದೆ ಎಂಬ ಬಗ್ಗೆ ಹೊಸದಾಗಿ ಪಿ. ಡಬ್ಲ್ಯು. ಡಿ. ಇಲಾಖೆಯವರಿಂದ ಏತಕ್ಕೆ ಸರ್ವೆ ಮಾಡಿಸಬಾರದು ?

ಶ್ರೀ ಎಸ್. ಹುಚ್ಚಮಾಸ್ತಿಗೌಡ : ಮಾನ್ಯ ಸದಸ್ಯರ ಸಲಹೆ ಸೂಕ್ತವಾಗಿದೆ. ಹಳ್ಳಿಗಾಡಿನಲ್ಲಿರುವ ಕೆರೆಗಳ ಸ್ಥಿತಿ ನನಗೂ ಸಹ ಗೊತ್ತಿದೆ, ಅನೇಕ ಕೆರೆಗಳಲ್ಲಿ ಹೂಳು ತುಂಬಿ ನೀರು ನಿಲ್ಲುವುದು ಕಡಿಮೆಯಾಗಿದೆ. ಆದರೂ ಕೂಡ ಅನೇಕ ಜನ ರೈತರು ಅಚ್ಚುಕಟ್ಟು ಜಾಸ್ತಿ ಮಾಡುತಾ ಹೋಗಿದ್ದಾರೆ. ಇದರಿಂದ ನೀರು ಸಾಕಾಗುತ್ತಿಲ್ಲ. ಈ ಕಾರಣಗಳಿಂದ ಪ್ರತಿಯೊಂದು ಕೆರೆಯಲ್ಲಿಯೂ ಈಗ ಎಷ್ಟು ನೀರು ನಿಲ್ಲುತ್ತದೆ, ಆ ನೀರಿನಿಂದ ಎಷ್ಟು ಎಕರೆಗೆ ನೀರಾವರಿಯಾಗುತ್ತದೆ ಎಂಬ ಬಗ್ಗೆ ಮತ್ತೊಮ್ಮೆ ಪರಿಶೀಲನೆ ನಡೆಸಿ, ಯಾವ ಭಾಗಕ್ಕೆ ವಾಟರ್ ರೇಟನ್ನು ತಪ್ಪಿಸಬಹುದು ಎಂಬುದನ್ನು ಯೋಚನೆ ಮಾಡಬೇಕಾಗಿದೆ. ಅದನ್ನು ಕೂಡ ಪರಿಶೀಲನೆ ಮಾಡುತ್ತೇವೆ.

ಶ್ರೀ ಕೋಣಂದೂರು ಲಿಂಗಪ್ಪ : ಶೇಕಡ ೮೦ ಕೆರೆಗಳಲ್ಲಿ ಇಂದು ಹೂಳು ತುಂಬಿ ನೀರು ನಿಲ್ಲುತ್ತಿಲ್ಲ. ಇದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ : ಹೂಳು ತುಂಬಿರುವ ಕೆರೆಗಳಿಂದ ರೈತರಿಗೆ ಏನೂ ಪ್ರಯೋಜನ ಆಗುತ್ತಿಲ್ಲ ಎಂಬುದು ಕಂಡುಬಂದಾಗ ನೀರಿನ ಕಂದಾಯವನ್ನು ವಜಾಮಾಡಲಾಗುತ್ತದೆ. ಇನ್ನು ಮಾನ್ಯ ಸುಬ್ರಹ್ಮಣ್ಯಗೌಡರು ಮಾತನಾಡುವಾಗ ಎನ್‌ಡೋಮೆಂಟ್ ಇಲಾಖೆಯನ್ನು ಪ್ರತ್ಯೇಕ ಇಲಾಖೆಯನ್ನಾಗಿ ಮಾಡಬೇಕೆಂದು ಹೇಳಿದರು. ಮುಖ್ಯವಾಗಿ ದೇವಸ್ಥಾನಗಳಿಗೆ ಸಂಬಂಧಪಟ್ಟಂತೆ ಏಕರೀತಿಯ ಶಾಸನ ಇರುವುದು ಅವಶ್ಯಕವಾಗಿದೆ. ಆ ಬಗ್ಗೆ ಒಂದು ಶಾಸನ ಈ ಸಭೆಯ ಮುಂದೆ ಬರುವುದು ಇದೆ. ಇನ್ನು ೩-೪ ದಿವಸಗಳಲ್ಲಿಯೇ ನಾನು ಈ ಸಭೆಯ ಮುಂದೆ ಅದನ್ನು ಇಡುವುದಕ್ಕೆ ಸಿದ್ಧವಾಗಿದ್ದೇನೆ. ಆದರೆ ತಾವು ೧೫ ನೇ ತಾರೀಖಿನ ನಂತರ ಕೂರುವುದಕ್ಕೆ ಸಿದ್ಧವಾಗಿಲ್ಲ ಎಂದು ಹೇಳುತ್ತಿದ್ದೀರಿ.

ಶ್ರೀ ಕೋಣಂದೂರು ಲಿಂಗಪ್ಪ : ತಾವು ಅಷ್ಟು ಜಾಗ್ರತೆ ಎಲ್ಲಿ ತರುತ್ತೀರಾ ? ಏಕೆಂದರೆ ದೇವಸ್ಥಾನಗಳ ಪೈಕಿ ಕುಮಾರಸ್ವಾಮಿ ದೇವಸ್ಥಾನವೂ ಸಹ ಬರುತ್ತದೆ ;

ಶ್ರೀ ಎನ್. ಹುಚ್ಚಮಾಸ್ತಿಗೌಡ : ಮಾನ್ಯ ಸದಸ್ಯರಿಗೆ ಮತ್ತು ಮಾನ್ಯ ತಿಮ್ಮಪ್ಪನವರಿಗೆ ಕುಮಾರ ಸ್ವಾಮಿ ದೇವಸ್ಥಾನ ಮತ್ತು ಮಾನ್ಯ ಘೋರ್ಪಡೆ, ಇವೆರಡೇ ಹೆಸರುಗಳು ಗೊತ್ತಿರುವುದು; ಇನ್ನು ಬೇರೆ ಯಾವುದೂ ಗೊತ್ತಿಲ್ಲ. ಆ ವಿಷಯ ಪ್ರಸ್ತಾಪಕ್ಕೆ ಬಂದಾಗ ಹೇಳುತ್ತೇನೆ. ಈಗ ಈ ಇಲಾಖೆಯನ್ನು ಪ್ರತ್ಯೇಕ ಮಾಡಿದರೆ ಕೆಲಸಕಾರ್ಯಗಳು ಚನ್ನಾಗಿ ನಡೆಯುವುದಕ್ಕೆ ಅವಕಾಶವಾಗುತ್ತದೆ. ಏಕೆಂದರೆ ಈ ದೇವಸ್ಥಾನಗಳಿಗೆ ವರಮಾನ ಅನೇಕ ಕಡೆಗಳಿಂದ ಬರುತ್ತಿವೆ. ಆ ವರಮಾನವನ್ನು ಸರಿಯಾಗಿ ಉಪಯೋಗ ಮಾಡಿಕೊಂಡು ಆಡಳಿತವನ್ನು ಚೆನ್ನಾಗಿ ನಡೆಸಿಕೊಂಡು ಹೋಗಬೇಕಾದರೆ ಈ ಇಲಾಖೆ ಪ್ರತ್ಯೇಕವಾಗಿ ಇರಬೇಕಾದುದು ಅವಶ್ಯಕ ಎಂದು ನಾನೂ ಕೂಡ ಭಾವಿಸುತ್ತೇನೆ. ಈ ಬಗ್ಗೆ ಹೊಸ ಕಾನೂನು ಆದಮೇಲೆ ಮುಂದಿನ ಕಾರ್ಯಕ್ರಮ ಕೈಕೊಳ್ಳುತ್ತೇವೆ.

ಇನ್ನು ತಿರುಪತಿ ದೇವಸ್ಥಾನಕ್ಕೆ ೧೭ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆಂದು ಹೇಳಿದರು. ಅಲ್ಲಿ ಹಿಂದೆ ಕಟ್ಟಿದಂಥ ಹಳೆಯ ಛತ್ರ ಇತ್ತು. ಅದು ಬಿದ್ದು ಹೋಗತಕ್ಕಂಥ ಪರಿಸ್ಥಿತಿಯಲ್ಲಿತ್ತು. ಆದ ಕಾರಣ ಬೇರೆ ಕಟ್ಟಡ ಕಟ್ಟಲು ಸಾಲ ಕೊಟ್ಟಿದ್ದೇವೆಯೇ ಹೊರತು, ಆ ಹಣವನ್ನು ಗ್ರಾಂಟ್ ಆಗಿ ಕೊಟ್ಟು ಕೆಲಸ ಮಾಡಿಸುತ್ತಿಲ್ಲ. ಮುಂದೆ ಇದೇ ರೀತಿಯಲ್ಲಿ ಸಾಲವನ್ನು ಬೇರೆ ಕಡೆಗೂ ಕೊಡತಕ್ಕಂಥ ಸಂದರ್ಭಗಳು ಬರಬಹುದು.

ಶ್ರೀ ಕಾಗೋಡುತಿಮ್ಮಪ್ಪ.—ಬೇರೆ ಕಡೆ ಕಟ್ಟುವುದಕ್ಕೆ ಈಗಾಗಲೇ ಯೋಚನೆ ಮಾಡಿದೀರಾ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಕೆಲವು ಕಡೆ ಏನಾಗಿದೆ ಎಂದರೆ ದೇವಸ್ಥಾನಗಳಲ್ಲಿ ವರಮಾನ ಸಾಕಷ್ಟು ಬರುವುದಕ್ಕೆ ಅವಕಾಶ ಇದೆ ಆದರೆ ಅಲ್ಲಿ ಬರತಕ್ಕ ಯಾತ್ರಾರ್ಥಿಗಳಿಗೆ ಸೌಲಭ್ಯಗಳಿಲ್ಲ. ಈ ಸೌಲಭ್ಯಗಳನ್ನು ಕಲ್ಪಿಸಿಕೊಡುವುದಾದರೆ ಹೆಚ್ಚು ವರಮಾನಬರುವುದಕ್ಕೆ ಅವಕಾಶ ಇದೆ, ಕೂಡಲೇ ಅವುಗಳಿಗೆ ಬಂಡವಾಳ ಹಾಕುವುದಕ್ಕೆ ಸಾಧ್ಯವಿಲ್ಲದೆ ಇರಬಹುದು.

ಶ್ರೀ ಕಾಗೋಡುತಿಮ್ಮಪ್ಪ.—ಶನಿದೇವರು ಎಂದು ಮೈಸೂರು ಜಿಲೆಯಲ್ಲಿ ಆರಂಭವಾಗಿದೆ. ಅಲ್ಲೆಲ್ಲ ಛತ್ರಕಟ್ಟಿಸಿ,

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಬೆಂಗಳೂರು ಜಿಲ್ಲೆಯ ನೆಲಮಂಗಲ ತಾಲ್ಲೂಕಿನಲ್ಲಿ ಶನಿದೇವರ ದೇವಾಲಯ ಇದೆ ಅವರಿಂದ ಬರುವ ಆದಾಯದಿಂದ ಒಂದು ಹೈಸ್ಕೂಲ್ ನಡೆಸುತ್ತಿದಾರೆ, ಜನರಲ್ಲಿ ಹುಚ್ಚು ಇರುವವರಿಗೆ ಅದನ್ನು ಉಪಯೋಗಿಸಿಕೊಳ್ಳುವವರು ಇದ್ದೇ ಇರಬೇಕು. ಹುಚ್ಚು ಯಂದಾದರೂ ಕರೆಯಿರಿ ಧೈವಭಕ್ತಿ ಯೆಂದಾದರೂ ಕರೆಯಿರಿ ಹುಚ್ಚು ದೈವಭಕ್ತಿಯ ಒಂದು ರೂಪ ಎಂದು ಹೇಳುತ್ತಾರೆ. ಇದರಮೇಲೆ ನಾನು ಹೆಚ್ಚು ವ್ಯಾಖ್ಯಾನ ಮಾಡುವುದಕ್ಕೆ ನಾನ್ನು ಇಷ್ಟಪಡುವುದಿಲ್ಲ,

ಶ್ರೀ ಕೋಣಂದೂರುಲಿಂಗಪ್ಪ.—ತಾಲ್ಲೂಕಿಗೆ ಒಂದೊಂದು ಹುಚ್ಚಾಸ್ಪತ್ರೆ ಕಟ್ಟಿಸಿ.

ಅಧ್ಯಕ್ಷರು.—ಶನಿದೇವರ ವಿಚಾರದಲ್ಲಿ ಹಾಗೆಲ್ಲಾ ಹಾಸ್ಯ ಮಾಡಬೇಡಿ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಭೂಸುಧಾರಣಾಕಾನೂನನ್ನು ಜಾರಿಗೆ ತರಲು ಮೇಲ್ವಿಚಾರಣೆ ಮಾಡುವುದು ಅವಶ್ಯಕ. ಅದಕ್ಕೆ ರಾಜ್ಯಮಟ್ಟದಲ್ಲಿ ಒಂದು ಸಮಿತಿ ಇರಬೇಕು ಎಂದು ಶ್ರೀಮಾನ್ ಕಾಗೋಡುತಿಮ್ಮಪ್ಪನವರು ಸಲಹೆ ಕೊಟ್ಟಿದ್ದಾರೆ. ಅದನ್ನು ಯಾವರೀತಿ ಮಾಡಬೇಕು ಎಂಬುದನ್ನು ಪರಿಶೀಲನೆ ಮಾಡಿ ಒಂದು ತೀರ್ಮಾನಕ್ಕೆ ಬರುತ್ತೇವೆ

(ಶ್ರೀ ಎನ್. ಹುಚ್ಚಮಾಸ್ತಿಗೌಡ)

ಇನ್ನು ಮಾನ್ಯ ಸದಸ್ಯರು ಕೆಲವರು ಆರ್ ಆರ್ ಪಹಣಿ ಬರೆಯುವ ಸಂದರ್ಭದಲ್ಲಿ ಲ್ಯಾಂಡ್ ರೆವಿನ್ಯೂ ರೂಲ್ಸ್ ಅನ್ನು ಅನುಸರಿಸುತ್ತಿಲ್ಲ ಎಂದು ಹೇಳಿದರು. ಆದರಲ್ಲೂ ಶ್ರೀಮಾನ್ ಕಾಗೋಡುತಿಮ್ಮಪ್ಪನವರು ವಾಸಮಾಡುವ ಜಿಲ್ಲೆಯಲ್ಲಿ ಬಹಳ ಹಿಂದೆಯೇ ಆರ್. ಆರ್. ರೆಕಾರ್ಡುಗಳನ್ನು ಬರೆದಿದೆ. ಅದು ಪ್ರಿಲಿಮಿನರಿ ಸ್ಟೇಜ್ ಇದ್ದಕಾಲದಲ್ಲಿ ಅನುಸರಿಸಿದ ಮಾರ್ಗ. ಈಗ ಅದನ್ನು ಮೇಂಟೇನ್ ಮಾಡತಕ್ಕದ್ದು ಮಾತ್ರ ಉಳಿದಿದೆ. ಇದಕ್ಕೆ ತಕ್ಕಂತೆ ಈಗ ಮಾಡುತ್ತಿದ್ದೇವೆ. ಈ ಆರ್. ಆರ್. ಫಾರಂ ಅನ್ನು ೧೯೬೧ನೇ ಇಸವಿಯಲ್ಲೇ ಬದಲಾವಣೆ ಮಾಡಿದ್ದೇವೆ.

ಶ್ರೀ ಕಾಗೋಡುತಿಮ್ಮಪ್ಪ.—ಈಗ ಹೊಸ ಆಕ್ಟ್ ಪ್ರಕಾರ ಪಹಣಿ ಬರೆಯುವುದಕ್ಕೆ ಹೊಸದಾಗಿ ೧೬ನೇ ನಂಬರ್ ಫಾರಂ ಏನು ಇಂಟ್ರಡ್ಯೂಜ್ ಮಾಡಿದ್ದೀರಿ ಇದರ ಪ್ರಕಾರ ಪಹಣಿಯನ್ನು ಬರೆಯುವುದಕ್ಕೆ ವ್ಯವಸ್ಥೆ ಮಾಡಿದ್ದೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಆರ್. ಆರ್. ನಲ್ಲಿ ಅದು ಸ್ಪಷ್ಟವಾಗಿದೆ. ಆ ಫಾರಂನಲ್ಲಿರತಕ್ಕ ಕಲಂ ಅನ್ನು ನೋಡಿದರೆ ಮಾನ್ಯ ಸದಸ್ಯರಿಗೆ ಸ್ಪಷ್ಟವಾಗಿ ಗೊತ್ತಾಗಿದೆ. ಅದರಲ್ಲಿ ವ್ಯವಸಾಯಗಾರನ ಹೆಸರು, ವಾಸದ ಸ್ಥಳ, ಗೇಣಿ ವಿವರ, ಭೂಮಿಯನ್ನು ಉಪಯೋಗ ಮಾಡುವ ವಿಚಾರ, ಭೂಮಿಯ ವಿಸ್ತೀರ್ಣ ಭೂಮಿಯಲ್ಲಿ ಮರಗಳು ಇದ್ದರೆ ಅವುಗಳ ಸಂಖ್ಯೆ ಇವೆಲ್ಲಾ ಸ್ಪಷ್ಟವಾಗಿ ಬರೆಯಬೇಕಾಗುತ್ತದೆ.

ಶ್ರೀ ಕಾಗೋಡುತಿಮ್ಮಪ್ಪ.—ಈಗ ಹೊಸದಾಗಿ ಏನು ಫಾರಂ ಅನ್ನು ತಾವು ಇಂಟ್ರಡ್ಯೂಜ್ ಮಾಡಿದ್ದೀರಿ ಅದರಲ್ಲಿ ಇದೆಲ್ಲಾ ಬರೆಯುವುದಕ್ಕೆ ಪ್ರಯತ್ನ ಮಾಡಿದ್ದೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ಆರ್. ಆರ್. ರೆಕಾರ್ಡ್ ಬರೆಯುವುದು ಬಹಳ ಹಿಂದೆಯೇ ಎಂದರೆ ೧೯೨೫ ರಲ್ಲೇ ಜಾರಿಗೆ ಬಂದಿದೆ. ಈಗಾಗಲೇ ಅದನ್ನು ಬದಲಾವಣೆ ಮಾಡಿ ಹೊಸ ಫಾರಂ ತಂದಿದ್ದೇವೆ. ಎಲ್ಲೆಲ್ಲಿ ಕಲಮುಗಳು ಇವೆಯೋ ಅದರ ಪ್ರಕಾರ ಬರೆಯಬೇಕು ಅಷ್ಟೆ

ಶ್ರೀ ಕಾಗೋಡುತಿಮ್ಮಪ್ಪ.—ತಮ್ಮ ಹಿಂದಿನ ಆರ್. ಆರ್. ನಲ್ಲಿ ಗೇಣಿದಾರರಿಗೆ ಸಂಬಂಧಪಟ್ಟ ಡೀಟೈಲ್ಸ್ ಇರಲಿಲ್ಲ. ಈಗ ಹೊಸಲ್ಯಾಂಡ್ ರೆವಿನ್ಯೂ ಆಕ್ಟ್ ಬಂದಮೇಲೆ ಫಾರಂನಂಬರ್ ೧೬ ಅನ್ನು ಇಂಟ್ರಡ್ಯೂಜ್ ಮಾಡಿದ್ದಾರೆ. ಇದರಲ್ಲಿ ಗೇಣಿದಾರರು ಹಾಗೂ ಎಲ್ಲಾ ವರ್ಗದ ಜನಗಳ ಹಕ್ಕುಬಾಧ್ಯತೆಯನ್ನು ನಮೂದು ಮಾಡಬೇಕಾಗುತ್ತದೆ. ಆ ಪ್ರೊಸೀಜರನ್ನು ಫಾಲೋ ಮಾಡುವುದು ಬೇಡವೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಾವು ಪ್ರಿಲಿಮಿನರಿ ಕ್ರಮವನ್ನು ಅನುಸರಿಸಿದ್ದೇವೆ. ಇವನ್ನು ಬರೆಯತಕ್ಕ ಅವಶ್ಯಕತೆ ಇದೆಯೋ ಇಲ್ಲವೇ ಎಂಬುದನ್ನು ಆಲೋಚನೆ ಮಾಡಬೇಕು. ೧೯೬೪ ನೇ ಇಸವಿಯಲ್ಲಿ ಹಿಂದೆ ಇದ್ದ ಫಾರಂ ಅನ್ನು ಬದಲಾವಣೆ ಮಾಡಿ ಹೊಸ ಫಾರಂ ಅನ್ನು ತಂದಿದೆ. ಈಗ ಅನೇಕ ಕಡೆ ದೂರು ಇರುವುದು ಏನೆಂದರೆ ಹೊಸ ಫಾರಂನಲ್ಲಿ ಕೆಲವು ಕಲಂಗಳನ್ನು ಅನುಸರಿಸಿ ಅವುಗಳನ್ನು ಭರ್ತಿ ಮಾಡಿಲ್ಲ ಎಂದು ಹೇಳಿದ್ದಾರೆ. ಇದರ ಅವಶ್ಯಕತೆ ಈಗ ಕಂಡುಬರುತ್ತಿದೆ. ಗೇಣಿದಾರರ ಹೆಸರನ್ನು ಅದರಲ್ಲಿ ಬರೆಯಬೇಕಾಗಿತ್ತು. ಅದನ್ನು ಬರೆದಿಲ್ಲದೆ ಇರುವುದರಿಂದ ತೊಂದರೆ ಆಗಿದೆ. ಭೂಸುಧಾರಣಾ ಕಾನೂನು ಜಾರಿಗೆ ಬಂದ ಮೇಲೆ ಹೊಸದಾಗಿ ಒಂದು ಫಾರಂ ಮಾಡಿದೆ. ಅದನ್ನು ಹೊಸ ಕಾಯಿದೆ ಪ್ರಕಾರ ಬರೆಯಬೇಕಾದ ಅವಶ್ಯಕತೆ ಇದೆಯೋ ಎನ್ನುವುದು ಟ್ರಿಬ್ಯೂನಲ್ ಮುಂದೆ ಬರುತ್ತದೆ. ಆಗ ಎಷ್ಟರಮಟ್ಟಿಗೆ ಇದರ ಹಕ್ಕು ಬಾಧ್ಯತೆ ಇದೆ ಎಂಬುದನ್ನು ತೀರ್ಮಾನ ಮಾಡಬೇಕಾದ ಅವಶ್ಯಕತೆ ಇದೆ. ಈಗ ಹೊಸದಾಗಿ ಫಾರಂ ಅನ್ನು ಬರೆಯುವ ಅವಶ್ಯಕತೆ ಇದೆಯೋ ಎಂದು ನನ್ನ ಭಾವನೆ. ಈಗ ಅದನ್ನು ಬರೆಯಬೇಕಾದ ಕಾಲ ಮುಗಿದು ಹೋಗಿರುವುದರಿಂದ ಆ ಬಗ್ಗೆ ಕಾನೂನು ಪ್ರಕಾರ ಯಾವರೀತಿಯ ಕ್ರಮವನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಬೇಕಾಗುತ್ತದೆ.

ಇನ್ನು ಎನ್‌ಕಂಬರೆನ್ಸ್ ಸರ್ಟಿಫಿಕೇಟ್ ಫೀಜ್ ಕಡಿಮೆ ಮಾಡಬೇಕು ಎಂದು ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಹಾಗೂ ಇತರ ಸ್ನೇಹಿತರು ಹೇಳಿದ್ದಾರೆ. ಇದರಲ್ಲಿ ಈಗ ಇರುವ ಹಾಗೆ ತಕಾವಿ ಲೋನ್ ಲ್ಯಾಂಡ್ ಇಂಪ್ರೂವ್‌ಮೆಂಟ್ ಲೋನ್ ತೆಗೆದುಕೊಳ್ಳಲು ಎನ್‌ಕಂಬರೆನ್ಸ್ ಸರ್ಟಿಫಿಕೇಟ್ ತೆಗೆದುಕೊಳ್ಳುವುದಕ್ಕೆ ಫೀಜ್ ಹಾಕುತ್ತಾ ಇಲ್ಲ. ಕೋಆಪರೇಟೀವ್ ಸೊಸೈಟಿಗಳಲ್ಲಿ ಸಾಲ ತೆಗೆದುಕೊಳ್ಳುವಾಗ ೭೫೦ ರೂಪಾಯಿಗಳು ಮೀರದೆ ಇರುವ ಸಂದರ್ಭಗಳಲ್ಲಿ ಆ ಸರ್ಟಿಫಿಕೇಟಿಗೆ ಏನೂ ಫೀಜ್ ಹಾಕುತ್ತಿಲ್ಲ. ಇತರ ಕೇಸುಗಳಲ್ಲಿ ಕೂಡ ೧೦ ರೂಪಾಯಿ ಫೀಜು ಮಾತ್ರ ಅಪ್ಲಿಕೇಶನ್ ಫೀಜು ಇರತಕ್ಕದ್ದು. ಇದನ್ನು ವಜಾ ಮಾಡಬೇಕು ಕಡಿಮೆಮಾಡಬೇಕು ಎಂದು ಮಾನ್ಯ ಸದಸ್ಯರು ಹೇಳಿದರು. ಎಲ್ಲಿ ಸಾಮಾನ್ಯ ಜನಗಳಿಗೆ ಸಹಾಯ

ದೊರೆಯುತ್ತದೆ ಅಂಥ ಸಂದರ್ಭದಲ್ಲಿ ಈ ಫೀಜನ್ನು ಲೆವಿ ಮಾಡದೆ ಇರುವುದರಿಂದ ಈ ಫೀಜನ್ನು ಕಡಿಮೆ ಮಾಡುವ ಅವಶ್ಯಕತೆ ಇಲ್ಲ ಎಂದು ನಾನು ಭಾವಿಸುತ್ತೇನೆ.

ಸೊರಬ ತಾಲ್ಲೂಕಿನ ಮಾಗಡಿ ಗ್ರಾಮದಲ್ಲಿ ಒಂದು ಕೇಸಿನ ಸಂದರ್ಭದಲ್ಲಿ ಗೇಣಿದಾರನನ್ನು ಹೊರಗೆ ಹಾಕಿರತಕ್ಕ ಪ್ರಸಂಗದ ಕೇಸು ಫೈಸಲ್ ಆಗಿಲ್ಲ, ಇದು ಬಹಳ ದಿವಸಗಳಿಂದ ಪೆಂಡಿಂಗ್ ಇದೆ ಎಂದು ಶ್ರೀಮಾನ್ ತಿಮ್ಮಪ್ಪನವರು ಹೇಳಿದರು. ಈಗಾಗಲೇ ಅದರ ಬಗ್ಗೆ ತಹಶೀಲ್ದಾರರು ಕೊಟ್ಟಂತಹ ತೀರ್ಮಾನದ ಮೇಲೆ ಸಂಬಂಧಪಟ್ಟವರು ಜಿಲ್ಲಾಧಿಕಾರಿಗಳಿಗೆ ಅಪೀಲ್ ಹಾಕಿದ್ದರು. ಈಗ ಅದು ಮತ್ತೆ ತಹಶೀಲ್ದಾರರಿಗೆ ಬಂದು ಆ ಕೇಸ್ ನಡೆಯುತ್ತಿದೆ. ಈಗ ಮಧ್ಯೆ ಸರ್ಕಾರ ಕೈಹಾಕುವುದು ಸೂಕ್ತವಲ್ಲ. ಕಾನೂನು ಪ್ರಕಾರ ಅಂಥಾ ಕೇಸು ಇಷ್ಟು ದಿವಸ ಆ ಆಫೀಸಿನಲ್ಲಿ ಇರಬೇಕು ಎಂದು. ಈಗ ಅದು ಮಾಯಿದೆಗಿಂತ ಹೆಚ್ಚು ಕಾಲ ಆಫೀಸಿನಲ್ಲಿ ಇರತಕ್ಕದು ಕಂಡುಬರುತ್ತಿದೆ. ಮಾನ್ಯ ಸದಸ್ಯರು ಈ ಬಗ್ಗೆ ಸತ್ಯಾಗ್ರಹ ಮಾಡುತ್ತೇವೆ ಎಂದು ತಿಳಿಸಿದ ಮೇಲೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ತಿಳಿಸಿ ಆ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು ಎಂದು ತಿಳಿಸಿದೆ. ಅದರ ಮೇಲೆ ಅವರು ತೆಗೆದುಕೊಳ್ಳುತ್ತಾರೆ. ಈಗ ಆ ಕೇಸು ನಡೆಯುತ್ತಾ ಇರುವುದರಿಂದ ಮಧ್ಯೆ ಪ್ರವೇಶ ಮಾಡುವುದು ಸೂಕ್ತವಲ್ಲ.

ಈಗ ಭೂಸುಧಾರಣೆ ಜಾರಿಗೆ ಬಂದಮೇಲೆ ಭೂಕಂದಾಯವನ್ನು ಯಾವರೀತಿಯಾಗಿ ಕೊಡಬೇಕು ಎನ್ನುವುದನ್ನು ನಿರ್ಧಾರ ಮಾಡಬೇಕೆಂಬುದಾಗಿ ಮಾನ್ಯ ಶ್ರೀ ಕಾಗೋಡು ತಿಮ್ಮಪ್ಪನವರು ತಿಳಿಸಿದರು. ಇದು ಬಹಳ ಪ್ರಾಮುಖ್ಯವಾದಂಥ ಪ್ರಶ್ನೆ. ನಾವು ಅದನ್ನು ಜಾರಿಗೆ ತಂದಿರತಕ್ಕದ್ದು ೨೪-೧-೧೯೭೪ ರಿಂದ. ಅದಕ್ಕೆ ಮೊದಲು ಗೇಣಿ ಬಾಕಿ ಎಷ್ಟಿತ್ತು, ಜಮೀನು ಕಂದಾಯ ಬಾಕಿ ಎಷ್ಟು ಇದನ್ನು ಯಾರು ಕೊಡಬೇಕು ಎಂಬ ಬಗ್ಗೆ ಗೇಣಿದಾರರ ಹಿತಕ್ಕೆ ಭಂಗ ಬಾರದೇ ಇರುವ ರೀತಿಯಲ್ಲಿ ಜಮೀನ್ದಾರರು ಅವನಿಂದ ಎಷ್ಟು ವಸೂಲ್ಮಾಡಬೇಕೆಂಬ ಬಗ್ಗೆ ಒಂದು ತೀರ್ಮಾನಕ್ಕೆ ಬರಬೇಕಾಗುತ್ತದೆ. ಮಾನ್ಯ ಸದಸ್ಯರು ಕೊಟ್ಟಿರತಕ್ಕ ಸಲಹೆ ಬಹಳ ಸೂಕ್ತವಾಗಿದೆ. ಅದರ ಬಗ್ಗೆ ಸರ್ಕಾರದವರು ತೀವ್ರ ಗಮನವನ್ನು ಹರಿಸುತ್ತಾರೆ.

2-00 P.M.

ಇನ್ನು ಇನಾಂ ಅಬಾಲಿಷನ್ ಆಗಿ ಬಹಳ ದಿವಸಗಳಾಗಿವೆ. ಈ ವಿಚಾರ ಅವರಿಗೆ ಗೊತ್ತೇ ಇಲ್ಲವೆಂದು ಹೇಳಿದರು. ೫೪-೧೯೫೫ನೇ ಇಸವಿಯಲ್ಲಿ ಈ ಇನಾಂಗಳನ್ನು ರದ್ದುಮಾಡಿ ಸುಮಾರು ಎರಡು ಸಾವಿರ ಗ್ರಾಮಗಳಲ್ಲಿ ಆ ಜಮೀನೆಲ್ಲಾ ಸರ್ಕಾರಕ್ಕೆ ವೆಸ್ಟ್ ಆಯಿತು. ಇನ್ನೂ ಐದಾರು ಗ್ರಾಮಗಳಲ್ಲಿ ಅಂತ್ಯ ತೀರ್ಮಾನವನ್ನು ತೆಗೆದುಕೊಳ್ಳಬೇಕಾಗಿದೆ. ಕೆಲವು ಪ್ರಕರಣಗಳು ಕೋರ್ಟ್‌ಗಳಿಗೆ ಹೋದ್ದರಿಂದ ಅವು ನಿದಾನವಾಗಿವೆ. ಇನ್ನುಳಿದ ಕೆಲಸಗಳನ್ನು ನಾವು ರಿಮ್ಯಾಂಡ್ ಮಾಡಿರುವುದೂ ಇದೆ. ಆದ್ದರಿಂದಲೇ ಅಂತ್ಯವಾಗಿ ಅಕ್ಯುಪೇಷನ್ ರೈಟ್ಸನ್ನು ತೀರ್ಮಾನಮಾಡುವುದಕ್ಕೆ ನಿಧಾನವಾಗಿದೆ ಆದಷ್ಟು ಜಾಗ್ರತೆಯಾಗಿ ಅವು ತೀರ್ಮಾನವಾಗುವ ರೀತಿಯಲ್ಲಿ ಮಾಡಬೇಕೆಂದರೆ ಕೋರ್ಟಿಗಳಿಂದ ಆಗುವುದಿಲ್ಲ. ಅದಕ್ಕಾಗಿ ನಾವು ಸಹ ಮಧ್ಯೆ ಪ್ರವೇಶಮಾಡುವುದಕ್ಕೂ ಆಗುವುದಿಲ್ಲ. ಸರ್ಕಾರದ ಮಟ್ಟದಲ್ಲಿ ಆಗಬೇಕಾದ ಕೆಲಸಗಳು ಈಗಾಗಲೇ ಆಗಿವೆಯೆಂದು ನಾನು ತಿಳಿಸಬಯಸುತ್ತೇನೆ.

ಇನ್ನು ಮಾನ್ಯ ಶ್ರೀ ರಾಮಸ್ವಾಮಿಯವರು ಯಾರೋ ಒಬ್ಬ ವಿಲೇಜ್ ಅಕೌಂಟೆಂಟ್ ತಪ್ಪು ಮಾಡಿದ್ದಾರೆಂದು ಹೇಳಿದರು. ಆ ವಿಲೇಜ್ ಅಕೌಂಟೆಂಟನ್ನು ಕೂಡಲೇ ಸಸ್ಪೆನ್‌ಷನ್‌ನಲ್ಲಿಟ್ಟಿದ್ದೇವೆ, ಅದನ್ನು ಅವರೇ ಒಪ್ಪಿಕೊಂಡಿದ್ದಾರೆ. ಇನ್ನುಳಿದ ವಿಲೇಜ್ ಅಕೌಂಟೆಂಟ್ಸ್ ಪೈಕಿ ಯಾರಾದರೂ ಅಂತಹವರು ಇದ್ದರೆ, ಅಕ್ರಮವಾಗಿ ನಡೆಯುತ್ತಿದ್ದರೆ, ಅಂಥಾದ್ದನ್ನು ನನ್ನ ಗಮನಕ್ಕೆ ತಂದರೆ ಅವರ ಬಗ್ಗೆ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ವಿಚಾರಮಾಡಲು ಈಗಾಗಲೇ ಏರ್ಪಾಡು ಮಾಡಿದ್ದೇನೆ. ಅದೇ ರೀತಿಯಲ್ಲಿ ಅಂತಹ ಸಂದರ್ಭಗಳು ಇನ್ನು ಯಾವುದಾದರೂ ಇದ್ದರೆ ಅದನ್ನು ನನ್ನ ಗಮನಕ್ಕೆ ತಂದರೆ, ಅದರ ಬಗ್ಗೆ ಯೂ ಯೋಗ್ಯ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಸಿದ್ಧನಾಗಿದ್ದೇನೆ. ಇನ್ನೊಂದು ವಿಷಯ ಒಂದುವೇಳೆ ಅಕ್ರಮ ಸ್ವಾಧೀನ ಮಾಡಿಕೊಂಡಿರುವ ಸಂದರ್ಭದಲ್ಲಿ ಒಂದು ಮಾತು ಬಂತು. ಬಡವರು ಆ ರೀತಿ ಮಾಡಿಕೊಂಡರೆ ಅಂತಹವರನ್ನು ಎವಿಕ್ಟ್ ಮಾಡುತ್ತೀರಿ, ದೊಡ್ಡದೊಡ್ಡ ಜಮೀನ್ದಾರರು ಆ ರೀತಿಮಾಡಿದರೂ ಅವರಿಗೆ ಇನ್ನೂ ಹೆಚ್ಚಿಗೆ ಜಮೀನು ಮಾಡಿಕೊಡುತ್ತೀರೆಂದು ಹೇಳಿದರು. ಇದು ಸರಿಯಾದಂಥ ಅಭಿಪ್ರಾಯವಲ್ಲ. ಇಂತಹ ಅನೇಕ ಸಂದರ್ಭಗಳು ನನ್ನ ಎದುರಿಗೆ ಬಂದಾಗ ವಿಚಾರಮಾಡಬಹುದು. ಆದರೆ ನನಗೆ ಅವು ನೇರವಾಗಿ ಬರುವುದಿಲ್ಲ. ಜಿಲ್ಲಾಧಿಕಾರಿಗಳ ಮಟ್ಟದಲ್ಲಿಯೇ ಅವು ತೀರ್ಮಾನವಾಗುತ್ತವೆ. ಕೆಲವು ಸಬ್ ಡಿವಿಷನ್ ಆಫೀಸರ್ ಮಟ್ಟದಲ್ಲಿಯೇ ತೀರ್ಮಾನವಾಗುತ್ತವೆ. ಎಲ್ಲೆಲ್ಲಿ ನನಗೆ ನೇರವಾಗಿ ಬಂದಿವೆ ಅಂತಹ ಕಡೆಗಳಲ್ಲಿ ೧೯೭೦ನೇ ಇಸವಿಯ ರೂಲ್ಸ್‌ನಲ್ಲಿ ಏನಿದೆಯೋ ಆ ಪ್ರಕಾರ ಅಕ್ರಮ ಸ್ವಾಧೀನ ಮಾಡಿರುವವರಿಗೆ ಯಾವ ರೀತಿಯಲ್ಲಿ ಕ್ರಮ ತೆಗೆದುಕೊಳ್ಳಬೇಕೋ ಆ ರೀತಿಯಲ್ಲಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳು

(ಶ್ರೀ ಎಸ್. ಹುಚ್ಚಮಾಸ್ತಿಗೌಡ)

ತ್ತಿದ್ದೇನೆ. ಆದರೆ ಅದಕ್ಕೆ ವಿರೋಧವಾದ ಪ್ರಸಂಗಗಳು ನನ್ನ ಗಮನಕ್ಕೆ ಇದುವರೆಗೆ ಯಾವುವೂ ಬಂದಿಲ್ಲ.

ಇನ್ನು ಗ್ರಾಮಪಂಚಾಯಿತಿಗಳಿಗೆ ವಹಿಸಿರತಕ್ಕ ಗುಂಡು ತೋಪುಗಳಿದ್ದ ಗೋಮಾಳವನ್ನು ವಾಪಸ್ಸು ತೆಗೆದುಕೊಂಡು ಸರಿಯಾದ ರೀತಿಯಲ್ಲಿ ಹಂಚಿಕೆ ಮಾಡಬೇಕೆಂದು ಸೂಚಿಸಿ ಮಾನ್ಯ ಶ್ರೀ ಪುಟ್ಟಸ್ವಾಮಿಯವರು ಕೆಲವಾರು ಸೂಚನೆಗಳನ್ನು ತಿಳಿಸಿದ್ದಾರೆ. ಹಿಂದೆ ಡೆವಲಪ್‌ಮೆಂಟ್ ಡಿಪಾರ್ಟ್‌ಮೆಂಟ್ ಮುಖಾಂತರ ಈ ಕಾರ್ಯ ಆಗುತ್ತಿತ್ತು. ಅವುಗಳನ್ನು ತಾಲ್ಲೂಕು ಬೋರ್ಡುಗಳಿಗೆ ಇದುವರೆಗೆ ತೆಗೆದುಕೊಂಡು ಅದನ್ನು ಈಗ ಯಾವರೀತಿಯಲ್ಲಿ ಹಂಚಿಕೆ ಮಾಡಬೇಕೆಂದು ಅದಕ್ಕೆ ಸಂಬಂಧಪಟ್ಟ ಮಂತ್ರಿಗಳ ಜೊತೆಯಲ್ಲಿ ಸಮಾಲೋಚನೆ ಮಾಡಿ ಒಂದು ತೀರ್ಮಾನಕ್ಕೆ ಬರುತ್ತೇವೆ.

ಇನ್ನು ರಂಗಪುರದಲ್ಲಿ ೩೯ ಎಕರೆ ಭೂಮಿಯನ್ನು ಕೆಲವರು ಸೇರಿ ಹಂಚಿಕೊಂಡಿದ್ದಾರೆ. ಅವರೇ ಮಂಜೂರು ಮಾಡಿಕೊಂಡಿದ್ದಾರೆಂದೂ. ಅದು ಸಹ ಅಕ್ರಮ ರೀತಿಯಲ್ಲಿ ನಡೆದಿದೆಯೆಂದು ಮಾನ್ಯ ಶ್ರೀ ಹಂಚಿ ಶಿವಣ್ಣನವರು ಹೇಳಿದರು. ನಾನು ಈ ಸ್ಥಳವನ್ನು ಮಂತ್ರಿಯಾದಾಗಲೂ ಅವರ ಜೊತೆಯಲ್ಲಿಯೂ ಮತ್ತು ಜಿಲ್ಲಾಧಿಕಾರಿಗಳ ಜೊತೆಯಲ್ಲಿಯೂ ಹೋಗಿ ನೋಡಿದ್ದೇನೆ. ಇದರ ಬಗ್ಗೆ ಎನ್‌ಕ್ವೈರಿ ಡೆಪ್ಯುಟಿ ಕಮಿಷನರ ಮುಂದೆ ನಡೆಯುತ್ತಿರುವಾಗ ನಾನು ಪ್ರವೇಶಮಾಡಿ ಹೀಗೆಯೇ ಮಾಡಿ ಎಂದು ಹೇಳುವುದು ಸೂಕ್ತವಲ್ಲ. ಇದರ ಬಗ್ಗೆ ಒಂದು ತೀರ್ಮಾನವಾದಮೇಲೆ ಮುಂದೆ ಏನೇನಾಗುತ್ತದೆಂಬುದು ಕ್ರಮವಾಗಿ ಕಾನೂನು ಪ್ರಕಾರವೇ ತೀರ್ಮಾನವಾಗಬೇಕು. ಅದಕ್ಕಾಗಿ ನಾನು ಮಧ್ಯೆ ಪ್ರವೇಶ ಮಾಡುವುದಕ್ಕಾಗುವುದಿಲ್ಲ. ನಾನು ಮಾತ್ರವೂ ಹೇಳುವುದೇನೆಂದರೆ ಜನರು ಏನೇನೋ ಅಂದುಕೊಳ್ಳುತ್ತಾರೆ. ಅಧಿಕಾರಿಗಳು ಯಾರ್‍ಯಾರು ಯಾವ್ಯಾವ ಮಟ್ಟದಲ್ಲಿ ಕಾನೂನು ಪ್ರಕಾರ ಇತ್ಯರ್ಥ ಮಾಡಬೇಕೋ ಅದಕ್ಕೆ ಅಡ್ಡಿ ಮಾಡಿದರೆ ಅದು ತಪ್ಪಾಗುತ್ತದೆ. ಜನರು ಹೀಗೆಯೇ ಹೇಳುತ್ತಾರೆಂದು ಕಾನೂನಿಗೆ ವಿರೋಧವಾಗಿ ಕೆಲಸ ಮಾಡುವುದು ಸಾಧ್ಯವಿಲ್ಲ. ಅಧಿಕಾರಿಗಳು ತೀರ್ಮಾನ ತೆಗೆದುಕೊಳ್ಳುವ ಕಡೆಗೆ ನಾನು ಗಮನ ಕೊಡಬೇಕು. ಅದರಿಂದಾಗಿ ಕೆಲವು ಆಫೀಸುಗಳಿಗೆ ಅನಿರೀಕ್ಷಿತವಾಗಿ ಭೇಟಿ ಕೊಡುತ್ತಿದ್ದೇನೆ. ಇದರಲ್ಲಿ ನನಗೆ ಏನೋ ಸ್ವಲ್ಪ ಅನುಮಾನ ಬಂದಿದೆಯೆಂದು ಹೇಳಿದರು. ಅದನ್ನು ಸ್ಪಷ್ಟಪಡಿಸಬೇಕಾಗಿದೆ. ನಾನು ಇಲ್ಲಿಯವರೆಗೂ ೮೪ ತಹಸೀಲ್ದಾರ್ ಆಫೀಸುಗಳನ್ನೂ ೨೨ ಅಸಿಸ್ಟೆಂಟ್ ಕಮಿಷನರ್ ಆಫೀಸುಗಳನ್ನೂ ೪೭ ಸಬ್ ರಿಜಿಸ್ಟ್ರಾರ್ ಆಫೀಸುಗಳನ್ನು ಮತ್ತು ೬ ಡೆಪ್ಯುಟಿ ಕಮಿಷನರ ಆಫೀಸುಗಳನ್ನು ಅನಿರೀಕ್ಷಿತವಾಗಿ ಭೇಟಿ ಮಾಡಿದ್ದೇನೆ. ಅಲ್ಲಿರತಕ್ಕ ಲೋಪದೋಷಗಳನ್ನು ಕಂಡುಹಿಡಿದು ಅವನ್ನು ತಿದ್ದುವುದಕ್ಕೆ ಸರ್ವಪ್ರಯತ್ನವನ್ನು ಮಾಡಿದ್ದೇನೆ, ಕೆಲವು ಸಂದರ್ಭಗಳಲ್ಲಿ ಅಧಿಕಾರಿಗಳಿಗೆ ಶಿಕ್ಷೆ ಮಾಡಿದ್ದೇನೆ. ಹೀಗೆ ಮಾಡಿದ್ದರೂ ಕೂಡ ಇನ್ನೂ ಕಚೇರಿಗಳಲ್ಲಿ ನಮ್ಮ ನಿರೀಕ್ಷೆ ಎಷ್ಟಿದೆಯೋ ಆ ಮಟ್ಟಕ್ಕೆ ಕೆಲಸವಾಗುತ್ತಾ ಇಲ್ಲವೆಂಬುದನ್ನು ನಾನು ಒಪ್ಪತಕ್ಕ ಮಾತಾಗಿದೆ. ಮಾನ್ಯ ಶ್ರೀ ಪ್ರಭಾಕರ್ ಅವರು ಹೇಳಿದ ಹಾಗೆ ಇದು ಬಹಳ ವರ್ಷಗಳಿಂದ ಬಂದಿರುವ ರೋಗ. ಇದನ್ನು ಒಂದೇಸಾರಿ ಬುಡಮಟ್ಟ ಕಿತ್ತುಹಾಕುತ್ತೇವೆಂಬ ಧೈರ್ಯ ನನಗೆ ಇಲ್ಲ. ಇದನ್ನು ಕ್ರಮಕ್ರಮವಾಗಿ ಅಧಿಕಾರಿಗಳಲ್ಲಿ ದಕ್ಷತೆ, ಪ್ರಾಮಾಣಿಕತೆ ಹೆಚ್ಚುವ ಹಾಗೆ ಮಾಡಿ ಈ ಕೆಲಸ ಸಮಂಜಸವಾದ ರೀತಿಯಲ್ಲಿ ಸುಲಭವಾಗಿ ನ್ಯಾಯ ದೊರಕುವ ರೀತಿಯಲ್ಲಿ ಮಾಡುವುದಕ್ಕೆ ಪ್ರಯತ್ನಮಾಡಬೇಕು. ಆದ್ದರಿಂದ ಇಂಥಾದ್ದನ್ನು ಒಂದೇ ಕಾಲದಲ್ಲಿ ಅದರಲ್ಲೂ ಬಹಳ ಅತ್ಯಲ್ಪ ಕಾಲದಲ್ಲಿ ದೋಷಗಳನ್ನು ನಿವಾರಣೆ ಮಾಡುತ್ತೇವೆಂದು ಹೇಳುವುದಕ್ಕೆ ಸಾಧ್ಯವಿಲ್ಲ.

ಇನ್ನು ಮಾನ್ಯ ಶ್ರೀ ವೀರಪ್ಪಗೌಡರು ಹೇಳಿದ ಹಾಗೆ ಸೊಪ್ಪಿನಬೆಟ್ಟದಲ್ಲಿ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಅಲ್ಲಿನವರಿಗೆ ಅವಕಾಶ ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. ಅದನ್ನು ಯಾವ ರೀತಿ ಕ್ರಮಪಡಿಸಬೇಕೆಂಬುದನ್ನು ಯೋಚನೆಮಾಡಿ ಒಂದು ತೀರ್ಮಾನಕ್ಕೆ ಬರುತ್ತೇವೆ. ಅವರು ಇನ್ನೂ ಒಂದೆರಡು ಪ್ರಾಮುಖ್ಯವಾದಂಥ ವಿಷಯಗಳನ್ನು ಹೇಳಿದ್ದಾರೆ. ಶಂಕರಮಠದಲ್ಲಿ ಬೆಂಗಳೂರಿನಲ್ಲಿರತಕ್ಕ ಮನೆಗಳನ್ನು ಮಾರಾಟಮಾಡಿಕೊಳ್ಳುತ್ತಿದ್ದಾರೆ. ಆ ಸಂಸ್ಥೆಗೆ ಸೇರಿದ ಆಸ್ತಿಯನ್ನು ಈ ರೀತಿಯಾಗಿ ಮಾರಿಕೊಳ್ಳುವುದಕ್ಕೆ ಅವಕಾಶವಿದೆಯೇ ಇಲ್ಲವೇ ಎಂಬುದಾಗಿ ಕೇಳಿದರು. ಆ ಮಠಗಳಿಗೆ ಇರತಕ್ಕ ಸಂಬಂಧಪಟ್ಟ ಕಾನೂನುಗಳು ಈಗಾಗಲೇ ಜಾರಿಯಲ್ಲಿವೆ. ಆ ಮಠದಲ್ಲಿರತಕ್ಕ ಆಸ್ತಿಯ ಮೇಲೆ ನಮಗೆ ನೇರವಾಗಿ ಹೀಗೆಯೇ ಮಾಡಬೇಕೆಂಬ ಹತೋಟಿ ಇಲ್ಲ. ಅವರಿಗೆ ಸಂಪೂರ್ಣವಾದಂಥ ಆಸ್ತಿಗಳನ್ನು ಪರಭಾರೆ ಮಾಡುವುದಕ್ಕೆ ಸ್ವತಂತ್ರವಿದೆ.

ಇನ್ನು ಶೃಂಗೇರಿ ಮಠಕ್ಕೆ ಸಂಬಂಧಪಟ್ಟ ಆಡಳಿತದ ಬಗ್ಗೆ ಹೇಳುವುದಾದರೆ, ಅವರ ಆಡಳಿತವನ್ನು ೧೯೩೬ನೇ ಇಸವಿಯಿಂದ ೧೯೫೯ನೇ ಇಸವಿಯವರೆಗೆ ಸರ್ಕಾರದ ಅಧಿಕಾರಿಗಳ ಮುಖಾಂತರವೇ ನಡೆಸುತ್ತಿದ್ದರು. ಅದೊಂದು ಕಾಲ. ಆ ಕಾಲದಲ್ಲಿ ಒಂದು ಹತೋಟಿ ಅವರಿಗೆ ಇತ್ತು. ೧೯೫೯ರ ನಂತರ ಅಲ್ಲಿನ ಮಠಾಧಿಪತಿಗಳಿಗೆ ವಹಿಸಿದ ಆಸ್ತಿಗಳನ್ನು ಪರಭಾರೆ ಮಾಡುವುದಕ್ಕೆ ನಾವು ಯಾವ ವಿಧವಾದಂಥ

ಅಡ್ಡಿಯನ್ನೂ ಕಾನೂನು ಪ್ರಕಾರ ಮಾಡುವುದಕ್ಕೆ ಸಾಧ್ಯವಿಲ್ಲವೆಂಬ ವಿಷಯವನ್ನು ನಾನು ಈ ಸಭೆಯ ಮುಂದೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಮಾನ್ಯ ಶ್ರೀ ಸಿದ್ದಮಾದಯ್ಯನವರು ಚಿಕ್ಕಳ್ಳಿಗೆ ಸಂಬಂಧಪಟ್ಟ ಜಮೀನುಗಳನ್ನು ಮನೆ ಕಟ್ಟಿಕೊಳ್ಳುವುದಕ್ಕೆ ಎಲ್ಲರಿಗೂ ಕೊಟ್ಟಿಲ್ಲವೆಂದು ಹೇಳುತ್ತಿದ್ದಾರೆ. ಈ ವಿಚಾರವಾಗಿ ಜಿಲ್ಲಾಧಿಕಾರಿಗಳಿಗೆ ತಿಳಿಸಿದ್ದೇನೆ. ಅವರು ಅಲ್ಲಿ ಅದರ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತೇನೆಂದು ಹೇಳಿದ್ದಾರೆ. ಅದನ್ನು ಒದಗಿಸಲು ಪ್ರಯತ್ನಮಾಡುತ್ತೇವೆ.

ಇನ್ನು ಒಂದೆರಡು ವಿಷಯಗಳನ್ನು ಹೇಳಿ, ನನ್ನ ಮಾತನ್ನು ಆಖೈರು ಮಾಡುತ್ತೇನೆ.

ನಮ್ಮ ರಾಜ್ಯದ ನಾನಾ ಭಾಗಗಳು ಈ ರಾಜ್ಯಗಳ ಪುನರ್ವಿಂಗಡಣೆ ಆಗುವುದಕ್ಕೆ ಮೊದಲು ಐದು ರಾಜ್ಯಗಳಿದ್ದು ಅವು ಈಗ ನಮ್ಮ ರಾಜ್ಯದಲ್ಲಿ ಒಂದುಗೂಡಿವೆ. ಆದ ಕಾರಣ ರಾಜ್ಯದ ಅನೇಕ ಭಾಗಗಳಲ್ಲಿ ಒಂದು ಏಕರೂಪತೆಯ ಕಾನೂನು ಇರುವುದಿಲ್ಲ. ಹಾಗೇ ಈ ಶಿಬ್ಬಂದಿಯಲ್ಲೂ ಈ ಮಟ್ಟದಲ್ಲೂ ಒಂದು ಏಕರೂಪತೆಯಿಲ್ಲ. ಆದುದರಿಂದ ಈಗ ಇರತಕ್ಕ ವ್ಯತ್ಯಾಸಗಳನ್ನು ತೊಡೆದು ಹಾಕುವುದಕ್ಕಾಗಿ ಪ್ರಯತ್ನಗಳನ್ನು ನಡೆಸಲಾಗಿದೆ. ಆದಾಗ್ಯೂ ಇಂದು ಈ ಒಂದು ವ್ಯತ್ಯಾಸದಿಂದಾಗಿ ತಾಲ್ಲೂಕ್ ಮಟ್ಟದಲ್ಲಿ ಆಗಲೀ ಸಬ್ ಡಿವಿಜನ್ ಮಟ್ಟದಲ್ಲಾಗಲಿ ಅಥವಾ ಜಿಲ್ಲಾ ಮಟ್ಟದಲ್ಲಾಗಲಿ ಸಧ್ಯದಲ್ಲಿ ಒಂದು ಏಕರೂಪತೆಯನ್ನು ಕಾಣುವುದಕ್ಕೆ ಸಾಧ್ಯವಾಗಿಲ್ಲ. ಈ ಶಿಬ್ಬಂದಿ ಮಟ್ಟದಿಂದ ಹಿಡಿದು ಅನೇಕ ಕಡೆಗಳಲ್ಲಿ ಕೆಲವು ರಿಜಿಷ್ಟರುಗಳನ್ನೇ ಮೈಂಟೇನ್ ಮಾಡಿಲ್ಲ. ಇಂಥ ವ್ಯತ್ಯಾಸಗಳನ್ನೆಲ್ಲಾ ತೊಡೆದು ಹಾಕುವುದಕ್ಕೆ ಸರ್ಕಾರ ಸೂಕ್ತ ಕ್ರಮಗಳನ್ನು ಕೈಗೊಂಡಿದೆ.

ಇನ್ನು ಹೆಚ್ಚು ವಿಷಯಗಳನ್ನು ಹೇಳುವುದಕ್ಕೆ ನಾನು ಈಗ ಇಷ್ಟಪಡುವುದಿಲ್ಲ. ಆದಾಗ್ಯೂ ತಾಲ್ಲೂಕ ಆಫೀಸುಗಳಲ್ಲಿ, ಅಸಿಸ್ಟೆಂಟ್ ಕಮಿಷನರುಗಳ ಕಛೇರಿಯಲ್ಲಿ ಮತ್ತು ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಅವರಿಗೆ ಕೆಲಸಗಳನ್ನು ತ್ವರಿತವಾಗಿ ನಡೆಸತಕ್ಕ ಉದ್ದೇಶದಿಂದ ಅವರಿಗೆ ಅಗತ್ಯವಾಗಿರತಕ್ಕ ವಾಹನ ಸೌಕರ್ಯವನ್ನು ಮತ್ತು ಈಗ ಹೇಳಿದ ಕಛೇರಿಯಲ್ಲಿ ಪೀಠೋಪಕರಣಗಳ ಸೌಲಭ್ಯವನ್ನು ಒದಗಿಸುವುದಕ್ಕೂ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ. ಸಧ್ಯದಲ್ಲಿ ಈ ವಾಹನಗಳನ್ನು ಒಂದೊಂದು ಸಬ್ ಡಿವಿಜನ್ನಿಗೆ ಒಂದೊಂದು ವಾಹನವನ್ನು ಒದಗಿಸಲಾಗುತ್ತದೆ. ಅದೇ ರೀತಿ ಒಂದೊಂದು ತಾಲ್ಲೂಕಿಗೂ ಒಂದೊಂದು ವಾಹನವನ್ನು ಒದಗಿಸತಕ್ಕ ಉದ್ದೇಶವಿದ್ದರೂ ಪ್ರಸಕ್ತ ಸನ್ನಿವೇಶದಲ್ಲಿ ಪೆಟ್ರೋಲ್ ಮತ್ತು ಡಿಸೇಲ್ ಎಣ್ಣೆಯ ಬೆಲೆ ಅಧಿಕವಾಗಿರುವುದರಿಂದ ಇವುಗಳನ್ನ ಒದಗಿಸುವುದರಲ್ಲಿ ಹೆದರಿ ಈ ಪ್ರಯೋಜಲನ್ನು ಹಿಂದಕ್ಕೆ ತೆಗೆದುಕೊಳ್ಳಬೇಕಾಗಿ ಬಂದಿದೆ. ಆದರೆ ಕೆಲಸಗಳನ್ನು ಅತಿ ತ್ವರಿತವಾಗಿ ಕೆಲವು ಸಂದರ್ಭಗಳಿಗೆ ಮಾಡಬೇಕಾದ ಪ್ರಸಂಗಗಳು ಉದ್ಭವಿಸುವುದರಿಂದ ಕೆಲವನ್ನಾದರೂ ತಾಲ್ಲೂಕುಗಳಿಗೆ ಎಷ್ಟು ಸಾಧ್ಯವೋ ಅಷ್ಟನ್ನಾದರೂ ಒದಗಿಸುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ. ಹಾಗೇ ಈ ಪೀಠೋಪಕರಣಗಳ ವಿಚಾರದಲ್ಲಿಯೂ ಕೂಡ ಅಲ್ಲಿ ಒಂದೊಂದು ತಾಲ್ಲೂಕಿಗೂ ಎರಡೂವರೆ ಸಾವಿರದಿಂದ ಮೂರು ಸಾವಿರದವರೆಗೂ ಒದಗಿಸಲಾಗಿದೆ. ಅಸಿಸ್ಟೆಂಟ್ ಕಮಿಷನರ ಕಛೇರಿಗೆ ಒಂದು ಸಾವಿರ ಮತ್ತು ಜಿಲ್ಲಾಧಿಕಾರಿಗಳ ಕಛೇರಿಗೆ ಒಂದು ಸಾವಿರ ಮತ್ತು ಜಿಲ್ಲಾಧಿಕಾರಿಗಳ ಕಛೇರಿಗೆ ಹತ್ತು ಸಾವಿರ ರೂಪಾಯಿಗಳಂತೆ ಒದಗಿಸಲಾಗಿದೆ. ಹೀಗೆ ಇಡೀ ರಾಜ್ಯಕ್ಕೆ ಪೀಠೋಪಕರಣಗಳನ್ನು ಒದಗಿಸತಕ್ಕ ಬಗ್ಗೆ ಬಡ್ಜೆಟ್ಟಿನಲ್ಲಿ ೭-೮ ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ. ಈ ಕಾರ್ಯಕ್ರಮವನ್ನು ಕೈಗೊಳ್ಳಲಾಗುತ್ತದೆ.

ಶ್ರೀ ಪ. ಎಂ. ಭಾಂಗಿ.— ಇನ್‌ಕ್ರಿಮೆಂಟುಗಳ ವಿಚಾರ ಹೇಳಲಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಆ ವಿಚಾರದಲ್ಲಿ ಕೆಲವು ತಿದ್ದುಪಡಿಗಳನ್ನು ತರಬೇಕಾಗಿದೆ. ಅಷ್ಟೇ ಅಲ್ಲದೆ ಕೆಲವು ಕ್ರಮಗಳನ್ನೂ ಅನುಸರಿಸಬೇಕಾಗಿದೆ. ಇವುಗಳನ್ನೆಲ್ಲಾ ಬೇಗ ಕಾರ್ಯ ರೂಪಕ್ಕೆ ತರಲು ಪ್ರಯತ್ನ ಮಾಡುತ್ತೇನೆ.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು.— ದೇವಾಲಯಗಳ ಬಗ್ಗೆ ರಾಜ್ಯದಲ್ಲಿ ಒಂದು ಏಕರೂಪತೆಯ ಕಾನೂನನ್ನು ತರತಕ್ಕ ವಿಚಾರದಲ್ಲಿ ಹೇಳಲಿಲ್ಲ......

ಶ್ರೀ ಎನ್ ಹೆಚ್ಚಮಾಸ್ತಿಗೌಡ — ಈಗ ನಡೆಯುತ್ತಿರುವ ಸಭೆಯನ್ನು ಬರುವ ಶನಿವಾರ ಆಖೈರು ಮಾಡಬೇಕೆಂದಿದ್ದಾರೆ. ಹಾಗೆ ಆ ದಿನಕ್ಕೆ ಅದು ಮುಗಿಯದೆ ಮುಂದುವರೆದರೆ ಇನ್ನೂ ೩—೪ ದಿನಗಳು ಸಭೆ ನಡೆವಲ್ಲಿ ಇದಕ್ಕೆ ಸಂಬಂಧಪಟ್ಟ ಬಿಲ್ಲನ್ನು ಕೂಡ ಇದೇ ಸಭೆಯಲ್ಲಿ ಮಂಡಿಸಿ ಅದನ್ನು ಜಾಯಿಂಟ್ ಸೆಲೆಕ್ಟ್ ಸಮಿತಿಗೆ ಕಳುಹಿಸತಕ್ಕ ಅವಕಾಶ ಕೂಡ ಇದೆ. ಆದರೆ ಈ ದಿವಸ ಬಿಸಿನೆಸ್ ಅಡ್ವೈಜರಿ ಸಮಿತಿ ಸೇರಂತ್ತದೆ ಅಲ್ಲಿ ಏನು ತೀರ್ಮಾನವಾಗುತ್ತದೋ ಅದರಂತೆ ನಡೆಯಬೇಕಾಗುವುದು.

(ಶ್ರೀ ಎನ್. ಹುಚ್ಚಮಾಸ್ತಿಗೌಡ)

ಇಷ್ಟನ್ನು ಹೇಳಿ ನಾನು ಸಭೆಯ ಮುಂದೆ ಮಂಡಿಸಿರತಕ್ಕ ಈ ನನ್ನ ಎಲ್ಲ ಬೇಡಿಕೆಗಳಿಗೂ ಮಾನ್ಯ ಸದಸ್ಯರೆಲ್ಲರೂ ಒಪ್ಪಿಗೆ ಕೊಡಬೇಕೆಂದು ಹೇಳುತ್ತೇನೆ ಮತ್ತು ಮುಂದೆ ಭೂಶಾಸನದ ಎಲ್ಲ ಕಲಂಗಳೂ ಎಲ್ಲರಿಗೂ ಸಹಾಯವಾಗತಕ್ಕ ರೀತಿಯಲ್ಲಿ ಹಾಗೂ ಸಮರ್ಪಕವಾದ ರೀತಿಯಲ್ಲಿ ಕಾರ್ಯಗತವಾಗಬೇಕಾಗಿದ್ದರೆ ತಮ್ಮೆಲ್ಲರ ಸಹಕಾರ ಸಹಾಯ ಅಗತ್ಯವೆಂದು ಪ್ರಾರ್ಥಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

MADAM SPEAKER.— I will now put the motion to the vote of the House.

The question is.—

"That the respective sums not exceeding the amounts mentioned in the list of Demands inclusive of the sum granted "on account" be granted to Government to defray the charges which will come in course of payment during the financial year for the period ending 31st day of March 1975, in respect of Demand Nos. 5, 6. and 35."

The motion was adopted and the sums were granted.

As order by the chair the motion for Demands for grants adopted by the chair are reproduced below :

Demand No. 5—Land Revenue

"That a sum not exceeding Rs. 5,86,00,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1975 in respect "Land Revenue"

Demand No. 6—Stamps and Registration

Madam Sir, on the recommendation of the Governor, I beg to move :

"That a sum not exceeding Rs. 73,00,000 inclusive of the sum granted 'on account' be granted to the Government to defray the charges which will come in course of pyment during the financial year ending 31st day of March 1975 in respect of 'Stamps and Registration."

Demand No. 36—Other Social and Community Services

Madam/Sir, on the recommendation of the Governor, I beg to move :

"That a sum not exceeding Rs. 1,20,17,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1975 in respect of "Other Social and Community Services."

Demand Nos. 34, 49, and 60

Sri N. RACHAIAH (Minister for Community Development and Social Welfare) — Madam, on the recommendation of the Governor, I beg to move.—

"That a sum not exceeding Rs. 10,94,05,000 inclusive of the sum granted 'on account' be granted to the Government to defray the charges which will come in course of pay ment during the financial year ending 31st day of March 1975 in respect of Demand No. 34 "Social Security and Welfare."

"That a sum not exceeding Rs. 21,40,10,000 inclusive of the sum granted 'on account' be granted to the Govern ment to defray the charges which will come in course of of payment during the financial year ending 31st day of March 1975 in respect of Demand No. 49 "Community Development"

"That a sum not exceeding Rs. 6,77,50,000 inclusive of the sum granted 'on account' be granted to the Govern ment to defray the charges which will come in course of payment during the financial year ending 31st day of March 1975 in respect of Demand No. 60 "Compensation and Assignments to local Bodies and Panchayati Raj Institutions."

MADAM SPEAKER.— Motion moved.—

"That a sum not exceeding Rs. 10,94,05,000 inclusive of the sum granted 'on account' be granted to the Govern ment to defray the charges which will come in course of payment during the financial year ending 31st day of March 1975 in respect of Demand No. 34 "Social Secu rity and Welfare."

"That a sum not exceeding Rs. 21,40,10,000 inclusive of the sum granted 'on account' be granted to the Govern ment to defray the charges which will come in course of payment during the financial year ending 31st day of March 1975 in respect of Demand No. 49 "Community Development."

"That a sum not exceeding Rs. 6,77,50,000 inclusive of the sum granted 'on account' be granted to the Govern ment to defray the charges which will come in course of payment during the financial year ending 31st day of March 1975 in respect of Demand No. 60 "Compensation and Assignments to Local Bodies and Panchayati Raj Institutions"

† ಶ್ರೀ ಜೆ. ಎಲ್. ಕಬಾಡಿ(ಬಳ್ಳೊಳ್ಳಿ).— ಮಾನ್ಯ ಅಧ್ಯಕ್ಷರೇ, ಈಗತಾನೆ ಮಾನ್ಯ ಸಭೆಯ ಮುಂದೆ ಮಂಡಿಸಿದ ಬೇಡಿಕೆಗಳನ್ನು ನಾನು ವಿರೋಧಿಸುತ್ತ ಕೆಲವು ಮಾತುಗಳನ್ನಾಡಲು ನಿಂತಿದ್ದೇನೆ.

ಈ ರಾಜ್ಯದಲ್ಲಿ ಇಲ್ಲಿಯವರೆಗೆ ಯಾವ ರೀತಿ ಈ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್ ಹರಿಜನರ ಅಭಿವೃದ್ಧಿಯನ್ನು ಸಾಧಿಸಿದೆ ಎಂಬುದನ್ನು ನಾವು ಈಗ ಪರಿಶೀಲನೆ ಮಾಡಬೇಕಾಗಿದೆ, ನಾನು ಒಂದು ವಿಶಯವನ್ನು ಹೇಳುವುದಾದರೆ ಇಲ್ಲಿ ಮಾನ್ಯ ಸಚಿವರು ಈ ಇಲಾಖೆಗೆ ಎಷ್ಟು ಹಣವನ್ನು ಒದಗಿಸಲಾಗುವುದೆಂದು ಹೇಳುತ್ತಾರೋ ಆ ಹಣದಲ್ಲಿ ನಾಲ್ಕರಲ್ಲೊಂದು ಪಾಲು ಕೂಡ ವಿನಿಯೋಗವಾಗಿ ಅವರ ಉದ್ಧಾರವಾಗಲಿಲ್ಲ ಎಂದು ನಾನು ಹೇಳದೆ ವಿಧಿಯಿಲ್ಲ. ಆದಾಗ್ಯೂ ಇಲ್ಲಿ ಮಂತ್ರಿಗಳು ಬಾಯಿ ಮಾತಿನಲ್ಲಿ ಬೇಕಾದಷ್ಟು ಹೇಳಿ ಬಿಡುತ್ತಾರೆ. ಆ ಮಟ್ಟದಲ್ಲಿ ಅದು ಕಾರ್ಯ ರೂಪಕ್ಕೆ ಬರುವುದಿಲ್ಲ. ಈ ದಿವಸ ಈ ಒಂದು ಕಮ್ಯುನಿಟಿಯ ಉದ್ಧಾರಕ್ಕಾಗಿ ೨ ಕೋಟಿ ರೂಪಾಯಿಗಳನ್ನು ಒದಗಿಸಿದ್ದಾರೆ. ಆದರೆ ಇದು ಬಹಳ ಕಡಿಮೆ ಎಂದು ನಾನು ಹೇಳದೆ ವಿಧಿ ಇಲ್ಲ. ೧೪೫೦ ಕೋಟಿ ರೂಪಾಯಿಗಳ ವರಮಾನ ವಿರತಕ್ಕ ಒಂದು ರಾಜ್ಯದಲ್ಲಿ ಈ ಒಂದು ಕೋಮಿನ ಏಳಿಗೆಗಾಗಿ ೨೧ ಕೋಟಿ ಚಿಲ್ಲರೆ ಒದಗಿಸಿರುವುದಾಗಿ ಇಲ್ಲಿ ತೋರಿಸಿದ್ದಾರೆ. ಆದರೆ ಈ ಹಿಂದೆ ಆಡಳಿತದ ವೆಚ್ಚವನ್ನು ೮೦೦ ಕೋಟಿಗೆ ಇಳಿಸಿದಾಗ ಇದರ ವೆಚ್ಚವನ್ನೂ ಕೂಡ ದಾಮಾಷ್ಟ ಪ್ರಕಾರ ೧೨ ಕೋಟಿಗೆ ಇಳಿಸಿದರು. ಆದರೆ ಪ್ಲಾನಿಂಗ್ ಕಮಿಷನ್ನಿನವರು ನಮ್ಮ ರಾಜ್ಯಕ್ಕೆ ಭೇಟಿ ಕೊಟ್ಟಿದ್ದ ಕಾಲದಲ್ಲಿ ಈ ರಾಜ್ಯದಲ್ಲಿರತಕ್ಕ ಈ ಕೋಮಿನ ಜನ ಸಂಖ್ಯೆಗೆ ಇಲ್ಲಿ ಒದಗಿಸಿರತಕ್ಕ ಹಣ ಬಹಳ ಕಡಿಮೆ ಎಂಬುದಾಗಿ ಅವರು ಅಭಿಪ್ರಾಯ ಪಟ್ಟಿದ್ದರು.

೧೯೭೧ನೇ ಇಸವಿ ಸೆನ್ಸ್‌ಸ್ ಪ್ರಕಾರ ಜನಸಂಖ್ಯೆ ಇರುವುದು ೩ ಕೋಟಿ ೩೮ ಲಕ್ಷದ ೫೦ ಸಾವಿರ ಆದರಲ್ಲಿ ಹರಿಜನರು ಕನಿಷ್ಟ ೪೦ ಲಕ್ಷ ಇದ್ದಾರೆ. ಅವರಿಗಾಗಿ ೨೦ ಕೋಟಿ ರೂಪಾಯಿ ಒದಗಿಸಬೇಕು ಅಂದಾಗ ನಮ್ಮ ಅರ್ಥಸಚಿವರು ಆಕಾಶವಾಣಿಯಲ್ಲಿ ಭಾಷಣ ಮಾಡಿ ಹರಿಜನರ ಅಭಿವೃದ್ಧಿಗೆ ಪಂಚ ವಾರ್ಷಿಕ ಯೋಜನೆಯಲ್ಲಿ ೨೫ ಕೋಟಿ ರೂಪಾಯಿಗಳನ್ನು ಒದಗಿಸಲಾಗುವುದು ಎಂದು ತಿಳಿಸಿದರು. ಇದನ್ನು ಅಧ್ಯಕ್ಷರ ಮೂಲಕ ಗಮನಕ್ಕೆ ತರುತ್ತೇನೆ.

"The State Five Year Plan as prepared by the State Government has made a provision of Rs. 25 crores for the welfare of Backward Classes, Scheduled Castes and the Schsduled Tribes, as compared to only Rs. 5 crores during the Fourth Plan. ನಾಲ್ಕನೆ ಯೋಜನೆಯಲ್ಲಿ ೫ ಕೋಟಿ ರೂಪಾಯಿ ಕೊಟ್ಟು ಈಗ ೨೫ ಕೋಟಿ ರೂಪಾಯಿ ಕೊಡುವುದಾಗಿ ಹೇಳಿರುವುದು ಬಹಳ ಆನಂದದ ಸಂಗತಿ. The bulk of this is on education and the rest on economic upliftment, housing and health. A number of schemes have been drawn up and these will have to keep pace with the changing conditions. Of course, many general schemes of socio economic improvements which are not specifically earmarked for the backward classes will benefit them along with others. The development is a total process and cannot always be adequately expressed in terms of watertight compartments ; but our commitment to do our very best for the weaker sections of the society is very clear. The living standard of the porest man would rise at a faster rate." ನಮ್ಮ ಅರ್ಥ ಮಂತ್ರಿಗಳು ಹೇಳಿರುವುದನ್ನು ಮತ್ತು ಇಂದು ಬಜೆಟ್ಟಿನಲ್ಲಿ ಒದಗಿಸಿರುವುದನ್ನು ಲೆಕ್ಕಾಚಾರ ಹಾಕಿದರೆ ಹನ್ನೆರಡೂವರೆ ಕೋಟಿ ರೂಪಾಯಿ ಇಳಿಸಲಾಗಿದೆ. ಪ್ರತಿಯೊಂದು ಬಾಬಿನಲ್ಲೂ ಶೇಕಡ ೩೦-೪೦ರಷ್ಟು ಹೆಚ್ಚು ಹಣ ಒದಗಿಸಿರುವಾಗ ಹರಿಜನ ಗಿರಿಜನರ ಸಂಖ್ಯೆ ಹೆಚ್ಚಾಗಿದೆ ಜಾಸ್ತಿ ಕೊಡಿ ಎಂದು ಕೇಳುವಾಗ ಜಾಸ್ತಿ ಕೊಡದೆ ಮೊತ್ತವನ್ನು ಇಳಿಸಿರುವುದು ವ್ಯಥೆಪಡಬೇಕಾದ ಸಂಗತಿಯಾಗಿದೆ. ಮತ್ತು ಇಂಡಿಯಾ ಸರಕಾರದ ಬ್ಯಾಕ್‌ವರ್ಡ್ ಕ್ಲಾಸಸ್‌ನ ಡೈರೆಕ್ಟರ್ ಜನರಲ್‌ರವರಾದ ಡಾ|| ಮೂರ್ತಿಯವರು ಒಂದು ಸಲಹೆ ಮಾಡಿದ್ದಾರೆ. ಈ ಸಲದ ಬಜೆಟ್ಟಿನಲ್ಲಿ ೨೧ ಕೋಟಿ ರೂಪಾಯಿಗಳನ್ನಾದರೂ ಒದಗಿಸಿದರೆ ಏನಾದರೂ ಮಾಡಬಹುದು ಇಲ್ಲದಿದ್ದರೆ ಆಗುವುದಿಲ್ಲ ಎಂದು ನಿರ್ದೇಶನವನ್ನು ೧೯೭೩ನೇ ಸೆಪ್ಟಂಬರಿನಲ್ಲಿ ನೀಡಿದರು. ಆದರೆ ಅದಕ್ಕೆ ಗಮನ ಕೊಟ್ಟಿಲ್ಲ. ಸೆನ್ಸಸ್ ಪ್ರಕಾರ ಶೇಕಡ ೨೫ರಷ್ಟು ನಮ್ಮವರ ಜನ ಸಂಖ್ಯೆ ಹೆಚ್ಚಾಗುತ್ತಿದೆ. ಆದರೆ ಅದಕ್ಕನುಗುಣವಾಗಿ ಹೆಚ್ಚು ಹಣ ನಮ್ಮ ಅಭಿವೃದ್ಧಿಗೆ ಒದಗಿಸಿಲ್ಲ ಕಾರಣವೇನು ? ೧೯೭೧-೭೨ರಲ್ಲಿ ೧ ಕೋಟಿ, ೧೯೭೨-೭೩ರಲ್ಲಿ ೧ ಕೋಟಿ ೫೦ ಲಕ್ಷ, ೧೯೭೩-೭೪ರಲ್ಲಿ ೨ ಕೋಟಿ ಒದಗಿಸಲಾಗಿದೆ. ೧೯೭೪-೭೫ರಲ್ಲಿ ಜನಸಂಖ್ಯೆ ವಿಪರೀತವಾಗಿರುವಾಗ ಹೆಚ್ಚು ಉತ್ಪತ್ತಿಯಾಗುವಾಗ ಅದಕ್ಕನುಗುಣವಾಗಿ ಬಜೆಟ್ಟನ್ನು ಮಂಜೂರು ಮಾಡಬೇಕಾಗಿತ್ತು. ೧೯೭೩-೭೪ರ

೨ ಕೋಟಿ ರೂಪಾಯಿಗಳನ್ನು ಒದಗಿಸಿ ಇವತ್ತು ಕೂಡ ಅಷ್ಟೇ ಒದಗಿಸಿದ್ದಾರೆ. ಇದಕ್ಕೆ ಕಾರಣವೇನು ? ಹಣದ ಕೊರತೆ ಇದೆಯೇ ? ಹರಿಜನ ಗಿರಿಜನರ ಕಲ್ಯಾಣ ಮಾಡಬಾರದು ಎಂದಿರುವಂತೆ ಕಂಡುಬರು ವುದು. ಇದನ್ನು ನೋಡಿದರೆ ಪೋಸ್ಟ್‌ಮಾರ್ಟಂನಂತೆ ಕಂಡುಬರುವುದು. ಇದನ್ನು ಯಾರೂ ಕೇಳು ವವರಿಲ್ಲ. ಇದರ ಬಗ್ಗೆ ಮಂತ್ರಿಗಳು ವಿವರಣೆ ಕೊಡಬೇಕು. ಇಂದು ಹರಿಜನರ ವಿಚಾರದಲ್ಲಿ ನಿಮ್ಮ ಸ್ಟಿಗ್ಮ ಆಫ್ ಅನ್‌ಟಚಬಿಲಿಟಿ ಏನಾಗಿದೆ ? ಗರೀಬಿ ಹಠಾವೋ ಎಂಬ ಘೋಷಣೆ ಸರಕಾರ ಮಾಡಿತು. ಆದರೆ ಗರೀಬರನ್ನು ಹಠಾವು ಮಾಡಲಾಗುತ್ತಿದೆ. ಸಮಾಜ ಕಲ್ಯಾಣ ಇಲಾಖೆಗೆ ಸಾಕಷ್ಟು ಕೊಡದೆ ಇತರ ಇಲಾಖೆಗಳಿಗೆ ಹೆಚ್ಚು ಕೊಟ್ಟಿರುವುದನ್ನು ಇಂದು ನೋಡಬಹುದು. ರೆವನ್ಯೂ ಇಲಾಖೆಗೆ ೧೯೭೨-೭೩ಕ್ಕೆ ೮ ಕೋಟಿ ೨೧ ಲಕ್ಷ ೧೬,೨೫೭ ರೂ. ಕೊಟ್ಟು ೭೩-೭೪ಕ್ಕೆ ೮ ಕೋಟಿ ೭೮ ಲಕ್ಷದ ೧೫ ಸಾವಿರ ಕೊಟ್ಟಿದ್ದಾರೆ. ೧೯೭೪-೭೫ಕ್ಕೆ ೧ ಕೋಟಿ ೭೦ ಲಕ್ಷ ೪೦ ಸಾವಿರ ಒದಗಿಸಿದ್ದಾರೆ. ಅನಿಮಲ್ ಹಸ್ಬೆಂಡ್ರಿ ಇಲಾಖೆಗೆ ೧೯೭೩-೭೪ಕ್ಕೆ ೨ ಕೋಟಿ ೯೨ ಲಕ್ಷ, ೧೯೭೪-೭೫ಕ್ಕೆ ೩ ಕೋಟಿ ೬೫ ಲಕ್ಷ ಒದಗಿಸಿದ್ದಾರೆ ಇದರಲ್ಲಿ ೧ ಕೋಟಿ ಏರಿದೆ. ಸೋಷಿಯಲ್ ವೆಲ್‌ಫೇರ್ ಇಲಾಖೆ ಸೆಕ್ರೆಟರಿಗಳಾಗಲೀ ಅಥವಾ ಕಮೀಷನರಾಗಲಿ ಈ ದಿವಸದ ಯೋಜನೆ ಬಗ್ಗೆ ಒಂದು ರೂಪರೇಖೆ ಇಟ್ಟು ಜಾಸ್ತಿ ಹಣ ಬೇಕೆಂದು ಒತ್ತಾಯಮಾಡದೆ ಅರ್ಥಮಂತ್ರಿಗಳ ಮೇಲೆ ಎಲ್ಲಾ ಜವಾಬ್ದಾರಿಯನ್ನೂ ಹೊರಿಸಿದ್ದಾರೆಯೋ ಎಂದು ಪ್ರಶ್ನೆಮಾಡಬೇಕಾಗಿದೆ. ಕಮ್ಯೂನಿಟಿ ಡೆವಲಪ್‌ಮೆಂಟ್ ಇಲಾಖೆಯಲ್ಲಿ ೧೯೭೩—೭೪ಕ್ಕೆ ೨ ಕೋಟಿ ೫೧ ಲಕ್ಷದ ೬೦ ಸಾವಿರ ರೂಪಾಯಿ ಒದಗಿಸಿ ೧೯೭೪ ೭೫ಕ್ಕೆ ೯ ಕೋಟಿ ೧೫ ಲಕ್ಷ ರೂಪಾಯಿ ಕೊಟ್ಟಿದ್ದಾರೆ. ಇದಕ್ಕೆ ೭ ಕೋಟಿ ಚಿಲ್ಲರೆ ಯಾವ ಕಾರಣದಿಂದ ಕೊಡಲಾಗಿದೆ ? ನಮಗೆ ಬೇಡವೇ ? ಹರಿಜನರ ಉದ್ಧಾರ ಮಾಡಬಾರದೆಂದಿದ್ದೀರಾ ? ವಾಟರ್ ಕನ್‌ಸರ್ವೇಷನ್ನಿಗೆ ೧೯೭೩—೭೪ಕ್ಕೆ ೧ ಕೋಟಿ ೨೫ ಲಕ್ಷದ ೯೦ ಸಾವಿರ ಒದಗಿಸಲಾಗಿದೆ. ಹೀಗೆ ಪ್ರತಿಯೊಂದು ಇಲಾಖೆಯ ಅಂಕಿಸಂಖ್ಯೆಗಳನ್ನು ನೋಡಿದ್ದೇಕಿನ, ಎಲ್ಲಕ್ಕೂ ೧ ಕೋಟಿ, ೨ ಕೋಟಿ, ೬ ಕೋಟಿ ಹೀಗೆ ಹೆಚ್ಚು ಹಣ ಬಜೆಟ್ಟಿನಲ್ಲಿ ಒದಗಿಸಲಾಗಿದೆ. ಆದರೆ ಸಮಾಜ ಕಲ್ಯಾಣ ಇಲಾಖೆಗೆ ಹಾಗೆ ಒದಗಿಸಿಲ್ಲ. ವಿಲೇಜ್ ಅಂಡ್ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ೧೯೭೩—೭೪ಕ್ಕೆ ೫೭ ಲಕ್ಷ ೩೫ ಸಾವಿರ ಕೊಟ್ಟು ೧೯೭೪—೭೫ಕ್ಕೆ ೮೪ ಲಕ್ಷ ೪೯ ಸಾವಿರ ಒದಗಿಸಿದೆ. ಕೋ-ಆಪರೇಷನ್ ಇಲಾಖೆಗೆ ೭೬.೮೭ ಲಕ್ಷ ೧೯೭೩—೭೪ನೇ ಸಾಲಿಗೆ ಒದಗಿಸಿ ೧೯೭೪—೭೫ಕ್ಕೆ ೯೯.೭೮ ಲಕ್ಷ ಕೊಡಲಾಗಿದೆ. ಫಾರೆಸ್ಟ್ ಇಲಾಖೆಗೆ ೧ ಕೋಟಿ ೩೧ ಲಕ್ಷ ೫೧ ಸಾವಿರ ರೂಪಾಯಿ ೧೯೭೩—೭೪ಕ್ಕೆ ಕೊಟ್ಟು ೧೯೭೪—೭೫ಕ್ಕೆ ೨ ಕೋಟಿ ೬೫ ಲಕ್ಷ ಅಂದರೆ ಒಂದೂವರೆ ಕೋಟಿ ಜಾಸ್ತಿ ಕೊಡಲಾಗಿದೆ. ಫ್ಯಾಮಿಲಿ ಪ್ಲಾನಿಂಗ್ ಇಲಾಖೆಗೆ ೧೯೭೩—೭೪ಕ್ಕೆ ೩ ಕೋಟಿ ೨೦ ಲಕ್ಷ ೩೬ ಸಾವಿರ ಒದಗಿಸಿ ಈ ವರ್ಷ ೫ ಕೋಟಿ ೬೮ ಲಕ್ಷ ತೋರಿಸಲಾಗಿದೆ. ಇದರ ವಿಷಯದಲ್ಲಿ ಹೇಳುವುದಾದರೆ ಪ್ರತಿಯೊಂದು ಗೋಡೆಯ ಮೇಲೂ ನಿರೋಧ್ ಎಂದು ಬರೆದಿದ್ದಾರೆ, ಶಾಲೆ—ಕಾಲೇಜು, ಸರಕಾರಿ ಕಟ್ಟಡ ಮುಂತಾದುವುಗಳ ಮೇಲೆ ನಿರೋಧ್ ಎಂದು ಬರೆದಿದ್ದಾರೆ ಏಕೆ ಎಂದು ಹುಡುಗರು ಕೇಳುವರು. ಇದಕ್ಕೆ ಖರ್ಚುಮಾಡು ವುದನ್ನು ನೋಡಿದರೆ ನಾಚಿಕೆಯಾಗುವುದು. ಕುಟುಂಬ ಯೋಜನೆ ಬಗ್ಗೆ ಪ್ರಚಾರ ಮಾಡಲು ವಿಶೇಷ ಹಣವನ್ನು ಖರ್ಚು ಮಾಡುತ್ತಿದ್ದಾರೆ. ಅಸ್ಪೃಶ್ಯತೆ ಎಂಬ ಅಂಟುರೋಗವನ್ನು ನಿವಾರಣೆ ಮಾಡಲು ಒಂದು ಪೈಸೆ ಕೂಡ ಹೆಚ್ಚು ಮಾಡಿಲ್ಲ. ಇದು ನಾಚಿಕೆಗೇಡು. ಅದನ್ನು ಹೇಳುವುದಕ್ಕೆ ನಾಚಿಕೆಯಾಗು ತ್ತದೆ. ನಾವು ಆರಿಸಿ ಬಂದಂಥ ಸದಸ್ಯರಾಗಿದ್ದು ಈ ಬಗ್ಗೆ ಏನು ಮಾಡಿದಿರಿ ಎಂದರೆ ನಮ್ಮ ಕ್ಷೇತ್ರದ ಜನಗಳಿಗೆ ಏನು ಹೇಳಬೇಕು ? ಸಮಾಜಕಲ್ಯಾಣ ಖಾತೆಯ ಮಂತ್ರಿಗಳು ಬಹಳ ಅನುಭವಿಗಳು, ಹಿರಿಯ ರಾಜಕಾರಣಿಗಳು. ಅವರಿಗೆ ಇದೇನೂ ಹೆಚ್ಚಿನದಲ್ಲ. ಅವರು ಮನಸ್ಸು ಮಾಡಿದರೆ ಇಡೀ ಬಜೆಟ್ಟನ್ನೇ ಇತ್ತ ಕಡೆಗೆ ಹೊರಳಿಸುತ್ತಾರೆನ್ನುವ ಧೈರ್ಯವಿದೆ. ಆದರೆ ಆ ಧೈರ್ಯ ಯಾವಾಗ ಬರುತ್ತದೆ ಎಂದು ನೋಡಬೇಕಾಗಿದೆ. ಶ್ರೀಮಾನ್ ಮಲ್ಲಿಕಾರ್ಜುನಸ್ವಾಮಿಯವರಿದ್ದಾಗ ಅವರಿಗೆ ಎಷ್ಟೇ ಸ್ಫೂರ್ತಿ ಯನ್ನು ಕೊಟ್ಟು ಹೇಳಿದರೂ ಕೂಡ ಅವರ ಕಾಲದಲ್ಲಿ ಈ ಇಲಾಖೆಗೆ ಏನೂ ಹೆಚ್ಚಿನ ಸಹಾಯವಾಗಲಿಲ್ಲ. ಆದರೆ ಇವರ ಕಾಲದಲ್ಲಿ ಮಾತ್ರ ಆಗುತ್ತದೆ ಎನ್ನುವುದರಲ್ಲಿ ಶಂಕೆ ಪಡಬೇಕಾಗಿಲ್ಲ.

2–30 P.M.

ನಮ್ಮ ರಾಜ್ಯದಲ್ಲಿ ಹರಿಜನ ಗಿರಿಜನರ ಸಲುವಾಗಿ ಕಲ್ಯಾಣವಾಗಬೇಕೆಂದು ಕೇಂದ್ರ ಸರ್ಕಾರದ ಆದೇಶ ಬಂತು. ಸಮಾಜ ಕಲ್ಯಾಣ ಖಾತೆಯ ಮಂತ್ರಿಗಳಾಗಿದ್ದ ಶ್ರೀ ಅಶೋಕ ಮೆಹತಾ ಅವರು ಹರಿಜನ ಗಿರಿಜನರ ಬಗ್ಗೆ ಏನಾದರೂ ಕ್ರಮ ತೆಗೆದು ಕೊಳ್ಳಬೇಕೆಂದು ಒತ್ತಾಯ ಮಾಡಿದಾಗ ಆ ಜನರ ಕಲ್ಯಾಣಕ್ಕಾಗಿ ಎಲ್ಲಾ ರಾಜ್ಯಗಳಲ್ಲಿಯೂ ಒಂದು ಕಮಿಟಿಯನ್ನು ಮಾಡಬೇಕೆಂದು ನಿರ್ದೇಶನವನ್ನಿತ್ತರು. ಅದರಂತೆ ಹರಿಜನಗಿರಿಜನರ ಕಲ್ಯಾಣಕ್ಕಾಗಿ ಒಂದು ಸಮಿತಿಯನ್ನು ಮೊದಲುಮಾಡಿದವರು ಆಗಿನ ಮುಖ್ಯ ಮಂತ್ರಿಗಳಾದ ಶ್ರೀ ವೀರೇಂದ್ರ ಪಾಟೀಲರು ಹಿಂದೂಸ್ಥಾನದಲ್ಲಿ ಯಾವ ಮುಖ್ಯ ಮಂತ್ರಿಗಳೂ ಜಾರಿಗೆ

(ಶ್ರೀ ಜೆ. ಎಲ್. ಕಬಾಡಿ)

ತರದೆ ಇದ್ದರೂ ಪ್ರಪ್ರಥಮವಾಗಿ ಕರ್ನಾಟಕ ರಾಜ್ಯದಲ್ಲಿ ತಂದುದನ್ನು ನೋಡಿದರೆ ಅವರು ಮಾಡಿರುವ ಕಾರ್ಯಕ್ಕೆ ಅವರನ್ನು ಹೊಗಳತಕ್ಕದ್ದು ನಮ್ಮ ಕರ್ತವ್ಯವೆಂದು ಹೇಳುತ್ತೇನೆ.

"Article 46 of the Constitution says that "the State shall promote with special care the educational and economic interests of the weaker sections of the people, and. in praticular, of the Scheduled castes and the Scheduled Tribes, and shall protect them from social injustice and all forms of exploitation."

ಈ ಸದನದಿಂದ ಹಾಗೂ ವಿಧಾನಪರಿಷತ್ತಿನಿಂದ ೧೨ ಜನ ಸದಸ್ಯರನ್ನು ಆರಿಸಿ ಹರಿಜನ ಗಿರಿಜನರ ಅಭಿವೃದ್ಧಿಗಾಗಿ ಒಂದು ಕಮಿಟಿಯನ್ನು ಮಾಡಿ ಅದು ಕೆಲಸ ಮಾಡುತ್ತಿದೆ. ಶ್ರೀ ರಾಚಯ್ಯನವರು ಅದರ ಚೇರ್ಮನ್‌ರಾಗಿ ಸಾಕಷ್ಟು ಕೆಲಸ ಮಾಡಿದ್ದಾರೆ. ಪ್ರತಿಯೊಂದು ಇಲಾಖೆಯಿಂದಲೂ ಬೇಕಾದ ಮಾಹಿತಿಯನ್ನು ತರಿಸಿ ಅದರ ಬಗ್ಗೆ ಹೆಚ್ಚಿನ ಕಾಳಜಿ ವಹಿಸಿ ರಾಜ್ಯಾಂಗದಲ್ಲಿರುವುದನ್ನು ಕಾರ್ಯಗತ ಮಾಡುವುದಕ್ಕೆ ಸಾಕಷ್ಟು ಆಸಕ್ತಿ ವಹಿಸಿದರು ಅವರು ಚೇರ್ಮನ್‌ರಾಗಿದ್ದ ಕಾಲದಲ್ಲಿ ನಮಗೂ ಕೆಲಸ ಮಾಡುವುದಕ್ಕೆ ಸದವಕಾಶ ಸಿಕ್ಕಿತು. ಈ ಕಮಿಟಿ ಸಬ್ ಕಮಿಟಿಯನ್ನು ಮಾಡಿ, ಅಂಕಿ ಅಂಶಗಳನ್ನು ಸಂಗ್ರಹ ಮಾಡಿ ಎಷ್ಟೋ ಆಕ್ಟಿವಿಟೀಸ್ ಅಡ್ಜಾಯಿನ್ ಮಾಡಿ ಒಂದು ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿ ಅದನ್ನು ಕಾರ್ಯರೂಪಕ್ಕೆ ತರುವುದಕ್ಕೆ ಏನು ನಿವೇದಿಸಿತ್ತೋ ಅದರಂತೆ ಸರ್ಕಾರ ಯಾದೆ ರೀತಿಯ ಕ್ರಮವನ್ನೂ ತೆಗೆದುಕೊಂಡಿಲ್ಲವೆಂದು ಬಹಳ ವಿಷಾದದಿಂದ ಹೇಳಬೇಕಾಗಿದೆ. ಸಮಿತಿಯು ಮುಂವೆ ಒದಗಿಸಿರತಕ್ಕ ಮಾಹಿತಿಯನ್ನು ಸರ್ವಿಸ್ ಮ್ಯಾಟರ್ಸ್ ಬಗ್ಗೆ ಹೇಳಬೇಕು ಎಂದರೆ ೩ನೇ ಮಾರ್ಚ್ ೧೯೭೦ರಲ್ಲಿ ಕ್ಲಾಸ್ ಒಂದರಲ್ಲಿ ೧.೮೯ ಪರ್ಸೆಂಟ್, ಕ್ಲಾಸ್ ಎರಡರಲ್ಲಿ ೩.೩೬ ಪರ್ಸೆಂಟ್, ಕ್ಲಾಸ್ ಮೂರರಲ್ಲಿ ೬.೫೭ ಪರ್ಸೆಂಟ್ ಹಾಗೂ ಕ್ಲಾಸ್ ನಾಲ್ಕರಲ್ಲಿ ೧೧.೯೬ ಪರ್ಸೆಂಟ್ ಇದ್ದು ೧೮ ಪರ್ಸೆಂಟ್ ಯಾವುದರಲ್ಲಿಯೂ ಮುಟ್ಟಿಲ್ಲ. ಏಕೆ ಹೀಗಾಗಿದೆ ಎಂದು ಹೇಳಬೇಕು. ಪೂರ್ತಿ ೦.. ಪರ್ಸೆಂಟ್ ಯಾವಾಗ ಭರ್ತಿಯಾಗುತ್ತದೆ ಕನಸು ನನಸಾಗಬೇಕಾದರೆ ಅದು ಅಸಾಧ್ಯವಾದ ಮಾತು ಎಂದು ಹೇಳಬೇಕಾಗಿದೆ. ಈ ಸಮಾಜದಲ್ಲಿ ಒಳಗೊಂಡಿರತಕ್ಕ ಜನರು ಎಷ್ಟರ ಮಟ್ಟಿಗೆ ಈ ಹಿಂದೂಸ್ಥಾನದಲ್ಲಿದ್ದಾರೆ ಎನ್ನುವುದನ್ನು ಸ್ಪಷ್ಟವಾಗಿ ವಿಚಾರ ಮಾಡಬೇಕಾಗಿದೆ. ಯಾರು ದೇಶಕ್ಕಾಗಿ, ಸ್ವಾತಂತ್ರ್ಯಕ್ಕಾಗಿ ಹರಿಜನರಿಗಾಗಿ ಕಳಕಳಿಯಿಂದ ನಿಷ್ಠೆಯಿಂದ ಹರಿಜನರ ಉದ್ಧಾರಕ್ಕಾಗಿ ಕೆಲಸ ಮಾಡಿದರು ಎಂದು ನೋಡಿದರೆ ಬಾಪೂಜಿಯವರ ಥಕ್ಕರ್ ಬಾಬಾ ಅವರು, ಡಾಕ್ಟರ್ ಅಂಬೇಡ್ಕರ್ ಅವರು, ಜಗಜೀವನರಾಂ ಅವರು, ಡಾಕ್ಟರ್ ಲೋಹಿಯಾ ಅವರು ಇಂಥವರು ಕೆಲವರು ಸಿಕ್ಕುತ್ತಾರೆ. ಇಂಥವರು ಎಷ್ಟು ಜನ ಈ ದೇಶದಲ್ಲಿ ನೋಡುವುದಕ್ಕೆ ಸಿಕ್ಕುತ್ತಾರೆ ಎನ್ನುವುದನ್ನು ವಿಚಾರ ಮಾಡಿದರೆ ಬಹಳ ಕಡಮೆ ಜನ ಎಂದು ಹೇಳಬಹುದು. ಅಸೆಂಬ್ಲಿ ಆರಿಸಿ ಬಂದಿರುವವರಲ್ಲಿ ಎಷ್ಟು ಜನರು ಪ್ರಾಮಾಣಿಕವಾಗಿ ಹರಿಜನ ಗಿರಿಜನರ ಬಗ್ಗೆ ಕಾಳಜಿಯನ್ನು ವಹಿಸುತ್ತಾರೆಂದು ನೋಡಿದರೆ ಅವರ ಸಂಖ್ಯೆ ಬಹಳ ಕಡಮೆ. ಎಷ್ಟೋ ಜನ ಹರಿಜನರ ಅಭಿವೃದ್ಧಿಗಾಗಿ ಬೋರ್ಡಿಂಗ್ ಮತ್ತು ಇತರ ಸಂಸ್ಥೆಗಳನ್ನು ನಡೆಸುತ್ತಿದ್ದಾರೆ. ಆದರೆ ಕೇವಲ ಗ್ರಾಂಟ್‌ಗಾಗಿ ನಡೆಸತಕ್ಕ ಸಂಸ್ಥೆಗಳು ಎಷ್ಟೋ ಇದೆ. ಈ ರೀತಿ ನಡೆಸುವಂಥವು ಎಷ್ಟು ಎನ್ನುವುದನ್ನು ಪತ್ತೆ ಹಚ್ಚಬೇಕಾಗಿದೆ. ಅದಕ್ಕಾಗಿ ಸಮಾಜ ಕಲ್ಯಾಣ ಇಲಾಖೆಯಲ್ಲಿ ಒಂದು ವಿಜಿಲೆನ್ಸ್ ತೂಡ ಬೇಕು ಎಂದು ಒತ್ತಾಯದಿಂದ ಹೇಳುತ್ತ ಇದ್ದೇನೆ. ಸಮಾಜದಲ್ಲಿ ಸಾಕಷ್ಟು ದುರ್ವ್ಯವಹಾರ, ದುರ್ನೀತಿ ಮತ್ತು ದುರಾಡಳಿತ ಎನ್ನುವಂಥದ್ದು ಸೋಷಿಯಲ್ ವರ್ಕ್ಸ್‌ನಲ್ಲಿ ನಡೆಯುತ್ತಿದೆ ಎನ್ನುವ ಮಾತನ್ನು ಹೇಳಬೇಕಾಗಿದೆ. ಸರ್ವಿಸ್ ವಿಷಯದಲ್ಲಿ ೧ನೇ ನವೆಂಬರ್ ೧೯೫೬ ರಿಂದ ೧ನೇ ಏಪ್ರಿಲ್ ೧೯೭೨ರವರೆಗೆ ನೋಡಿದರೆ ಕ್ಲಾಸ್ ಒಂದರಲ್ಲಿ ೧೯೫೬ರಲ್ಲಿ ಏನೂ ಇಲ್ಲ ೧೯೭೨ಕ್ಕೆ ೪ ಪರ್ಸೆಂಟ್ ಮಾತ್ರ, ಕ್ಲಾಸ್ ಎರಡರಲ್ಲಿ ೨ ಪರ್ಸೆಂಟ್ ಮತ್ತು ಕ್ಲಾಸ್ ಮೂರರಲ್ಲಿ ೧೨ ಪರ್ಸೆಂಟ್ ೧೯೫೬ರಲ್ಲಿತ್ತು ೧೯೭೨ರಲ್ಲಿ ೭.೮೨ ಇತ್ತು, ಹೀಗೆ ಪ್ರತಿಯೊಂದು ಬಾಬತ್ತಿನಲ್ಲಿಯೂ ಹರಿಜನ ಗಿರಿಜನರಿಗೆ ಸಾಕಷ್ಟು ಪ್ರಾತಿನಿಧ್ಯ ದೊರೆತ್ತಿಲ್ಲ. ಸೆಕ್ರಟೇರಿಯಟ್ ತೆಗೆದುಕೊಂಡರೆ, ಸೆಕ್ರಟರಿಗಳು, ಡೆಪ್ಯುಟಿ ಸೆಕ್ರೆಟರಿಗಳು ಷೆಡ್ಯೂಲ್ ಕ್ಯಾಸ್ಟ್‌ನಲ್ಲಿ ಯಾರೂ ಇಲ್ಲವೇ ಇಲ್ಲ, ಎಂದರೆ ಕೇವಲ ಸವರ್ಣೀಯರನ್ನು ತುಂಬಬೇಕು, ಅವರೇ ಮುಂವೆ ಬರಬೇಕು, ಉಳಿದ ಜಾತಿಯವರು ಯಾರೂ ಮುಂದೆ ಬರಬಾರದು, ಅವರು ಯಾರೂ ಅಧಿಕಾರಿಗಳಾಗಬಾರದು, ಎನ್ನುವ ಭಾವನೆ ಸೆಕ್ರೇಟೇರಿಯಟ್‌ನಲ್ಲಿಯೋ ಏನೋ ಗೊತ್ತಿಲ್ಲ. ಸೆಕ್ರಟರಿ ಮತ್ತು ಡೆಪ್ಯುಟಿ ಸೆಕ್ರಟರಿ ಆಗುವುದಕ್ಕೆ ಯಾರೂ ಅರ್ಹರಾದವರಿಲ್ಲವೋ ಎಂದು ವಿಚಾರ ಮಾಡುತ್ತಿದ್ದೇವೆ. ಷೆಡ್ಯೂಲ್ ಕ್ಯಾಸ್ಟ್ ಮತ್ತು ಮತ್ತು ಷೆಡ್ಯೂಲ್ ಟ್ರೈಬ್ಸ್‌ನಲ್ಲಿ

ಯಾರೂ ಇಲ್ಲ. ಕ್ಲಾಸ್ ಎರಡರಲ್ಲಿ ಸಹಿತ ಯಾರೂ ಇಲ್ಲ. ಅದರಂತ ಜಾಯಿಂಟ್ ಸೆಕ್ರೆಟರಿಗಳು ೧ನೇ ನವೆಂಬರ್ ೧೯೫೬ ರಿಂದ ೩೧ನೇ ಡಿಸೆಂಬರ್ ೧೯೭೩ರವರೆಗೂ ಯಾರೂ ಇಲ್ಲ. ಪ್ರಮೋಷನ್ ಬೈ ಸೆಲೆಕ್ಷನ್ ಮತ್ತು ಪ್ರಮೋಷನ್ ಬೈ ಸೀನಿಯಾರಿಟಿ ಕಂ ಮೆರಿಟ್ ಆದರೊಳಗೂ ಯಾರೂ ಇಲ್ಲ. ಹರಿಜನ ಗಿರಿಜನ ಅಧಿಕಾರಿಗಳೇ ಇಲ್ಲವೆಂದ ಮೇಲೆ ಪ್ರಮೋಷನ್ ಮೇಲೆ ಯಾರೂ ಬರುವುದಕ್ಕೆ ಸಾಧ್ಯವೇ ಇಲ್ಲ ಎನ್ನುವ ಮಾತನ್ನು ಹೇಳುತ್ತೇನೆ. ಇದರ ಜೊತೆಗೆ ಇನ್ನೊಂದು ಬಹಳ ವಿಚಿತ್ರವಾದ ಸಂಗತಿಯನ್ನು ಹೇಳಬೇಕಾಗುತ್ತದೆ. ರಾಜ್ಯದಲ್ಲಿ ಕೇಡರ್ ಮತ್ತು ರಿಕ್ರೂಟ್‌ಮೆಂಟ್ ರೂಲ್ಸ್ ಮಾಡಿರುವಂಥ ೬೦ ಇಲಾಖೆಗಳಿವೆ ಹಾಗೂ ಕೇಡರ್ ಮತ್ತು ರಿಕ್ರೂಟ್‌ಮೆಂಟ್ ರೂಲ್ಸ್ ಮಾಡದೆ ಇರುವಂಥ ಇಲಾಖೆಗಳು ೧೦ ಇವೆ. ಅವು ಯಾವುವು ಎನ್ನುವುದನ್ನು ನಾನು ಹೇಳುತ್ತೇನೆ.

Mysore Bhavan, Delhi Bhavan, Directorate of Indo-Danish Project, Home Guards and Civil Defence Organisation, Drugs Control Departmet, Department of Text-Books, Department of Pre-University Education, Marketing Department and in the Depaptment of Weights and Measures.

ಈ ಡಿಪಾರ್ಟ್‌ಮೆಂಟುಗಳಿಗೆ ಇನ್ನೂ ಕೇಡರ್ ಹಾಗೂ ರೆಕ್ರೂಟ್‌ಮೆಂಟ್ ರೂಲ್ಸನ್ನು ಮಾಡಲಾಗಿಲ್ಲ. ಇದರಿಂದಾಗಿ ಇದರಲ್ಲಿ ಎಷ್ಟು ಪರ್ಸೆಂಟ್ ಷೆಡ್ಯೂಲ್ ಕ್ಯಾಸ್ಟ್ ಹಾಗೂ ಟ್ರೈಬ್ಸ್ ವರ್ಗಗಳಿಗೆ ಸಿಕ್ಕಿದೆ ಎಂದು ಹೇಳುವುದಕ್ಕಾಗುವುದಿಲ್ಲ. ಇದೊಂದು ದುರ್ದೈವದ ಸಂಗತಿ, ಇದರ ಬಗ್ಗೆ ನಮ್ಮ ಆಡಳಿತ ನಡೆಸತಕ್ಕ ಅಧಿಕಾರಿಗಳು ಯಾವ ಕಾರ್ಯಕ್ರಮ ಕೈಗೊಂಡಿದ್ದಾರೆ ಎಂದು ಸಮಿತಿಯ ವರದಿ ಕೂಡ ಈ ಲೆಜಿಸ್ಲೇಚರಿನಲ್ಲಿ ಬಂದಿದೆ ಮತ್ತು ಇದರ ಬಗ್ಗೆ ರಿಪೋರ್ಟನ್ನು ಕಾಲ್‌ಫಾರ್ ಮಾಡಿದ್ದೇವೆಂದು ಹೇಳಿದ್ದರು. ರಿಪೋರ್ಟು ಬಂದಿದೆಯೋ ಅದರ ಬಗ್ಗೆ ಏನಾದರೂ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದಾರೆಯೋ ಮತ್ತು ಅದನ್ನು ಇಲ್ಲಿಯವರೆಗೆ ಎಷ್ಟು ಇಂಪ್ಲಿಮೆಂಟು ಮಾಡಿದ್ದೀರಿ ಎಂದು ನಾನು ಕೇಳಬೇಕಾಗಿದೆ. ಇನ್ನು ಯೂನಿವರ್ಸಿಟಿ ಬಗ್ಗೆ ಹೇಳಬೇಕಾದರೆ ನಮ್ಮ ರಾಜ್ಯದಲ್ಲಿ ಯೂನಿವರ್ಸಿಟಿ ಬಿಲ್ಲೇನೋ ಬಂದು ಇಲ್ಲಿ ಪಾಸಾಯಿತು. ಆದರೆ ಇದರಲ್ಲಿ ಕೂಡ ನೋಡಿದರೆ ಹಿಂದುಳಿದ ವರ್ಗಗಳವರಿಗೆ ಯಾವ ರಿಸರ್ವೇಷನ್ ಕೂಡ ಮಾಡಿಲ್ಲ. ಇದನ್ನು ಇಲ್ಲಿನ ಅಧಿಕಾರಿಗಳು ಸ್ಪಷ್ಟವಾಗಿ ದುರುಪಯೋಗ ಮಾಡಿಕೊಂಡಿದ್ದಾರೆ ಮತ್ತು ಹಿಂದುಳಿದ ಹರಿಜನ ಹಾಗೂ ಗಿರಿಜನರಿಗೆ ಸಾಕಷ್ಟು ಅನ್ಯಾಯವಾಯಿತು. ಇದನ್ನು ಕೇಳಿದರೆ ನಮ್ಮ ಯೂನಿವರ್ಸಿಟಿ ಆಕ್ಟಿನಲ್ಲಿ ಯಾವುದೂ ಇಂತಹ ಪ್ರಾವಿಷನ್ ಇಲ್ಲ ಎಂದು ಹೇಳುತ್ತಾರೆ. ಅಲ್ಲದೆ ಯಾವುದಾದರೂ ಕೆಲಸಕ್ಕೆ ಇಲ್ಲಿ ಹಿಂದುಳಿದ ವರ್ಗಗಳವರನ್ನು ತೆಗೆದುಕೊಳ್ಳಬೇಕಾದರೆ ಮಾನವೀಯ ದೃಷ್ಟಿಯಿಂದ ತೆಗೆದುಕೊಳ್ಳುವುದಿಲ್ಲ. ಇದರಲ್ಲಿ ನಿಯಮಿಸತಕ್ಕ ಕ್ವಾಲಿಫಿಕೇಷನ್ ಇಲ್ಲ. ಇದಕ್ಕೋಸ್ಕರ ನಿಮ್ಮನ್ನು ತೆಗೆದುಕೊಳ್ಳುವುದಿಲ್ಲ ಎಂದು ಹೇಳುತ್ತಾರೆ. ಇಲ್ಲಿನ ಅಧಿಕಾರಿಗಳು ಯಾವ ಜಾತಿಯವರೋ ಅವರಿಗನುಕೂಲವಾದವರನ್ನೇ ಇಲ್ಲಿಗೆ ನೇಮಕ ಮಾಡಿಕೊಳ್ಳುತ್ತಾರೆ. ಅಲ್ಲದೆ ಯೂನಿವರ್ಸಿಟಿಯಲ್ಲಿ ಅಡ್ಮಿಷನ್‌ಗಾಗಿ ಈ ವರ್ಗದವರು ಹೋದಾಗ ಅವರಿಗೆ ಅನುಭವ ಹಾಗೂ ಶಕ್ತಿ ಇದೆಯೋ ಎಂದು ಕೇಳುತ್ತಾರೆ. ಯೂನಿವರ್ಸಿಟಿಯಲ್ಲಿ ಅಡ್ಮಿಷನ್ ಆಗಿ ಬಂದ ಮೇಲೆ ಯೂನಿವರ್ಸಿಟಿಯವರು ಶಕ್ತಿ ಹಾಗೂ ಅನುಭವವನ್ನು ಕೂಡುವವರಲ್ಲವೇ ? ಇಂತಹ ಪ್ರಶ್ನೆಯನ್ನು ಹಿಂದುಳಿದ ವರ್ಗದವರನ್ನು ಕೇಳಿದರೆ ಅದು ಸರಿಯೇ ? ಹಾಗೇ ಐ. ಎ. ಎಸ್. ವರ್ಗಕ್ಕೆ ಸೆಲೆಕ್ಷನ್‌ಗಳನ್ನು ಮಾಡುವಾಗ ೧೯೫೭ರಿಂದ ೧೯೭೪ರವರೆಗೆ ನೋಡಿದರೆ ನಮ್ಮ ಸ್ಟೇಟಿನಿಂದ ಒಟ್ಟು ೪೫ ಜನರನ್ನು ಸೆಲೆಕ್ಟ್ ಮಾಡಿದ್ದರೆ ಅದರಲ್ಲಿ ನಾಲ್ಕು ಜನರು ಮಾತ್ರ ಹಿಂದುಳಿದ ವರ್ಗದವರಿದ್ದರು ಎಂದು ಸರಕಾರದ ಪಟ್ಟಿಯಿಂದ ಗೊತ್ತಾಗುತ್ತದೆ.

ಈ ನಾಲ್ಕು ಜನರು ಕೂಡ ಈಗ ಇಲ್ಲ. ಶ್ರೀ ಲಿಂಗಯ್ಯ, ಮಾದಯ್ಯ ಶ್ರೀ ಡಿ. ಕೃಷ್ಣಾ ಮತ್ತು ಇನ್ನೊಬ್ಬರು ಇದ್ದರು ಈಗ ಇವರು ಯಾರೂ ಇಲ್ಲ. ಈ ನಾಲ್ಕು ಜನರಿಗೆ ಐ. ಎ. ಎಸ್. ಸೆಲೆಕ್ಷನ್‌ಗೆ ಕೂಡ ಶಿಫಾರಸನ್ನು ಮಾಡಿರಲಿಲ್ಲ. ಇದುವರೆಗೆ ಮಾಡಿರುವ ಆಯ್ಕೆಗಳೆಲ್ಲಾ ಜಾತೀಯ ಆಧಾರಗಳ ಮೇಲೆಯೇ ಆಗಿವೆ. ಮೊದಲಿಂದಲೂ ಈ ರಾಜ್ಯದಲ್ಲಿ ಯಾವ ಜಾತಿಯವರು ಅಧಿಕಾರಿಗಳಾಗಿರುತ್ತಾರೋ ಅವರ ಜಾತಿಯವರನ್ನೇ ಹೆಚ್ಚಾಗಿ ಪ್ರೋತ್ಸಾಹ ಅವರುಗಳು ಬರುವಂತೆ ನೇಮಕಗಳನ್ನು ಮಾಡಿಕೊಳ್ಳುತ್ತಾರೆ. ಅಲ್ಲದೆ ಹಿಂದುಳಿದ ವರ್ಗಗಳವರನ್ನು ಶಿಫಾರಸು ಮಾಡುವಾಗ ಅದರ ಬಗ್ಗೆ ಇಲ್ಲದೆ ಕೊಕ್ಕೆಗಳನ್ನೂ ಅಧಿಕಾರಿಗಳ ಮಾಡುತ್ತಿರುವುದರಿಂದ ಹಿಂದುಳಿದ ವರ್ಗಗಳವರಿಗೆ ಯಾರೂ ಇದರಲ್ಲಿ ಬರಲಾಗಲಿಲ್ಲ. ಅಲ್ಲದೆ ಇಂದು ಇರುವ ಆಡಳಿತದಲ್ಲಿ ಜಾತೀಯ ಭಾವನೆಯೇ ಬೆಳೆಯಲು ಅವಕಾಶವಾಗಿದೆ. ಆ ರೀತಿ ಬರಬಾರದು. ಇದೊಂದು ವಿಷಾದದ ಸಂಗತಿ. ಇನ್ನೊಂದು ಸಂಗತಿ ಎಂದರೆ ಹಿಂದುಳಿದ ವರ್ಗಗಳು ಎಂದರೆ ಎಸ್ ಸಿ ಹಾಗೂ ಎಸ್ ಟಿ ವರ್ಗಗಳವರ ಪರ್ಸೆಂಟೇಜು ಹೇಗಿದೆ ಎಂದರೆ ೩೧-೩-೧೯೭೪ರಿಂದ

(ಶ್ರೀ ಜೆ. ಎಲ್. ಕಬಾಡಿ)

ಇಲ್ಲಿಯವರೆಗೆ ನೋಡಿದರೆ ಒಂದನೇ ವರ್ಗದಲ್ಲಿ ೫೬.೮೯ ಎರಡನೇ ವರ್ಗದವಲ್ಲಿ ೪.೭೨, ಮೂರನೇ ವರ್ಗದಲ್ಲಿ ೬.೩೮ ಮತ್ತು ನಾಲ್ಕನೇ ವರ್ಗದಲ್ಲಿ ೧೪.೬೬ ಷೆಡ್ಯೂಲು ಟ್ರೈಬ್ಸ್‌ನಲ್ಲಿ ೧.೩೩ ಸಹಿತ ಇಲ್ಲ. ಇನ್ನು ರೆಗ್ಯುಲರ್ ಸರ್ವಿಸಸ್‌ನಲ್ಲಿ ನೋಡಿದರೆ ಲೋಕಲ್ ಕ್ಯಾಂಡಿಡೇಟ್ಸ್‌ಗಳು ಎಂದು ನೇಮಕ ಮಾಡಿಕೊಳ್ಳುತ್ತಾರೆ. ಇವರಲ್ಲಿ ತಮ್ಮ ತಮ್ಮ ಜಾತಿಯವರನ್ನೇ ತುಂಬಿಕೊಳ್ಳುತ್ತಿದ್ದಾರೆ. ಸ್ವಾತಂತ್ರ್ಯ ಬಂದು ಸುಮಾರು ಇಪ್ಪತ್ತು ವರ್ಷಗಳಾದರೂ ಕೂಡ ಇನ್ನು ಷೆಡ್ಯೂಲು ಕ್ಯಾಸ್ಟ್ ರೆಪ್ರಸೆಂಟೇಷನ್ ಸರಿಯಾಗಿ ಬರಲಿಲ್ಲ. ಹೀಗಿರುವಂತೆ ಆದರೆ ಬರುವ ಇಪ್ಪತ್ತು ವರ್ಷಗಳಾದರೂ ಇವರಿಗೆ ಸರಿಯಾದ ಪ್ರಾತಿನಿಧ್ಯ ಸಿಗುವುದೂ ಇಲ್ಲ ಎಂದು ತೋರುತ್ತೆ. ಸ್ಥಳೀಯ ಅಧಿಕಾರಿಗಳು ನೇಮಕ ಮಾಡುವಾಗ ಅವರ ಊರಿನಲ್ಲಿ ತಮಗೆ ಬೇಕಾದವರನ್ನೆ ನೇಮಕ ಮಾಡಿಕೊಳ್ಳುತ್ತಾರೆ ಆಮೇಲೆ ಅವರನ್ನೇ ರೆಗ್ಯುಲರೈಸು ಮಾಡುತ್ತಾರೆ. ಈ ರೀತಿಯಾದರೆ ಇನ್ನು ಮುಂದೆ ಇವರಿಗೆ ಸರಿಯಾದ ಪರ್ಸೆಂಟೇಜು ಸಿಗುವುದೋ ಇಲ್ಲವೋ ಗೊತ್ತಿಲ್ಲ. ಲೋಕಲ್ ಕ್ಯಾಂಡಿಡೇಟರುಗಳಲ್ಲಿ ಹೆಚ್ಚು ಜನರು ಎಸ್ ಸಿ ಹಾಗೂ ಎಸ್ ಟಿ ವರ್ಗದವರು ಇದ್ದಾರೋ ಇಲ್ಲವೋ ಅದನ್ನೂ ಸ್ಪಷ್ಟವಾಗಿ ಹೇಳಲಿಲ್ಲ. ನಾನು ನೋಡಿರುವಂತೆ ಡಿಪಾರ್ಟುಮೆಂಟಿಗೆ ನೋಡಿದರೆ ಮೇಲೆ ಯಾವ ಅಧಿಕಾರಿಗಳು ಇರುತ್ತಾರೆ ಅವರ ಜನರೇ ಇಲ್ಲಿರುತ್ತಾರೆ. ನೂರಕ್ಕೆ ನೂರರಷ್ಟು ಅವರೇ ಇರುವರು. ಹರಿಜನರು ಹಾಗೂ ಗಿರಿಜನರಲ್ಲದೆ ಇತರ ಹಿಂದುಳಿದ ವರ್ಗಗಳವರೂ ಇದ್ದಾರೆ. ಬ್ಯಾಕ್‌ವರ್ಡ್ ಕ್ಲಾಸುಗಳವರು ಇದ್ದಾರೆ ಕೊರಚರು, ಗೊಲ್ಲರು, ಕೊರಮರು ಹೀಗೆನೂರಾರು ಹಿಂದುಳಿದ ವರ್ಗಗಳು ಇದ್ದರು ಇವರಿಗೂ ಕೂಡ ಸರಿಯಾದ ಶೇಕಡವಾರುಪ್ರಾತಿನಿಧ್ಯ ದೊರಕಲಿಲ್ಲ ನನಗೆ ಗೊತ್ತಿರುವಂತೆ ಅನೇಕ ಕಡೆಗಳಲ್ಲಿ ಹಿಂದುಳಿದ ವರ್ಗಗಳವರು ಸಿಗಲಿಲ್ಲ ಎಂದು ಇತರ ವರ್ಗದವನ್ನು ಅಲ್ಲಿ ನೇಮಕ ಮಾಡಿರುತ್ತಾರೆ. ಇದಕ್ಕೆ ಕಾರಣ ಅವರು ಹೇಳುವುದು ವರ್ಗದಲ್ಲಿ ಯೋಗ್ಯರಾದ ಕ್ಯಾಂಡಿಡೇಟರುಗಳು ಸಿಗಲಿಲ್ಲ ಎಂದು ಹೇಳುತ್ತಾರೆ. ಸರಕಾರಕ್ಕೆ ನಾನುಇದನ್ನು ಎಷ್ಟೋ ಸಲ ಅವರ ಗಮನಕ್ಕೂ ತಂದಿದ್ದೇನೆ. ಸರಕಾರಕ್ಕೆ ಕಳಕಳಿಯಿಂದ ವಿನಂತಿ ಮಾಡುವುದು ಇವನ್ನು ಸರಿಪಡಿಸಬೇಕೆಂದು ಹೇಳುತ್ತೇನೆ.

ಸುಮಾರು ಇಪ್ಪತ್ತೈದು ಕೋಟಿಯಷ್ಟು ಬಡ್ಜೆಟ್ಟಿನಲ್ಲಿ ಹಿಂದುಳಿದ ವರ್ಗಗಳಿಗಾಗಿ ಒದಗಿಸಿದ್ದಾರೆ. ಇದೇ ಇಲಾಖೆಯಲ್ಲಿ ಹಿಂದೆ ಮಂತ್ರಿಗಳಾಗಿದ್ದ ಶ್ರೀ ಮಾನ್ ಬಸವಲಿಂಗಪ್ಪನವರು ಇವರ ಬಗ್ಗೆ ಹೆಚ್ಚು ಲಕ್ಷ್ಯ ಕೊಟ್ಟು ಕೆಲವಾರು ಸಲಹೆಗಳನ್ನೂ ಹಾಗೂ ಸೂಚನೆಗಳನ್ನೂ ಮುಖ್ಯ ಮಂತ್ರಿಗಳಿಗೆ ಕೊಟ್ಟಿದ್ದಾರೆ. ಅವರು ೩೦-೧-೧೯೭೪ರಲ್ಲಿ ಕೊಟ್ಟಿರುವ ರಿಪೋರ್ಟು ಸರಕಾರದ ಮುಂದೆ ಇದೆ. ಅದರಂತೆ ನಾನು ತಮ್ಮಲ್ಲಿ ಹೇಳುವುದು ರಾಜ್ಯದಲ್ಲಿ ಯಾರಿಗೂ ಅನ್ಯಾಯವಾಗದ ರೀತಿಯಲ್ಲಿ ನ್ಯಾಯವಾಗಿ ನೀವು ನೋಡಿಕೊಳ್ಳಿ ಎಂದು ಇಲ್ಲಿ ಸ್ಪಷ್ಟವಾಗಿ ಹೇಳುತ್ತಿದ್ದೇನೆ. ನಾವು ನಮ್ಮ ಕಮಿಟಿ ಮೂಲಕ ಕೆಲವು ಸಲಹೆಗಳನ್ನು ಸರಕಾರಕ್ಕೆ ಮಾಡಿದ್ದರೂ ಕೂಡ ಇದುವರೆಗೆ ಸರಕಾರ ಯಾವುದನ್ನೂ ಕಾರ್ಯಗತವಾಗುವ ಹಾಗೆ ಮಾಡಲಿಲ್ಲ ಎನ್ನುವುದು ಇದರಿಂದ ಸ್ಪಷ್ಟವಾಗುತ್ತದೆ. ಇದರಲ್ಲಿ ಪೀಪಲ್ಸ್ ಹೌಸಿಂಗ್ ಸ್ಕೀಂ ಇನ್ ದಿ ರೂರಲ್ ಏರಿಯಾಸ್ ಬರುತ್ತದೆ. ಈ ಬಾಗದಲ್ಲಿ ೧೯೭೩-೭೪ರಲ್ಲಿ ಒದಗಿಸಿದ್ದು ಐದು ಕೋಟಿ ರೂಪಾಯಿಗಳು ಎಂದು ಏಕೆ ಇಷ್ಟು ಖರ್ಚು ಮಾಡಿದ್ದಾರೆ. ಇದಲ್ಲದೆ ಇತರ ಹೌಸಿಂಗು ಕನ್‌ಸ್ಟ್ರಕ್ಷನ್ ಸ್ಕೀಂಗೂ ಇವೆ, ಹೌಸಿಂಗು ಬೋರ್ಡಿನವರು ಮಾಡುವ ಯೋಜನೆಗಳೂ ಇವೆ ಹಾಗೂ ಇನ್ನಿತರ ಪ್ರೈವೇಟು ಹೌಸಿಂಗು ಸ್ಕೀಂಗಳೂ ಇವೆ ಇದರ ಬಗ್ಗೆ ಸರಕಾರದ ಆದೇಶ ಡಿಪಿಸಿ ೩೩೩ ಡಿಹೆಚ್‌ಪಿ ೭೩ ತಾ॥ ೯-೧೧-೧೯೭೬ ರಲ್ಲಿ ಹೊರಡಿಸಲಾಗಿದೆ. ಇದರಂತೆ ಇನ್ನೊಂದು ಸರಕಾರದ ಆದೇಶ ಡಿ ಪಿ ಸಿ ೧೪ ಡಿ ಸಿ ಹೆಚ್ ೭೨ ತಾರೀಖು ೯-೧-೧೯೭೩ರಲ್ಲಿ ಹೊರಡಿಸಲಾಗಿದೆ. ಇದರಂತೆ ಸರಕಾರ ಅವರ ಶಿಫಾರಸುಗಳನ್ನು ಕಾರ್ಯಗತ ಮಾಡಿದೆಯೋ ಎಂದು ನಾನು ಇಲ್ಲಿ ಕೇಳಬಯಸುತ್ತೇನೆ. ಇದರಲ್ಲಿ ಹಿಂದುಳಿದ ವರ್ಗದವರಿಗೆ ಮೈನಾರಿಟಿಯಲ್ಲಿರುವವರೆಗೆ ಹಾಗೂ ಷೆಡ್ಯೂಲು ಕ್ಯಾಸ್ಟ ಹಾಗೂ ಷೆಡ್ಯೂಲ್ ಟ್ರೈಬ್ಸ್ ವರ್ಗದವರಿಗೆ ಇಂತಿಷ್ಟು ಮನೆಗಳನ್ನು ಕೊಡಬೇಕೆಂದು ಆದೇಶದಲ್ಲಿ ಕೊಟ್ಟಿದ್ದಾರೆ. ಇದರ ಪ್ರಕಾರ ವಿಚಾರ ಮಾಡುವಾಗ ಹರಿಜನ ಹಾಗೂ ಗಿರಿಜನರಿಗೆ ಹಾಗೂ ಇತರ ಹಿಂದುಳಿದ ವರ್ಗಗಳವರಿಗೆ ರಿಸರ್ವೇಷನ್ ಕೊಟ್ಟಿದ್ದಾರೆಯೋ ಹೇಗೆ ಎಂದರೆ ನನಗೆ ತಿಳಿದಿರುವ ಪ್ರಕಾರ ಬಿಜಾಪುರ ಡಿವಿಜನ್‌ನಲ್ಲಿ ಹಾಗೂ ಗುಲ್ಬರ್ಗಾ ಡಿವಿಜನ್‌ನಲ್ಲಿ ಕೊಟ್ಟಿರುವುದನ್ನು ನೋಡಿದರೆ ಕೇವಲ ಇವರಲ್ಲಿ ರಾಜಕೀಯ ಬಣ್ಣವಿರುವವರಿಗೆ ಲಾಭವಾಗಿದೆ ಹಾಗೂ ಯಾವ ಜಾತಿಯವರು ಪ್ರಭಾವವುಳ್ಳವರಾಗಿರುತ್ತಾರೋ ಅವರಿಗೆ ಮನೆಗಳು ಸಿಕ್ಕಿವೆ. ಆದರೆ ಹಿಂದುಳಿದ ಬಡಜನರಿಗೆ ಹಾಗೂ ನಿಮ್ನವರ್ಗದವರಿಗೆ ಸಿಕ್ಕಿರುವುದು ಬಹಳ ಕಡಿಮೆ ಎಂದು ಈ ಸಂದರ್ಭದಲ್ಲಿ ಸ್ಪಷ್ಟವಾಗಿ ಹೇಳುತ್ತೇನೆ.

ಅಷ್ಟೇ ಅಲ್ಲ, ೩,೫೫,೦೦೦ ಜಾಗಗಳನ್ನು ಬಡ ಜನತೆಗಾಗಿ ಹಂಚಬೇಕು ಎನ್ನುವ ಮಾತನ್ನು ಈ ಸದನದಲ್ಲಿ ಸರಕಾರದ ಪರವಾಗಿ ಹೇಳಿದರು. ನಿಮ್ಮ ಸ್ಕೀಂ ಇಂಪ್ಲಿಮೆಂಟ್ ಆಗಿದೆಯೋ ಎಂದು ವಿಚಾರ ಮಾಡಿಕೊಳ್ಳಿ. ಏಕೆಂದರೆ, ನನಗೆ ಗೊತ್ತಿದೆ, ಇಲ್ಲಿ ಡೆಪ್ಯುಟಿ ಕಮಿಷನರ್ ಮೀಟಿಂಗ್ ಕರೆದಾಗ ಹೇಳಿ

ದರು, The Deputy Commissioner informed me at the meeting that he was instructed not to form sites as per the previous Government Order without first obtaining permission from the Revenue Department. ಯಾವ ಡೆಪ್ಯುಟಿ ಕಮಿಷನರ್ ಹೀಗೆ ಹೇಳಿದ್ದಾರೆಂದು ಹೇಳುತ್ತೇನೆ. ಆದರೆ, ನಿಮ್ಮ ರೆವಿನ್ಯೂ ಇಲಾಖೆಯವರು ಈ ಜನರಿಗೆ ಅಗತಕ್ಕ ಸವಲತ್ತುಗಳನ್ನು ಒದಗಿಸಬೇಕೆನ್ನುವ ಮನಸ್ಸು ಇದ್ದರೂ, ಅಲ್ಲಿರತಕ್ಕ ಸೆಕ್ರೆಟರಿಗಳು ಯಾವ ಕಾಳಜಿ ಮಾಡುತ್ತಾರೆ ಎನ್ನುವ ಮಾತು ಸ್ಪಷ್ಟವಾಗಿ ವಿಚಾರಣೆ ನಡೆಸಬೇಕು ಅಧಿಕಾರಿಗಳು ಮನಸ್ಸು ಮಾಡಿದರೆ, ಬೇಕಾದಷ್ಟು ಮಾಡುತ್ತಾರೆ. ಆದರೆ ಹರಿಜನ ಗಿರಿಜನರಿಗೆ ಸಿಕ್ಕತಕ್ಕ ಸೌಲಭ್ಯಗಳನ್ನು ರೆವಿನ್ಯೂ ಡಿಪಾರ್ಟ್‌ಮೆಂಟಿನ ಪರ್ಮಿಷನ್ ಇಲ್ಲದೆ ನಾನು ಮಾಡುವುದಕ್ಕಾಗುವುದಿಲ್ಲವೆಂದು ಡಪ್ಯುಟಿ ಕಮಿಷನವರು ಹೇಳುತ್ತಾರೆ. ರೆವಿನ್ಯೂ ಡಿಪಾರ್ಟ್‌ಮೆಂಟಿನವರು ಕೊಡಬೇಡಿ ಎಂದು ಸರ್ಕ್ಯುಲರ್ ಕೊಟ್ಟಿದ್ದಾರೆ. ಅದರ ಬಗ್ಗೆ ಕಾನೂನು ಮೇಲೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಅಧ್ಯಕ್ಷರ ಮುಖಾಂತರ ವಿನಂತಿ ಮಾಡಿಕೊಳ್ಳುತ್ತೇನೆ. The Deputy Commissoner Mandya District, said at the meeting that he could not form sites or acquire any land in the entire District until and unless both the Ministers of Revenue and Industry inspected each case in every village. This is the reply which that Deputy Commissioner has given to the Minister.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಅಧ್ಯಕ್ಷರೇ. ಈ ವಿಷಯದಲ್ಲಿ ನಾನು ಈಗಾಗಲೇ ಹೇಳಿದ್ದೇನೆ. ಮೊದಲು, ಜಿಲ್ಲೆಯಿಂದ ಡೆಪ್ಯುಟಿ ಕಮಿಷನರರವರ ಪ್ರಪೋಸಲ್ ಬಂದಂಥ ಅಕ್ವಿಜಿಷನ್ ಕೇಸುಗಳಲ್ಲಿ ತೀರಾ ವ್ಯಾಜ್ಯಗಳು ಇದ್ದುದರಿಂದ, ನಾನು ಬಂದು ಸ್ಥಳ ಅಜಮಾಯಿಷಿ ಮಾಡುವವರೆಗೆ ಈ ಸ್ಥಳ ಡಿಸೈಡು ಮಾಡಬೇಡಿ ಎಂದು ಹೇಳಿದ್ದು ನಿಜ. ಸ್ಥಳದಲ್ಲಿಯೇ ಹಕ್ಕಿನ ರೆಕಾರ್ಡ್ ತರಿಸಿ ನೋಡಿದ್ದರಲ್ಲಿ ಬಹು ಭಾಗ, ಸುಮಾರು ೨೮-೩೦ ಬಿಟ್ಟು ಉಳಿದೆಲ್ಲವನ್ನೂ ತೀರ್ಮಾನ ಮಾಡುವುದಕ್ಕೆ ಸಾಧ್ಯವಿದ್ದುದರಿಂದ, ಅವುಗಳನ್ನು ತೀರ್ಮಾನ ಮಾಡಿ, ಉಳಿದದ್ದನ್ನು ನಾನು ಬಂದು ನೋಡುತ್ತೇನೆ ಎಂದು ಹೇಳಿದ್ದೆ. ಅದನ್ನೂ ಕೂಡ ಈಗಾಗಲೇ ತೀರ್ಮಾನ ಮಾಡಿದ್ದೇವೆ. ಇನ್ನು ಕೇವಲ ೧೦-೧೫ ಮಾತ್ರ ಉಳಿದಿವೆ. ಉಳಿದ ಕೇಸುಗಳಲ್ಲಿಯೂ ಜಾಗ್ರತೆ ತೀರ್ಮಾನ ಕೈಗೊಳ್ಳುತ್ತಿದ್ದೇವೆ ಇದು ಇರತಕ್ಕ ಅಂಶ.

SRI T. L. KABADI.—The Deputy Commissioner, Bangalore District, on 14-11-1973 has reiviewed the progress in the site distribution programme in the State. ಎಂದು ಬಸವಲಿಂಗಪ್ಪನವರು ಸ್ಪಷ್ಟವಾಗಿ ಹೇಳಿ, ೩೦ನೇ ಜನವರಿ ೧೯೭೪ ರಂದು ಮುಖ್ಯ ಮಂತ್ರಿಗಳಿಗೆ ಕಾಗದ ಬರೆದು ಈ ತರಹ ನಡೆಯುತ್ತಿದೆ, ಇದನ್ನು ಕೂಲಂಕಷವಾಗಿ ವಿಚಾರ ಮಾಡಿ, ಕಾರ್ಯಕ್ರಮ ಕೈಗೊಳ್ಳಿ ಎಂದು ಹೇಳಿದ್ದಾರೆ. ಸ್ಥಳ ಪರಿಶೀಲನೆ ಮಾಡಿ ನಾನು ಖುದ್ದಾಗಿ ಬಂದು ನೋಡಿ ಕೊಡುತ್ತೇನೆ ಎನ್ನುವ ಮಾತಿನಲ್ಲಿ ಇರತಕ್ಕ ತೊಂದರೆಗಳನ್ನು ನಿವಾರಿಣೆ ಮಾಡುತ್ತೇನೆಂದು ಹೇಳಿದ ಹಾಗಾಯಿತು. ಪ್ರತಿಯೊಂದು ಜಿಲ್ಲೆಯಲ್ಲೂ ಈ ವಿಚಾರ ಆದರೆ, ಅಲ್ಲಿಗೆ ನೀವು ಹೋಗಿ ಮಾಡಲಿಕ್ಕೆ ಸಾಧ್ಯವೇ?

ಶ್ರೀ ಎನ್. ಹುಚ್ಚಮಾಸ್ತಿಗೌಡ —ಪ್ರತಿಯೊಂದು ಜಿಲ್ಲೆಯಲ್ಲೂ ಇಲ್ಲ. ಮಂಡ್ಯ ಜಿಲ್ಲೆಯ ಬಹು ಭಾಗದಲ್ಲಿ ತರೀ ಜಮೀನು ಇದೆ. ಅಲ್ಲಿ ಇರತಕ್ಕ ಖುಷ್ಕಿ ಜಮೀನಿನಲ್ಲಿ ತೆಂಗಿನ ಗಿಡಗಳನ್ನು ಹಾಕಿದ್ದಾರೆ. ಇನ್ನೊಂದು ಕಡೆ ವಿಲೇಜ್ ಎಕ್ಸ್‌ಟೆನ್‌ಷನ್ ಸೈಟ್ ಇಲ್ಲದೆ ಸೈಟ್ ಕೊಂಡು ಕೊಂಡು ಬಿಟ್ಟು ಏಲಿನೇಷನ್ ಮಾಡಿಕೊಂಡುಬಿಟ್ಟಿದ್ದಾರೆ. ಅಂಥದ್ದು ಅಕ್ವಿಜಿಷನ್‌ಗೆ ಹಾಕಿದ್ದಾರೆ, ಅವರಿಂದ ತಕರಾರು ಬರುವುದು ಸ್ವಾಭಾವಿಕ. ನಾನು ತೀರ್ಮಾನ ಮಾಡದೇ ಇದ್ದರೆ, ಅವರು ಕೋರ್ಟಿಗೆ ಹೋಗಬಹುದು. ನಾನು ಖುದ್ದಾಗಿ ನೋಡಿ ತೀರ್ಮಾನ ಕೈಗೊಂಡಿದ್ದೇನೆ, ಈ ತರಹ ವ್ಯಾಜ್ಯಗಳು ಇಲ್ಲದೇ ಇರುವ ಕಡೆ ಖುದ್ದಾಗಿ ಮಾಡುತ್ತೇವೆ. ಬೇರೆ ಯಾವ ಜಿಲ್ಲೆಗಳಲ್ಲಿ ಇಂಥಾ ಯಾವ ಸಂದರ್ಭಗಳೂ ಬಂದಿಲ್ಲ.

ಶ್ರೀ ಕೆ. ಪ್ರಭಾಕರ್,—ಬೇರೆ ಜಿಲ್ಲೆಗಳಲ್ಲಿ ಎಲ್ಲೂ ಇಲ್ಲ ಎನ್ನತಕ್ಕದನ್ನು ಒಪ್ಪತಕ್ಕದಲ್ಲ. ಬೆಂಗಳೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್‌ರವರು ಯಥೇಚ್ಛವಾಗಿ ಇಲಾಖೆಯ ಪರ್ಮಿಷನ್ ಇಲ್ಲದೆ ನಿಮ್ಮನ್ನು ಸೈಟ್ ಯಾರುಮಾಡು ಎಂದು ಸತಾಯಿಸುತ್ತಾ ಇದ್ದಾರೆ. ಅಂತಹ ಕೇಸುಗಳು ನಮ್ಮ ತಾಲ್ಲೂಕಿನಲ್ಲೇ ಆಗಿವೆ. ಮಾಸ್ ಸ್ಕೇಲಿನಲ್ಲಿ ಸೈಟ್‌ಗಳನ್ನು ಮಾಡುವಾಗ ಸರಕಾರ ಭೂಮಿಯಲ್ಲಿ ಮಾಡಿರುವ ಸೈಟುಗಳನ್ನು ಕೂಡ ಫಾರ್ಮಲ್ ಆಗಿ ಪರ್ಮಿಷನ್ ತೆಗೆದುಕೊಳ್ಳದೆ ಏತಕ್ಕೆ ಮಾಡಿದ್ದಾರೆ ಎಂದು ತೊಡಕು ಉಂಟಾಗಿದೆ. ಆ ರೀತಿ ಬೆಂಗಳೂರು ಜಿಲ್ಲೆಯಲ್ಲಿ ಇದೆ ಬೇರೆ ಕಡೆಗಳಲ್ಲೂ ಇರಬಹುದು. ಆ ರೀತಿ ಕೊಕ್ಕೆ ಹಾಕಿರುವುದು

(ಶ್ರೀ ಕೆ. ಪ್ರಭಾಕರ್)

ನಿಜ. ಸೈಟು ಬೇಗ ಮಾಡಲಿಕ್ಕೆ ಸರಕಾರ ಏನು ಆರ್ಡರ್ ಮಾಡಿದೆ ಅದಕ್ಕೆ ತೊಡಕು ಮಾಡಿರುವುದು ನಿಜ. ಅದನ್ನು ಸರಿಮಾಡಬೇಕು. ಇಲ್ಲ ಎನ್ನುವುದನ್ನು ಒಪ್ಪಿಕೊಳ್ಳುವುದಕ್ಕೆ ಆಗುವುದಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಂಡ್ಯ ಜಿಲ್ಲೆಯ ಡೆಪ್ಯುಟಿ ಕಮಿಷನರಿಗೆ ಡೈರೆಕ್ಷನ್ ಹೋಗಿದೆ ಎಂದು ಹೇಳಿದರು. ಈ ತರಹ ಇಲ್ಲವೆಂದು ಹೇಳಿದೆ. ಪ್ರತಿಯೊಂದು ಊರಿನಲ್ಲೂ, ತಾಲ್ಲೂಕಿನಲ್ಲೂ ಎಲ್ಲೆಲ್ಲಿ ಯಾವ ಯಾವ ಅಂಶಗಳ ಮೇಲೆ ತೊಡಕು ಉಂಟಾಗಿದೆ ಎಂಬುದನ್ನು ಜಿಲ್ಲಾಧಿಕಾರಿಗಳು ಲ್ಯಾಂಡ್ ಅಕ್ವಿಜಿಷನ್ ಆಫೀಸರ್ ಖುದ್ದಾಗಿ ಪರಿಶೀಲನೆ ಮಾಡಿ ನೋಡಬೇಕು. ನಾವು ಹೇಳಿದ ಕೂಡಲೇ, ಕಾನೂನು ಯಾವುದನ್ನೂ ಲಕ್ಷ್ಯಕ್ಕೆ ಇಟ್ಟುಕೊಳ್ಳದೆ, ಪ್ರತಿಬಂಧಕ ಇರುವುದನ್ನೂ ಲಕ್ಷ್ಯಕ್ಕೆ ಇಟ್ಟುಕೊಳ್ಳದೆ ಮಾಡುವುದಕ್ಕಾಗುವುದಿಲ್ಲ. ಅದನ್ನು ಗಣನೆಗೆ ತೆಗೆದುಕೊಂಡು ಮಾಡಬೇಕಾಗುತ್ತದೆ.

ಶ್ರೀ ಜಿ. ಎಲ್. ಕಬಾಡಿ.—ಈಗ ೨೫ ಸಾವಿರ ಸೈಟುಗಳನ್ನು ಹಂಚುವ ವಿಚಾರದಲ್ಲಿ ೫ ಕೋಟಿ ರೂಪಾಯಿ ಒದಗಿಸಿರುವ ಹಣದಲ್ಲಿ ಮೋಟಕು ಮಾಡುವಂಥ ಪ್ರಯತ್ನ ಮಿನಿಸ್ಟ್ರಿ ಮಾಡುತ್ತಿದೆ ಎಂದು ಮುಖ್ಯ ಮಂತ್ರಿಯವರನ್ನು ಬಸವಲಿಂಗಪ್ಪನವರು ಮೇಲಿಂದ ಮೇಲೆ ಕಾಷನ್ ಮಾಡುವ ರೀತಿಯಲ್ಲಿ ಹೇಳಿದ್ದಾರೆ The Statement of Sri M. Y Ghorpade, Minister for Finance, dated 3-1-1974 on the financing of Peoples' Housing Programme, which is a committed one in the budget for the year 1973-74 lacks political wisdom and floats the Interest of this down-trodden people. All the high hopes raised among the poor people were allowed to remain a mere slogan. ಬಸವಲಿಂಗಪ್ಪನವರು ಈ ಮಾತನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಹರಿಜನ ರಕ್ಷಣೆಯನ್ನು ಹರಿಜನ ಮಂತ್ರಿಗಳೇ ಮಾಡಬೇಕಾಗಿಲ್ಲ. ಜಾತ್ಯಾತೀತ ರಾಷ್ಟ್ರ ಕಟ್ಟುತ್ತೇವೆಂದು ಹೇಳಿದ ಕಾಂಗ್ರೆಸ್ ಸರಕಾರ, ಇಂದಿರಾ ಸರಕಾರ ಏನು ಮಾಡುತ್ತಿದೆ ಎಂದು ಕೇಳುತ್ತಿದ್ದೇನೆ. ಒಬ್ಬ ಮಂತ್ರಿ ಮಾಡಿದಂಥ ಆರ್ಡರನ್ನು ಮತ್ತೊಬ್ಬ ಮಂತ್ರಿ ಮೋಟಕು ಮಾಡುವುದು. ಈ ರೀತಿ ನಡೆಯುತ್ತಿರುವುದರಿಂದ ಹರಿಜನರಿಗೆ ಅನ್ಯಾಯ ನಡೆದಿದೆ ಎನ್ನುವ ಮಾತನ್ನು ಸ್ಪಷ್ಟವಾಗಿ ಹೇಳಬೇಕಾಗಿದೆ. ಹೌಸಿಂಗ್ ಅರ್ಬನ್ ಡೆವಲಪ್‌ಮೆಂಟ್ ಕಾರ್ಪೊರೇಷನ್ನಿನವರು ಇವತ್ತು ಅದರ ಬಗ್ಗೆ ಏನೂ ಮಾಡಲಿಲ್ಲ ಎನ್ನುವ ಮಾತು ತಿಳಿಸಿದ್ದಾರೆ. ಸೈಟ್ ಸಾಯಿಲ್ ಹೊತ್ತುಕೊಂಡು ಹೋಗುವುದನ್ನು ಬಸವಲಿಂಗಪ್ಪನವರು ಮಿನಿಸ್ಟರ್ ಆಗಿ ನಿಷೇಧ ಮಾಡದೇ ಇದ್ದಿದ್ದರೆ, ಇವತ್ತೇ ನಮ್ಮ ದೇಶದಲ್ಲಿ ಈ ಕೆಟ್ಟ ರೋಗ ಎಂದೂ ಹೋಗುತ್ತಿರಲಿಲ್ಲ. ನಾನು ಬಸವಲಿಂಗಪ್ಪನವರನ್ನು ವೈಯಕ್ತಿಕವಾಗಿ ಅಭಿನಂದಿಸುತ್ತೇನೆ. ಅವರೆ, ಇವತ್ತು ತಲೆಯ ಮೇಲೆ ಮಲ ಹೋರಿಸುವುದನ್ನು ತಪ್ಪಿಸಿದ ವಿರುದ್ಧ ಕೋರ್ಟಿಗೆ ಹೋಗಿ ಸ್ಟೇ ತಂದು ಮಾಡಿರತಕ್ಕ ಅನ್ಯಾಯವನ್ನು ವಿಚಾರ ಮಾಡಿದರೆ, ಈ ಹರಿಜನರು ಇನ್ನೂ ಕೆಳಮಟ್ಟದ ಇರಬೇಕು ಎನ್ನುವ ಭಾವನೆ ಆ ಜನರಲ್ಲಿ ಇದೆ ಎಂದು ಅರ್ಥವಾಗುತ್ತದೆ. ಇದು ಏತಕ್ಕೆ ಈ ರೀತಿ ಆಗುತ್ತಿದೆ ಎನ್ನುವುದನ್ನು ಬಹಳ ವಿಷಾದದಿಂದ ಹೇಳಬೇಕಾಗುತ್ತದೆ.

3-00 P.M.

ಮಲ ಹೊರುವುದನ್ನು ತಪ್ಪಿಸಬೇಕು ಎನ್ನುವುದು, ಸರ್ಕಾರಿ ಧೋರಣೆ ಆದರೆ ಮುಂದುವರೆದಿರತಕ್ಕ ಸಮಾಜ ಇನ್ನು ಅವರ ಮೇಲೆ ಮಲ ಹೊರಿಸಬೇಕು ಎಂಬ ಭಾವನೆ ಇಟ್ಟಿರುವುದು ದೇಶದ ದೃಷ್ಟಿಯಿಂದ ಒಂದು ಶೋಚನೀಯ ಸಂಗತಿ. ಆದುದರಿಂದ ಮಾನ್ಯ ಮಂತ್ರಿಗಳು ಬಹಳ ಕಠೋರವಾಗಿ ಸರ್ಕಾರಿ ಆರ್ಡರನ್ನು ಕಾನೂನು ರೀತ್ಯ ಜಾರಿಗೆ ತರುವಂತೆ ಮಾಡಬೇಕು ಎಂದು ವಿನಂತಿ ಮಾಡಿಕೊಳ್ಳುತ್ತೇನೆ. ಸೋಷಿಯಲ್ ವೆಲ್‌ಫೇರ್ ಡೈರೆಕ್ಟರನ್ನು ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್ ಮಾಡಿ, ಆ ಇಲಾಖೆಯನ್ನು ಓವರ್ ಹಾಲ್ ಮಾಡಬೇಕು. ಆ ರೀತಿ ಮಾಡಿದರೆ ಒಳ್ಳೆಯದು ಆಗುತ್ತದೆ, ಜನರ ಕಲ್ಯಾಣಕ್ಕೆ ಅನುಕೂಲವಾಗುತ್ತದೆ ಎಂದು ಹೇಳುತ್ತೇನೆ. ಐ. ಎ. ಎಸ್. ಕೇಡರಿನಲ್ಲಿ ಚೀಫ್ ಸೆಕ್ರೆಟರಿ ಲೆವೆಲ್ಲಿಗೆ ಸರಿಸಮಾನರಾದ ಆಫೀಸರನ್ನು ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಕಮಿಷನರ್ ಆಗಿ ನೇಮಿಸಬೇಕು. ಡೈರೆಕ್ಟರ್ ಆಫ್ ಸೋಷಿಯಲ್ ವೆಲ್‌ಫೇರ್ ಅವರನ್ನು ಅಥವಾ ಜಾಯಿಂಟ್ ಕಮಿಷನರ್ ಗ್ರೇಡಿನಲ್ಲಿ ಇರುವವರನ್ನು ಡಿಸ್ಟ್ರಿಕ್ಟ್ ಆಫೀಸರನ್ನಾಗಿ ಮಾಡಿ ತಾಲ್ಲೋಕು ಲೆವೆಲ್‌ನಲ್ಲಿ ಕ್ಲಾಸ್ ೨ ಆಫೀಸರು ಇಟ್ಟು ಅನುಭವಸ್ಥರಾದ ಸೋಷಿಯಲ್ ವೆಲ್‌ಫೇರ್ ಇನ್‌ಸ್ಪೆಕ್ಟರನ್ನು ಬ್ಲಾಕ್ ಲೆವೆಲ್‌ನಲ್ಲಿ ಇಟ್ಟು ಅವರಿಗೆ ಜೀಪು ವ್ಯವಸ್ಥೆ ಮಾಡಿಕೊಟ್ಟರೆ ಆ ಖಾತೆಯನ್ನು ಸುಧಾರಿಸಲಿಕ್ಕೆ

ಅನುಕೂಲವಾದೀತು ಎಂದು ಹೇಳುತ್ತೇನೆ. ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್ ತೆಗೆದುಕೊಳ್ಳಿ, ರೆವಿನ್ಯೂ ಡಿಪಾರ್ಟ್‌ಮೆಂಟ್ ತೆಗೆದುಕೊಳ್ಳಿ. ಅದರಂತೆ, ಬ್ಲಾಕಿನಲ್ಲಿ ತಾಲ್ಲೋಕಿನಲ್ಲಿ ಡಿಸ್ಟ್ರಿಕ್ಟ್‌ನಲ್ಲಿ ಆಫೀಸರುಗಳು ಇದ್ದು ಅವರ ಮೇಲೆ ಕಮಿಷನರ್ ವಿಚಾರ ಮಾಡಿದರೆ ಹರಿಜನ ಗಿರಿಜನರ ಅಭಿವೃದ್ಧಿಗಾಗಿ ಸಾಕಷ್ಟು ಕೆಲಸ ಮಾಡುವುದಕ್ಕೆ ಅನುಕೂಲ ಆದೀತು. ಈ ರೀತಿ ರೀ ಆರ್ಗನೈಜೇಷನ್ ಈ ಡಿಪಾರ್ಟ್‌ಮೆಂಟ್ಸ್ ಮಾಡಲೇ ಬೇಕು ಎಂದು ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ. ಹರಿಜನರ ಏಳಿಗೆಗಾಗಿ ಕಾನೂನು ಗಳನ್ನು ಸಾಕಷ್ಟು ಮಾಡಿದ್ದೀರಿ. ಸೆಂಟ್ರಲ್ ಗವರ್ನಮೆಂಟ್ ಆ್ಯಕ್ಟ್‌ನಲ್ಲಿ ಸ್ಟೇಟ್‌ನಲ್ಲಿ ಅಮಲ್‌ನಲ್ಲಿ ತರಬೇಕು ಎಂದು ಮೊದಲನಿಂದಲೂ ಇರುವಾಗ, ಆ ಕಾನೂನು ಎಷ್ಟರಮಟ್ಟಿಗೆ ಪರಿಪಾಲನೆ ಆಗಿದೆ ಎಂದು ವಿಚಾರ ಮಾಡಿದರೆ, ಈ ವರ್ಷ ಅದಕ್ಕೆ ತದ್ವಿರುದ್ಧ ಕೆಲಸ ನಡೆದಿದೆ ಎಂದು ಹೇಳುತ್ತೇನೆ. ಪೋಲೀಸ್ ಖಾತೆಯವರು ಹರಿಜನರ ಮೇಲೆ ಆಗಿರತಕ್ಕ ಅನ್ಯಾಯಕ್ಕೆ ಏನಾದರೂ ಒಂದು ಅರ್ಜಿ ಕೊಟ್ಟರೆ ಅದಕ್ಕೆ ಗಮನ ಕೊಡುವುದಿಲ್ಲ. ಕೆಲವು ಸಂದರ್ಭಗಳಲ್ಲಿ ಹರಿಜನರನ್ನು ಬಡಿದು ಪೋಲೀಸರು ಕಳಿಸಿದ್ದು ಉಂಟು. ಸವರ್ಣೀಯರು, ಪೋಲೀಸಿನವರು ಒಂದೇ ಜಾತಿ ಇರುವುದರಿಂದ ಈ ರೀತಿ ದಬ್ಬಾಳಿಕೆ ನಡೆಯುತ್ತಿದೆ. ಒಬ್ಬ ಹರಿಜನ ಸ್ಕೂಲ್ ಮಿಸ್ಟ್ರೆಸ್ ಸ್ಕೂಲಿನಲ್ಲಿ ಕೊಟ್ಟಿರತಕ್ಕ ರೇಷನ್ ಮನೆ ಗೆ ತೆಗೆದುಕೊಂಡು ಹೋಗಿದ್ದಾಳೆ ಎಂದು ಹೇಳಿ ಮನೆ ನುಗ್ಗಿ ಅಪಮಾನ ಮಾಡಿದ್ದಾರೆ. ಪೋಲೀಸ್ ಡಿಪಾರ್ಟ್‌ಮೆಂಟಿಗೆ ಆಕೆ ಕಂಪ್ಲೆಂಟ್ ಕೊಟ್ಟರೆ ಕೇಳುವವರೇ ಇಲ್ಲ. ಇಂತಹ ಕೃತ್ಯಗಳ ಎಷ್ಟೋ ನಡೆಯು ತ್ತಿವೆ. ನಮ್ಮ ಜಿಲ್ಲೆಯಲ್ಲಿ ನಮ್ಮ ತಾಲ್ಲೂಕಿನಲ್ಲಿ ನಡೆದಂಥ ಘಟನೆ ಬಗ್ಗೆ ಪೋಲೀಸಿನವರು ಕ್ರಮ ತೆಗೆದು ಕೊಳ್ಳದೆ ಇರುವುದು ಇದೆ. ಇದು ವಿಷಾದ ಸಂಗತಿ ರಿಮೂವಲ್ ಆಫ್ ಅನ್‌ಟಚ್‌ಬಿಲಿಟಿ ಆ್ಯಕ್ಟ್ ಜಾರಿಯಲ್ಲಿದ್ದರೂ ಸಹ, ಯಾರ ಮೇಲಾದರೂ ಕೇಸು ಹಾಕಬೇಕಾದರೆ ಸಾಕ್ಷಿ ನಿಲ್ಲುವವರು ಯಾರು ? ಕೇವಲ ಕಾನೂನಿಂದ ಈ ಸಮಸ್ಯೆ ಬಗೆಹರಿಯುವುದಿಲ್ಲ. ಈ ಕಾನೂನು ಅಮಲ್ ಬಜಾವಣೆ ಆಗಬೇಕಾದರೆ, ಯಾವರೀತಿ ಮಾಡಬೇಕು ಎಂದು ವಿಚಾರ ಮಾಡಬೇಕಾಗುತ್ತದೆ, ಅದಕ್ಕೋಸ್ಕರ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್ ಒಂದು ಸ್ಪೆಷಲ್ ಸಕ್ವಾಡ್ ಇರಬೇಕು. ಅದಕ್ಕೆ ಒಂದು ಐ ಜಿ. ಸಮಿಂಸಿ, ಕಮಿಷನರ್ ಫಾರ್ ಸೋಷಿಯಲ್ ವೆಲ್‌ಫೇರ್ ಕೆಳಗೆ ಅಂಥ ಅಧಿಕಾರಿಯನ್ನು ಕೊಟ್ಟರೆ, ಆಗ ಹರಿಜನರಿಗೆ ಅನ್ಯಾಯ ಎಲ್ಲಿ ಆಗಿದೆ ನೋಡಿ ಕೇಸ್ ಬುಕ್ ಮಾಡಿ ಸಾಕ್ಷಿಪುರಾವೆ ಒದಗಿಸಿ ಶಿಕ್ಷೆ ವಿಧಿಸಿದರೆ ಅಸ್ಪೃಶ್ಯತೆ ನಿವಾರಣೆಗೆ ಸಹಾ ಯ ವಾದೀತು. ಇನ್ನು ಒಂದು ಸ್ಕಾಲರ್‌ಷಿಪ್ ವಿಷಯದಲ್ಲಿ ಎಲಿಜಿಬಲ್ ಸ್ಟೂಡೆಂಟಿಗೆ ಎಲ್ಲಾ ಕೊಡುತ್ತಾ ಇದ್ದಾರೆ, ಆಂಧ್ರ, ತಮಿಳುನಾಡು, ಮಹಾರಾಷ್ಟ್ರದಲ್ಲಿ ಯಾವರೀತಿ ಶಿಕ್ಷಣ ಅಭಿವೃದ್ಧಿ ಮಾಡಿದ್ದಾರೆ, ಎಂದು ತಿಳಿದುಕೊಂಡು ಆ ರೀತಿ ವಿಚಾರ ಮಾಡಿ ಎಂದು ಹೇಳುತ್ತೇನೆ. ಈಗ ರೂಪಾಯಿಯ ಬೆಲೆ ೩೦ ಪೈಸೆಗೆ ಇಳಿದಿರುವುದರಿಂದ ರೇಟ್ ಆಫ್ ಸ್ಕಾಲರ ಷಿಪ್ ಜಾಸ್ತಿ ಮಾಡಬೇಕು ಹಿಂದಿನ ಕಾಲದಲ್ಲಿ ಒದಗಿಸಿದಂಥ ಸ್ಕಾಲರ್‌ಷಿಪ್ ಏನು ಇದೆ ಅದನ್ನೇ ಮುಂದುವರಿದರೆ, ಜೀವ ನಕ್ಕೆ ಅವರು ಉಪಯೋಗಿಸುವ ಯಾವುದೇ ವಸ್ತುಗಳಿಗೂ ಸಾಲುವುದಿಲ್ಲ. ಅದಕ್ಕೋಸ್ಕರ ಸ್ಕಾಲರ್‌ಷಿಪ್ ಜಾಸ್ತಿಮಾಡಬೇಕು, ಪ್ರಮರಿ ತರಗತಿಗಳಿಗೆ ವರ್ಷಕ್ಕೆ ೫೦ ರೂಪಾಯಿ ಸ್ಕಾಲರ್‌ಷಿಪ್ ಕೊಡುತ್ತಾರೆ ಮಾಧ್ಯಮಿಕ ತರಗತಿಗಳಿಗೆ ೭೦ ೮೦ ರೂಪಾಯಿ ಕೊಡುತ್ತಾರೆ. ಇದನ್ನು ೧೦೦ ಮತ್ತು ೨೦೦ ರೂಪಾಯಿತನಕ ಏರಿಸಬೇಕು. Extra boarding charge have to be paid to post matric scholarship holders. ಇವತ್ತು ರಾಮಕೃಷ್ಣ ಆಶ್ರಮದ ರೀತಿ ಕೆಲವು ಸ್ಕೂಲುಗಳನ್ನು ತೆರೆಯಬೇಕು ಎಂದು ಪ್ರಪೋಸಲ್ ಇದೆ. ಈ ರೀತಿ ಪ್ರತಿ ಜಿಲ್ಲೆಯಲ್ಲಿಯೂ ಆಶ್ರಮ ಸ್ಕೂಲುಗಳನ್ನು ಮಾಡಿದರೆ ಇಂಟೆಲೆಕ್ಚ್ಯುಯಲ್ ಬಾಯ್ಸ್ ಅಲ್ಲಿ ಓದಲು ಅವಕಾಶ ಮಾಡಿ ದರೆ ಮುಂದೆ ಹುಶಾರು ಆದ ಪೀಳಿಗೆ ತಯಾರಿಸುವುದಕ್ಕೆ ಅನುಕೂಲವಾಗುತ್ತದೆ, ಹಿಂದೆ ಐ ಎ. ಎಸ್. ಮತ್ತು ಐ ಪಿ. ಎಸ್. ಕೇಡರ್ ಸ್ಕೂಲು ಇಲ್ಲಿ ಇಟ್ಟಿದ್ದರು. ಹರಿಜನ ಹುಡುಗರು ಮುಂದೆ ಬಂದು ಐ. ಎ. ಎಸ್. ಮತ್ತು ಐ. ಪಿ. ಎಸ್. ಪಾಸು ಮಾಡುತ್ತಾ ಎಂಬ ಕೆಟ್ಟ ಮನೋಭಾವನೆ ಯಿಂದ ಎಜುಕೇಷನ್ ಡಿಪಾರ್ಟ್‌ಮೆಂಟ್‌ನವರು ಒಳ್ಳೆಯ ಸ್ಟಾಫ್ ಕೊಡದೆ ಕೊನೆಗೆ ಆ ಸ್ಕೂಲು ಮದ್ರಾಸಿಗೆ ವರ್ಗಾಯಿಸಿದ್ದಾರೆ ಈ ರೀತಿ ಜಾತಿ ಕೋಮುವಾರು ಭಾವನೆಯಿಂದ ಕೆಲಸ ನಡೆಯುತ್ತಿದೆ ಎಂದು ಸ್ಪಷ್ಟ ವಾಗಿ ಹೇಳುತ್ತೇನೆ. ನಮ್ಮ ದೇಶದಲ್ಲಿ ವರ್ಣಾಶ್ರಮ ಧರ್ಮ ಆಚರಿಸುತ್ತಾ ಇರುವುದರಿಂದ ಜನರಿಗೆ ತೊಂದರೆಯಾಗುತ್ತಿದೆ. ಇವೊತ್ತು ಮುಂದುವರೆದು ವರ್ಣಗಳು ೧೦ ಪರ್‌ಸೆಂಟ್ ಇದ್ದರೂ ಅವರ ಒಂದು ಆರ್ಥಿಕಾಭಿವೃದ್ಧಿ, ಸಮಾಜಿಕಾಭ್ಯುದ್ಧಿ- ಶೈಕಣಿಕಾಭಿವೃದ್ಧಿ, ರಾಜಕೀಯಾಭಿವೃದ್ಧಿ ಆಗುತ್ತಿದೆ. ಹಿಂದುಳಿದವರಿಗೆ ತೊಂದರೆಯಾಗುತ್ತಿದೆ.

ಇನ್ನು ಗ್ರಾಮೋದ್ಯೋಗ ವಿಷಯದಲ್ಲಿ ಚರ್ಮ ಕೈಗಾರಿಕೆ ಉತ್ಪಾದಿಸತಕ್ಕ ಹಸಿ ಚರ್ಮ ೧೦೦ಕ್ಕೆ ೬೦ ರಷ್ಟು ಭಾಗ ಹೊರಗಿನ ರಾಜ್ಯಗಳಿಗೆ ಹೋಗುತ್ತದೆ. ಲೆದರ್ ಇಂಡಸ್ಟ್ರಿಬೋರ್ಡ್ ಬಿಲ್ ತಂದೆ. ತಾವು ಅಡ್ವೈಸರಿ ಬೋರ್ಡ್ ರಚನೆ ಮಾಡಿದ್ದೀರಿ. ಅದಕ್ಕೆ ನಾಲಿಗೆ ಇಲ್ಲದ ಗಲಗಂಟೆ ರೀತಿ ಹಣಕಾಸಿನ

(ಶ್ರೀ ಜೆ. ಎಲ್. ಕಬಾಡಿ)

ವ್ಯವಸ್ಥೆ ಮಾಡಿರುವುದು ದುರ್ದೈವದ ಸಂಗತಿ. ಶ್ರೀಮಾನ್ ರಾಚಯ್ಯನವರಿಗೆ ಆಸಕ್ತಿ ಇದೆ. ಈ ಉದ್ಯಮದ ಬೆಳವಣಿಗೆ ಬಗ್ಗೆ ಸೂಕ್ತ ಕಾರ್ಯಕ್ರಮ ಹಾಕಿಕೊಂಡಿದ್ದೀರಿ. ಕ್ರೋಂ ಟ್ಯಾನಿಂಗ್ ಫ್ಯಾಕ್ಟರಿ ಹಣೆಬರಹ ಏನು ಇದೆ, ಅದು ಇನ್ನೂ ಲಾಸ್ ಆಗುತ್ತಿದೆ. ಹರಿಜನರಿಗೆ ಉದ್ಯೋಗಾವಕಾಶ ಕಲ್ಪಿಸಿಕೊಡಬೇಕು ಎನ್ನುವ ಯೋಜನೆ ಇದ್ದರೂ ಸಹಿತ ಮಣ್ಣುಪಾಲು ಆಗುತ್ತಿದೆ. ಅಲ್ಲದೆ ಫೈನಾನ್ಸ್ ಕಾರ್ಪೊರೇಷನ್ ಏನಾದರೂ ಹರಿಜನರ ಅಭಿವೃದ್ಧಿಗೆ ಗಿರಿಜನರ ಅಭಿವೃದ್ಧಿಗೆ ಮಾಡಬೇಕಾದರೆ ಬೇಗ ವ್ಯವಸ್ಥೆಮಾಡಿಯೆಂದು ಒತ್ತಾಯ ಮಾಡುತ್ತೇನೆ, ಅವರಿಗೆ ಸಾಲ ಕೊಟ್ಟು ಕಾರು, ಆಟೋರಿಕ್ಷಾ ನಡೆಸಲಿಕ್ಕೆ ಯೋಚನೆಮಾಡಿ. ಕೋಆಪರೇಟೀವ್ ಬ್ಯಾಂಕ್‌ನಿಂದ ಸಾಲ ಕೊಡಲಿಕ್ಕೆ ವ್ಯವಸ್ಥೆ ಮಾಡಿದ್ದೀರಿ. ಅಲ್ಲಿ ಇರತಕ್ಕವರು ಖಿದೀಮರು, ಸವರ್ಣೀಯರು. ಆದುದರಿಂದ ಈ ಜನರಿಗೆ ಸಾಲ ಸಿಕ್ಕಿಲ್ಲ, ಸಿಕ್ಕುವುದಿಲ್ಲ. ಅವರಿಗೆ ಸಾಲ ಸಿಗುವ ವ್ಯವಸ್ಥೆ ಮಾಡಬೇಕಾದರೆ ಪ್ರತ್ಯೇಕ ಕಾರ್ಪೊರೇಷನ್ ಮಾಡಿದರೆ ಒಳ್ಳೆಯದು ಎಂದು ವಿನಂತಿಸುತ್ತೇನೆ. ಇನ್ನು ಆಫ್ಟರ್ ಕೇರ್ ಡಿಪಾರ್ಟ್‌ಮೆಂಟ್ ಅಲ್ಲಿ ನಡೆಯುತಕ್ಕ ಅವ್ಯವಹಾರಗಳನ್ನು ನಿಲ್ಲಿಸಬೇಕು. ಗದಗಿನಲ್ಲಿ ೩ ಹೆಣ್ಣು ಹುಡುಗರು ಮಾಲ್ ನ್ಯೂಟ್ರೇಷನ್ ಸಲುವಾಗಿ ಸತ್ತು ಹೋದರು. ಆ ಫುಲ್ ಬ್ಯಾಚನ್ನು ಮತ್ತೊಂದು ಇನ್‌ಸ್ಟಿಟ್ಯೂಷನ್‌ಗೆ ವರ್ಗಾಯಿಸಬೇಕಾಯಿತು. ಅದರ ಬಗ್ಗೆ ಏನು ಕಾರ್ಯಕ್ರಮ ಕೈಗೊಂಡಿರಿ ? ಪ್ರೊಬೇಷನರಿ ಸೂಪರಿಂಟೆಂಡಿಂಗ್ ಆಫೀಸರ್ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ. A girl admitted in a Correctional Home became pregnant by the husband of the Superintendent of the Home. The girl delivered a child in Mysore and as named as Amar singh. Both the husband and wife are State Government Officers.
ನೀವು ಸ್ವಲ್ಪ ವಿಚಾರಮಾಡಿ. ಇಂಥಾದ್ದು ಆಗಬಾರದು. ಆ ಸ್ಥಳದಲ್ಲಿ ಅನಾಹುತ ನೋಡಿದರೆ, ಆ ಸ್ಥಳ ಯಾವುದಕ್ಕೆ ಇದೆಯೋ ಅರ್ಥವಾಗುವುದಿಲ್ಲ. ಸೋಷಿಯಲ್ ವೆಲ್‌ಫೇರ್ ಆಫೀಸರ್ಸ್ ಹೆಡ್ ಆಫೀಸ್‌ನಲ್ಲಿ ಅವರ ಜಾತಿಯವರಿಗೆ ಪ್ರಮೋಷನ್ ಕೊಡಲಿಕ್ಕೆ ಕೂತಿದ್ದಾರೆ. ಅಂಥವರ ಮೇಲೆ ಕ್ರಮ ಏನು ತೆಗೆದುಕೊಳ್ಳುತ್ತೀರಿ ? ಪ್ಲ್ಯಾನ್ ಆದಮೇಲೆ ಇನ್‌ಸ್ಟ್ರಕ್ಟರ್ ಪೋಸ್ಟ್‌ಗೆ ಪ್ರಮೋಷನ್ ಆಗಿ ಹೋದಾಗ ಅವರನ್ನು ರಿವರ್ಟ್‌ಮಾಡುವ ಮನೋವೃತ್ತಿ ನಿಮ್ಮ ಆಫೀಸಿನಲ್ಲಿ ಬರುತ್ತಾ ಇದೆ. ಹರಿಜನ ಮೇಲೆ ಪ್ರೀತಿ, ವಿಶ್ವಾಸ ಇದೆಯೋ ವಿಚಾರಮಾಡಿ. ಅಲ್ಲದೆ ಇನ್ನು ಕೆಲವು ಇವೆ ನನ್ನ ಹತ್ತಿರ, ಹೇಳುತ್ತೇನೆ.

A Home having 20 to 30 women is provided and managed by a Gazetted Officer whereas a school at Bangalore having 400 to 500 inmates and a staff of 60 persons is managed by a non-gazetted Superintendent.

ಇದನ್ನು ಯೋಚನೆಮಾಡಿ.

Orphan children kept in the Homes are being given away to the foreigners on adoption through the agents without follwing the procedure under the Guardians and Adoption Act. All these are illegal acts being done by taking bribes.
ಇದನ್ನು ಸ್ವಲ್ಪ ನೋಡಿಕೊಳ್ಳಿ. ಇನ್ನೂ ಉಳಿದ ವಿಷಯಗಳು ಸಾಕಷ್ಟು ಇವೆ, ಅವನ್ನೂ ಹೇಳಬೇಕಾಗಿತ್ತು, ಆದರೆ ಕಾಲಾವಕಾಶವಿಲ್ಲದಿರುವುದರಿಂದ ಅಧ್ಯಕ್ಷರು ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಅವರಿಗೆ ಅಭಿವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ,

† SRI DODDATHIMMAIAH (Gulur).—Madam Speaker, I view this problem of Scheduled Castes and Scheduled Tribes as a national problem and one of the biggest problems. I also consider this problem to be out of the purview of party politics because this is a problem of the suffered classes, the weakest section of the society.

After 26 years of independence, after completing four five-year plans, what is the social and economic position of our Scheduled Castes and Scheduled Tribes in the rural parts of India ? I want to

put before this House the real picture of our people who live in the villages and I do not want to make a talk about the achievment that Government has made in improving the conditions of these people in the rural parts. Today, what is the position of these people in the rural parts ? The Constitution has guaranteed liberty, equality and fraternity. Today what are the things necessar for an exploited man to develop his personality. The three things are liberty, equality and fraternity and a cer ain atmosphere of free thinking, free working and free moulding of his life. Today, what is our position in the villages ? Today except in certain villages we are treated as second class citizens and almost like slaves in all other villages. There is no doubt a'out it and our friends must admit this reality. Today after 26 years of independence I ask my friends who are here to show me a village where the Harijans and the Caste Hindus share a well or where they are allowed entry into hotels, temples or barbar shops. No doubt, there is improvement in cities and towns but we cannot convert every vil age into a town or a city for another hundred years. Today untouchability has been abolished under the Constitution but it is not enforced or taken cognisance of by the officers who are in charge of that responsibility. There is no loss to us if we are not allowed entry into their temples, hotels or barber shops. But what is happening today ? Harassment at every stage. Caste Hindus put impediments in the way of our progress. Howevermuch Government may try to help us, these people who cannot get rid of caste prejudice put impediments in the way of our progress.

Today our men and women live in villages in utter humiliation and live like slaves. Our country proclaims to the whole world that Hinduism is a great religion and it preaches tolerance, and preach the principle of live and let live. But I ask, are you tolerating us ? Let our friends say whether they tolerate our progress and allow us to live peacefully and respectfully. No doubt today we live with you, not as equal but as slaves. Therefore, what is wrong with us ? There is something wrong with the mentality of the caste Hindus. There is something wrong somewhere. Whom should we blame ? I blame the so called intellectuals the enlightend of Hindu society who preach this only for eye washing during the election time, whether they belong to this party or that party. This country roused the feelings of millions of people against the powerful nation—Briton. Can the same people rouse the feeling of caste Hindus and see that humiliations suffered by the Harijans are no longer there ? These Harijans are today worshiping the same gods and clean their lavatories and roads but they are not able to walk with them shoulder to shoulder and heads erect. Those who claim that their religion is superior should feel ashamed that their brethren are suffering today. The intellectuals of our society, those who have read Upanishads, Vedas and Shastras, must realise that their own brethren are suffering. If they cannot uplift them, what is the good of their education ? Do they

(SRI DODDATHIMMAIAH)

want these Harijans to be just like slaves and serve them ? It is most disgraceful and such a thing does not exist anywhere in the world. Unfortunately it is this community, which with all sufferings and humiliations, still call themselves as Hindus. Of course there are certain people who preach for conversion. We are prepared for conversion. But, who is opposing and who is putting all sorts of impediments Today there are millions and millions of people who belong to christianity. You do not call them as untouchables, whatever be their economic conditions. They are not subjected to any humiliation. For converting ourselves to other religions it is the Caste Hindus that are opposing. We are prepared for conversion. If that does not solve all our problems at least the next generation will say they are Christians though not the present generation. Now we cannot convert ourselves because our people are illiterates and the caste Hindus oppose it. What should be done ? You should allow them to live as Hindus. But we can never live with you as Hindus in your villages. So a realistic approach must be made to this problem. I do not say that all villages are bad. There are villages wherein caste Hindus and Harijans live harmoniously.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ತಾವು ಈಗ ತಾನೆ ಹೇಳಿದಿರಿ, ಸವರ್ಣ ಹಿಂದೂಗಳು ನಮ್ಮ ಏಳಿಗೆಗೆ ಅಡ್ಡಿಯಾಗುತ್ತಾರೆಂದು, ಆದರೆ ಒಂದು ಮಾತನ್ನು ಹೇಳುತ್ತೇನೆ. ನಾವು ಹಳ್ಳಿಗಳಲ್ಲಿ ಅವರನ್ನು ಒಳಕ್ಕೆ ಬನ್ನಿ ಎಂದು ಕರೆದರೂ ಬರುವುದಿಲ್ಲ, ಏನೋ ಒಂದು ಸೈಕಲಾಜಿಕಲ್ ಎಫೆಕ್ಟ್ ಅವರಲ್ಲಿ ಇದೆ, ಒಳಕ್ಕೆ ಹೋದರೆ ಚೌಳಿ ಬರುತ್ತದೆ, ನಮಗೆ ಅನಿಷ್ಟವಾಗುತ್ತದೆ, ಕೆಡಕಾಗುತ್ತದೆಂಬ ಭಾವನೆ ಅವರಲ್ಲಿ ಇದೆ. ಇದರಿಂದ ಅವರು ಎಷ್ಟು ಕರೆದರೂ ಒಳಕ್ಕೆ ಬರುವುದಿಲ್ಲ.

(MR. DEPUTY SPEAKER in the chair)

SRI DODDATHIMMIAH.— Mr. Chandrashekar's grand father and his great grand father had kept my father and grand father at a distance where the cattle and the dogs reside. Now he is educated and he calls us to come inside. How can they go inside? The agelong suppression is so much that a Harijan cannot revolt against such things. If an individual or a few individuals revolt, they will meet the fate of Sri Basavalingappa or Smt. Satyavani Muthu in Madras. In the interest of community and truth, I must say that we cannot revolt against you. If they do, they have to face the same fact as that gentleman in this State and the lady at Madras

Now, how to solve this problem? We want to be Hindus. If, in a village there are six or seven houses of Harijans, and the Caste Hindus perpetuate this untouchability. We do not want your money for our economic improvement. What all we ask is allow us the freedom of movement, freedom of working, create an atmosphere to develop our personality and to earn our bread. Unless you create that atmosphere free from hatred and jealousy and humiliation, whatever money that the Government might spend, will be a waste and we cannot progress.

You can give wealth but unless you create an atmosphere of making use of that wealth, what is the use of it. The Government and the reformers of society should realise this.

As Dr. Ambedkar said separate villages are necessary for us to live independenlty and live free from exploitation and humiliation. I do not worry about the untouchability. You may not allow us to temples. If we have a few hundred houses of our people, we will have our own temples, barber shops and what not. We can go to work freely and be independent. If on the other hand there are only ten Harijans in a village of hundred houses, this humiliation is perpetuated by caste Hindus and we are treated, with cotempt. Today a Vokkalinga may not marry a girl belonging to Lingayat community or a Brahmin community. But he is treated with respect. He may not be allowed inside the House of a Bhramin but there is no hatred between them. One does not treat the other as slave or a sort of subordinate. But it is not so in the case of Harijans. We are treated like slaves Therefore, we want separate villages to live independently. If there are hundreds of houses of Harijans nobody will harm us. We will go and work and there is no shame in working. Today even though we work as labourers and we are paid for what we work, they, think that what they pay is a charity. He works hard and they pay him thinking that they are helping him This is the mentality of caste Hindus. I appeal to the intellectuals of the Society and the Government to do this fundamental thing of having separate villages for Scheduled Caste people. I suspect that they want us to be their permanent slaves. If the Government cannot build separate villages they could at least conduct survey of the good villages and the bad villages where the harijans are humiliated and where they are respected and then put the Scheduled Caste people in good villages where they could some respect from caste hindus. I would request the Government to spend money for building separate villages for the Scheduled Caste people. If only a free atmosphere for their living is created and there is no intimidation to them they could develop themselves. I feel that it is always better to be an honourable labourer then a rich slave of the caste hindus. We find so many tamilians men and women sleeping on the footpaths and other places freely and they are very happy because they are not subjected to any kind of humiliation by anybody. I once again appeal to the Government and to the hon. Members of this House, to think impartially, and consider this proposal seriously.

3-30 P.M.

Another thing is if you want us to be hindus it is not very difficult for the Government and the political parties to make an effective propoganda to change the outlook of caste hindus. We never ask you to allow us to enter your dining halls or to give your daughters in marriage to us. We want only respect. You treat us as respectful citizens. When I was a boy I had got respect in my village and there

(SRI DOODDATHIMMAIH)

I was very happy. But to-day in the villages if the harijans were given some lands or some harijan houses were to come up the caste hindus feel jealous and they will harass the harijans. Further, if the harijans were to vote to a particular candidate then also they are harassed. I want to ask why the political parties should not tell the people not to harass the harijans? They don't say it because they will not get the votes. Then Sir, I believe, that the hindu mentality should be changed by persuasive methods.

SRI T. R. SHAMANNA.— Now a big problem has been placed before us. May I suggest to the hon. Member that the problem of harijans could easily be solved if all the Scheduled Caste people were to be given education on top-priority and brought them to the level of either the hon. Member himself or the Hon. Minister and then they could also get proper respect in the society.

SRI DODDATHIMMAIAH.— I am highly educated and hon. Member Sri Shamanna is also highly educated. Mr. Shamanna comes from a high caste and I belong to scheduled caste. He is an educated man. But when I to go to his house. Suppose he would treat me as an untouchable and gives me coffee in a separate glass. And if that is done when whose mind is to be changed?

Sir, in addition to the persuasive methods we will have to use force too to change the mentality of caste hindus towards the harijans. In my humble opinion, the Minister holding the harijan welfare portfolio should also have the Home portfolio. Of course now the Hon. Chief Minister is holding the Home Portfolio. There are certain secret branches which he could have, but the other things could be entrusted to the Minister for Social Welfare. If the Hon. Chief Minister doesn't like Mr. Rachiah let him give that portfolio to Mr. Mallikarjunaswamy This will of course change the psychology of the officers to have good relations with our people and the Harijans will also change their outlook. Unless this is done we cannot come up to the level of others. Here I would like to quote Dr. Ambedkar, who narrated a story while he was speaking in the Rajya Sabha, about 18 years back wherein he said.—

> "One Negro child told his father that he wanted to see the White House. the father took the child to the White House, Then the child saw the White House and the people there. The child then told the father: How is it that the building is white and the people are also white? The father said: yes, my dear child, the building is white and the people are also white, but their hearts are black."

Here I would like to say that as far as the majority of the caste hindus are concerned their hearts are black. I wish and hope it will turn white as early as possible.

Then again, the Land Reforms have now been introduced. But while distributing the lands, only useless lands are being given to the harijans and the fertile lands are given to others. I would urge upon the Government to make sincere efforts to see that proportionately fertile land and land according to their exact quota is distributed to the harijans and they get their legitimate share of land.

I am told that land is given free to the politseal sufferers and ex-service men. But, for our people, it seems, that land is given at ua upset price. I reqvest the Welfare Minister to look into this.

I am glad the Government has come out with the establishment of a Finance Corporation. Unfortunately or fortunately in this country' the land is monopolised by somebody, commerce by somebody and industry by somebody else; every means ef earning is moppolised by other sectios. Today, what is it that our people have monopolised? We have monopolised sweepised of roads and scavenging of lavatories. In the Industries department allotment of stainless steel quota, etc., are being given to small industrialists. Our people do not know what is it about. Some of our people can enter into small trade and business and earn some money and improve their economic condition. I feel it is the duty of of the Minister for Social Welfare to see that as far as possible some quotas of stainless steel, etc., are given to our people also, for we cannot depend upon land alone and we get very few acres of land even after the Land Reforms are introduced.

Sri K. H. Ranganath is now the Minister for Transport. I have seen many of the scheduled caste people applying for bus routes. Shri K. H. Ranganath is a committed socialist. Today the bus routes have been monopolised by so many other people. I requeat the Hon'ble Minister for Transport to give some bus routes to scheduled caste people wherever it is possible or feasible.

Coming to the housing scheme, previously there was some scheme of giving loans to the societies and through the societies to the individuals. I am yet to understand the policy of the Government as far as the housing scheme for scheduled castes is concerned The Hon'ble Finance Minister said the other day that have a 'Peoples Housing Soheme'. I would like to know whether there is any special scheme for the Scheduled castes and what is the proportion for the scheduled castes in this proposed scheme. I request the Hon'ble Minister for Social Welfare to explain this. The Co-operative Societies are the real exploiters of the scheduled castes. If we give money to the co-operative societies even in this scheme, we cannot build houses. Therefore, we must be very careful about these co-operative societies.

(SRI DODDATHIMMAIH)

The Finance Corporation is a very important Corporation, for which we were urging since a long time ; it has come into being just now. The money is to be utilised for the benefit of the poor people. The object of this Corporatin is to improve the economic of the poor people. Proper utilisation of this money will be possible only if proper personnel are there at the helm of affairs Lot of grants are given by the Social Welfare Department indiscriminately viz., some person getting Rs. 50,000 another getting Rs. 20,000 and so on. I request the Government to sanction grants taking into account the real needs of the people.

With regard to appointments, our reservation quota is not being given and adhered to in any department. Our learned officers say that proper candidates belonging to S.C. are not available for filling up the vacancies. Hinduism preaches truth, and I hope these officers speak the truth. If proper candidates are not available, I have no objection. But I have seen in many cases although proper candidates are available they would not be taken by the officers who owe a high sense of responsibility to the society and to the country. They have equal responsibility to bring up people belonging to this unfortunate scheduled caste community. I hope they would realise their responsibility and try to help these people. While saying this, I do not say that useless S.C. people should be taken. But in most of the cases I have seen although there are deserving candidates they do not take them. This is a very unfortunate position in our country.

With rigard to promotions there is a mentality among the official community, why by intellectual click they evade our officers and officials in getting promotions. We, legislators cannot understand that click. This kind of injustice is being done to our people. I appeal to the officers concerned to do justice to our people at least in future, because they are all highly educated and cultured people and I expect justice from them. I hope they will do it. I would like to quote an instance in this connection, to show how injustice is being done to our people. An Harijan Assistant Registrar of Co-operative Societies went to inspect a well for giving the last instalment of the loan. Later on it was found that it was a bogus well and it did not belong to the owner. Justice demands that the concerned officers who had signed and recommended the sanction of loan should also be punished. But the Superior officer has recommended that the Harijan officer alone should be sacked. I have brought this case to the notice of the Development Secretary and I hope he will do justice. If an officer belonging to scheduled caste has committed a mistake, I request not to spare him.

It is the moral duty of the private factories and establishments as also Government factories to take S.C. people in their factories

and establishments, which unfortunately they are not doing. When Sri K. Hanumanthaiaya was the Chief Minister of this State, I, as a Member of Parliament, had witten a letter to him about this, and he was kind enough to write to the private and Government factories and establishments to take people belonging to scheduled castes and tribes in their establishments as per the Provisions to the Constitution I do not know what happened to it. I request the Hon'ble Minister for Social Welfare to look into this matter although he has no direct control on this issue, and to see that as far as possible scheduled caste people are taken in private factories and establishments.

Sir, coming to the working of the Directorate of the Social Welfare Department, there is a new Director who is young, energetic and who has got sympathy for the Scheduled caste people and who has understood the problems of the Scheduled Castes people. I feel that the administration of the Directorate should be completely reorganised and streamlined. There are some officers in the Department who have no sympathy for the S.C. people. They are there because they are appointed. This Department has greater responsiblities than the other Department because this Department has to deal with the problems of the weaker sections of the society and the officers would be rendering greater service if they do their work sincerely and efficiently. I do not want to name the individual officers who are not doing good work but as the Director, he should reorganise the Department, and see that the work is done efficiently and the people are benefited.

Coming to the District Social Wefare Officer, I do not think anybody is controlling these officers. They are doing the work as they like. I am yet to know their duties and responsibilities. There are Social Welfare Inspectors. I do not know their duties and responsibilities. In 1948 there were Revenue Inspectors who used to attend to the work of the Social Welfare Inspectors. There is nobody to bring to the notice of our people about the Schemes for the development of our community. The Social Welfare Inspectors must be forced to do the job of informing the people about the existence of the Schemes for their upliftment. They should not simply visit Girls hostels and bops hostels and say that everything is okay. Sometimes these Inspectors do some mischief also. They take away provisions from the hostels and sell out and they will be indulging in doing all sorts of things. Iappeal to the Director that he should take vigilent attitude and tour the whole State and activise the district-level administration and see that the officers are made to work hard and the people are benefited.

The Deputy Commissioner's office is a minor Secretariat. A letter from the District Social Welfare Officer, takes months to reach to the Director because the letter must go to the District Development Officer and from there it goes to the Deputy Commissioner. The

(SRI DODDATHIMMAIH)

Deputy Commissioner is already overworked. Therefore I want the Government ot see that an independent officer equavalent to the Deputy Commissioner should be appointed and asked to attend to this work. Of course, there are certain matters which are being dealt with by the Deputy Commissioner. But there are certain other matters which are required to reach the Directorate. Directly I request the hon. Minister to bestow his attention to this matter.

The Director of Social Welfare must be upgraded to the rank of the Divisional Commissioner. Unless this is done, I do not think we will be able to achieve anything. One should be above the level of the Deputy Commissioner with more powers than the Deputy Cemmissioner, then alone we will be able to solve the problems of the scheduled Castes. Otherwise, the Deputy Commissioner will treat the Scheduled Castes affair as an untouchable itself. Please think of all these loopholes and try to find out the drawbacks and set them right.

Lastly Sir, I am thankful to Sri Mallikarjunaswamy because he had told me in Delhi (while he was holding the portfolio of Social Welfare) that we will be getting an IAS Training School for Bangalore I think it is already working. I am told that the District Social Welfere Officer would be the Principal of this School who would sometime not be a graduate. The main person in the Institute is the Principal. I request the hon. Minister kindly to see that a competent person who is fully qualified is appointed to the post of a Principal.

One more thing I would like to submit to the Welfare Minister. The various schemes that are meant for the uplift of the Scheduled Caste people and the various facilities that ars available to the scheduled castes people are not known to many of our people. I request him to direct the Directorate to see that all those schemes which are meant for the benefit of the Scheduled Castes are publicised through the Welfare Inspectors or the District Social Welfare Officers. Now only few people have monopolised all the facilities meant for these people. I do not want that monopoly to take place amongst the scheduled caste people. I have seen some people in the Directorate getting some grants. I do not want to name those people.

Having said all these things, I must say something by way of self-criticism of my own community It is no good always speaking one-sided. Among the Scheduled Castes there are four or five major communities There are sub-sections like left hand, right hand, Bovis, Korachas, Koramas and Lambanis. We Scheduied Caste people suspect amongst ourselves. Communalism in this country is not an extraordinary thing. We are practising communalism amongst ourselves but we will be criticising others as communalists. I appeal to our

friends who are high-seated in the Treasury Benches to be above board and not to act in a communal way. When a left-hand man approaches you do not help him at the cost of right-hand man. If they want to be called as Leaders of the country, I appeal to them to do justice as far as possible to all communities and do not give room for criticism by others. While we were discussing a non-official resolution, some members have said that the facilities available for Scheduled caste have become the monopoly of some influential communities I do not want others to criticise our actions; otherwise, we will have no moral right to criticise others.

In whatever capacity we may be, and whatever work we are put in-charge whether social welfare work or some other work, and whether it is Mr. Mallikarjunaswamy or somebody else, we must work for the betterment of these unfortunate people 'Formerly we used to say' Sarvejanaba Sukhinobhavanthu'. Now it has been changed into 'Sarvajathi Sukhinobhavanthu' The leaders of S.C. and S.T. should not be communal among themselves and should work for all communities among Scheduled Castes.

4-00 P. M.

SRI D. B. KALMANKAR.—Do you mean to say all the Ministers are communal ?

SRI DODDATHIMMIAH.—I am not referring to all Ministers. I am referring to only the Ministers belonging to S.C. and S T. and I simply said that they should not be communal and should have high principles and should be just in dealing things. If he is not so as I said he will lose the moral right of criticising others.

Lastly I appeal to the various intellectuals of all communities in this country that they should change their outlook and see that this unfortunate community comes up. I appeal to them to contribute their mite and have a sense of Service but not a sense of avoiding them. Let wisdom will dawnupon them and we unfortunate people will come up to their level as early as possible. Thank you.

† ಶ್ರೀ ಎಂ. ಎಚ್. ಜಯಪ್ರಕಾಶನಾರಾಯಣ್ (ಸಿರಸಿ).—ಸನ್ಮಾನ್ಯ ಉಪಾಧ್ಯಕ್ಷರೇ ಈ ದಿವಸ ಮಾನ್ಯ ಸಮಾಜ ವಿಕಾಸ ಮತ್ತು ಸಮಾಜ ಕಲ್ಯಾಣ ಮಂತ್ರಿಗಳು ಮೂರು ಬೇಡಿಕೆಗಳನ್ನು ಈ ಮಹಾ ಸಭೆಯ ಅಂಗೀಕಾರಕ್ಕೆ ಮಂಡಿಸಿದ್ದಾರೆ. ಇದರಲ್ಲಿ ಮೊದಲನೆಯದಾಗಿ ಸಾಮಾಜಿಕ ಭದ್ರತೆ ಮತ್ತು ಸಮಾಜಕಲ್ಯಾಣದಬಗ್ಗೆ ೧೧,೯೪,೦೫,೦೦೦ ರೂಪಾಯಿಗಳನ್ನೂ ಸಾಮಾಜಿಕ ಅಭಿವೃದ್ಧಿಗೆ ೨೧,೪೨,೧೧,೦೦೦ ರೂಪಾಯಿಗಳನ್ನು, ಮತ್ತು ಸ್ಥಳೀಯ ಸಂಸ್ಥೆ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳಿಗೆ ೬,೭೭,೫೦,೦೦೦ ರೂಪಾಯಿಗಳನ್ನು ಒಟ್ಟು ೪೯ ಕೋಟಿ ರೂಪಾಯಿಗಳ ಮೂರು ಬೇಡಿಕೆಗಳನ್ನು ಈ ಸಭೆಯ ಮುಂದೆ ಮಂಡಿಸಿದ್ದಾರೆ, ಈ ಬೇಡಿಕೆಗಳನ್ನು ಪುಷ್ಟೀಕರಿಸುತ್ತಾ ಈ ಬಗ್ಗೆ ನಾಲ್ಕು ಸಲಹೆಗಳನ್ನು ಮಾಡಲು ನಾನು ಇಚ್ಛೆಪಡುತ್ತೇನೆ. ಈ ರಾಜ್ಯದಲ್ಲಿ ಸುಮಾರು ೧೦೦ಕ್ಕೆ ೮೦ ಭಾಗ ಪರಿಶಿಷ್ಟವರ್ಗ ಪರಿಶಿಷ್ಟ ಜನಾಂಗ ಮತ್ತು ಹಿಂದುಳಿದ ವರ್ಗದವರು ಇದ್ದಾರೆ. ಈ ರಾಜ್ಯದ ಒಟ್ಟು ಆದಾಯದ ಮತ್ತು ವೆಚ್ಚದ ಆಯವ್ಯಯ ಪಟ್ಟಿಯನ್ನು ನೋಡಿದರೆ ಪರಿಶಿಷ್ಟವರ್ಗ ಮತ್ತು ಪರಿಶಿಷ್ಟ ಜನಾಂಗಕ್ಕೆ ಈ ಆಯವ್ಯಯ ಪಟ್ಟಿಯಲ್ಲಿ ಒದಗಿಸಿರತಕ್ಕ ಹಣ ಬಹಳ ಕಡಿಮೆ. ಇದನ್ನು ಹೆಚ್ಚಿಸಬೇಕಾಗಿತ್ತು. ಸಾಮಾಜಿಕ ನ್ಯಾಯವನ್ನು ದೊರಕಿಸಬೇಕಾದರೆ ದಲಿತರೂ, ನಿರ್ಗತಿಕರೂ, ಮತ್ತು ಬಡವರಾಗಿರತಕ್ಕವರು ಎಲ್ಲಾ ವಿಧದಲ್ಲೂ

(ಶ್ರೀ ಎಂ. ಹೆಚ್. ಜಯಪ್ರಕಾಶನಾರಾಯಣ್)

ಶೋಷಣೆಗೆ ಒಳಗಾಗಿರತಕ್ಕವರು. ಅವರ ಉದ್ಧಾರಕ್ಕಾಗಿ ಕಾಂಗ್ರೆಸ್ ಸರ್ಕಾರದವರು ದುಡಿಯತಕ್ಕವರು ಹೆಚ್ಚು ಹಣವನ್ನು ಒದಗಿಸಬೇಕಾಗಿತ್ತು ಆದರೂ ಸಹ ಹೆಚ್ಚು ಹಣವನ್ನು ಒದಗಿಸಿಲ್ಲ.

ಮತ್ತು ಈ ಸಂದರ್ಭದಲ್ಲಿ ತಾಲ್ಲೂಕುಬೋರ್ಡ್ ಮತ್ತು ಪಂಚಾಯಿತಿಗಳ ಬಗ್ಗೆ ಒಂದು ಮಾತನ್ನು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ತಾಲ್ಲೂಕುಬೋರ್ಡ್ ಮತ್ತು ಪಂಚಾಯಿತಿಗಳು ಅಸ್ತಿತ್ವಕ್ಕೆ ಬಂದ ಮೇಲೆ ನಮ್ಮ ರಾಜ್ಯದಲ್ಲಿ ಮೊದಲನೇ ಪಂಚವಾರ್ಷಿಕ ಯೋಜನೆಯಿಂದ ೫ನೇ ಪಂಚವಾರ್ಷಿಕ ಯೋಜನೆಯವರೆಗೂ ಈ ಯೋಜನೆಗಳ ಫಲ ಕೇವಲ ೧೦೦ಕ್ಕೆ ೮೦ ಭಾಗ ಪರಿಶಿಷ್ಟ ವರ್ಗ, ಪರಿಶಿಷ್ಟ ಜನಾಂಗ ಮತ್ತು ಹಿಂದುಳಿದ ವರ್ಗಗಳವರು ಹಾಗೂ ಅಲ್ಪಸಂಖ್ಯಾತ ಜನಾಂಗ ಏನಿದ್ದರೋ ಅವರಿಗೆ ದೊರೆತಿಲ್ಲ. ಶೇಕಡಾ ೨೦ ಭಾಗ ಜನ ಏನಿದ್ದಾರೆ ಅವರಿಗೆ ಮಾತ್ರ ಈ ಯೋಜನೆಗಳ ಫಲ ದೊರೆತಿದೆ. ಆದ್ದರಿಂದ ಈ ಯೋಜನೆಯನ್ನು ಉತ್ತಮವಾದ ರೀತಿಯಲ್ಲಿ ಮಾಡಬೇಕಾಗಿತ್ತು. ಶ್ರೀ ಸಂಜೀವಯ್ಯ ಮೆಮೋರಿಯಲ್ ಲೆಕ್ಚರ್ ಮಾಡುವಾಗ ರಾಷ್ಟ್ರಾಧ್ಯಕ್ಷರಾಗಿರತಕ್ಕ ಶ್ರೀ ವಿ.ವಿ. ಗಿರಿಯವರು ಈ ಯೋಜನೆಗಳನ್ನು ಯಾವರೀತಿ ಮಾಡಬೇಕಾಗಿತ್ತು, ಯಾವರೀತಿ ಮಾಡಿದ್ದರೆ ಅದರ ಫಲ ೧೦೦ಕ್ಕೆ ೮೦ ಭಾಗ ಇರತಕ್ಕ ವೀಕರ್ ಸೆಕ್ಷನ್ನಿಗೆ ದೊರೆಯುತ್ತಿತ್ತು ಎನ್ನುವುದಕ್ಕೆ ರಾಷ್ಟ್ರಾಧ್ಯಕ್ಷರಾದ ಶ್ರೀ ವಿ.ವಿ. ಗಿರಿಯವರ ಭಾಷಣದ ಒಂದು ಪ್ಯಾರಾದಲ್ಲಿ ಒಂದು ವಿಷಯವನ್ನು ಹೇಳಿದ್ದಾರೆ. ಅದನ್ನು ನಾನು ಈ ಮಾನ್ಯ ಸಭೆಯ ಗಮನಕ್ಕೆ ತರುತ್ತೇನೆ' ಅದು ಈ ರೀತಿ ಇದೆ.

> "The overall objective of the development of backward communities is to effect substantial improvements in their standards of living by eliminating exploitation, providing major sectoral allocations from the economic development programmes, bringing about increase in the levels of literacy, effecting major changes in their occupational pattern and development of infrastructure in terms of marketing, provision of credit communications and irrigation so that they could come up to an adequate minimum level of living, comparable with that of the general population. Efforts should be directed towards eliminating the disparities that exist between backward classes and the rest of the community."

ಎಂದು ರಾಷ್ಟ್ರಾಧ್ಯಕ್ಷರು ಹೇಳಿದ್ದಾರೆ. ಈ ಅಂಶವನ್ನು ಈ ಸರ್ಕಾರವಾಗಲೀ ರಾಷ್ಟ್ರದ ಯೋಜನಾ ಮಂಡಲಿಯಾಗಲೀ ಇದುವರೆಗೆ ಮಾಡಿಲ್ಲ. ಪ್ರತಿಯೋಜನೆಯಲ್ಲಿಯೂ ಸಹ ಅಳವಡಿಸಿರತಕ್ಕ ಹಣದಲ್ಲಿ ಶೇಕಡಾ ೨೦ ಭಾಗ ಹಣವನ್ನು ಪರಿಶಿಷ್ಟವರ್ಗ ಮತ್ತು ಪರಿಶಿಷ್ಟ ಜನಾಂಗಕ್ಕೆ ಪ್ರತಿವರ್ಷ ಇಲಾಖೆಯಲ್ಲಿ ಒದಗಿಸಬೇಕು ಎನ್ನುವ ಸೂಚನೆ ಇದ್ದರೂ ಸಹ ಸರ್ಕಾರದವರು ಅದನ್ನು ಕೈಬಿಟ್ಟಿದ್ದಾರೆ. ಅದು ಬಜೆಟ್ಟಿನ ಒಂದು ಭಾಗದಲ್ಲಿ ಪ್ರತಿಯೋಜನೆಯನ್ನು ಗೊತ್ತುಮಾಡುವಾಗ ೧೦೦ಕ್ಕೆ ೨೦ ಭಾಗ ಹಣವನ್ನು ಈ ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟ ಜನಾಂಗಕ್ಕೆ ಖರ್ಚು ಮಾಡುತ್ತೇವೆ ಎಂದು ನಮೂದು ಮಾಡತಕ್ಕ ಕಲಮು ಇರಬೇಕಾಗಿತ್ತು. ಆಗ ಮಾತ್ರ ರಾಷ್ಟ್ರಾಧ್ಯಕ್ಷರು ಹೇಳಿದಂತಹ ಹೇಳಿಕೆಗೆ ಮಾನ್ಯತೆ ದೊರೆಯುತ್ತದೆ. ಯೋಜನೆಯ ಫಲ ಯಾರಿಗೆ ದೊರಕಂತ್ತು ಇಲ್ಲ ಆ ಜನಾಂಗಕ್ಕೆ ಕೇಂದ್ರ ಸರ್ಕಾರ ೨೧.೫ ಕೋಟಿ ರೂಪಾಯಿಗಳನ್ನು ಈ ಪಂಚವಾರ್ಷಿಕ ಯೋಜನೆಯಲ್ಲಿ ಅಳವಡಿಸಬೇಕಾಗಿತ್ತು ಅವರ ಸರ್ವತೋಮುಖವಾದ ಅಭಿವೃದ್ಧಿಗಾಗಿ ಯೋಜನೆಯನ್ನು ಕಲ್ಪನೆ ಮಾಡಬೇಕು ಎನ್ನತಕ್ಕಂಥಾ ಸೂಚನೆಯನ್ನು ರಾಜ್ಯ ಸರ್ಕಾರ ಕೊಟ್ಟರೂ ಕೂಡ ಈ ಸರ್ಕಾರದಲ್ಲಿರತಕ್ಕ ಆಡಳಿತವರ್ಗ ಶೋಷಣೆಯ ವರ್ಗಗಳನ್ನು ಇನ್ನೂ ಶೋಷಣೆ ಮಾಡತಕ್ಕ ಆಡಳಿತಾಧಿಕಾರಿಗಳು ೧೧.೫ ಕೋಟಿ ರೂಪಾಯಿಗಳನ್ನು ಇಳಿಸಿರತಕ್ಕದ್ದು ಬಹಳ ಅನ್ಯಾಯ ಇದನ್ನು ಸರ್ಕಾರದವರು ಪರಿಶೀಲನೆ ಮಾಡಬೇಕು ಸಾಮಾಜಿಕ ನ್ಯಾಯ ಮಾಡತಕ್ಕದ್ದು ಇಲ್ಲ. ಸಮಾಜದಲ್ಲಿ ಅನ್ಯಾಯ ಮಾಡತಕ್ಕ ಏರುಪೇರುಗಳನ್ನು ನಮ್ಮ ಪ್ರತಿನಿಧಿಗಳಾಗಿ ಅಧಿಕಾರದಲ್ಲಿ ಕುಳಿತುಕೊಂಡಿರತಕ್ಕ ೩ ಜನ ಮಂತ್ರಿಗಳು ರಕ್ಷಣೆ ಮಾಡದೆ ಹೋದರೆ ಮಾಡುವುದಕ್ಕೆ ಯೋಗ್ಯತೆ ಇಲ್ಲದೆ ಹೋದರೆ ಈ ದಿವಸ ಅವರು ತಮ್ಮ ಜಾಗವನ್ನು ಬಿಡಬೇಕಾಗುತ್ತದೆ ಎನ್ನತಕ್ಕಂಥಾದ್ದನ್ನು ನಾನು ಒತ್ತಾಯಪೂರ್ವಕವಾಗಿ ಹೇಳುತ್ತೇನೆ.

ಎರಡನೆಯದಾಗಿ ತಾಲ್ಲೂಕುಬೋರ್ಡ್‌ಗಳು ಮತ್ತು ಪಂಚಾಯಿತಿ ಸಮಿತಿಗಳ ರೀತಿ ನೀತಿ ಅಭಿಪ್ರಾಯ ಹೇಗೆ ಬಂದಿದೆ ಎನ್ನುವ ಬಗ್ಗೆ ಒಂದು ಸೂಚನೆಯನ್ನು ಶ್ರೀಮಾನ್ ಗಿರಿಯವರು ಹೇಳಿದ್ದಾರೆ. ಅದು ಈ ರೀತಿ ಇದೆ.

> "The prov ss of democratic decentralisation, resulting in the transfer of developmental functions to the Panchayat San ithis and Zill Parishats, has not specially benefitted the backward classes, as representatives of these communities have not been effective n ensuring an adequate flow of resources in their favour, on account of the dominance of the powerful caste groups in the local bodies who control the enconomy in the area and have thus a hold over the intereste of the weaker sections We have to vigilant against this tendency and safeguard the interests of the weaker sections in the Panchayat Samithis."

ಎಂದು ಹೇಳಿದ್ದಾರೆ.

ಇನ್ನು ಮುಖ್ಯವಾದಂಥ ಅಭಿಪ್ರಾಯವನ್ನು ರಾಷ್ಟ್ರದ ನಾಯಕರು ರಾಷ್ಟ್ರಪತಿಗಳಿಗೆ ಹೇಳಿದ್ದಾರೆ. ಅದನ್ನಾದರೂ ಸರ್ಕಾರದವರು ಆಲಿಸಿದ್ದಾರೆಯೇ? ಇವತ್ತಿನ ದಿವಸ ತಾಲ್ಲೂಕು ಬೋರ್ಡ್ ಅಧ್ಯಕ್ಷರಾಗಿರುವವರು ಯಾರು? ಬಂಡವಾಳ ಶಾಹಿಗಳು, ದುಡ್ಡು ಇರತಕ್ಕವರು ಇದ್ದಾರೆ. ಯಾರಿಗೆ ಶಕ್ತಿ ಇರುತ್ತದೆಯೋ, ಯಾವ ಜಾತಿ ದೊಡ್ಡದಾಗಿರುತ್ತದೆಯೋ ಅಂಥ ಜಾತಿಗೆ ಪ್ರಾತಿನಿಧ್ಯ ಸಿಕ್ಕಿ, ಹತ್ತಾರು ವರ್ಷಗಳಿಂದ ತಾಲ್ಲೂಕು ಬೋರ್ಡುಗಳಲ್ಲಿ, ಪಂಚಾಯಿತಿಗಳಲ್ಲಿ ಅವರು ಚುನಾಯಿತರಾಗಿ ಬರುತ್ತಿದ್ದಾರೆ. ಆದ್ದರಿಂದ ಸರ್ಕಾರದವರು ತಾಲ್ಲೂಕು ಬೋರ್ಡುಗಳ, ಮತ್ತು ವಿಲೇಜ್ ಪಂಚಾಯಿತಿಗಳ ಆಕ್ಟನ್ನು ಪುನರ್‌ರಚನೆ ಮಾಡಿ, ಅವುಗಳ ಅಧ್ಯಕ್ಷ ಸಾ ನಕ್ಕೆ. ಸರ್ಕಾರದವರನ್ನು ನೇಮಿಸತಕ್ಕಂಥ ರೀತಿಯಲ್ಲಿ ತಿದ್ದುಪಡಿ ಮಾಡತಕ್ಕಂಥ ಯೋಚನೆಯನ್ನು ಮಾಡಬೇಕು ಎಂದು ನಾನು ಹೇಳುತ್ತೇನೆ. ಇದು ಬಹು ಮುಖ್ಯವಾದುದು, ಇಲ್ಲದೇ ಹೋದರೆ ಪರಿಶಿಷ್ಟ ವರ್ಗಗಳಿಗೆ ಸಾಮಾಜಿಕ ನ್ಯಾಯ ಗ್ರಾಮಾಂತರಗಳಲ್ಲಿ ದೊರೆಯುವುದಿಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಷ್ಟಪಡುತ್ತೇನೆ.

ಹಿಂದುಳಿದಿರತಕ್ಕಂಥ ವರ್ಗಗಳಿಗೆ ಹಣದ ಅಲೋಕೇಷನ್ ಹೇಗೆ ಇರಬೇಕಾಗಿತ್ತು ಎನ್ನತಕ್ಕಂಥಾದನ್ನು ಮಾನ್ಯ ರಾಷ್ಟ್ರಾಧ್ಯಕ್ಷರು ಹೇಳಿದ್ದಾರೆ. ಅದು ಈ ರೀತಿ ಇವೆ—

> "It has also beee observed that the allocations under welfrae of backward classes in the successive plans which were meant to be supplementary to those in the general sectors of development, hove, in faet, substituted the latter. The general sector programmes have not benefitted the backward classes, either in proportion to their population, or the area they inhabit. In the Fifth Plan, Central Ministers and State Government should ensure that the general sector programmes in agriculture, village and small indusrries, drinkinfi water wells, communications, educations and public health should speciaily cater to the needs of these weaker sections.

ಇದು ಏನಾದರೂ ಮಾಡಿದ್ದೀರಾ? ಸುಖೀರಾಜ್ಯ, ರಾಮರಾಜ್ಯ, ಸಮಾಜವಾದ ಎಂದು ಹೇಳತಕ್ಕಂಥ ಜನ ಮಹಾತ್ಮಗಾಂಧಿಯವರ ಹೆಸರನ್ನು ಹೇಳಿಕೊಂಡು ಸತ್ಯ ಧರ್ಮವನ್ನು ಆಚರಿಸಬೇಕಾದಂಥ ಜನ, ಇವತ್ತಿನದಿವಸ ಬಡವರ ಮತ್ತು ನಿರ್ಗತರ, ಕೂಲಿದಾರರ, ಶ್ರಮಜೀವಿಗಳ ಕಡೆಗೆ ಗಮನವನ್ನು ಹರಿಸಿದ್ದಾರೆಯೇ? ಅದಕ್ಕಾಗಿ ೩-೪ ಪಂಚವಾರ್ಷಿಕ ಯೋಜನೆಗಳಲ್ಲಿ ಎಷ್ಟು ಹಣವನ್ನು ಖರ್ಚುಮಾಡಿದ್ದಾರೆ, ಅವರ ಪ್ರಗತಿ ಏನಾಗಿದೆ, ಎನ್ನತಕ್ಕಂಥದ್ದನ್ನು ಯೋಚನೆ ಮಾಡದೆ, ಕೇಂದ್ರ ಸರ್ಕಾರದವರು ಒದಗಿಸಿದಂಥ ಹಣವನ್ನು ರಾಜ್ಯ ಸರ್ಕಾರದವರು ಮೊಟಕು ಮಾಡಿದ್ದಾರೆ. ಇದರಿಂದ ಇವರ

(ಶ್ರೀ ಎಂ. ಹೆಚ್. ಜಯಪ್ರಕಾಶ್ ನಾರಾಯಣ್)

ಕಲ್ಯಾಣದ ಕಡೆಗೆ, ಪ್ರಗತಿಯ ಬಗ್ಗೆ ಸರ್ಕಾರಕ್ಕೆ ಆಸಕ್ತಿಯಿಲ್ಲ ಎನ್ನುವುದು ಕಂಡು ಬರುತ್ತದೆ. ದಯ ವಿಟ್ಟು ಕೇಂದ್ರ ಸರ್ಕಾರದವರು ಗೊತ್ತು ಮಾಡಿರುವ ರೀತಿಯಲ್ಲಿ ೨೧,೦೫ ಕೋಟಿ ರೂಪಾಯಿಗಳಿಗೆ, ಬಡ್ಜೆಟ ಅಲೋಕೇಷನ್ ಅನ್ನು ಏರಿಸಬೇಕು. ಇದಕ್ಕಾಗಿ ಸಂಬಂಧಪಟ್ಟ ಮಂತ್ರಿಗಳು ಶ್ರಮಿಸಬೇಕು ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ,

ಇಷ್ಟೇ ಅಲ್ಲದೆ ಈ ಸಂದರ್ಭದಲ್ಲಿ ಕೆಲವು ಅಂಶಗಳನ್ನು ಈ ಸಭೆಯ ಗಮನಕ್ಕೆ ತಂದು ಅವುಗಳನ್ನು ಜಾರಿಗೆ ತರಬೇಕು ಎಂದು ಹೇಳುತ್ತೇನೆ. ಹರಿಜನ ಬಸ್ತೀಸ್ ಬಗ್ಗೆ ಕೇಂದ್ರ ಸರ್ಕಾರದವರು ಸೂಚನೆ ಮಾಡಿದ್ದಾರೆ. ಅವರ ಪ್ರಕಾರ, ಪರಿಶಿಷ್ಟ ವರ್ಗ, ಪರಿಶಿಷ್ಟ ಜನಾಂಗದವರು ಎಲ್ಲಿ ವಾಸ ಮಾಡು ತ್ತಾರೋ ಅಂಥ ಕಡೆ ರೂರಲ್ ಎಲೆಕ್ಟ್ರಿಫಿಕೇಷನ್ ಮತ್ತು ವಾಟರ್ ಸಪ್ಲೈಗೆ ಶೇಕಡ ೫೦ ಭಾಗವಷ್ಟು ಹಣವನ್ನು ಕೊಡುತ್ತಾರೆ. ಅದನ್ನೂ ಸಹ ನಮ್ಮ ಸರ್ಕಾರದವರು ಪೂರ್ಣವಾಗಿ ಜಾರಿಗೆ ತಂದಿಲ್ಲ. ಇದನ್ನು ಜಾರಿಗೆ ತರಬೇಕು ಎನ್ನತಕ್ಕ ಮಾತನ್ನು ಹೇಳುತ್ತೇನೆ. ಕಳೆದ ೨೫ ವರ್ಷಗಳಿಂದಲೂ ಹರಿಜನ ಬಗ್ಗೆ ಸರ್ಕಾರದವರು ಇತ್ತ ಧ್ಯೇಯವನ್ನು ಇಟ್ಟುಕೊಳ್ಳಬೇಕು ಎಂದು ಬೋಧಿಸಿದರೂ ಸಹ ಪಬ್ಲಿಕ್ ಅಂಡರ್‌ಟೇಕಿಂಗ್ ಕಮಿಟೀಸ್, ಮಂಡಲಿಗಳು, ಕಾರ್ಪೊರೇಷನ್ಸ್ ಸ್ಟ್ಯಾಟುಟರಿ ಬಾಡೀಸ್ ಮುಂತಾದುವು ಗಳಿಗೆ ಸರ್ಕಾರದವರು ಹಣವನ್ನು ಒದಗಿಸಿ, ಅಲ್ಲಿಗೆ ಪರಿಶಿಷ್ಟ ಜನಾಂಗದವರನ್ನು ಪರಿಶಿಷ್ಟ ವರ್ಗದವರಿಗೆ ೧೮ ಭಾಗ ಪ್ರಾತಿನಿಧ್ಯವೂ ದೊರಕಿಲ್ಲ ಇವರಿಗೆ ಇಂತಹ ಮಂಡಲಿಗಳಲ್ಲಿ ಅವರ ಹಿತರಕ್ಷಣೆಯನ್ನು ಮಾಡಲೇಬೇಕು. ಇಲ್ಲದೇ ಹೋದರೆ ಇದು ರಾಜ್ಯಾಂಗಕ್ಕೆ ದ್ರೋಹ ಬಗೆದಂತಾಗುತ್ತದೆ: ಇದನ್ನು ಮಾನ್ಯ ಮಂತ್ರಿಗಳು ಯೋಚನೆ ಮಾಡಿ, ಇವರುಗಳಿಗೆ ರಕ್ಷಣೆ ಕೊಡತಕ್ಕ ರೀತಿಯಲ್ಲಿ ಕೆಲಸ ಮಾಡ ಬೇಕು ಎಂದು ನಾನು ಹೇಳುತ್ತೇನೆ. ಈಗ ಮಾನ್ಯ ಮಲ್ಲಿಕಾರ್ಜುನಸ್ವಾಮಿಗಳು ವಿದ್ಯಾಮಂತ್ರಿಗಳಾಗಿ ಬಿಟ್ಟಿ ದ್ದಾರೆ. ನಮ್ಮ ರಾಜ್ಯದಲ್ಲಿರತಕ್ಕ ಮೂರು ಯೂನಿವರ್ಸಿಟಿಗಳಲ್ಲಿ, ಮೈಸೂರು ಯೂನಿವರ್ಸಿಟಿ ಒಕ್ಕಲಿಗರ, ಕರ್ನಾಟಕ ಯೂನಿವರ್ಸಿಟಿ ಲಿಂಗಾಯಿತರ ಮತ್ತು ಬೆಂಗಳೂರು ಯೂನಿವರ್ಸಿಟಿ ಮತ್ತೊಬ್ಬರ ಯೂನಿ ವರ್ಸಿಟಿಯಾಗಿದೆ. ಹೀಗಾದರೆ, ಅಲ್ಲಿ ಪ್ರೊಫೆಸರ್‌ಗಳು ಅಸಿಸ್ಟೆಂಟ್ ಪ್ರೊಫೆಸರ್‌ಗಳನ್ನು ಮತ್ತು ರೀಡರ್ಸ್‌ ಗಳನ್ನ ಅಥವಾ ಜವಾನರ ಹುದ್ದೆಗಳಿಗೂ ಯಾವ ರೀತಿಯ ಪ್ರಾತಿನಿಧ್ಯವೂ ಇವರಿಗೆ ದೊರೆತಿಲ್ಲ. ಅವರಿಗೆ ನೀವು ಲಕ್ಷೋಪಲಕ್ಷ ರೂಪಾಯಿಗಳನ್ನು ಬಡ್ಜೆಟ್ಟಿನಲ್ಲಿ ಒದಗಿಸಿಕೊಡುತ್ತಿಲ್ಲವೇ ? ಈ ವಿಷಯಗಳನ್ನು ಸರ್ಕಾರದವರು ಪರಿಶೀಲನೆ ಮಾಡಿ, ಒಂದು ಕಾಮನ್ ಯೂನಿವರ್ಸಿಟಿ ಬಿಲ್ಲನ್ನು ಜಾಗ್ರತೆಯಾಗಿ ಜಾರಿಗೆ ತಂದು, ರಾಜ್ಯಾಂಗದಲ್ಲಿ ಯಾವರೀತಿ ಒಂದು ವ್ಯವಸ್ಥಿತವಾದ ಹಕ್ಕುಬಾಧ್ಯತೆಗಳನ್ನು ಕೊಟ್ಟಿ ದ್ದಾರೋ ಅದನ್ನು ಅಳವಡಿಸಿ, ಅವರನ್ನು ರಕ್ಷಣೆ ಮಾಡಬೇಕು ಎಂದು ಒತ್ತಾಯಪೂರ್ವಕವಾಗಿ ತಮ್ಮ ಮೂಲಕ ನಾನು ಮಾನ್ಯ ವಿದ್ಯಾಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ, ಮಹಾತ್ಮ ಗಾಂಧಿಯವರು ಹೇಳಿದಂತೆ ಅಸ್ಪೃಶ್ಯತೆ ನಿವಾರಣೆಯಾಗದಿದ್ದರೆ, ನಾವು ಬೆಳೆಸಿದ ಸ್ವಾತಂತ್ರ್ಯ ಉಳಿಯುವುದಿಲ್ಲ. ನಾವು ಸ್ವಾತಂತ್ರ್ಯವನ್ನು ಕಳೆದುಕೊಳ್ಳತಕ್ಕ ರೀತಿಯಲ್ಲಿದ್ದೇವೆ. ಅಸ್ಪೃಶ್ಯತೆಗೆ ಏನಾದರೂ ಯೋಚನೆಗಳನ್ನು ನೀವು ಮಾಡಿದ್ದೀರಾ ? ಈ ಅಸ್ಪೃಶ್ಯತೆ ಗ್ರಾಮಾಂತರ ಪ್ರದೇಶಗಳಲ್ಲಿ ತಾಂಡವಾಡುತ್ತಿದೆ. ಇದರಿಂದಾಗಿ ನಮ್ಮ ಮಾನವೀಯತೆಯೇ ಹಾಳಾಗುತ್ತದೆ. ಗ್ರಾಮಾಂತರಗಳಲ್ಲಿ ನಮ್ಮನ್ನು ಹಂದಿ, ನಾಯಿ, ಕತ್ತೆ ಇಂಥ ಪ್ರಾಣಿಗಳಿಗಿಂತ ಕಡೆಯಾಗಿ ಕಾಣುತ್ತಿದ್ದಾರೆ' ಈ ಶೋಷಣೆಯ ಬಗ್ಗೆ ಮಾನ್ಯ ಮಿತ್ರರಾದ ದೊಡ್ಡ ತಿಮ್ಮಯ್ಯನವರು ಆಂಗ್ಲ ಭಾಷೆಯಲ್ಲಿ ಚೆನ್ನಾಗಿ ಚಿತ್ರಿಸಿದ್ದಾರೆ. ಅದನ್ನು ನಾನು ಮತ್ತೆ ಒತ್ತಾಯ ಮಾಡಿ ಹೇಳಬೇಕಾದ್ದು ಇಲ್ಲ. ಸರ್ಕಾರದವರು ಸಂತಾನವನ್ನು ಮಿತಿ ಮಾಡಲಿಕ್ಕೆ ಯಾವ ಯಾವ ಯೋಜನೆಗಳನ್ನು ಹಾಕಿಕೊಂಡಿದ್ದಾರೋ ಅದೇ ರೀತಿಯಲ್ಲಿ ಅಸ್ಪೃಶ್ಯತೆಯ ನಿವಾರಣೆಯ ಬಗ್ಗೆ ಪ್ರದರ್ಶನ, ಕಾನ್‌ಫರನ್ಸ್‌ಗಳು, ಚಲನಚಿತ್ರಗಳನ್ನು ಪ್ರಕಟಣೆ ಮಾಡುವುದನ್ನು ಮಾಡಬೇಕು ಅದಕ್ಕಾಗಿ ಒಂದು ಯೋಜನೆಯನ್ನೇ ಮಾಡಿ: ಇದರಲ್ಲಿ ನಮ್ಮ ಮಾನ್ಯ ಮಂತ್ರಿಗಳು ಹೆಚ್ಚಿನ ಆಸಕ್ತಿ ಯನ್ನು ತೆಗೆದುಕೊಳ್ಳಬೇಕು ಇಲ್ಲದೇ ಹೋದರೆ, ನಮಗೆ ಮಾನವೀಯತೆ ಸಿಕ್ಕುವುದಿಲ್ಲ. ನಮ್ಮನ್ನು ಮನುಷ್ಯರನ್ನಾಗಿ ಕಾಣತಕ್ಕ ರೀತಿಯಲ್ಲಿ ಒಂದು ವಾತಾವರಣವನ್ನು ಸೃಷ್ಟಿಸಬೇಕು ಎಂದು ನಾನು ಹೇಳುತ್ತೇನೆ. ಈ ಅಸ್ಪೃಶ್ಯತೆಯ ಜಾಡ್ಯದಿಂದ ದೂರ ಹೋಗುವುದಕ್ಕಾಗಿ ಡಾಕ್ಟರ್ ಅಂಬೇಡ್ಕರ್ ಅವರು ತಮ್ಮ ಮಾನವೀಯತೆಯನ್ನು ಉಳಿಸಿಕೊಳ್ಳುವುದಕ್ಕೋಸ್ಕರ ಮತಾಂತರ ಹೊಂದಿದರು ಇವತ್ತಿನದಿವಸ ಲಕ್ಷೋಪಲಕ್ಷ ಜನ ಪರಿಶಿಷ್ಟ ವರ್ಗದವರು, ಪರಿಶಿಷ್ಟ ಜನಾಂಗದವರು, ಹಿಂದೂ ಧರ್ಮವನ್ನು ಬಿಟ್ಟು ಕ್ರಿಶ್ಚಿಯನ್ಸ್ ಆಗುತ್ತಿದ್ದಾರೆ, ಬುದ್ದಿಸ್ಟ್ ಆಗಿದ್ದಾರೆ. ಕರ್ನಾಟಕ ರಾಜ್ಯದಲ್ಲಿರ ತಕ್ಕ ೪೫ ಲಕ್ಷ ಹರಿಜನರು ಮುಸ್ಲಿಮರು ಆದರೆ ನಮ್ಮ ಗತಿ ಏನು ? ಐದನೆಯ ಒಂದು ಭಾಗ ಜನ ಸಂಖ್ಯೆ ಏನು ಇದೆ ಅವರನ್ನು ಈ ಅಂಟುಜಾಡ್ಯ ಏನು ಇದೆ, ಇದರಿಂದ ನಿವಾರಣೆ ಮಾಡದಿದ್ದರೆ, ಇವರೆಲ್ಲರೂ ಬುದ್ದಿಸ್ಟ್ ಆಗುವುದಿಲ್ಲವೇ, ಮುಸಲ್ಮಾನರು ಆಗುವುದಿದೆವೇ, ಈರೀತಿ ಆದರೆ ಇನ್ನೊಂದು

ಪಾಕಿಸ್ಥಾನವನ್ನೆ ಆಗುತ್ತದೆ ಎನುವುದನ್ನು ಈ ಮೂಲಕ ಸರ್ಕಾರಕ್ಕೆ ಸೂಚನೆಯಾಗಿ ಹೇಳುತ್ತಿದೆ ನೀವು ಹಿಂದೂ ಧರ್ಮವನ್ನು ಉಳಿಸಿಕೊಳ್ಳಬೇಕಾದರೆ ಇವರನ್ನು ಹಿಂದೂಗಳಾಗಿ ಕಾಣಬೇಕಾದರೆ ಈ ಅಸ್ಪೃಶ್ಯತೆ ನಿವಾರಣೆಯ ಬಗ್ಗೆ ಒಂದು ಯೋಚನೆಯನ್ನು ಮಾಡಿ, ಮಿತ ಸಂತಾನಕ್ಕೆ ಹೇಗೆ ಹಣವನ್ನು ಖರ್ಚು ಮಾಡುತ್ತಿದ್ದೀರಿಯೋ ಹಾಗೆ ಇದಕ್ಕೂ ವಿಶೇಷವಾಗಿ ಹಣವನ್ನು ಖರ್ಚುಮಾಡಿ, ಅವರಿಗೆ ವಿಶೇಷವಾದ ಹಕ್ಕುಬಾಧ್ಯತೆಗಳು ದೊರಕುವಂತೆ, ಇವರು ಮಾನವೀಯತೆಯನ್ನು ಉಳಿಸಿಕೊಳ್ಳುವಂತೆ ಮಾಡಬೇಕು ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಷ್ಟಪಡುತ್ತೇನೆ,

MR. DEPUTY SPEAKER —Mr. Jayaprakash, do you know, there are a Christian Harijans and Muslim Harijans also.

SRI M. H JAYAPRAKASH NARAYAN.—Yes, My first brother has married a Christian Gradute girl, and my second brother has married other community girl. So, we must think that we are Indians, not Hindus:

ಸರ್ಕಾರದಲ್ಲಿ ಉದ್ಯೋಗ ವ್ಯವಸ್ಥೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಹಿಂದೆ ಯಾರು ಯಾರೇ ದಿವಾನರುಗಳಾಗಿದ್ದರೋ, ಸೆಕ್ರಟರಿಗಳಾಗಿದ್ದರೋ ಕೌನ್ಸಿಲರ್ಸ್ ಆಗಿದ್ದರೋ, ಮಂತ್ರಿಗಳಾಗಿದ್ದರೋ ಅಂಥವರ ಮಕ್ಕಳಿಗೆ ಮೊಮ್ಮಕ್ಕಳಿಗೆ ಎಲ್ಲಾ ಸ್ಥಾನಮಾನಗಳು ಸಿಕ್ಕಿವೆ. ಐಪಿಎಸ್, ಐಎಎಸ್ ವಿದ್ಯಾಭ್ಯಾಸದ ಕಡೆ ಬಡವರ ಬಗ್ಗೆ ಯಾರಾದರೂ ಯೋಚನೆ ಮಾಡಿದ್ದೀರಾ? ಕಳೆದ ೨೫ ವರ್ಷಗಳಿಂದ ಕ್ಲಾಸ್ ೧ ೪ ೬ ಪರ್ಸೆಂಟ್ ಹುದ್ದೆಗಳು ಕ್ಲಾಸ್—೨ ೪ ೮, ಕ್ಲಾಸ್-೩ ೭ ೪, ಮತ್ತು ಕ್ಲಾಸ್-೪ ೧೭ ೨ ಪರ್ಸೆಂಟ್ ಸ್ಕ್ಯಾವೆಂಜರ್ಸ್ ಮತ್ತು ಸ್ವೀಪರ್ಸ್ ಸೇರಿಸಿದರೆ ಪ್ರಾತಿನಿಧ್ಯ ದೊರೆತಿವೆ. ಅದೇ ರೀತಿಯಲ್ಲಿ ಷೆಡ್ಯೂಲ್ಡ್ ಟ್ರೈಬ್ಸ್ ೯.೭ ಕ್ಲಾಸ್ ೧ ಮತ್ತು ೧.೨ ಕ್ಲಾಸ್ ೨ ಇದೆ. ೨೫ ವರ್ಷಗಳ ರೆಸ್ಟ್ರಿಕ್ಷನಲ್ಲಿ ಇವರಿಗೆ ಶೇಕಡ ೪ರಷ್ಟು ಅಪಾಯಿಂಟ್‌ಮೆಂಟ್ ಕೊಟ್ಟಿದೆ. ಈ ರೀತಿ ಕೊಡುತ್ತಾ ಹೋದರೆ ಇನ್ನು ಇವರು ಶೇಕಡ ೧೮ ರಷ್ಟು ಕೊಡಬೇಕಾದರೆ ೧೫೦ ವರ್ಷಗಳು ಬೇಕಾಗುತ್ತದೆ ಇನ್ನು ೧೫೦ ವರ್ಷಗಳ ಮೇಲೆ ಈ ಒಂದು ರಿಯಾಯಿತಿ ಇರುತ್ತದೆ. ಆಗ ಅವರ ಪ್ರಗತಿಯಾಗುತ್ತದೆ ಇದಕ್ಕೆ ರಾಜ್ಯಾಂಗ, ಯಾವ ಉಪನಿಷತ್ತೂ ಬೇಕಾಗಿಲ್ಲ. ಯಾವ ಎಂಪ್ಲಾಯ್‌ಮೆಂಟನ್ನೂ ಕೇಳಬೇಕಾಗಿಲ್ಲ. ನೇರವಾಗಿ ಹರಿಜನ, ಗಿರಿಜನರ, ಹಾಗೂ ಪರಿಶಿಷ್ಟ ವರ್ಗದವರನ್ನು ಕ್ಲಾಸ್ ೧, ೨, ೩ನೇ ದರ್ಜೆಯ ಹುದ್ದೆಗಳಲ್ಲಿ ನೇಮಕಮಾಡಬೇಕೆಂಬ ಧೋರಣೆಯನ್ನು ಹಾಕಿಕೊಳ್ಳಬೇಕು. ಈಗಾಗಲೇ ೨೧ ಸಾವಿರ ಜನರನ್ನು ಕ್ಲಾಸ್ ೩ನೇ ದರ್ಜೆಯಲ್ಲಿ ಲೋಕಲ್ ಕ್ಯಾಂಡಿಡೇಟ್‌ಗಳಾಗಿ ನೇಮಿಸಿ ಕ್ರಮಗೊಳಿಸುವುದಕ್ಕೆ ಪ್ರಯತ್ನ ಮಾಡಬೇಕು. ಶೇಕಡ ೧೮ರಷ್ಟು ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ಗಳಿಗೆ ಕೊಟ್ಟು ಅವರನ್ನು ಲೋಕಲ್ ಕ್ಯಾಂಡಿಡೇಟ್‌ಗಳಾಗಿ ನೇಮಿಸಬೇಕು. ಅವರಿಗೆ ಇದರಲ್ಲಿ ಪ್ರಾತಿನಿಧ್ಯ ಬಂದಮೇಲೆ ಕ್ರಮಗೊಳಿಸುವ ರೀತ್ಯ ತಕ್ಕವ್ಯವಸ್ಥೆಯನ್ನು ಮಾಡಬೇಕು. ಇನ್ನು ಇವರಿಗೆ ಎಕ್ಸ್‌ಟೆನ್ಷನ್, ಮತ್ತು ರೀಎಂಪ್ಲಾಯ್‌ಮೆಂಟ್ ಕೊಡುವುದರಲ್ಲಿ ವಿರುಪೇರು ಇದೆ ಇದುವರೆಗೆ ಹರಿಜನ ಗಿರಿಜನರಿಗೆ ಎಷ್ಟರಮಟ್ಟಿಗೆ ಎಕ್ಸ್‌ಟೆನ್‌ಷನ್ ಮುಂತಾದ ವಿಷಯಗಳಲ್ಲಿ ಪ್ರಾತಿನಿಧ್ಯವನ್ನು ಕೊಟ್ಟಿದ್ದೀರಿ, ಬೇರೆಯವರಿಗೆ ಎಷ್ಟರಮಟ್ಟಿಗೆ ಕೊಟ್ಟಿದ್ದೀರಿ ಎಂಬುದನ್ನು ತಿಳಿಸಬೇಕು ಇದರ ಬಗ್ಗೆ ಸುಪ್ರೀಂಕೋರ್ಟ್ ಆರ್ಡರ್ ಕೂಡ ಇದೆ. ಇವರಿಗೆ ಪ್ರಾತಿನಿಧ್ಯ, ಪ್ರೊಮೋಷನ್ ವೇಕೆನ್ಸೀಸ್ ಕೊಡಬೇಕೆಂದು ಇದೆ. ಅದನ್ನೂ ಸಹ ಸರ್ಕಾರದವರು ಪರಿಶೀಲನೆ ಮಾಡಬೇಕು. ಆದರೆ ನೀವು ಕ್ಯಾಬಿನೆಟ್ ಸಬ್‌ಕಮಿಟಿ ಎಂಬುದಾಗಿ ಮಾಡಿದ್ದೀರಿ. ಅದರಲ್ಲಿಯೂ ಈ ವಿಚಾರದಲ್ಲಿ ಈಗಾಗಲೇ ಪರಿಶೀಲನೆ ನಡೆಯಿತು. ಎಷ್ಟು ಸಾರಿ ಈ ಮೀಟಿಂಗ್ ನಡೆಯಿತೋ ಅದರ ಬಗ್ಗೆ ವರದಿಯನ್ನು ಮಾಡಿದ್ದರೂ ಇದುವರೆಗೆ ಅದು ಅಸ್ತಿತ್ವಕ್ಕೆ ಬಂದಿಲ್ಲ. ಇದಕ್ಕೆ ಮಾನ್ಯ ಶ್ರೀ ಮಲ್ಲಿಕಾರ್ಜುನಸ್ವಾಮಿಯವರೂ ಮತ್ತು ಮಾನ್ಯ ಶ್ರೀ ಬಸವಲಿಂಗಪ್ಪನವರೂ ಇಬ್ಬರೂ ಕೂಡ ಜವಾಬ್ದಾರರು. ಇದುವರೆಗೆ ಅವರು ಈ ವಿಚಾರದಲ್ಲಿ ಏನೂ ಮಾಡದೇ ಇರುವುದು ಬಹಳ ಲೋಪ. ಈಗ ಹೊಸದಾಗಿ ಬಂದಿರುವವರು ಒಬ್ಬರು, ಈ ಮೂರು ಜನರೂ ಸೇರಿಕೊಂಡು ಒಂದು ವರ್ಷದಲ್ಲಿಯಾದರೂ ಇದರ ಬಗ್ಗೆ ಒಂದು ಡಿಸಿಷನ್ ತೆಗೆದುಕೊಂಡು ತೀರ್ಮಾನಮಾಡಬೇಕು ಇದರ ಜೊತೆಗೆ ಬೀರಪ್ಪ ಕಮಿಟಿ ರಿಪೋರ್ಟನ್ನೂ ಸಹ ಪರಿಶೀಲನೆಮಾಡಬೇಕು. ಈ ಸಂದರ್ಭದಲ್ಲಿ ಇಂಡಸ್ಟ್ರೀಸ್ ವಿಷಯದಲ್ಲಿ ಒಂದು ಮಾತನ್ನು ಹೇಳುತ್ತೇನೆ. ನನ್ನ ಮಾನ್ಯ ಮಿತ್ರರಾದ ಮಾನ್ಯ ಶ್ರೀ ದೊಡ್ಡತಿಮ್ಮಯ್ಯನವರು ಆ ವಿಚಾರದಲ್ಲಿ ಸವಿಸ್ತಾರವಾಗಿ ಹೇಳಿದ್ದಾರೆ ಇಡಸ್ಟ್ರಿಯಲ್ ಷೆಡ್ ಕಟ್ಟುವ ವಿಷಯಗಳಲ್ಲಿ ಅದರ ಬಗ್ಗೆ ಏಜೆನ್ಸಿ ಕೊಡುವ ವಿಚಾರದಲ್ಲಿ ಪರ್ಮಿಟ್‌ಗಳನ್ನು ಕಂಟ್ರಾಕ್ಟರಿಗೆ ಕೊಡುವ ವಿಚಾರದಲ್ಲಿ ನನ್ನ ಅನೇಕ ಮಿತ್ರರು ಈಗಾಗಲೇ ಹೇಳಿದ್ದಾರೆ. ಸಕ್ಕರೆ ಕಾರ್ಖಾನೆಗಳಲ್ಲಿ ಡೈರೆಕ್ಟರ್‌ಷಿಪ್ ಕೊಡುವ ಬಗ್ಗೆ ಪರಿಶಿಷ್ಟ ಜನಾಂಗಕ್ಕೆ ಪ್ರಾತಿನಿಧ್ಯ ದೊರಕಿಲ್ಲ.

(ಶ್ರೀ ಎಂ. ಹೆಚ್. ಜಯಪ್ರಕಾಶ್‌ನಾರಾಯಣ್)

ರಾಜ್ಯಾಂಗದಲ್ಲಿ ಕೊಟ್ಟಿರತಕ್ಕ ವಿಶೇಷ ರಿಯಾಯಿತಿಯನ್ನು ಈ ವಿಚಾರದಲ್ಲಿ ರಕ್ಷಣೆ ಮಾಡದೇ ಹೋದರೆ ರಾಜ್ಯಾಂಗಕ್ಕೆ ದ್ರೋಹ ಮಾಡಿದಂತಾಗುತ್ತದೆ. ಆ ರೀತಿಯಾದ ವಾತಾವರಣವನ್ನು ಸೃಷ್ಟಿಸದೆ ಅವೆಲ್ಲಕ್ಕೂ ಪ್ರಾತಿನಿಧ್ಯ ಕೊಡಬೇಕು. ಈ ರಾಜ್ಯದಲ್ಲಿರತಕ್ಕ ಒಟ್ಟು ಆದಾಯದಲ್ಲಿ ಹೆಚ್ಚು ಭಾಗ ಸಹಕಾರ ಸಂಘಗಳ ಮೂಲಕ ವ್ಯಯವಾಗುತ್ತಿದೆ ಇನ್ನುಮುಂದೆ ಯಾವ ಹೆಸರೇ ಆಗಲೀ ಅದು ರಿಜಿಸ್ಟರ್ ಆಗಬೇಕು. ಕೊನೆಯಪಕ್ಷ ಶೇಕಡ ೧೦ ರಷ್ಟಾದರೂ ಅಂತಹ ಸಹಕಾರ ಸಂಘಗಳಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಮೆಂಬರುಗಳು ಇರಬೇಕು. ಆ ಸಂಘಗಳ ಮಾನೇಜಿಂಗ್ ಕಮಿಟಿಯಲ್ಲಿ ಹರಿಜನರಿಗೆ ಪ್ರಾತಿನಿಧ್ಯ ಇರಲೇಬೇಕು. ಇಂಥಾದ್ದನ್ನು ಕೊಆಪರೇಟಿವ್ ಆಕ್ಟ್‌ನಲ್ಲಿ ರೂಲ್ಸ್‌ನೊಳಗೆ ತರಬೇಕು. ಇನ್ನು ಹೌಸಿಂಗ್ ಕಾರ್ಪೊರೇಷನ್ ಎಂಬುದಾಗಿ ಮಾಡಿದ್ದಾರೆ. ಹಿಂದೆ ಬಡ್ಜೆಟ್ಟಿನಲ್ಲಿ ೨-೩ ಲಕ್ಷ ರೂಪಾಯಿಗಳನ್ನು ಒದಗಿಸುತ್ತಿದ್ದರು. ೧೯೫೭ನೇ ಇಸವಿಯಲ್ಲಿ ಇದು ಒಂದು ಹೊಸ ಬದಲಾವಣೆ ಗಳನ್ನು ಮಾಡಿದರು. ೧೯೫೭-೫೮ರಲ್ಲಿ ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಹೊಸದಾಗಿ ಬೊಂಬಾಯಿ ಟೈಪ್‌ನಲ್ಲಿ ರೂಲ್ಸ್ ಮಾಡಬೇಕೆಂದು ಮಾಡಿ ಈಗ ೩೫೦ ಸೊಸೈಟಿಗಳು ಸೃಷ್ಟಿಯಾಗಿವೆ. ೩.೭೫ ಕೋಟಿ ರೂಪಾಯಿಗಳನ್ನು ಎಲ್.ಐ.ಸಿ.ಯಿಂದ ಕೊಡಿಸಿದ್ದೀರಿ, ನೀವೂ ಸಹ ಬಂಡವಾಳ ಹಾಕಿದ್ದೀರಿ. ಕೆಲವು ಮನೆಗಳನ್ನು ೧೫ ಸಾವಿರ ರೂಪಾಯಿಗಳವರೆಗೆ ಖರ್ಚುಮಾಡಿ ಕಟ್ಟಿಸಿದ್ದೀರಿ. ೨೫ ಸಾವಿರ ರೂಪಾಯಿಗಳನ್ನು ಇದುವರೆಗೆ ಖರ್ಚು ಮಾಡಲಾಗಿದೆ. ಇದು ಸಾಲದು. ಆದ್ದರಿಂದ ಪ್ರತಿವರ್ಷವೂ ಬಡ್ಜೆಟ್ಟಿನಲ್ಲಿ ಈ ಬಾಬಿಗೆ ಒಂದೊಂದು ಕೋಟಿ ರೂಪಾಯಿಗಳನ್ನು ಇಟ್ಟು ಅವರಿಗೆ ಹೆಚ್ಚಿಗೆ ಸಹಾಯ ವನ್ನು ಒದಗಿಸಲು ವ್ಯವಸ್ಥೆ ಮಾಡಬೇಕೆಂದು ನಾನು ಅಧ್ಯಕ್ಷ ಮೂಲಕ ಮಾನ್ಯ ಮಂತ್ರಿಗಳನ್ನು ಒತ್ತಾಯಮಾಡುತ್ತೇನೆ. ಈ ಸಂದರ್ಭದಲ್ಲಿ ನಾನು ಪ್ರಶ್ನೆಮಾಡುತ್ತೇನೆ. ನಮ್ಮ ಜನಾಂಗದಲ್ಲಿ ಹೌಸ್‌ಲೆಸ್ ಫ್ಯಾಮಿಲೀಸ್ ಮತ್ತು ಸೈಟಲೆಸ್ ಫ್ಯಾಮಿಲೀಸ್. ಅನ್‌ಎಂಪ್ಲಾಯ್‌ಮೆಂಟ್ ಗ್ರಾಜುಯೇಟ್ಸ್ ಎಷ್ಟು ಜನರಿದ್ದಾರೆಂಬ ಬಗ್ಗೆ ಸಾಕಷ್ಟು ಅಂಕಿಅಂಶಗಳು ಇಲ್ಲ. ಈಗ ನಮ್ಮಲ್ಲಿ ವಿಜಿಲೆನ್ಸ್ ಡಿಪಾರ್ಟ್‌ಮೆಂಟ್ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್ ಇರುವುದರಿಂದ ಅಲ್ಲಿರತಕ್ಕ ಹುದ್ದೆಗಳಲ್ಲಿ ಇರುವವರಿಗೆ ಇದಕ್ಕೆ ಸಂಬಂಧಪಟ್ಟಹಾಗೆ ಚೆಕಿಂಗ್ ಮಾಡುವ ಅಧಿಕಾರವಿರಬೇಕು ಕೇವಲ ಸಮಾಜಸೇವೆ ಮಾಡತಕ್ಕ ಯಾವ ಅಧಿಕಾರಿಯೂ ಅಲ್ಲಿ ಇಲ್ಲದೇ ಇರತಕ್ಕ ರೀತಿಯಲ್ಲಿ ಆ ಇಲಾಖೆಗಳು ಇವೆ. ಆ ರೀತಿ ಇರುವುದ ರಿಂದಲೇ ಇವರ ಪ್ರಗತಿ ಸರಿಯಾಗಿ ಆಗುವುದಿಲ್ಲ. ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳು ಕೇವಲ ೮-೧೦ ದಿವಸಗಳಲ್ಲಿ ಒಂದು ಸರ್ಕಾರದ ಆಜ್ಞೆಯನ್ನು ಹೊರಡಿಸಿದ್ದಾರೆ. ಅದೇ ಅಮಿಲಿಯರೇಷನ್ ಆಫ್ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಯುಟಿಲೈಜೇಷನ್ ಆಫ್ ಫಂಡ್ಸ್‌ಗೆ ಸಂಬಂಧಪಟ್ಟದ್ದು. ಇದರ ಬಗ್ಗೆ ಒಂದು ಹೊಸ ಆರ್ಡರನ್ನು ತಾಲ್ಲೂಕುಬೋರ್ಡಿಗೆ ಸಂಬಂಧಪಟ್ಟಹಾಗೆ ಈಗ ಹೊರಡಿಸಿದ್ದಾರೆ ಶೇಕಡ ೧೮ ರಷ್ಟು ಇರತಕ್ಕ ಫಂಡನ್ನು ಉದಾತ್ತವಾದ ರೀತಿಯಲ್ಲಿ ಖರ್ಚುಮಾಡುವ ಹಾಗೆ ಒಂದು ಹೊಸ ಆರ್ಡರನ್ನು ಮಾಡಿದ್ದಾರೆ ಅದೇ ರೀತಿಯಲ್ಲಿ ಇಂಡಸ್ಟ್ರಿ ಡಿಪಾರ್ಟ್‌ಮೆಂಟ್. ಎಜುಕೇಷನ್ ಡಿಪಾರ್ಟ್‌ಮೆಂಟ್ ಮತ್ತು ಬೇರೆ ಇಲಾಖೆಗಳಲ್ಲಿ ಯಾವ ರೀತಿಯಲ್ಲಿದೆಯೋ ಗೊತ್ತಿಲ್ಲ ಆದ್ದರಿಂದ ಎಲ್ಲ ಇಲಾಖೆ ಗಳಲ್ಲಿ ಶೇಕಡ ೧೮ರಷ್ಟು ಮೀಸಲಾಗಿಟ್ಟು ಒಂದು ಗೊತ್ತಾದ ರೀತಿಯಲ್ಲಿ ಯೋಚನೆ ಮಾಡಿ ಪರಿಶಿಷ್ಟ ಜನಾಂಗಕ್ಕೆ ಖರ್ಚುಮಾಡುವ ರೀತಿಯಲ್ಲಿ ಒಂದು ಹೊಸ ಆರ್ಡರ್ ಅವುಗಳಿಗೆ ಮುಟ್ಟಿದೆಯೋ ಇಲ್ಲವೋ ಗೊತ್ತಿಲ್ಲ. ನಾನು ಹೇಳಿದ ಸೂಚನೆಯಂತೆ ಎಲ್ಲಾ ಇಲಾಖೆಗಳಲ್ಲಿಯೂ ಜಾರಿಗೆ ತರಬೇಕೆಂದು ಹೇಳುತ್ತೇನೆ. ಕೇಂದ್ರಸರ್ಕಾರದಲ್ಲಿ ರಾಜ್ಯಾಂಗದ ಪ್ರಕಾರ ಅನುಸರಿಸುತ್ತಿರುವ ಹಾಗೆ ಎಲ್ಲ ಇಲಾಖೆ ಗಳಲ್ಲಿಯೂ ಶೇಕಡ ೧೮ ರಷ್ಟನ್ನು ಇರತಕ್ಕ ಹಣದಲ್ಲಿ ಮೀಸಲಾಗಿಡಬೇಕೆಂದು ಒಸಿದು ನೀತಿಯನ್ನು ಇಲ್ಲಿಯೂ ಅನುಸರಿಸಬೇಕೆಂದು ನಾನು ಹೇಳುತ್ತೇನೆ.

ಇನ್ನು ವಿದ್ಯಾಭ್ಯಾಸದ ವಿಷಯ. ಈ ಬಾಬಿಗೆ ಪ್ರತಿವರ್ಷವೂ ೭೦-೮೦ ಕೋಟಿ ರೂಪಾಯಿ ಗಳನ್ನು ಖರ್ಚುಮಾಡುತ್ತಿದ್ದಾರೆ, ಆದರೆ ಪರಿಶಿಷ್ಟ ವರ್ಗ ಹಾಗೂ ಪರಿಶಿಷ್ಟ ಜನಾಂಗಕ್ಕೆ ಏನು ಸೌಲಭ್ಯಗಳನ್ನು ಈ ಬಾಬಿನಲ್ಲಿ ಒದಗಿಸಿದ್ದೀರಿ ಎಂಬುದನ್ನು ಮಾನ್ಯ ಸಚಿವರು ಉತ್ತರ ಕೊಡುವಾಗ ಹೇಳಬೇಕೆಂದು ನಾನು ಹೇಳುತ್ತೇನೆ. ಈಗ ಇರತಕ್ಕ ೭೬ ಹಾಸ್ಟಲ್‌ಗಳನ್ನು ವರ್ಗಾಯಿಸುತ್ತಿದ್ದೀರಿ. ಇದರಿಂದ ಹರಿಜನ ಮತ್ತು ಗಿರಿಜನರಿಗೆ ಬಹಳವಾಗಿ ತೊಂದರೆಯಾಗುತ್ತಿದೆ. ಪ್ರೈಮರಿ ಎಜುಕೇಷನ್ನಿ ನಲ್ಲಿ ೭೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೀರಿ, ಅದರಲ್ಲಿ ಎಲ್ಲಾ ಇಲಾಖೆಗಳಲ್ಲಿ ಖರ್ಚುಮಾಡುವಾಗ ಅದರಲ್ಲಿಯೂ ಪ್ರೈಮರಿ ಶಾಲೆಗಳಲ್ಲಿ ಮತ್ತು ನರ್ಸರಿ ಶಾಲೆಗಳಲ್ಲಿ ಆ ಮಕ್ಕಳಿಗ ಕೊಡುವ ಬಟ್ಟೆ ಮತ್ತು ಪುಸ್ತಕಗಳನ್ನು ಹಂಚುವಾಗ ಮಾನ್ಯ ಶ್ರೀ ಸಿ. ಆರ್. ಅವರ ನೀತಿಯನ್ನು ಮತ್ತು ಮಾನ್ಯ ಶ್ರೀ ಗೋಪಾಲಸ್ವಾಮಿ ಅವರ ನೀತಿಯನ್ನು ಪರಿಪಾಲಿಸಬೇಕು. ಅದನ್ನೇನಾದರೂ ನೀವು ಯೋಚನೆಮಾಡಿದ್ದೀರಾ ? ನೀವೇನಾದರೂ ಅವರ ಬಗ್ಗೆ ಆದರ್ಶರಾಗಿದ್ದೀರಾ ಎಂದು ನಾನು

ಪ್ರಶ್ನೆ ಮಾಡುತ್ತೇನೆ. ಅದರ ಬಗ್ಗೆ ಈಗ ಒಂದು ಕೋಟಿ ರೂಪಾಯಿಗಳನ್ನು ಸಹ ಖರ್ಚುಮಾಡಲಿ. ಇರತಕ್ಕ ಹಾಸ್ಟಲ್‌ಗಳನ್ನು ಈಗ ವರ್ಗಾಹಿಸುತ್ತಿದ್ದಾರೆ. ಅಲ್ಲಿ ಸಿಬ್ಬಂದಿ ಇಲ್ಲ. ದುಡ್ಡು ಇಲ್ಲ, ಅಧ್ಯಕ್ಷರು ಸಹ ಇಲ್ಲ. ೭೦ ಕೋಟಿ ರೂಪಾಯಿಗಳನ್ನು ಖರ್ಚುಮಾಡಿ ವಿದ್ಯಾಭ್ಯಾಸ ಯೋಜನೆಗಳನ್ನು ಮಾಡುವಾಗ ಈ ರೀತಿಯಾಗಿ ಇರತಕ್ಕ ಹಾಸ್ಟಲ್‌ಗಳನ್ನು ವರ್ಗಾಹಿಸುವುದು ಸರಿಯಲ್ಲ. ಅದು ಒಳ್ಳೆಯ ನೀತಿಯಲ್ಲ. ಆದ್ದರಿಂದ ಈಗಿರತಕ್ಕ ಎಲ್ಲಾ ಹಾಸ್ಟಲ್‌ಗಳನ್ನೂ ಕೂಡಲೇ ಎಜುಕೇಷನ್ ಡಿಪಾರ್ಟ್‌ಮೆಂಟಿಗೆ ವರ್ಗಾಯಿಸಬೇಕು. ಆ ಹಾಸ್ಟಲ್‌ಗಳನ್ನೂ ಸಹ ಚೆನ್ನಾಗಿ ನಡೆಸಬೇಕು. ಈ ರೀತಿಯಾಗಿ ವಿದ್ಯಾ ಇಲಾಖೆಯಲ್ಲಿ ಹಾಸ್ಟಲ್‌ಗಳ ಮ್ಯಾನೇಜ್‌ಮೆಂಟ್ ಚೆನ್ನಾಗಿ ಇರಬೇಕು. ಒಬ್ಬ ಸೆಕೆಂಡ್ ಡಿವಿಜನ್ ಕ್ಲರ್ಕನ್ನು ಸೂಪರಿಂಟೆಂಡೆಂಟ್ ಅಥವಾ ವಾರ್ಡನ್ ಆಗಿ ಇಡುತ್ತಾರೆ. ಅದು ಸರಿಯಲ್ಲ. ಅಲ್ಲಿರತಕ್ಕವರು ಎಫಿಷಿಯೆಂಟಾಗಿ ಇರಬೇಕು. ಸರಿಯಾಗಿ ಗ್ರಾಂಟ್‌ಗಳನ್ನು ಅವರಿಗೆ ಕೊಡಬೇಕು. ಅದಕ್ಕೆ ಒಂದು ಪರ್ಮನೆಂಟ್ ಇಲಾಖೆ ಇರಬೇಕು. ಆದರೆ ಈಗ ವರ್ಗಾಯಿಸುವ ರೀತಿನೀತಿ ಸರಿಯಾಗಿಲ್ಲ. ಅವನ್ನು ವಾಪಸ್ಸು ಮಾಡಬೇಕೆಂದು ನಾನು ಹೇಳುತ್ತೇನೆ. ಅದಕ್ಕಾಗಿ ಒಂದು ಸ್ಪೆಷಲ್ ಎಜುಕೇಷನ್ ಬೋರ್ಡ್ ಫಾರ್ ಷೆಡ್ಯೂಲ್ಡ್ ಕ್ಯಾಸ್ಟ್ಸ್ ಅಂಡ್ ಷೆಡ್ಯೂಲ್ಡ್ ಟ್ರೈಬ್ಸ್‌ಗೆ ಎಂಬುದಾಗಿ ಮಾಡಬೇಕು.

ಇನ್ನು ಫೈನಾನ್ಸ್ ಕಾರ್ಪೊರೇಷನ್ ವಿಚಾರದಲ್ಲಿ ಅರ್ಥಮಂತ್ರಿಗಳು ಬಹಳವಾಗಿ ಹೇಳಿದ್ದಾರೆ. ಈ ಸಾಲಿನಲ್ಲಿ ೨೫ ಲಕ್ಷ ರೂಪಾಯಿಗಳನ್ನು ಇವಕ್ಕಾಗಿ ಕೊಟ್ಟಿದ್ದೇವೆಂದು ಸೂಚಿಸಿದ್ದಾರೆ. ಈ ನಿಮ್ಮ ೨೫ ಲಕ್ಷ ರೂಪಾಯಿಗಳಲ್ಲಿ ಅದೇನೂ ಸಾಕಾಗುವುದಿಲ್ಲ. ಇದಕ್ಕೆ ೫೦ ಕೋಟಿ ರೂಪಾಯಿಗಳ ಯೋಜನೆಯನ್ನು ಮಾಡಬೇಕು. ಕೇವಲ ೨೫ ಲಕ್ಷ ರೂಪಾಯಿಗಳಲ್ಲ. ಕೋಟಿ ರೂಪಾಯಿಗಳಷ್ಟು ಬಂಡವಾಳವನ್ನು ಹಾಕಬೇಕು. ಕೇವಲ ಹೌಸಿಂಗ್‌ಬೋರ್ಡ್ ಮಾತ್ರ ೬೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದೆ: ನಿಮ್ಮ ವರ್ಗವನ್ನು ಉದ್ಧಾರ ಮಾಡತಕ್ಕ ತತ್ವವನ್ನು ಇಟ್ಟುಕೊಂಡಿರುವವರು ಹಾಗದ ಈ ಸರ್ಕಾರವನ್ನು ರಚನೆ ಮಾಡಿರತಕ್ಕ ಜನ ಏನಿದ್ದಾರೆಯೋ ಅವರು ಎಲ್ಲ ವಿಥದಲ್ಲಿಯೂ ನಿಮ್ಮ ವರ್ಗ ಜನರಿಗೆ ರಕ್ಷಣೆಯನ್ನು ಕೊಡಬೇಕು. ಮಾನ್ಯ ಮುಖ್ಯಮಂತ್ರಿಗಳು ಈ ದಿವಸ ಇಲ್ಲಿ ಇರಬೇಕಾಗಿತ್ತು. ಪೋಲೀಸಿನವರ ದಬ್ಬಾಳಿಕೆ ಇಲ್ಲಿ ಹೇಗಿದೆಯೆಂಬುದನ್ನು ಹೇಳುತ್ತಿದ್ದೆ. ಅವರ ಇಲಾಖೆಗೆ ಸಂಬಂಧಪಟ್ಟ ಬೇಡಿಕೆಗಳ ಬಗ್ಗೆ ಮಾತನಾಡುತ್ತಿದ್ದೆ. ಲೆದರ್ ಇಂಡಸ್ಟ್ರೀಸ್ ಕೆಲಸ ಕಾರ್ಯಗಳನ್ನು ಸಮರ್ಪಕವಾಗಿ ನಡೆದಿಲ್ಲ. ಅದಕ್ಕಾಗಿ ಒಂದು ಸ್ಟಾಚುಟರಿ ಬೋರ್ಡ್ ಮಾಡುತ್ತೇವೆಂದು ಹೇಳಿದ್ದರಿ. ಆ ಪರಿಸಿಷ್ಟ ವರ್ಗಕ್ಕೆ ಇನ್ನು ಮುಂದೆಯಾದರೂ ಯಾವುದಾದರೂ ಒಂದು ಯೋಜನೆಯನ್ನು ಸರ್ಕಾರದವರು ಖಂಡಿತವಾಗಿ ಹಾಕುತ್ತಾರೆಂದು ನಂಬಿದ್ದೇನೆ. ಅದಕ್ಕಾಗಿ ಮಂತ್ರಿಮಂಡಲದಲ್ಲಿ ಮೂರು ಜನರು ಇದ್ದೀರಿ-

ತಾವೆಲ್ಲರೂ ಒಗ್ಗಟ್ಟಿನಿಂದ ಒತ್ತಾಯ ಮಾಡಿ ಈ ಕೆಲಸವನ್ನು ಜಾರಿಗೆ ತರಬೇಕು. ಇನ್ನು ನಾನು ಆ ರಾಮಕೃಷ್ಣ ಹೆಗ್ಗಡೆಯವರ ತೀರ್ಥದ ಬಗ್ಗೆ ಎರಡು ಮಾತುಗಳನ್ನಾಡಬೇಕಾಗಿದೆ. ಅವರು ಜಾರಿಗೆ ತಂದ ಆ ತೀರ್ಥ ಬಹಳ ಪವಿತ್ರವಾದ ತೀರ್ಥ. ಇವರು ಮಂತ್ರಿಗಳಾಗುವುದಕ್ಕೆ ಮೊದಲು ಈ ರಾಜ್ಯದಲ್ಲಿ ಪ್ರೊಹಿಬಿಷನ್ ಒಂದು ರೀತಿಯಲ್ಲಿ ಜಾರಿಯಲ್ಲಿತ್ತು. ಇದು ಕೇವಲ ಎರಡು ತಾಲ್ಲೂಕುಗಳಲ್ಲಿ ಅಂದರೆ ಆಗಿನ ಮುಖ್ಯಮಂತ್ರಿಗಳಾಗಿದ್ದ ಶ್ರೀಮಾನ್ ಬಿ. ಡಿ ಜತ್ತಿಯವರ ತಾಲ್ಲೂಕಿನಲ್ಲಿ ಮತ್ತು ಶ್ರೀ ಬಿ. ರಾಚಯ್ಯನವರ ತಾಲ್ಲೂಕಿನಲ್ಲಿ ಜಾರಿಯಲ್ಲಿರಲಿಲ್ಲ. ಅಂದರೆ ಈ ಎರಡು ತಾಲ್ಲೂಕುಗಳಲ್ಲಿ ಮಾತ್ರ ಆ ಕುಡಿತದ ಸೋಂಕಿತ್ತು. ಆದರೆ ಶ್ರೀಮಾನ್ ನಿಜಲಿಂಗಪ್ಪನವರು ಇಲ್ಲಿ ಮುಖ್ಯಮಂತ್ರಿಗಳಾದ ನಂತರ ಈ ಪಾನನಿರೋಧವನ್ನು ಮತ್ತೆ ರಾಜ್ಯದಲ್ಲಿ ಜಾರಿಗೆ ತಂದದ್ದು ಅವರು ಈ ಹರಿಜನರಿಗೆ ಮಾಡಿರತಕ್ಕ ಒಂದು ಮಹಾದ್ರೋಹವೆಂದು ನಾನು ಹೇಳುತ್ತೇನೆ. ಅವರ ಕಾಲದಲ್ಲಿ ಮತ್ತೆ ಈ ಸೇಂದಿ ಸಾರಾಯಿಗಳ ಮಾರಾಟವನ್ನು ಹರಿಜನರ ಕೇರಿ ಕೇರಿಗಳಲ್ಲಿ ತಂದು ಆ ಹಿಂದೆ ಇವರೇನು ಕಳೆದ ೨೦ ವರ್ಷಗಳಿಂದ ಒಂದು ಪ್ರಗತಿಯನ್ನು ಸಾಧಿಸಿದ್ದರು ಅದನ್ನು ಹಾಳು ಮಾಡಿದ್ದಾರೆ. ಆದುದರಿಂದ ಈಗಲೂ ಕೂಡ ತಡವಾಗಿಲ್ಲ ಈ ಕುಡಿತವನ್ನು ಈ ರಾಜ್ಯದಲ್ಲಿ ಸಂಪೂರ್ಣವಾಗಿ ತಪ್ಪಿಸಬೇಕೆಂದು ಅದಕ್ಕೆ ತಕ್ಕ ಕಾನೂನು ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಆದರೆ ಹಿಂದೆ ಈ ಪ್ರೊಹಿಬಿಷನ್‌ನ್ನು ಜಾರಿಗೆ ತರತಕ್ಕ ಕಾಲದಲ್ಲಿ ಆ ಎಕ್ಸೈಜ್ ಬಾಬಿನಿಂದ ಸರ್ಕಾರಕ್ಕೆ ಬರತಕ್ಕ ೪೦ ಕೋಟಿ ರೂಪಾಯಿ ವರಮಾನದಲ್ಲಿ ಶೇ. ೫ರಷ್ಟು ಹಣವನ್ನು ಈ ಹರಿಜನರ ಉದ್ಧಾರಕ್ಕೆ ಮತ್ತು ಇದನ್ನು ಕುಡಿಯದಂತೆ ತಪ್ಪಿಸಲು ಅಗತ್ಯವಾದ ಪ್ರಚಾರ ಕಾರ್ಯ ಇತ್ಯಾದಿಗಳನ್ನು ಮಾಡತಕ್ಕ ಬಗ್ಗೆ ಒಂದು ಸಮಿತಿ ನೇಮಕ ಇವುಗಳಿಗೆ ಖರ್ಚು ಮಾಡಬೇಕೆಂದು ತೀರ್ಮಾನ ಮಾಡಲಾಗಿತ್ತು. ಆದರೆ ಆ ತೀರ್ಮಾನ ಕಾರ್ಯಗತ ಆಗಲೇ ಇಲ್ಲ.

4–30 P. M.

ಇನ್ನು ಪೋಲೀಸ್ ಇಲಾಖೆಯ ವಿಚಾರಕ್ಕೆ ಬಂದರೆ ಈ ಅಸ್ಪೃಶ್ಯತೆಯ ಕ್ರೈಮುಗಳು ದಿನದಿನಕ್ಕೂ ಹೆಚ್ಚಾಗುತ್ತಿವೆ. ಕಾರಣ ಅದೊಂದು ಅಂಟು ಜಾಡ್ಯ. ಅದಕ್ಕಾಗಿ ಒಂದು ಸ್ಪೆಷಲ್‌ಪೋಲೀಸ್‌ಸ್ಕ್ವಾಡ್

(ಶ್ರೀ ಎಂ. ಹೆಚ್. ಜಯಪ್ರಕಾಶ್‌ನಾರಾಯಣ್)

ಮತ್ತು ಒಬ್ಬ ಸ್ಪೆಷಲ್ ಐ.ಜಿ.ಪಿ. ಕೂಡ ಇರಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಇನ್ನು ವಿದ್ಯಾರ್ಥಿಗಳ ಬಗ್ಗೆ ಕೆಲವು ಮಾತುಗಳನ್ನು ಹೇಳುವುದಿದೆ. ಅಂದರೆ ಪರೀಕ್ಷೆಗಳಲ್ಲಿ ಫೈಲಾದ ಕೆಲವು ವಿದ್ಯಾರ್ಥಿಗಳಿಗೆ ಫಾಲ್ಸ್ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದರಿಂದ ಈ ದಿವಸ ಮಹಾರಾಣಿಯವರ ಕಾಲೇಜಿನಲ್ಲಿ ೪೩ ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಿದ್ದಾರೆ. ಹಾಗೇ ಎಂ.ಬಿ.ಬಿ.ಎಸ್. ನಲ್ಲಿ ಐದು ಮಂದಿ ಅಭ್ಯಾಸ ಮಾಡುತ್ತಿದ್ದಾರೆ. ಅವರಲ್ಲಿ ಮುಖ್ಯವಾಗಿ ಬ್ರಾಹ್ಮಣರು, ಮೊದಲಿಯಾರ್ಸ್, ನಾಯ್ಡೂಸ್ ಮತ್ತು ಕ್ರಿಶ್ಚಿಯನ್ಸ್ ಇವರೆ ಹೆಚ್ಚಿಗೆ ಇದ್ದಾರೆ. ಇದನ್ನು ತಡೆಗಟ್ಟಬೇಕು. ಹಾಗೇ ಈ ಅಡ್ಮಿನಿಸ್ಟ್ರೇಟಿವ್ ಸೆಟಪ್ಪನ್ನೂ ಕೂಡ ಸರಿಪಡಿಸಬೇಕು. ಸ್ಟೇಟ್ ಲೆವಲ್ಲಿಂದ ಹಿಡಿದು ಹೋಬಳಿ ಮಟ್ಟದವರೆಗೂ ಈ ಜನಾಂಗದವರ ಅಭಿವೃದ್ಧಿಗೆ ದಕ್ಷರಾದ ನಿಷ್ಪೃಹ ಅಧಿಕಾರಿಗಳನ್ನು ನೇಮಕ ಮಾಡಬೇಕು. ಕೇಂದ್ರದ ಮಾದರಿಯಲ್ಲಿ ರಾಜ್ಯದ ಹೋಂ ಪೋರ್ಟ್‌ಫೋಲಿಯೋ ಹರಿಜನ ಮಂತ್ರಿಗಳಿರಬೇಕು. ಡೆಪ್ಯುಟಿ ಡೈರೆಕ್ಟರುಗಳ ಸಂಖ್ಯೆಯನ್ನು ಹೆಚ್ಚಿಸುವುದರ ಜೊತೆಗೆ ಸ್ಪೆಷಲ್ ಡೆಪ್ಯುಟಿ ಕಮಿಷನರ್ ದರ್ಜೆಯ ಅಧಿಕಾರಿಗಳನ್ನು ಹರಿಜನರ ಡೆವಲಪ್‌ಮೆಂಟ್ ಕಮಿಷನರಾಗಿ ನೇಮಕ ಮಾಡಬೇಕು. ಈಗ ಮಾಡಿರತಕ್ಕ ವ್ಯವಸ್ಥೆ ನಗೆಗೇಡಿನದಾಗಿದೆ. ಅದನ್ನು ಕೂಡಲೆ ತಪ್ಪಿಸಿ ನಾನು ಹೇಳಿದ ಮಾದರಿಯಲ್ಲಿ ರೀಕಾನ್ಸ್ಟಿಟ್ಯೂಟ್ ಮಾಡಬೇಕು. ಪ್ರತಿಯೊಂದು ಹೋಬಳಿಗೂ ಸೋಷಿಯಲ್ ವೆಲ್‌ಫೇರ್ ಇನ್‌ಸ್ಪೆಕ್ಟರ್‌ಗಳನ್ನು ನೇಮಕ ಮಾಡಿ ಪ್ರತಿ ಹಳ್ಳಿಯಲ್ಲೂ ನರ್ಸರಿ ಶಾಲೆಗಳನ್ನು ತೆರೆಯಬೇಕು. ಆದರೆ ಈ ದಿವಸ ಒಂದನೆ ತರಗತಿಯಿಂದ ನಾಲ್ಕನೆ ತರಗತಿಯ ತನಕ ಯಾವ ಸಹಾಯವನ್ನೂ ಕೊಡುವುದಿಲ್ಲವೆಂದು ಹೇಳಿರುವುದು ಬಹಳ ಅನ್ಯಾಯ. ಅಲ್ಲಿಂದ ಮೇಲಕ್ಕೆ ಬಂದರಲ್ಲವೇ ಹುಡುಗರು ನಾಲ್ಕನೇ ತರಗತಿ ಮುಖವನ್ನು ಕಾಣುವುದು. ಅಲ್ಲಿಂದ ಮುಂದೆ ಸಹಾಯ ಕೊಡುತ್ತೇವೆಂದರೆ ಏನು ಮಾತು ? ಇದು ಸರಿಯಲ್ಲ ಇವರಿಗೆ ಒಂದನೇ ತರಗತಿಯಿಂದಲೂ ಸಹಾಯ ದೊರೆಯುವಂತೆ ಮಾಡಬೇಕು.

ಇನ್ನು ಆ ಮಹಾತ್ಮ ಬಾಬಾಸಾಹೇಬ್ ಅಂಬೇಡ್ಕರ್‌ರಿಗೆ—ಆತ ಕೇವಲ ರಾಷ್ಟ್ರದ ಹಿರಿಯ ನಾಯಕನಷ್ಟೇ ಅಲ್ಲ ಆತ ಅಂತರರಾಷ್ಟ್ರೀಯ ಖ್ಯಾತಿಯನ್ನು ಗಳಿಸಿದ್ದ ಒಬ್ಬ ಮಹಾವ್ಯಕ್ತಿ. ಆ ಮಹನೀಯನ ಉಪಕಾರದಿಂದಲೇ ಈ ದಿವಸ ನಾನೂ ಮತ್ತು ಆ ಹರಿಜನ ಮಂತ್ರಿಗಳು ಈ ಸಭೆಯಲ್ಲಿ ಬಂದು ಕುಳಿತುಕೊಳ್ಳುವುದಕ್ಕೆ ಅವಕಾಶ ದೊರೆತದ್ದು. ಈ ದಿವಸ ಆ ಮಹಾರಾಷ್ಟ್ರದಲ್ಲಿ ಪ್ರತಿಯೊಂದು ಕಛೇರಿಯಲ್ಲೂ ಆತನ ಭಾವಚಿತ್ರವನ್ನು ಅನಾವರಣ ಮಾಡಿದೆ. ಡೆಲ್ಲಿಯ ಪಾರ್ಲಿಮೆಂಟಿನ ಮುಂದೆ ಆ ಮಹನೀಯನ ಸ್ಟ್ಯಾಚ್ಯುವನ್ನು ಇಡಲಾಗಿದೆ. ನಮ್ಮ ರಾಜ್ಯದಲ್ಲಿಯೂ ಕೂಡ ಆ ಮಹನೀಯನ ಭಾವಚಿತ್ರವನ್ನು ಅನಾವರಣ ಮಾಡಿ ಆತನಿಗೆ ನಮ್ಮ ಗೌರವಗಳನ್ನು ಸೂಚಿಸಬೇಕೆಂದು ಹೇಳುತೇನೆ. ಈ ವಿಚಾರದಲ್ಲಿ ಸರ್ಕಾರದವರು ಕೂಡಲೆ ಒಂದು ತೀರ್ಮಾನ ಕೈಗೊಳ್ಳುವಂತೆ ನಮ್ಮ ಸಚಿವರುಗಳು ಒತ್ತಾಯ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಸಭೆಯಲ್ಲಿ ಮಾನ್ಯ ಚನ್ನಬಸಪ್ಪನವರಿಲ್ಲ ಇದ್ದಿದ್ದರೆ ಚೆನ್ನಾಗಿತ್ತು. ಅವರು ಒಂದು ಬಹಳ ಒಳ್ಳೇ ಕೆಲಸವನ್ನು ಮಾಡಿದ್ದಾರೆ. ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸ್‌ಗಳಿಲ್ಲದೇನೆ ೭೦೦ ಜನ ಅಸಿಸ್ಟೆಂಟ್ ಇಂಜಿನಿಯರುಗಳನ್ನು ನೇಮಕ ಮಾಡಿದ್ದಾರೆ. ಇದು ರಾಜ್ಯಾಂಗಕ್ಕೆ ಅವರು ಬಗೆದಿರುವ ದ್ರೋಹವೆಂದು ಹೇಳಬೇಕಾಗಿದೆ. ಇದರಲ್ಲಿ ಪರಿಶಿಷ್ಟ ಜನ ಮತ್ತು ವರ್ಗದವರಿಗೆ ಸಲ್ಲತಕ್ಕ ಶೇ ೧೮ ರಷ್ಟು ಹುದ್ದೆಗಳನ್ನು ಮೀಸಲಾಗಿರಿಸುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಲೇಬೇಕು. ಇಲ್ಲಿ ನೂರಕ್ಕೆ ೮೦ ಜನರು ಹಿಂದುಳಿದವರೂ ಮತ್ತು ಈ ಪರಿಶಿಷ್ಟವರ್ಗ ಮತ್ತು ಜನಾಂಗದವರಿದ್ದಾರೆ. ಇವರೆಲ್ಲರೂ ಆರ್ಥಿಕ, ಸಾಮಾಜಿಕ, ವಿದ್ಯಾಭ್ಯಾಸ ಇತ್ಯಾದಿ ಅನೇಕ ವಿಚಾರಗಳಲ್ಲಿ ಹಿಂದುಳಿದಿದ್ದಾರೆ. ಆದರೆ ನಾವೆಲ್ಲರೂ ಮಾನ್ಯ ರಾಚಯ್ಯನವರ ನೇತೃತ್ವದಲ್ಲಿ ಪ್ರಗತಿ ಸಾಧಿಸುತ್ತೇವೆಂಬ ನಂಬಿಕೆ ನಮಗಿದೆ. ಅದಕ್ಕೆ ನಾವು ಅವರಿಗೆ ಏನು ಸಹಕಾರ ಬೇಕಾದರೂ ನೀಡಲು ಸಿದ್ಧವೆಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ. 'ಜೈ ಹಿಂದ್'.

‡ ಶ್ರೀ ಜಿ. ಕೆ. ಸುಬ್ಬಯ್ಯ (ವಿರಾಜಪೇಟೆ).—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಸಭೆಯ ಮುಂದೆ ಮಂಡಿಸಿರತಕ್ಕ ಬೇಡಿಕೆಗಳನ್ನು ಬೆಂಬಲಿಸುತ್ತ ಕೆಲವು ವಿಷಯಗಳನ್ನು ಹೇಳುತ್ತೇನೆ.

ಈಗಾಗಲೇ ಅನೇಕ ಸ್ನೇಹಿತರು ಹರಿಜನರ ವಿಚಾರವಾಗಿ ಮಾತನಾಡಿರುವುದರಿಂದ ನಾನು ಕೇವಲ ಗಿರಿಜನರ ಬಗ್ಗೆ ಕೆಲವು ವಿಷಯಗಳನ್ನು ಹೇಳುತ್ತೇನೆ. ಮುಖ್ಯವಾಗಿ ಈ ಗಿರಿಜನರು ಹೆಚ್ಚಾಗಿರುವುದು ದಕ್ಷಿಣ ಕನ್ನಡ ಜಿಲ್ಲೆ, ಕೊಡಗು ಮತ್ತು ಮೈಸೂರು ಜಿಲ್ಲೆಯಲ್ಲಿ ಮಾತ್ರ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇವರ ಪ್ರಜಾಸಂಖ್ಯೆ ಸುಮಾರು ೬೩ ಸಾವಿರ, ಕೊಡಗಿನಲ್ಲಿ ೨೬ ಸಾವಿರ ಮತ್ತು ಮೈಸೂರಿನಲ್ಲಿ ಇದಕ್ಕೂ ಕಡಿಮೆ ಜನಸಂಖ್ಯೆಯ ಜನರಿದ್ದಾರೆ. ಈ ಜನಾಂಗದವರ ಅಭಿವೃದ್ಧಿಗಾಗಿ ಹುಣಸೂರಲ್ಲಿ ಒಂದು ಆಡ್‌ಹಾಕ್

ಸಮಿತಿಯನ್ನು ನೇಮಕ ಮಾಡಿತ್ತು. ಈ ಅಡ್‌ಹಾಕ್ ಸಮಿತಿ ಅಸ್ತಿತ್ವಕ್ಕೆ ಬರುವ ಮೊದಲು ಇವರ ಅಭಿವೃದ್ಧಿಯನ್ನೂ ಕೂಡ ಆ ಹರಿಜನರ ಅಭಿವೃದ್ಧಿಯನ್ನು ನೋಡಿಕೊಳ್ಳುತ್ತಿದ್ದ ಬಿ.ಡಿ.ಓ ಗಳೇ ಇಲ್ಲಿಯೂ ನೋಡಿಕೊಳ್ಳುತ್ತಿದ್ದರು. ಆದರೆ ಈ ಅಡ್‌ಹಾಕ್ ಬ್ಲಾಕ್ ಆದ ನಂತರ ಆ ಜನರ ಅಭಿವೃದ್ಧಿಗೆ ನಿಗಾ ವಹಿಸತಕ್ಕ ಇನ್‌ಸ್ಪೆಕ್ಟರುಗಳೇನಿದ್ದಾರೆ ಅವರಿಂದ ಈ ಜನಾಂಗಕ್ಕೆ ಬಹಳ ಚ್ಯುತಿಯಾಗಿದೆ ಬಿ.ಡಿ.ಓ.ಗಳು ಮತ್ತು ಸ್ಪೆಷಲ್ ಆಫೀಸರುಗಳು ಸಂಸ್ಥೆಗಳನ್ನು ನೋಡಿಕೊಳ್ಳುವರು ಆದರೆ ಬಿ.ಡಿ.ಓ ನೋಡುವರು ಎಂದು ಸ್ಪೆಷಲ್ ಆಫೀಸರು ಸುಮ್ಮನಿರುವರು, ಸ್ಪೆಷಲ್ ಆಫೀಸರು ನೋಡುವರೆಂದು ಬಿ.ಡಿ.ಓ. ಸುಮ್ಮನಿರುವರು. ಹೀಗಾಗಿ ಒಬ್ಬರೂ ನೋಡುವುದಿಲ್ಲ. ಸಮಾಜ ಕಲ್ಯಾಣ ಇಲಾಖೆಯ ಇನ್ಸ್‌ಪೆಕ್ಟರು ಬಿ.ಡಿ.ಓ ಅಧೀನದಲ್ಲೂ ಇಲ್ಲ, ಸ್ಪೆಷಲ್ ಆಫೀಸರ ಅಧೀನದಲ್ಲೂ ಇಲ್ಲ. ಹೀಗಾಗಿ ಕೆಲವು ವರ್ಷಗಳಿಂದ ಹರಿಜನ-ಗಿರಿಜನರ ಇನ್‌ಸ್ಟಿಟ್ಯೂಷನ್ಸ್ ಈ ಮೂರು ಜಿಲ್ಲೆಗಳಲ್ಲಿ ಬಹಳ ಕುಂಠಿತ ಆಗಿವೆ.

ನಮ್ಮ ಸರ್ಕಾರದ ಸ್ಪೆಷಲ್ ನ್ಯೂಟ್ರಿಷನ್ ಪ್ರೋಗ್ರಾಂ ಇದೆ. ಅದರಂತೆ ಚಿಕ್ಕ ಮಕ್ಕಳಿಗೆ ಮತ್ತು ಗರ್ಭಿಣಿಯರಿಗೆ ಸಹಾಯ ಮಾಡುವರು. ಆದರೆ ಅದು ಸರಿಯಾಗಿ ನಡೆಯುತ್ತಿಲ್ಲ. ಹಂದಿಗಳಿಗೆ ಈ ಪ್ರೋಗ್ರಾಂ ಪ್ರಕಾರ ದೊರೆಯುವುದನ್ನು ಕೊಟ್ಟಿರುವುದನ್ನು ನಾನು ಕಣ್ಣಾರೆ ನೋಡಿದ್ದೇನೆ. ಈ ರೀತಿ ದುರುಪಯೋಗವಾಗುವುದನ್ನು ನಿಲ್ಲಿಸಬೇಕು, ಇದರಿಂದ ಈಗ ಸಹಾಯವಾಗುತ್ತಿಲ್ಲ ಎಂದು ಒತ್ತಾಯ ಮಾಡುತ್ತೇನೆ.

ಈಗ ೫೩ ರೆಸಿಡೆನ್ಷಿಯಲ್ ಶಾಲೆಗಳು, ೧೧ ಬಾಯ್ಸ್ ಹಾಸ್ಟಲುಗಳು ಇವೆ. ಅವನ್ನು ಸರಿಯಾಗಿ ನೋಡಿಕೊಳ್ಳುತಿಲ್ಲ. ಕೆಲವು ವೆಲ್ಫೇರ್‌ಆಫೀಸರುಗಳು ನಿಷ್ಠೆಯಿಂದ ಕೆಲಸ ಮಾಡುತ್ತಿಲ್ಲ, ಇದನ್ನುದೊಡ್ಡ ತಿಮ್ಮಯ್ಯನವರು ಹೇಳಿದ್ದಾರೆ. ಆ ಆಫೀಸರುಗಳಿಗೆ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ ಎಂದರೆ ಸರಿಯಾಗಿ ಅರ್ಥ ಸಹ ಗೊತ್ತಿಲ್ಲ. ಸಮಾಜ ಕಲ್ಯಾಣವೆಂದರೇನೆಂಬುದೇ ಗೊತ್ತಿಲ್ಲ. ಕೆಲವರು ಸರ್ಕಾರಿನೌಕರಿ ಬೇಕಾದಾಗ ತಮಗಿರುವ ತೊಂದರೆ ನಮೂದುಮಾಡಿ ಕೇಳಿಕೊಂಡು ಅದನ್ನುಪಡೆಯುವರು. ಆದರೆ ನೌಕರಿ ದೊರೆತ ಮೇಲೆ ಸೇವೆ ಸಲ್ಲಿಸಬೇಕೆಂಬ ಮನೋಭಾವನೆ ಇರುವುದಿಲ್ಲ. ಸೇವೆ ಮಾಡಿ ಹಣ ಪಡೆಯಬೇಕೆಂಬ ಭಾವನೆ ಇರುವುದಿಲ್ಲ ತಮ್ಮ ಕಷ್ಟ ಕಳೆದುಕೊಳ್ಳಲು ನೌಕರಿ ಸೇರುವುದು, ಅವರ ಉದ್ದೇಶ ಬರೀ ಸಂಪಾದನೆ ಮಾಡಬೇಕೆಂಬುದು ಇದನ್ನು ಹೇಳಲು ನಾಚಿಕೆಯಾಗುವುದು.

ಬೊಂಬಿನ ಕೆಲಸ, ರೆಟ್ಯಾನ್, ಕ್ರಾಫ್ಟ್ ಮುಂತಾದವುಗಳಿಗೆ ಸಂಬಂಧಪಟ್ಟ ಕೆಲಸ ಕಲಿಯಲು ೩೦ ರೂಪಾಯಿ ಸ್ಟೈಫಂಡ್ ಕೊಡುವರು. ಆದರೆ ಗಿರಿಜನರ ಮಕ್ಕಳು ಅದಕ್ಕೆ ಸೇರುವುದಿಲ್ಲ, ಸೇರಿದವರು ಅನೇಕ ಸಲ ಬಿಟ್ಟುಹೋಗುವರು. ಅದು ಸಾಲುವುದಿಲ್ಲ. ಆದುದರಿಂದ ಅದನ್ನು ಹೆಚ್ಚಿಸಿ ೫೦ ರೂಪಾಯಿ ಗಳನ್ನಾದರೂ ಕೊಟ್ಟರೆ ವಿದ್ಯಾರ್ಥಿಗಳು ಸೇರಬಹುದು.

ಗಿರಿಜನರಿಗೆ ಸಂಬಂಧಪಟ್ಟ ಕೆಲವು ಉದ್ಯೋಗಗಳಿಗೆ ಅನೇಕ ಸಂದರ್ಭಗಳಲ್ಲಿ ಗೆಜೆಟೆಡ್ ರ‍್ಯಾಂಕಿಗೆ ಅವರ ಹೆಸರಿನಲ್ಲಿ ಇತರರು ಬರುತಿದ್ದಾರೆ. ಇತರರು ಗಿರಿಜನರಿಗೆ ದೊರೆಯುವ ಹುದ್ದೆಗಳನ್ನು ಕಬಳಿಸು ತ್ತಿದ್ದಾರೆ. ಹಿಂದೆ ಗಿರಿಜನರ ಹೆಸರು ಹೇಳುವುದಕ್ಕೆ ಬೇಜಾರು ಪಡುತ್ತಿದ್ದರು. ಕಾಡು ಕುರುಬರು, ಬೆಟ್ಟದ ಕುರುಬರು, ಜೇನು ಕುರುಬರು ಮುಂತಾದವರಿಗೆ ಇರುವ ಸೌಲಭ್ಯಗಳನ್ನು ಇತರರು ಇಂದು ಪಡೆಯುತ್ತಿದ್ದಾರೆ. ಆ ಉದ್ಯೋಗಗಳನ್ನು ಪಡೆಯಲು ಗಿರಿಜನರಲ್ಲದಿರುವವರು ತಾವು ಕಾಡುಕುರುಬರು, ಜೇನು ಕುರುಬರು ಎಂದು ಸರ್ಟಿಫಿಕೇಟ್ ಪಡೆದು ಮುಂದುವರೆಯುತಿದ್ದಾರೆ. ಇದರಿಂದ ಅನ್ಯಾಯ ವಾಗಿದೆ. ವಿಚಾರಿಸಿದರೆ ಕೆಲವು ದಿನಗಳಲ್ಲಿ ಇದನ್ನು ಕಂಡುಹಿಡಿಯಬಹುದು. ಮುಂದೆ ಈ ರೀತಿ ಅನ್ಯಾಯವಾಗದಂತೆ ನೋಡಿಕೊಳಬೇಕು.

ಇನ್ನು ತಾಲ್ಲೂಕು ಬೋರ್ಡ್ ಮತ್ತು ಗ್ರಾಮ ಪಂಚಾಯಿತಿಗಳಿಗೆ ಸಂಬಂಧಪಟ್ಟಂತೆ ಒಂದೆರಡು ವಿಷಯ. ಅನೇಕ ವರ್ಷಗಳಿಂದ ತಾಲ್ಲೂಕುಬೋರ್ಡ್ ಮತ್ತು ಪಂಚಾಯಿತಿಗಳಿಂದ ಗಿರಿಜನರಿಗೆ ಸಹಾಯ ವಾಗಿಲ್ಲ. ಹರಿಜನ-ಗಿರಿಜನರ ಮಂತ್ರಿಗಳು ಎಂದು ಹೇಳುವರು. ಹೆಣ್ಣು ಎಂದರೆ ಹೆಣ್ಣು ಮತ್ತು ಗಂಡು ಎಂದರ್ಥ ಎನ್ನುವರು. ಪ್ರತ್ಯೇಕವಾಗಿ ಹೇಳುವಾಗ ಹೆಣ್ಣು ಎಂದರೆ ಹೆಣ್ಣೇ, ಗಂಡು ಎಂದರೆ ಗಂಡೇ. ತಾಲ್ಲೂಕು ಬೋರ್ಡ್ ಆಕ್ಟಿನಲ್ಲಿ ವಿಶದವಾಗಿಲ್ಲ, ಆ ಕಾನೂನನ್ನು ತಿದ್ದುಪಡಿ ಮಾಡಬೇಕು. ಮಾಡದಿದ್ದರೆ ಗಿರಿಜನರಿಗೆ ತಾಲ್ಲೂಕು ಬೋರ್ಡ್ ಮತ್ತು ಪಂಚಾಯಿತಿಗಳಲ್ಲಿ ಹಣ ಸಿಕ್ಕುವುದಿಲ್ಲ, ಈಗ ಅನ್ಯಾಯವಾಗಿದೆ, ಗಿರಿಜನರ ಪ್ರಬಲವಾಗಿರುವ ಕಡೆ ಹರಿಜನರಿಗೆ ಅನುಕೂಲವಾಗುತ್ತಿಲ್ಲ. ಹರಿಜನರು ಪ್ರಬಲವಾಗಿರುವ ಕಡೆ ಗಿರಿಜನರಿಗೆ ಅನುಕೂಲವಾಗುತ್ತಿಲ್ಲ. ಕಾನೂನನ್ನು ತಿದ್ದುಪಡಿ ಮಾಡಿದ ಹೊರತು ಅನುಕೂಲವಾಗುವುದಿಲ್ಲ. ಆದುದರಿಂದ ಈ ಆಕ್ಟನ್ನು ಜಾಗ್ರತೆ ತಿದ್ದುಪಡಿ ಮಾಡಿ ಇರುವ ಲೋಪವನ್ನು ಸರಿಪಡಿಸಬೇಕು.

(ಶ್ರೀ ಜಿ. ಕೆ. ಸುಬ್ಬಯ್ಯ)

ಹೌಸಿಂಗ್ ಸ್ಕೀಂ. ಜನತಾ ಹೌಸಿಂಗ್ ಸ್ಕೀಂ ಇರುವಾಗ ಒಂದು ಸೆಂಟ್ ನೆಲ ಕೂಡ ಇಲ್ಲದಿರುವವರಿಗೆ ಕೆಲವರಿಗೆ ಅನುಕೂಲವಾಗಿದೆ. ಸ್ವಂತ ಜಾಗ ಸ್ವಲ್ಪ ಇರುವವರಿಗೆ ಈ ಯೋಜನೆ ಅನ್ವಯಿಸುವುದಿಲ್ಲ. ಹಾಗಾದರೆ ಅಂಥವರು ಯಾವ ಯೋಜನೆಗೆ ಒಳಪಡುವರು ? ಈಗಾಗಲೆ ಹೌಸಿಂಗ್ ಬೋರ್ಡ ತಾಲ್ಲೂಕು ಬೋರ್ಡಿಗೆ ೪ ತಿಂಗಳ ಹಿಂದೆ ಒಂದು ಸರ್ಕ್ಯುಲರ್ ಕಳಿಸಿದೆ. ಈ ಯೋಜನೆಯಂತೆ ೪ ಸಾವಿರ ರೂಪಾಯಿಗಳನ್ನು ಸಾಲದ ರೂಪದಲ್ಲಿ ಕೊಡುವರು. ಆದರೆ ೧೦ ಸೆಂಟ್ ಅಥವ ಅರ್ಧ ಎಕರೆ ಇರುವವರು ೪ ಸಾವಿರ ರೂಪಾಯಿ ಸಾಲ ತೆಗೆದುಕೊಂಡು ಮನೆ ಕಟ್ಟಿ ಆ ಸಾಲವನ್ನು ತೀರಿಸುವುದು ಹೇಗೆ ? ಇದನ್ನು ಯೋಚನೆ ಮಾಡಬೇಕು. ಆದುದರಿಂದ ಸ್ವಂತ ಜಾಗ ಇರುವವರಿಗೆ ಪ್ರತ್ಯೇಕವಾದ ಒಂದು ಯೋಚನೆ ಮಾಡದಿದ್ದರೆ ಹರಿಜನ-ಗಿರಿಜನರಿಗೆ ತೊಂದರೆಯಾಗುತ್ತದೆ. ನಮ್ಮ ಕಡೆ ಅರ್ಧ ಎಕರೆಯಿಂದ ಒಂದು ಎಕರೆಯವರೆಗೆ ಇಟ್ಟುಕೊಂಡಿರುವವರಿಗೆ ಡಿಸ್‌ಕ್ವಾಲಿಫಿಕೇಷನ್ ಇದೆ. ಆದುದರಿಂದ ಸರಿಯಾದ ಯೋಜನೆ ಮಾಡಿ ಜಾಗ ಇರುವವರಿಗೂ ಮನೆ ಕಟ್ಟಿಕೊಳ್ಳಲು ಅವಕಾಶ ಮಾಡಿಕೊಡಬೇಕು. ಜಾಗಗಳ ರಿಜಿಸ್ಟ್ರೇಷ್ವ ಮುಂತಾದ್ದಿಲ್ಲದೆ ಕೊಡಗು ತಾಲ್ಲೂಕು ಬೋರ್ಡ್ ಇರುವ ಕಡೆ ಜನರಿಗೆ ತೊಂದರೆಯಾಗುತ್ತಿದೆ. ಅಭಿವೃದ್ಧಿ ಕಾರ್ಯ ಮಾಡುವುದಕ್ಕೂ ತೊಂದರೆಯಾಗಿದೆ. ನಮ್ಮ ಕೊಡಗಿನಲ್ಲಿ ಹೆಚ್ಚು ಭಾಗ ಅರಣ್ಯಕ್ಕೆ ಸೇರಿ ಈಗ ಅದರಿಂದ ಉತ್ಪತ್ತಿ ಜಾಸ್ತಿಯಾಗಿದೆ. ಆದುದರಿಂದ ಅರಣ್ಯದ ಉತ್ಪತ್ತಿಯಲ್ಲಿ ಕೆಲವು ಅಂಶವನ್ನು ತಾಲ್ಲೂಕು ಬೋರ್ಡಿಗೆ ಕೊಡುವ ವ್ಯವಸ್ಥೆ ಮಾಡಬೇಕು.

ಎಕ್ಸೈಜ್ ಬಾಬಿನಿಂದ ಕೂಡ ಸರ್ಕಾರಕ್ಕೆ ಹೆಚ್ಚು ಉತ್ಪತ್ತಿ ಬರುವುದು. ಅದರಲ್ಲೂ ಒಂದು ಭಾಗ ತಾಲ್ಲೂಕು ಬೋರ್ಡಿಗೆ ಸಿಕ್ಕುವ ಹಾಗೆ ಮಾಡಿ, ಅದು ಚೆನ್ನಾಗಿ ಕೆಲಸ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು.

ಷೆಡ್ಯೂಲ್ ಕ್ಯಾಸ್ಟ್ ಮತ್ತು ಟ್ರೈಬ್‌ನವರಿಗೆ ಯೂನಿಫಾರಂ ಆಕ್ಟ್ ಇಲ್ಲದೆ ತೊಂದರೆಯಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಅನುಕೂಲ ಕೊಡಗಿನಲ್ಲಿಲ್ಲ. ಹೀಗೆ ಕುಂದುಕೊರತೆ ಇರುವುದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗಿದೆ. ಯಾವ ಭಾಗದಲ್ಲಿದ್ದರೂ ಗಿರಿಜನರಿಗೆ ಅನುಕೂಲವಾಗುವಂತೆ ಕಾನೂನು ಮಾಡಬೇಕು. ಕೆಲವು ಸಂದರ್ಭಗಳಲ್ಲಿ ಕೊಡಗಿನಲ್ಲಿ ಹರಿಜನ-ಗಿರಿಜನರಲ್ಲದವರಿಗೆ ಕಾಲೋನಿ ಮಂಜೂರು ಮಾಡಿದ್ದಾರೆ. ಉದಾಹರಣೆಗೆ ಡಿ.ಸಿ. ಮತ್ತು ಡಿವಿಜನಲ್ ಕಮಿಷನರು ರಿಜೆಕ್ಟ್ ಮಾಡಿದ್ದರೂ ಸರ್ಕಾರದ ಮಟ್ಟದಲ್ಲಿ ಶಿಫಾರಸು ಮಾಡಿರುವ ನಿದರ್ಶನಗಳಿವೆ. ಈ ರೀತಿ ಆದರೆ ಅನ್ಯಾಯವಾಗುವುದು. ಈ ರೀತಿ ಇನ್ನುಮೇಲೆ ಆಗಬಾರದು. ಹಿಂದಿದ್ದ ಮತ್ತು ಈಗಿರುವ ಮಂತ್ರಿಗಳಿಗೆ ಇದನ್ನು ಹೇಳಿದ್ದೇನೆ. ಇದರ ಬಗ್ಗೆ ತಕ್ಕ ಕ್ರಮ ತೆಗೆದುಕೊಳ್ಳಬೇಕು.

ತಾಲ್ಲೂಕು ಬೋರ್ಡಿನಿಂದ ಖರ್ಚು ಮಾಡುವ ಹಣದಲ್ಲಿ ೧೮ ಪರ್ಸೆಂಟ್ ಹರಿಜನ-ಗಿರಿಜನರಿಗೆ ಸಿಕ್ಕುತ್ತಿಲ್ಲ. ಎಲ್ಲ ತಾಲ್ಲೂಕುಗಳಲ್ಲಿಯೂ ಹರಿಜನರಿಗೆ ಮತ್ತು ಗಿರಿಜನರಿಗೆ ಸರಿಯಾದ ರೀತಿಯಲ್ಲಿ ಉಪಯೋಗಿಸುವ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಉದಾಹರಣೆಗೆ ಹೇಳುವುದಾದರೆ ಎರಡು ಮೂರು ತಾಲ್ಲೂಕುಗಳಲ್ಲಿ ಈ ಹಣವನ್ನು ಡ್ರಾ ಮಾಡಿ ಲ್ಯಾಪ್ಸ್ ಆಗುವ ಸಂದರ್ಭದಲ್ಲಿ ಹಾಗೆಯೇ ಇಟ್ಟಿರುತ್ತಾರೆ. ಅದನ್ನೇ ತಾಲ್ಲೂಕು ಬೋರ್ಡ್ ಸಿಬ್ಬಂದಿಯ ಸಂಬಳ ಕೊಡಲಿಕ್ಕೆ ಉಪಯೋಗಿಸಿರುವಂಥ ನಿದರ್ಶನಗಳಿವೆ. ಈ ತರಹ ಅನ್ಯಾಯ ಇನ್ನು ಮುಂದೆ ಆಗದ ಹಾಗೆ ನೋಡಿಕೊಳ್ಳಬೇಕೆಂದು ಕೇಳಿಕೊಂಡು ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕಾಗೋಡು ತಿಮ್ಮಪ್ಪ (ಸಾಗರ) ಮಾನ್ಯ ಅಧ್ಯಕ್ಷರೇ, ಸಮಾಜಕಲ್ಯಾಣ ಮತ್ತು ಸಮುದಾಯಿಕ ಅಭಿವೃದ್ಧಿ ಬಗ್ಗೆ ಇಟ್ಟಿರತಕ್ಕ ಬೇಡಿಕೆಗಳ ಬಗ್ಗೆ ಎರಡು ಮಾತುಗಳನ್ನು ಹೇಳಲಿಕ್ಕೆ ಇಷ್ಟಪಡುತ್ತೇನೆ. ಶ್ರೀಮಾನ್ ದೊಡ್ಡ ತಿಮ್ಮಯ್ಯನವರು ಹೇಳಿದ ಮಾತುಗಳನ್ನು ನಾನು ತುಂಬಾ ಕುತೂಹಲದಿಂದ ಕೇಳಿದೆ. ಕಟು ಸತ್ಯವನ್ನು ಅವರು ಹೇಳಿದ್ದಾರೆ. ಸತ್ಯವನ್ನು ಹೇಳಿದರೆ ಬಹಳ ಜನರಿಗೆ ಅಪಾರ್ಥವಾಗಬಹುದು. ಇವರ ಜೊತೆಗೆ ಶ್ರೀಮಾನ್ ಜಯಪ್ರಕಾಶ ನಾರಾಯಣ ಅವರೂ ಒಂದು ಮಾತನ್ನು ಹೇಳಿದರು, ಡಾಕ್ಟರ್ ಅಂಬೇಡ್ಕರ್ ವಿಷಯ. ದಿವಂಗತ ಅಂಬೇಡ್ಕರ್ ಅವರು ಇತಿಹಾಸದಲ್ಲಿ ಮತ್ತೆ ಹುಟ್ಟುವುದಕ್ಕೆ ಸಾಧ್ಯವಿಲ್ಲ. ಒಬ್ಬರೇ ಅಂಬೇಡ್ಕರ್. ಈ ದೌರ್ಭಾಗ್ಯದ ಭಾರತ ದೇಶದಲ್ಲಿ ಇತಿಹಾಸದ ಒಂದು ಭಾಗದಲ್ಲಿ ಒಂದು ದುರಂತವಾಗಿದೆ. ಯಾರು ರಾಜ್ಯಾಂಗವನ್ನು ಸೃಷ್ಟಿ ಮಾಡಿದರೋ, ಯಾರು ಈಗೆ ಬಿದವನನ್ನ, ಶೋಷಿತ ವರ್ಗಕ್ಕೆ ಒಂದು ಕಾಲನ್ನು ಕೊಟ್ಟು ನಿಲ್ಲಿಸುವುದಕ್ಕೆ ಪ್ರಯತ್ನ ನಡೆಸಿದರೋ. ಅವರ ದುರಂತ ಕಥೆಯನ್ನು ಇತಿಹಾಸದ ಪ್ರತಿಯೊಂದು ಪುಟದಲ್ಲಿಯೂ ಓದಿದರೆ ಗೊತ್ತಾಗುತ್ತದೆ. ಇತಿಹಾಸ ಬರೆಯತಕ್ಕ ಜನರು ಮಾನ್ಯಸದಸ್ಯರು ರಾಮಸ್ವಾಮಿಯವರಲ್ಲಿ, ಬೇರೆಯವರು ಬರೆಯ

ತ್ತಿದ್ದಾರೆ, ಈ ಹೊತ್ತು ವಿಧಾನ ಸೌಧದ ಒಳಗೆ ಎಷ್ಟೇ ಹೇಳಲಿ ಅದು ಯಾರ ಮೇಲೂ ಪರಿಣಾಮ ಮಾಡಿ . ಮೈಸೂರು ನಗರದಲ್ಲಿ ಹರಿಜನಯುವಕರು ಸಂಘಟಿತರಾಗಿ ಎದ್ದು ನಿಂತುಕೊಂಡರಲ್ಲ ಅವರಂತೆ ರಣಕಹಳೆ ಊದಿದರೆ ನಿಮ್ಮ ಕಡೆ ಎಲ್ಲರೂ ಬರುತ್ತಾರೆ. ಈ ಹೊತ್ತು ಇದು ಇಡೀ ರಾಷ್ಟ್ರಕ್ಕೆ ಸವಾಲು ಹಾಕಿ ನಿಂತಿರತಕ್ಕ ಪ್ರಶ್ನೆ. ನಾನು ಈ ಸದನದಲ್ಲಿ ಒಂದು ಸಲ ಚರ್ಚೆ ಮಾಡತಕ್ಕ ಕಾಲದಲ್ಲಿ ಹಳೆಯ ಕಾಲ ದಿಂದ ಖರ್ಚು ಮಾಡಿರತಕ್ಕ ಹಣ, ತೊಡಗಿಸಿರತಕ್ಕ ಹಣವೆಲ್ಲ ಹೀಗೆ ಬಂದು ಹಾಗೇ ಹೋಗಿ ಮತ್ತೆ ಆ ದೊಡ್ಡವರ ಖಜಾನೆಯನ್ನೇ ಸೇರತಕ್ಕ ವ್ಯವಸ್ಥೆ ಹೇಗೆ ಇತ್ತು ಎನ್ನುವುದನ್ನು ಬಹಳ ಸೂಕ್ಷ್ಮವಾಗಿ ಹೇಳಿದ್ದೇನೆ. ಈ ಹೊತ್ತು ಹರಿಜನರ ಗಿರಿಜನರಿಗಾಗಿ ಮಾಡಿದ ಕೆಲಸವೆಲ್ಲ ಇತರರಿಗೆ ಉಪಯೋಗವಾಗಿದೆ ಭೂಮಿಯನ್ನು ಕೊಟ್ಟರೆ ಅದು ಬೇರೊಬ್ಬನಿಗೆ ಹೋಯಿತು, ಎತ್ತು ಕೊಟ್ಟರೆ ಅದು ಮತ್ತೊಬ್ಬನಿಗೆ ಹೋಯಿತು. ಮನೆ ಕೊಟ್ಟರೆ ಬಿದ್ದೇ ಹೋಯಿತು. ಶ್ರೀ ದೊಡ್ಡ ತಿಮ್ಮಯ್ಯನವರು ಮಾತನಾಡುತ್ತ ಹರಿಜನರಿಗೆ ಬೇರೆ ಊರನ್ನೇ ಕಟ್ಟಿರಿ ಎಂದು ಹೇಳಿದರು. ಅವರಿಗೆ ಆಗಿರತಕ್ಕ ಅನುತಾಪದಿಂದ ಅವರು ಹಾಗೆ ಹೇಳಿದ್ದು. ಆದರೆ ಅದರಿಂದ ಒಳ್ಳೆಯದಾಗುವುದಿಲ್ಲ. ಆದರೆ ಹರಿಜನರಿಗೆ ನೀರನ್ನು ಕೊಡು ವವರೇ ಗತಿ ಇಲ್ಲ ಎನ್ನುವುದಾಗಿದೆ. ನಾನು ಬರಗಾಲ ಪೀಡಿತ ಪ್ರದೇಶಗಳನ್ನು ನೋಡುವುದಕ್ಕೆ ಹೋದಾಗ ಅಲ್ಲಿದ್ದ ಹರಿಜನರನ್ನು ಕೇಳಿದಾಗ ಬಾವಿಯಲ್ಲಿ ನೀರನ್ನು ತೆಗೆದುಕೊಳ್ಳುವುದಕ್ಕೆ ಬಿಡುವುದಿಲ್ಲ ವೆಂದು ಹೇಳಿದರು. ಗ್ರಾಮಾಂತರ ಪ್ರದೇಶಗಳಲ್ಲಿ ಭೂಮಿಯಿಂದ, ವಿದ್ಯೆಯಿಂದ, ಸಂಪತ್ತಿನಿಂದ ಅಥವಾ ಜಾತಿಯಿಂದ ಗೌರವ ಬರುತ್ತದೆ. ಇವರಿಗೆ ಜಾತಿಯಿಂದ ಗೌರವ ಬರುವುದಕ್ಕೆ ಸಾಧ್ಯವಿಲ್ಲ, ಸಂಪತ್ತಿನಿಂದ ಗೌರವ ಬರುವುದಕ್ಕೆ ಸಾಧ್ಯವಿಲ್ಲ, ಬುದ್ಧಿಯಿಂದ ಗೌರವ ಬರುವುದಕ್ಕೆ ಸಾಧ್ಯವಿಲ್ಲ. ಹೀಗಾಗಿ ಸಮಾಜದಲ್ಲಿ ಅವರಿಗೆ ಮುಖಂಡತ್ವ ಬಾರದ ಹಾಗೆ ಬೆಳೆಯುತ್ತಿದ್ದಾರೆ. ಗ್ರಾಮಾಂತರ ಪ್ರದೇಶದಲ್ಲಿ ಈ ರೀತಿ ಪ್ರತಿ ಯೊಂದು ಕಡೆಯೂ ಇದೆ. ನಮ್ಮ ತಾಲ್ಲೂಕಿನಲ್ಲಿ ಅಸ್ಪೃಶ್ಯತಾ ನಿರೋಧ ಕಾನೂನು ಪ್ರಕಾರ ಒಂದು ಕ್ರಿಮಿನಲ್ ಕೇಸನ್ನು ಹಾಕಿದರು. ಇನ್‌ವೆಸ್ಟಿಗೇಷನ್ ಮಾಡುವ ಕಾಲದಲ್ಲಿ ಏನಾಯಿತೋ ಏನೋ, ಏನೋ ಒಂದು ಅಪಚಾರವಾಗಿದೆಯೆಂದು ಹಾಕಿದ್ದ ಕೇಸು ಹೋಯಿತು. ಯಾರು ಇವರನ್ನು ಹೀನಾಯ ವಾಗಿ ಕಾಣುತ್ತಾರ ಅವರೇ ರಕ್ಷಣೆ ಮಾಡುವ ಜನರಾಗಿರುವುದರಿಂದ ಸುರಕ್ಷತೆ, ರಕ್ಷಣೆ ಎಲ್ಲಿಂದ ಬರುತ್ತದೆ ? ಚನ್ನಗಿರಿ ತಾಲ್ಲೂಕಿನ ಒಂದು ಕಥೆಯನ್ನು ನಾನು ಕೇಳಿದೆ. ೨೦ ಜನ ಹರಿಜನರಿಗೆ ಭೂಮಿ ಕೊಟ್ಟು ಐದಾರು ವರ್ಷವಾಗಿದೆ. ಆ ಜನ ಜಮೀನಿಗೆ ಕಾಲು ಇಡುವುದಕ್ಕೆ ಬಿಡುವುದಿಲ್ಲ ಏಕೆ ಬಿಡುವುದಿಲ್ಲವೆಂದರೆ ಅಲ್ಲಿರ ತಕ್ಕ ಜಮೀನ್ದಾರರು, ಅಲ್ಲಿರತಕ್ಕ ಪಟೇಲರು, ಅಲ್ಲಿರತಕ್ಕ ಚೇರ್ಮನ್ನರೂ ಎಲ್ಲರೂ ಒಂದು. ಏನು ಮಾಡಿದರೂ ಹರಿಜನರನ್ನು ಜಮೀನಿಗೆ ಬಿಡುವುದಿಲ್ಲ. ಎಲ್ಲ ಹಳ್ಳಿಗಳಲ್ಲಿಯೂ ಇಂಥದೇ ಪರಿಸ್ಥಿತಿ ಇದೆ ಎಂದು ಹೇಳ ಬಹುದು. ಗ್ರಾಮಾಂತರ ಪ್ರದೇಶಗಳಲ್ಲಿ ಯಾರು ಭೂಮಿಯನ್ನು ಹೊಂದಿದ್ದಾರೆ ಅವರೇ ಅಡ್ಡಿಯಾಗಿ ಕುಳಿತಿದ್ದಾರೆ, ಅವರ ಕೈಯಲ್ಲಿ ಅಧಿಕಾರವಿದೆ, ರಾಜಕೀಯ ವರ್ಚಸ್ಸಿದೆ. ಶೇಕಡ ೧೮ ಪರ್ಸೆಂಟ್ ಸ್ಥಾನಗಳನ್ನು ಕೊಡಬೇಕು ಎಂದು ಇರುವುದರಿಂದ ನೀವೂ ಆರಿಸಿ ಬಂದು ಅಧಿಕಾರ ಗದ್ದುಗೆಯಲ್ಲಿ ಕುಳಿತ್ತಿದ್ದೀರಿ. ಮೀಸಲು ಸ್ಥಾನವಿಲ್ಲದೆ ಹೋದರೆ ಎಷ್ಟು ಜನ ಆರಿಸಿಬರುತ್ತೀರಿ ಎನ್ನುವುದನ್ನು ನಾವು ನೋಡಬೇಕಾಗಿದೆ. ಶ್ರೀ ಮಲ್ಲಿಕಾರ್ಜುನಸ್ವಾಮಿಯವರು ಬುದ್ಧಿವಂತರು, ವಿಚಾರವಂತರು. ಅವರು ರಿಸರ್ವ್ ಸ್ಥಾನವನ್ನು ಬಿಟ್ಟು ಬೇರೆ ಕಡೆ ಚುನಾವಣೆಗೆ ನಿಂತು ಗೆದ್ದು ಬರಲಿ ನೋಡುತ್ತೇನೆ. ಮೀಸಲು ಸ್ಥಾನವಿರುವುದರಿಂದ ಚುನಾವಣೆ ಕಾಲದಲ್ಲಿ ಅನಿವಾರ್ಯವಾಗಿ ನೀವು ಬೇಕು ಎಂದು ನಿಮ್ಮನ್ನು ಉಪ ಯೋಗಿಸಿಕೊಳ್ಳುತ್ತಿದ್ದಾರೆ ವ್ಯವಸಾಯ ಕೂಲಿಕಾರರಿಗೆ ಐದು ರೂಪಾಯಿ ಕೂಲಿಯನ್ನು ಕೊಡತಕ್ಕ ಕಾನೂನನ್ನ ತನ್ನಿ ಎಂದರೆ ಅದನ್ನು ತರುವುದಕ್ಕೆ ಯಾರೂ ಪ್ರಯತ್ನ ಮಾಡುವುದಿಲ್ಲ. ಹರಿಜನ ಗಿರಿಜ ನರಿದ್ದಾರೆ, ಅವರನ್ನು ಒಂದು ದಿವಸ ಕೆಲಸದಲ್ಲಿ ಇಟ್ಟುಕೊಂಡರೂ ಕೂಡ ರಿಜಿಸ್ಟರ್ ಮೇಂಟೇನ್ ಮಾಡ ಬೇಕು, ಗ್ರಾಮಾಂತರ ಪ್ರದೇಶಗಳಲ್ಲಿರುವ ಅನೇಕ ಜನ ಈಗ ಬಂದಿದ್ದೇವೆ. ನಾವೂ ಶೋಷಣೆ ಮಾಡು ವುದರಲ್ಲಿ ಭಾಗಿಗಳಾಗಿದ್ದೇವೆ. ಇಲ್ಲಿ ಭಾಷಣ ಚೆನ್ನಾಗಿ ಮಾಡುತ್ತೇವೆ, ಅಲ್ಲಿ ಹೋಗಿ ಶೋಷಣೆ ಮಾಡುತ್ತೇವೆ ಇದು ಸಮಾಜದ ರಚನೆ ಆದುದರಿಂದ ಪ್ರತ್ಯೇಕ ಊರು ಕಟ್ಟಬೇಕು ಎಂದು ಶ್ರೀ ದೊಡ್ಡತಿಮ್ಮಯ್ಯನವರು ಹೇಳಿದಂತೆ ಮಾಡಿದರೆ ಅದನ್ನು ಸಹಿಸುವುದಕ್ಕಾಗುವುದಿಲ್ಲ. ಪ್ರತ್ಯೇಕ ಊರನ್ನು ಕಟ್ಟಿಬಿಡಿ ಎಂದು ಅವರು ಹೇಳಿರುವುದು ಅವರಲ್ಲಿ ಉಂಟಾಗಿರುವ ವ್ಯಸನದಿಂದ. ಆದರೆ ನಾನು ಹೇಳುವುದು, ಸವರ್ಣ ಹಿಂದೂಗಳ ಮನೆಯ ಪಕ್ಕದಲ್ಲಿ ಹರಿಜನ ಹೋಗಿ ಬದುಕಬೇಕು. ಈ ಹೊತ್ತು ನಾವು ಹಿಂದುಗಳು ಎಂದು ಭಾರಿ ಬೊಗಳೆ ಹೊಡೆಯುತ್ತೇವೆ. ಹಿಂದುಗಳು ಎಂದರೆ ಹರಿಜನ ಹಿಂದುವೇ ಅಥವಾ ಯಾವ ಹಿಂದು ? ಈ ಹೊತ್ತು ಹರಿಜನರು ಸಾಮಾಜಿಕವಾಗಿ ಏನು ಶೋಷಣೆಗೆ ಒಳಗಾಗಿದ್ದಾರೆ ಅದನ್ನು ತಪ್ಪಿಸಬೇಕಾದರೆ ಬೇರೆ ಸವರ್ಣೀಯರ ಜೊತೆಯಲ್ಲಿ ಹರಿಜನರೂ ಬದುಕಿ ಬಾಳ ತಕ್ಕ ರೀತಿಯಲ್ಲಿ ಒಂದು ವ್ಯವಸ್ಥೆ ನಿರ್ಮಾಣವಾಗಬೇಕು. ಹರಿಜನ ಗಿರಿಜನರು ಶೋಷಣೆಕಾರರ ಕೈ ಯಲ್ಲಿ ಸಿಕ್ಕುವುದನ್ನು ತಪ್ಪಿಸಬೇಕಾದರೆ ಕಡ್ಡಾಯವಾಗಿ ಮೂರು ವರ್ಷದ ಹರಿಜನ ಗಿರಿಜನ ಮಕ್ಕಳನ್ನು ಅವರ ತಂದೆತಾಯಿಯರಿಂದ ಬಲಾತ್ಕಾರವಾಗಿ ತಪ್ಪಿಸಿ, ರೆಸಿಡೆನ್‌ಷಿಯಲ್ ಸ್ಕೂಲುಗಳನ್ನು ಮಾಡಿ ೧೫

(ಶ್ರೀ ಕಾಗೋಡು ತಿಮ್ಮಪ್ಪ)

ವರ್ಷದವರೆಗೂ ಅವರಿಗೆ ವಿದ್ಯಾಭ್ಯಾಸವನ್ನು ಕಲಿಸಿ ಕೈ ಬಿಡಬೇಕು. ಹತ್ತು ವರ್ಷಗಳ ಕಾಲ ಅವನನ್ನು ವಿದ್ಯಾವಂತನನ್ನಾಗಿ ಮಾಡುವ ಕೆಲಸವನ್ನು ಮಾಡಿ. ಆಗ ಅವರು ವಿದ್ಯಾವಂತರಾಗಿ ಬುದ್ಧಿವಂತರಾಗಿ ಸಮಾಜದಲ್ಲಿರುವ ಇತರರೊಡನೆ ಅವರೂ ಜೀವನ ಮಾಡುವುದನ್ನು ಕಲಿಯುತ್ತಾರೆ. ವಿದ್ಯಾವಂತರಾದರೆ ಅವರ ಬುದ್ಧಿ ಪರಿವರ್ತನೆಯಾಗುತ್ತದೆ. ಅಂತಹ ಒಂದು ವಾತಾವರಣವನ್ನು ನೀವು ನಿರ್ಮಾಣ ಮಾಡಬೇಕು. ಇದಕ್ಕಾಗಿ ಮೊದಲು ಇವರ ವಿದ್ಯಾಭ್ಯಾಸಕ್ಕಾಗಿ ದುಡ್ಡು ಕೊಡಿ. ನೀವು ಹಾಸ್ಟೆಲುಗಳನ್ನು ಮಾಡಿದ್ದೀರಿ ಅವು ಯಾವ ರೀತಿ ಇವೆ. ಎನ್ನುವುದನ್ನು ದಯಮಾಡಿ ಹೋಗಿ ನೋಡಿಕೊಂಡು ಬನ್ನಿ. ಬೇರೆ ಕಡೆಗಳಲ್ಲಿರುವ ಹಾಸ್ಟೆಲುಗಳನ್ನೂ ಹೋಗಿ ನೋಡಿಕೊಂಡು ಬನ್ನಿ ಅಲ್ಲಿ ಹೇಗೆ ಮಕ್ಕಳಿಗೆ ಯಾವ ರೀತಿ ಅನುಕೂಲಗಳನ್ನು ಕೊಟ್ಟು ಸಹಾಯ ಮಾಡುತ್ತಿದ್ದಾರೆ ಅದರಂತೆ ನಮ್ಮ ಸರ್ಕಾರದವರು ಮಾಡಿರುವ ಹಾಸ್ಟೆಲುಗಳಲ್ಲಿ ಸಹಾಯ ಮಾಡುತ್ತಿದ್ದಾರೆಯೋ ? ದಯುವಿಟ್ಟು ಹೋಗಿ ಒಂದು ಸಲ ನೋಡಿ ಬನ್ನಿ. ನಮ್ಮ ಮಾನ್ಯ ಮಲ್ಲಿಕಾರ್ಜುನಸ್ವಾಮಿಯವರು ಯೂನಿವರ್ಸಿಟಿಯಲ್ಲಿ ಹಾಗೂ ಮೆಡಿಕಲ್ ಕಾಲೇಜುಗಳಲ್ಲಿ ಹಾಸ್ಟೆಲುಗಳನ್ನು ಮಾಡಿದ್ದಾರೆ. ಇದೇ ರೀತಿ ಬೆಂಗಳೂರಿನಲ್ಲಿರುವ ಸೇಂಟ್ ಜೋಸೆಫ್ ಹಾಸ್ಟಲ್ ಹೇಗೆ ಇದೆ. ನೋಡಿ ಹಾಗೆಯೇ ಸಂಡೂರಿನಲ್ಲಿ ಮಾನ್ಯ ಶ್ರೀ ಘೋರ್ಪಡೆಯವರು ನಡೆಸುತ್ತಿರುವ ಹಾಸ್ಟಲುಗಳು ಹೇಗಿವೆ ಮತ್ತು ಎಷ್ಟು ದುಡ್ಡು ಖರ್ಚು ಮಾಡುತ್ತಿದ್ದಾರೆ ಅದನ್ನು ನೋಡಿಕೊಂಡು ಬನ್ನಿ, ಆಗ ನಿಮಗೆ ಇದರ ಪರಿಚಯ ಚೆನ್ನಾಗಿಗೊತ್ತಾಗುತ್ತದೆ. ಇದಕ್ಕಾಗಿ ನಾನು ಸಲಹೆ ಮಾಡುವುದು ಸರ್ಕಾರ ಇಂತಹ ಹಿಂದುಳಿದ ವರ್ಗದ ಜನರಿಗೆ ವರ್ಗದ ಜನರಿಗೆ ಮೊದಲು ವಿದ್ಯಾಭ್ಯಾಸ ಕೊಡಲು ಎಷ್ಟು ಹಣ ಖರ್ಚಾದರೂ ಚಿಂತೆಯಿಲ್ಲ. ಅಷ್ಟನ್ನೂ ಪೂರ್ತಿಯಾಗಿ ಕೊಡಿ. ಮೂರು ವರ್ಷದಿಂದ ಆರು ವರ್ಷಗಳವರೆಗೆ ಇರುವ ಮಕ್ಕಳಿಗೆ ನರ್ಸರಿ ಸ್ಕೂಲುಗಳನ್ನು ಮಾಡಿ ಅಲ್ಲಿ ಅವರಿಗೆ ವಿದ್ಯೆ ಕೊಡಬಹುದು. ಹಾಗೆ ಅವರು ಆರು ವರ್ಷಗಳ ಮೇಲೆ ಹನ್ನೆರಡು ವರ್ಷಗಳ ವರೆಗೆ ಮಕ್ಕಳಿಗೆ ಕಡ್ಡಾಯವಾಗಿ ಶಾಲೆಗಳಿಗೆ ಕಳುಹಿಸಿ ಅವರನ್ನಾಗಿ ಬುದ್ಧಿವಂತರನ್ನು ಮಾಡಬೇಕು. ಮತ್ತು ಆ ಮಕ್ಕಳಿಗೆ ಸರಿಯಾಗಿ ಊಟ ಹಾಗೂ ಬಟ್ಟೆಗಳನ್ನು ಒದಗಿಸಬೇಕು.

ಈಗ ನಮ್ಮ ಸರಕಾರ ಮಾಡಿರುವ ಹರಿಜನ ಹಾಗೂ ಗಿರಿಜನರ ಹಾಸ್ಟಲಿನಲ್ಲಿರುವ ಹುಡುಗರಿಗೆ ಒಬ್ಬರಿಗೆ ೩೦ ರೂಪಾಯಿಗಳು ಎಂದು ನಿಗದಿ ಮಾಡಿದ್ದಾರೆ. ಹಳ್ಳಿಗಾಡಿನಲ್ಲಿ ಅಕ್ಕಿ ಬೆಲೆ ಕೆಜಿಗೆ ಒಂದೂವರೆ ಇರಬಹುದು ಬೆಂಗಳೂರಿನಲ್ಲಿ ಕೆಜಿಗೆ ಎರಡು ರೂಪಾಯಿಗಳು ಮೇಲೆ ಎಂದರೆ ಮೂರು ರೂಪಾಯಿಗಳು ಇವೆ, ಎಂದರೆ ಒಬ್ಬ ಹುಡುಗನಿಗೆ ಒಂದು ದಿನಕ್ಕೆ ಅರ್ಧ ಕೆಜಿ ಅಕ್ಕಿ ಎಂದರೆ ಅದಕ್ಕೆ ಒಂದೂವರೆ ರೂಪಾಯಿಗಳಾಗುತ್ತದೆ. ಎಂದರೆ ೩೦ ದಿನಕ್ಕೆ ಅರ್ಧ ಕೆಜಿ ಅಕ್ಕಿಗೆ ಒಂದೂವರೆ ರೂಪಾಯಿಗಳಂತೆ ತಿಂಗಳಿಗೆ ಒಬ್ಬ ಹುಡುಗನಿಗೆ ೪೫ ರೂಪಾಯಿಗಳು ಬರೀ ಅಕ್ಕಿಗೆ ಬೇಕಾಗುತ್ತದೆ. ಇನ್ನು ಅವನಿಗೆ ಹಾಲಿಗೆ ತರಕಾರಿಗೆ ತಲೆಗೆ ಎಣ್ಣೆ ಮತ್ತು ಸೋಪಿಗೆ ದುಡ್ಡನ್ನು ಯಾರು ಕೊಡುವವರು ? ಇವರಿಗೆ ಯಾವ ಯಾವ ತಾಲ್ಲೂಕಿನಲ್ಲಿರುವ ಹಾಸ್ಟಲುಗಳಲ್ಲಿ ಯಾವ ರೀತಿ ಪರಿಸ್ಥಿತಿ ಇದೆಯೋ ಅದಕ್ಕನು ಗುಣವಾಗಿ ಸರಕಾರ ಸಹಾಯ ಮಾಡಬೇಕಾಗುತ್ತದೆ. ಕನಿಷ್ಠ ಪಕ್ಷ ಎರಡು ಊಟ, ಎರಡು ತಿಂಡಿ ಹಾಗೂ ಅವರಿಗೆ ಬೇಕಾದ ಪುಸ್ತಕಗಳು ಮತ್ತು ಎರಡು ಜೊತೆ ಬಟ್ಟೆ ಮತ್ತು ತಲೆಗೆ ಎಣ್ಣೆ ಹಾಗೂ ಸೋಪುಗಳಿಗೆ ಈಗಿನ ದರಗಳು ಯಾವ ರೀತಿ ಇವೆಯೋ ಅದರ ಪ್ರಕಾರ ಲೆಕ್ಕಾಚಾರ ಹಾಕಿದರೆ ಒಬ್ಬ ಹುಡುಗನಿಗೆ ಒಂದು ತಿಂಗಳಿಗೆ ೫೦ ರೂಪಾಯಿಗಳಾಗುತ್ತೊ, ಇಲ್ಲವೇ ಇನ್ನೂ ಹೆಚ್ಚು ಬರುತ್ತದೆಯೋ ಅದನ್ನು ನೋಡಿಕೊಂಡು ನೀವು ಖಂಡಿತ ಇವರಿಗೆ ಒದಗಿಸಿಕೊಡಬೇಕು. ಇದನ್ನು ತಾಲ್ಲೂಕಾಬೋರ್ಡುಗಳ ಮೂಲಕ ಕೊಡಬೇಕೆಂದು ಬೇರೆ ಮಾಡಿದ್ದಾರೆ. ನಾನೂ ಕೂಡ ತಾಲ್ಲೂಕಾ ಬೋರ್ಡು ಅಧ್ಯಕ್ಷರಾಗಿರುವುದರಿಂದ ನನಗೆ ಇದರ ಕಷ್ಟಗಳು ಗೊತ್ತಿದೆ. ತಾಲ್ಲೂಕಾ ಬೋರ್ಡುಗಳಲ್ಲಿರುವ ಬಿ ಡಿ ಒ ಗಳ ಕಾಟವೇ ಬೇರೆ. ಇವರಿಗಿವೆ ಹರಿಜನರ ಹಾಸ್ಟಲಿಗೆ ಕೊಡುವ ದುಡ್ಡನ್ನೇ ಆಫೀಸರುಗಳು ಹೊಡಮುಬಿಡುತ್ತಿದ್ದಾರೆ. ಇದರಲ್ಲಿ ಟೆಂಡರುಗಳನ್ನು ಬೇರೆ ಕರೆಯಬೇಕೆಂದು ಮಾಡಿ ಅದರಲ್ಲಿ ಕೂಡ ದುಡ್ಡು ಹೊಡೆಯುತ್ತಾರೆ. ಈ ತರಹ ತೊಂದರೆಗಳು ಇರುವುದನ್ನು ನಾವು ಪ್ರತಿ ತಾಲ್ಲೂಕಿನಲ್ಲೂ ನೋಡುತ್ತಿದ್ದೇವೆ. ನನಗೆ ತಾಲ್ಲೂಕಾ ಬೋರ್ಡಿನಲ್ಲಿ ಎತ್ತುಗಳನ್ನು ಕೊಡುವಾಗ ಯಾವ ರೀತಿಯಾಗಿದೆ ಎಂದು ಗೊತ್ತಿದೆ. ಒಂದು ಜೊತೆ ಎತ್ತಿಗೆ ೧೫೦೦ ರೂಪಾಯಿಗಳಾಗುತ್ತವೆ. ಇವನ್ನು ಹರಿಜರಿಗೆ ಕೊಡಬೇಕೆಂದು ಇದೆ. ಬಿ ಡಿ ಒ ಗಳು ಏನು ಮಾಡುತ್ತಾರೆಂದರೆ ೮೦೦ ರೂಪಾಯಿಗಳಿಗೆ ಒಂದು ಜೊತೆ ಎತ್ತನ್ನು ಖರೀದಿ ಮಾಡಿಸಿ ಅದನ್ನು ೧೫೦೦ ರೂಪಾಯಿಗಳಿಗೆ ಖರೀದಿ ಮಾಡಿವೆ ಎಂದು ಲೆಕ್ಕ ತೋರಿಸಿ ಇದರಲ್ಲಿ ಉಳಿಯುವ ಏಳನೂರು ರೂಪಾಯಿಗಳನ್ನು ಹೊಡೆಯುತ್ತಿದ್ದಾರೆ. ನಾನು ಇಂತಹ ಒಂದು ಸ್ಪಷ್ಟ ನಿದರ್ಶನವನ್ನು ಸರಕಾರದ ಗಮನಕ್ಕೆ ತಂದು ಹೇಳಿದರೂ ಇದುವರೆಗೆ ಅದರ ಬಗ್ಗೆ ಯಾವ ಕಾರ್ಯಕ್ರಮವನ್ನೂ ತೆಗೆದುಕೊಳ್ಳಲಿಲ್ಲ, ಇದಕ್ಕಾಗಿ ನಾನು ಸರಕಾರಕ್ಕೆ ಸಲಹೆ ಮಾಡುವುದು ಹರಿಜನರ ಹಾಗೂ ಹಿಂದುಳಿದವರ ಮಕ

ಆಶ್ರಮಗಳನ್ನು ಪ್ರತ್ಯೇಕವಾಗಿ ಮಾಡಿ ನರಸರಿ ಶಾಲೆಗಳನ್ನು ತೆರದು ಮೊದಲು ಈ ಮಕ್ಕಳಿಗೆ ವಿದ್ಯೆ ಕಲಿಯಲು ಅವಕಾಶ ಮಾಡಿ ಕೊಟ್ಟು ಅವರು ಬುದಿವಂತರಾಗಿ ಸಮಾಜದಲ್ಲಿ ಇತರಂತೆ ಬಾಳಲು ಅವಕಾಶ ಮಾಡಿಕೊಡಿ. ಮತ್ತು ಸುರಕ್ಷಿತವಾಗಿ ಜೀವಸ ಮಾಡುವುದಕ್ಕೆ ನೀವು ಅವಕಾಸ ಮಾಡಿ ಕೊಡಿ. ಇದಕ್ಕಾಗಿ ಎಷ್ಟು ಖರ್ಚಾದರೂ ಚಿಂತೆಯಿಲ್ಲ. ಮೊದಲು ಪ್ರತಿಯೊಂದು ಹಾಸ್ಟಲಿನಲ್ಲೂ ೨೫ ಮಕ್ಕಳಿಗೆ ಇಂತಹ ಒಂದು ಅವಕಾಶ ಕೊಟ್ಟು ಅವರು ವಿದ್ಯಾವಂತರಾಗುವಂತೆ ಮಾಡಲು ಇವರಿಗೆ ಪ್ರೈವೇಟ್ ಟ್ಯೂಷನ್ ಕೂಡ ಕೊಡಬೇಕು. ಏಕೆಂದರೆ ಇಂದು ಇರುವ ಸರಕಾರದ ಶಾಲೆಗಳಲ್ಲಿ ಇವರು ವಿದ್ಯಾಭ್ಯಾಸ ಮಾಡಲು ಹೋದರೆ ಇವರಿಗೆ ಇನ್ನು ೮-೧೦ ವರ್ಷ ವಾದರೂ ಅವರು ವಿದ್ಯಾವಂತರಾಗಲು ಸಾಧ್ಯವಿಲ್ಲ. ಏಕೆಂದರೆ ಇವರು ಅಷ್ಟು ಬುದ್ಧಿವಂತರಲ್ಲ ಹಾಗೂ ಬಡವರು. ಇದಕ್ಕಾಗಿ ಇವರಿಗೆ ಪ್ರೈವೇಟ್ ಟ್ಯೂಷನ್ ಕೊಡುವ ವ್ಯವಸ್ಥೆ ಮಾಡಲೇ ಬೇಕು. ಮತ್ತು ಹಾಸ್ಟಲಿನಲ್ಲಿ ಒಳ್ಳೆಯ ಊಟ ಕೊಡುವ ವ್ಯವಸ್ಥೆಯನ್ನೂ ಮಾಡ ಬೇಕು. ಇಂತಹ ವಿದ್ಯಾಭ್ಯಾಸ ಪಡೆಯುವಂತೆ ಒಂದು ವಾತಾವರಣವನ್ನು ಪ್ರಚೋದನೆ ಮಾಡುವಂತಹ ವ್ಯವಸ್ಥೆ ಇಲ್ಲಿ ತಾವು ಮೊದಲು ನಿರ್ಮಾಣ ಮಾಡಬೇಕು. ಇದಲ್ಲದೇ ತಾಲ್ಲೂಕಾ ಬೋರ್ಡುಗಳಲ್ಲಿ ಶೇಕಡ ೧೮ರಷ್ಟು ಕೊಡಬೇಕೆಂದು ಹೇಳಿರುವಂತೆ ನಾವು ತಾಲ್ಲೂಕಾ ಬೋರ್ಡುಗಳಲ್ಲಿ ಕೊಡುತ್ತಿದ್ದೇವೆ. ಆದರೆ ಇದರಿಂದೇನೂ ಬಡಜನರಿಗೆ ಉಪಯೋಗವಾಗುವುದಿಲ್ಲ. ಇದಕ್ಕಾಗಿ ನಾನು ಸಲಹೆ ಮಾಡುವುದು ಯಾವ ಯಾವ ಗ್ರಾಮದಲ್ಲಿ ಮೂರರಿಂದ ಹನ್ನೆರಡು ವರ್ಷಗಳವರೆಗೆ ಮಕ್ಕಳು ಇದ್ದಾರೆ ಆ ಮಕ್ಕಳಿಗೆ ಅನುಕೂಲವಾಗುವಂತೆ ಎಲ್ಲ ಕಡೆಗಳಲ್ಲೂ ನರ್ಸರಿ ಶಾಲೆಗಳನ್ನು ಕಡ್ಡಾಯವಾಗಿ ತರುವ ವ್ಯವಸ್ಥೆ ಮಾಡಲೇ ಬೇಕು. ಇದನ್ನು ಸೋಷಿಯಲ್ ವೆಲ್‌ಫೇರು ಇಲಾಖೆಯ ಮೂಲಕವೇ ಮಾಡಬೇಕು. ಮತ್ತು ಇವರಿಗೆ ಒಳ್ಳೆಯ ಆಹಾರ ಸಿಗುವಂತೆ ತಕ್ಕ ವ್ಯವಸ್ಥೆ ಮಾಡಬೇಕು. ಈಗ ಕೊಡುವ ಆಹಾರ ಸತ್ವ ಪೂರ್ಣವಾಗಿಲ್ಲ ಮತ್ತು ಇದರಲ್ಲಿ ಅವರಿಗೆ ಶಕ್ತಿಯೂ ಬರುತ್ತಿಲ್ಲ. ಇದಕ್ಕಾಗಿ ಎಲ್ಲರನ್ನೂ ಅಕ್ಷರಸ್ತರನ್ನಾಗಿ ಹಾಗೂ ಬುದ್ಧಿವಂತರನ್ನಾಗಿ ಮಾಡುವ ಕೆಲಸ ಮೊದಲು ಮಾಡಬೇಕು.

ಉಪಾಧ್ಯಕ್ಷರು :—ಒಳ್ಳೆಯ ಪ್ರೋಟೀನು ಅಂಶ ಇರುವ ಆಹಾರವನ್ನು ಮಕ್ಕಳಿಗೆ ಕೊಟ್ಟರೆ ಅವರಿಗೆ ಬುದ್ಧಿ ಶಕ್ತಿ ಬೆಳೆಯಲು ಸಹಾಯವಾಗುತ್ತದೆಯಲ್ಲವೇ ?

ಶ್ರೀ ಕಾಗೋಡುತಿಮ್ಮಪ್ಪ :—ನಾನು ಕಳೆದ ಸಾರಿ ಭಾಷಣ ಮಾಡಿದಾಗಲೂ ಇದರ ಬಗ್ಗೆ ಹೇಳಿದ್ದೆ. ಉತ್ತಮವಾದ ಆಹಾರವನ್ನು ಕೊಡದೇ ಇರುವುದರಿಂದ ಇಂದು ಹರಿಜನರ ಮಕ್ಕಳು ಅನ್ನಾಂಗ ಕೊರತೆಯಿಂದ ನರಳುತ್ತಿದ್ದಾರೆ. ಇವರಿಗೆ ಸತ್ವಪೂರ್ಣವಾದ ಆಹಾರವನ್ನು ಒದಗಿಸಿ ಕೊಡಬೇಕಾದ್ದು ಅಗತ್ಯ. ಹಾಗೆ ಮಾಡಿದಗೆ ಅವರ ಬುದ್ಧಿ ಶಕ್ತಿಬೆಳೆಯಲೂ ಸಹಾಯವಾಗುತ್ತದೆ ಮತ್ತು ಅವರು ಬುದ್ಧಿವಂತರಾಗಲೂ ಪ್ರಯತ್ನ ಮಾಡುತ್ತಾರೆ. ಪ್ರೋಟೀನ್ ಕೊರತೆ ಇರುವುದರಿಂದಲೇ ಇಂದು ಇರುವ ಹರಿಜನರ ಮಕ್ಕಳು ನರಳುತ್ತಿರುವುದು. ಇದರ ಬಗ್ಗೆ ಮಾನ್ಯ ಶ್ರೀ ರಾಚಯ್ಯನವರು ಸರಿಯಾಗಿ ಯೋಚನೆ ಮಾಡಬೇಕು. ಹೀಗೆ ಯಾವುದಾದರೂ ನಿರ್ದಿಷ್ಟವಾದ ಕ್ರಮ ತೆಗೆದುಕೊಂಡರೆ ಆಗ ಇಂತಹ ಬಡ ಮಕ್ಕಳು ದಡ ಸೇರಲು ಸಹಾಯವಾಗುತ್ತದೆ ಇಲ್ಲದಿದ್ದರೆ ಏನು ಆಗುವುದಿಲ್ಲ. ಜನಸಂಖ್ಯೆಯ ಆಧಾರದ ಮೇಲೆ ಏನೂ ಮಾಡುವುದಿಲ್ಲ. ಇದಕ್ಕಾಗಿ ನಾನು ಮಾನ್ಯ ಶ್ರೀ ರಾಚಯ್ಯನವರಿಗೆ ಸಲಹೆ ಮಾಡುವುದು ಇಂತಹ ಒಂದು ಕಾರ್ಯಕ್ರಮ ಮಾಡಬೇಕೆಂದು ಇದರ ರೂಪ ರೇಖೆಗಳನ್ನು ಸಿದ್ದು ಮಾಡಿ ಮುಖ್ಯ ಮಂತ್ರಿಗಳಿಗೆ ಕೊಡಿ ಅವರು ಇದನ್ನು ಒಪ್ಪಬೇಕೆಂದು ಕಡ್ಡಾಯ ಮಾಡಿ. ಹಾಗೆ ಅವರು ಒಪ್ಪದೇ ಹೋದರೆ ನೀವು ಈ ಕೆಲಸ ಮಾಡಲು ಸಾಧ್ಯವಿಲ್ಲ ಎಂದು ಮಂತ್ರಿ ಮಂಡಲದಿಂದ ಹೊರಗೆ ಬನ್ನಿ, ಆಗ ಸಮಾಜದ ಕಲ್ಯಾಣ ಮಾಡಲು ಸಾಧ್ಯವಾಗುತ್ತದೆ. ಇಂದು ಇರುವಂತೆ ಶೇಕಡಾ ೧೮ರಷ್ಟು ಕೊಡಬೇಕೆಂದು ಹೇಳುತ್ತ ಇನ್ನೂ ಹತ್ತು ವರ್ಷ ಕೊಡಬೇಕೆಂದು ಕೇಳಲು ಹೋಗಬೇಡಿ. ಇನ್ನು ಇಪ್ಪತ್ತು ವರ್ಷಗಳಾದರೂ ನೀವು ನಿಮ್ಮ ಸಮಾಜವನ್ನು ಮುಂದೆ ತರಲು ಆಗುವುದಿಲ್ಲ. ಈಗಾಗಲೇ ನಿಮಗೆ ಕೊಡುತ್ತಿರುವ ಶೇಕಡಾ ೧೮ರ ಬಗ್ಗೆ ವಿರೋಧಗಳು ಬರುತ್ತಿವೆ ಮತ್ತು ಜನರಿಗೆ ಇದರ ಬಗ್ಗೆ ಸಹನೆಯೂ ಇಲ್ಲ. ಮೊದಲು ಹರಿಜನ ಮಕ್ಕಳಿಗೆ ವಿದ್ಯಾಭ್ಯಾಸ ಕೊಟ್ಟು ಅವರು ವಿದ್ಯಾವಂತರಾಗುವಂತೆ ಮಾಡಿ. ಅವರು ವಿದ್ಯಾವಂತರಾದ ಮೇಲೆ ಮುಂದೆ ಹೇಗೋ ಜೀವನ ನಡೆಸುತ್ತಾರೆ. ವಿದ್ಯಾವಂತರಾದವರು ಯಾವುದಾದರೂ ಒಂದು ರೀತಿಯಲ್ಲಿ ಜೀವನ ಮಾಡುತ್ತಾರೆ. ಇದಕ್ಕಾಗಿ ತಾವು ಇದನ್ನು ಸಮಗ್ರವಾಗಿ ಆಲೋಚನೆ ಮಾಡಿ ಅದರಂತ ಅಭಿವೃದ್ಧಿ ಕಾರ್ಯಗಳನ್ನು ರೂಪಿಸಲು ತಕ್ಕ ಕ್ರಮವನ್ನು ಸರಕಾರದಲ್ಲಿ ಕಾರ್ಯಗತ ಮಾಡಲು ಯತ್ನ ಮಾಡಲೇ ಬೇಕು. ಸರಕಾರ ಇದನ್ನು ಒಪ್ಪದೇ ಇದ್ದರೆ ಆಗ ನೀವೂ ಅದರಿಂದ ಹೊರಗೆ ಬನ್ನಿ. ಇಷ್ಟು ಮಾತನ್ನು ಹೇಳಿ ಈ ಸಂಬಂಧದಲ್ಲಿ ಮಾನ್ಯ ಶ್ರೀ ದೊಡ್ಡತಿಮ್ಮಯ್ಯನವರು ಹೇಳಿದಂತೆ ಶೂದ್ರರಲ್ಲಿ ಒಬ್ಬರು ಮುಖಂಡರಾಗಿದ್ದ ದಿವಂಗತ ಶ್ರೀ ಅಂಬೇಡಕರವರು ಒಬ್ಬರು ಮಹಾನಾಯಕರಂತೆ ಹಾಗೂ ಮೇಧಾವಿಗಳಂತೆ ಮಾಡಿದಂತಹ ಕೆಲಸಗಳನ್ನು ಇದುವರೆಗೂ ಯಾರೂ ಮಾಡಲಿಲ್ಲ, ಇಂತಹ ಮೇಧಾವಿಗಳಾದಂತಹ ಈ ಒಬ್ಬರು ಮುಖಂಡರ ಭಾವಚಿತ್ರವನ್ನು ಈ ಸದನದೊಳಗಡೇ ಇಲ್ಲಿ ಕಡ್ಡಾಯವಾಗಿ

(ಶ್ರೀ ಕಾಗೋಡು ತಿಮ್ಮಪ್ಪ)

ಹಾಕಲೇ ಬೇಕು ಎಂದು ನಾನೂ ಕೂಡ ಅವರ ಜೊತೆಯಲ್ಲಿ ಒತ್ತಾಯ ಮಾಡುತ್ತೇನೆ. ಮತ್ತು ಶೂದ್ರರ ಒಂದು ಮುಖಂಡತ್ವಕ್ಕೂ ಒಂದು ಬೆಲೆ ಕೊಟ್ಟಂತಾಗುತ್ತದೆ. ಇಂತಹ ಶೂದ್ರರು ನಾಯಕರಾಗಿದ್ದುದರಿಂದ ಇವರು ಇತಿಹಾಸಪ್ರಸಿದ್ಧರಾಗಿದ್ದಾರೆ ಮತ್ತು ಒಂದು ಶ್ರೇಷ್ಠಮಟ್ಟವನ್ನು ಪಡೆದವರೂ ಆಗಿದ್ದರು. ಇಂತಹ ಮುಖಂಡರು ಮುಂದೆ ಯಾರು ಬರುತ್ತಾರೋ ನೋಡೋಣ. ಇವರಂತಹ ಕ್ರಾಂತಿಕಾರ ಮುಖಂಡರು ಇದುವರೆಗೆ ಯಾರೂ ಇರಲಿಲ್ಲ. ಇಂತಹವರ ಫೋಟೋವನ್ನು ಇಲ್ಲಿ ಹಾಕಿದರೆ ಅವರಿಗೊಂದು ಗೌರವ ಸ್ಥಾನ ಕೊಟ್ಟಂತಾಗುತ್ತದೆ. ಇಲಾಖೆಯವರೇನೋ ಅಂದಾಜನ್ನು ಇಟ್ಟು ಇದರಂತೆ ಖರ್ಚು ಮಾಡಬೇಕೆಂದು ಹೇಳುತ್ತಾರೆ. ಅದರಂತೆ ಯಾವ ಕಾರ್ಯಗಳೂ ಆಗುವುದಿಲ್ಲ. ಇನ್ನು ಮುಂದೆ ನೀವು ಶೇಕಡ [illegible] ಎಂದು ಕೇಳುವುದರಲ್ಲಿ ಅರ್ಥವಿಲ್ಲ. ಇದನ್ನು ಬಿಡುವುದು ಒಳ್ಳೆಯದು. ಈಗಲೇ ಹೈಕೋರ್ಟುಗಳಲ್ಲಿ ಕೂಡ ಇವರ ಬಗ್ಗೆ ಅನೇಕ ವಾದವಿವಾದಗಳು ಒಂದು ಮುಂದೆ ಇಂತಹ ಒಂದು ಮೀಸಲು ವರ್ಗದವರಿಗೆ ಸ್ಥಾನಗಳನ್ನು ಕಾದಿರಿಸುವುದರಲ್ಲಿ ಒಂದು ಮುಂದು ನೋಡುತ್ತಿದ್ದಾರೆ. ಇದಕ್ಕಾಗಿ ನಾನು ಕಲಹ ಮಾಡುವುದು ಇದನ್ನು ಹೋಗಲಾಡಿಸಲು ಸಾಧ್ಯವಾಗದೇ ಇರುವುದಕ್ಕೆ ನಿಮ್ಮಲ್ಲಿರುವ ಹೇಡಿತನವೇ ಕಾರಣ. ನೀವು ಇವರ ವಿರುದ್ಧ ಎದ್ದು ನಿಲ್ಲಬೇಕಾದರೆ ಎಲ್ಲ ಮಕ್ಕಳನ್ನೂ ಮೊದಲು ವಿದ್ಯಾವಂತರನ್ನಾಗಿ ಮಾಡಲು ಪ್ರಯತ್ನ ಮಾಡಿ. ಇನ್ನೊಂದು ವಿಚಾರ ಇಲ್ಲಿ ನೊಮ್ಯಾಡಿಕ್ ಹಾಗೂ ಸೆಮಿ ನೊಮ್ಯಾಡಿಕ್ ಟ್ರೈಬ್ಸ್ ಎಂದು ಸುಮಾರು ೪೨ ಜನರ ಒಂದು ಪಟ್ಟಿ ಇದೆ. ಇದರಲ್ಲಿ ಕೊರಚರು ಕೊರಮರು ಹಾಗೂ ಹಲವಾರು ಜಾತಿಯವರು ಬರುತ್ತಾರೆ. ಇವರ ಒಂದು ಜನಗಣತಿ ಇದುವರೆಗೆ ಮಾಡಿಲ್ಲ. ಈ ಜನರಿಗೆ ಸರಿಯಾಗಿ ಕೇರಿಯೂ ನೀಡಿಲ್ಲ ಮತ್ತು ಯಾವ ಸೌಕರ್ಯಗಳೂ ಇಲ್ಲ. ಇವರಿಗೆ ನಾವೂ ಸೌಕರ್ಯ ಕೊಡಬೇಕೆಂದು ಹಿಂದುಳಿದ ಆಯೋಗದವರ ಮುಂದೆ ಹೇಳಿದಾಗ ಇವರ ಜನಗಣತಿಯೇ ಇಲ್ಲ ಎಂದರು. ಇದಕ್ಕಾಗಿ ಸರಕಾರ ಮೊದಲು ಇಂತಹ ಸೆಮಿ ನೊಮ್ಯಾಡಿಕ್ ಟ್ರೈಬ್ಸ್‌ನವರ ಜನಗಣತಿಯ ಪಟ್ಟಿಯನ್ನು ಬೇಗ ತಯಾರು ಮಾಡಿ ಇವರಿಗೆ ತಕ್ಕ ಅನುಕೂಲಗಳನು ಕಲ್ಪಿಸಿಕೊಡಬೇಕು.

ಸುಮಾರು ೪೮ ಜನರ ಪಟ್ಟಿ ಇದೆ. ಎಷ್ಟು ಜನಸಂಖ್ಯೆಯಾಗುತ್ತದೆ ಎಂದು ಅವರ ಜನಗಣತಿ ಮಾಡಬೇಕು ಮತ್ತು ಭೂಸುಧಾರಣಾ ಕಾನೂನಿನ ಸೆಕ್ಷನ್ ೭೭ರ ಪ್ರಕಾರ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಟ್ರೈಬ್ಸ್‌ಗೆ ಭೂಮಿ ಪ್ರಮಾಣದ ಆಧಾರದ ಮೇಲೆ ಸಿಗುತ್ತದೆ. ಅದೇ ರೀತಿ ಅಲೆಮಾರಿ ಮತ್ತು ಅರೆ ಅಲೆಮಾರಿ ಜನಾಂಗಕ್ಕೆ ಆದ್ಯತೆ ಮೇಲೆ ಭೂಮಿ ಕೊಡಿಸಿ ಕೊಡುವ ದೃಷ್ಟಿಯಿಂದ ಆಲೋಚನೆ ಮಾಡಿ ಸೂಕ್ತ ಕಾರ್ಯಕ್ರಮ ಕೈಕೊಳ್ಳಬೇಕು. ಒಂದೊಂದು ತಾಲ್ಲೂಕಿನಲ್ಲಿ ಒಂದು ಮನೆ ಕಟ್ಟುವುದರಿಂದ ಏನೇನು ಸಾಕಾಗುತ್ತಾ ಇಲ್ಲ. ಭೂಮಿ ಕೊಡುವ ಸಂದರ್ಭದಲ್ಲಿ ಸ್ಕಾಲರ್‌ಶಿಫ್ ಕೊಡುವ ಸಂದರ್ಭದಲ್ಲಿ ಇನ್ನಿತರ ಸೌಲಭ್ಯಗಳನ್ನು ಕೊಡುವ ಸಂದರ್ಭದಲ್ಲಿ ವಿಶೇಷ ಸೌಲಭ್ಯ ಸಿಗುವ ರೀತಿಯಲ್ಲಿ ಪುನರ್ ಪರಿಶೀಲನೆ ಮಾಡಿ ಒದಗಿಸಿಕೊಡಬೇಕೆಂದು ಕೇಳಿಕೊಂಡು ಅಧ್ಯಕ್ಷರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀಮತಿ ದಮಯಂತಿ ಬೋರೇಗೌಡ (ಶ್ರೀರಂಗಪಟ್ಟಣ).—ಮಾನ್ಯ ಅಧ್ಯಕ್ಷರೆ ಈಗ ಇಂದಿನ ಸಮುದಾಯಾಭಿವೃದ್ಧಿ ಮತ್ತು ಸಮಾಜಕಲ್ಯಾಣ ಇಲಾಖೆಯ ಬೇಡಿಕೆಗಳನ್ನು ಸ್ವಾಗತಿಸುತ್ತಾ ನಾನು ಸರ್ಕಾರದ ಗಮನವನ್ನು ಕೆಲವು ವಿಷಯಗಳ ಕಡೆಗೆ ಸೆಳೆಯುವುದಕ್ಕೆ ಇಚ್ಛೆ ಪಡುತ್ತೇನೆ. ಕಮ್ಯೂನಿಟಿ ಡೆವಲಪ್‌ಮೆಂಟ್, ತಾಲ್ಲೂಕು ಬೋರ್ಡ್ ಮತ್ತು ಪಂಚಾಯಿತಿ ಕೆಲಸಕಾರ್ಯಗಳ ಬಗ್ಗೆ ನಾವು ಸ್ವಲ್ಪ ಚಿಂತನ ಮಾಡಬೇಕಾಗಿದೆ. ತಾಲ್ಲೂಕು ಬೋರ್ಡುಗಳು ಸ್ವಲ್ಪಮಟ್ಟಿಗೆ ಕೆಲಸಮಾಡುತ್ತಾ ಇದ್ದರೂ ಪಂಚಾಯಿತಿಗಳು ಈ ವತ್ತಿನ ದಿವಸ ಏನೇನು ಸಮರ್ಪಕವಾಗಿ ಕೆಲಸ ಮಾಡುತ್ತಾ ಇಲ್ಲಾ ಎನ್ನುವುದನ್ನು ನಾವು ಒಪ್ಪಿಕೊಳ್ಳಬೇಕಾಗಿದೆ. ಅನೇಕ ಗ್ರಾಮಗಳಲ್ಲಿ ಎಷ್ಟೋ ಕಷ್ಟಪಟ್ಟು ರೂರಲ್ ವಾಟರ್ ಸಪ್ಲೈ ಸ್ಕೀಮಿಗೆ ಹಣವನ್ನು ಕೊಟ್ಟು ಅದನ್ನು ತೆಗೆದುಕೊಳ್ಳುತ್ತಾರೆ. ಆದರೆ ಅದನ್ನು ಮುಂದೆ ನಿರ್ವಹಿಸುವ ಚೈತನ್ಯ ಅನೇಕ ಪಂಚಾಯಿತಿಗಳಿಗೆ ಇಲ್ಲ. ಒಮ್ಮೆ ಮಂಡ್ಯ ಜಿಲ್ಲಾಭಿವೃದ್ಧಿ ಮಂಡಲಿಯಲ್ಲಿ ಈ ಕೆಲಸಗಳನ್ನು ತಾಲ್ಲೂಕು ಬೋರ್ಡುಗಳು ವಹಿಸಿಕೊಳ್ಳಬೇಕು ಎನ್ನುವ ಸಮಸ್ಯೆಬಂದಾಗ, ತಾಲೂಕುಬೋರ್ಡು ಅಧ್ಯಕ್ಷರು ಸ್ವಲ್ಪಮಟ್ಟಿಗೆ ಮುಂದೆ ಬರಲಿಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿ ನೀರಿನ ವಸತಿಗಾಗಿ ಲಕ್ಷಾಂತರ ರೂಪಾಯಿ ಖರ್ಚಾದಂತಹ ಸ್ಕೀಮನ್ನು ನಾನ್ ಟೆಕ್ನಿಕಲ್ ಜನರ ಕೈಗೆ ಕೊಡುವುದಕ್ಕಿಂತ ತಾಲ್ಲೂಕು ಬೋರ್ಡುಗಳನ್ನು ಅದನ್ನು ಸರಿಯಾಗಿ ನಡೆಸಬೇಕು ಎಂದು ಕೇಳಿಕೊಂಡೆವು. ಆದರೂ ಸಹ ಇದರ ಬಗ್ಗೆ ಏನು ತೀರ್ಮಾನ ಆಗುತ್ತಾ ಇಲ್ಲ. ಪಂಚಾಯಿತಿಗಳಲ್ಲಿ ಸೆಕ್ರೆಟರಿಯಾಗಿ ಇರುವವರು ಹೆಚ್ಚಾಗಿ ರೆವಿನ್ಯೂ ಕೆಲಸ ಕಡೆಗೆ ಹೆಚ್ಚಿಗೆ ಗಮನ ಕೊಡುವುದರಿಂದ ಅನೇಕ ಪಂಚಾಯಿತಿಗಳಲ್ಲಿ ತೆರಿಗೆಗಳು ವಸೂಲಾಗುತ್ತಾ ಇಲ್ಲ. ಇನ್ನೂ ಕೆಲವು ಪಂಚಾಯಿತಿಗಳಲ್ಲಿ ಬಲಯುತವಾದ ಜನರು ತೆರಿಗೆಗಳನ್ನು ಕೊಡದೆ ಸತಾಯಿಸುತ್ತಿದ್ದಾರೆ. ನಮ್ಮ ತಾಲೂಕಿನ ಬಗ್ಗೆ ಹೇಳಬೇಕಾದರೆ ಅರಕೆರೆ ಗ್ರಾಮಪಂಚಾಯಿತಿಯಲ್ಲಿ ತೆರಿಗೆ ಕೊಡದೆ ಅನೇಕ ರೀತಿ

ಯಲ್ಲಿ ಗ್ರಾಮ ಪಂಚಾಯಿತಿಗಳಿಗೆ ತೊಂದರೆಗಳನ್ನು ಕೊಟ್ಟರೂ ಸಹ, ಅದರ ಬಗ್ಗೆ ಸಮುದಾಯ ಅಭಿವೃದ್ಧಿ ಮಂತ್ರಿಗಳು ಮತ್ತು ರೆವಿನ್ಯೂ ಮಂತ್ರಿಗಳಿಗೆ ಸಾಕಷ್ಟು ಅರ್ಜಿಗಳು ಬಂದರೂ ಸಹ, ಇನ್ನೂ ಏನೂ ಕ್ರಮ ತೆಗೆದುಕೊಂಡಿಲ್ಲ. ಇಂತಹ ಪ್ರಸಂಗದಲ್ಲಿ ಹ ರುಪಿಸಿಂದ ಮುಂದ ಬರಿತಕ್ಕ ಒಂದೊಂದು ಪಂಚಾಯಿತಿ ಚೇರ್‌ಮನ್‌ಗಳು ಯಾವರೀತಿ ಕೆಲಸ ಮಾಡಬೇಕು ಎನ್ನುವುದನ್ನು ನಾವು ಯೋಚನೆ ಮಾಡಬೇಕು. ನಾವು ಪಂಚಾಯಿತಿಗಳನ್ನು ಬಲಯುತವಾಗಿ ಮಾಡದೆ ಇದ್ದ ಪಕ್ಷದಲ್ಲಿ ಎಷ್ಟು ಯೋಜನೆಗಳು ಬಂದರೂ ಸಹಾ ಗ್ರಾಮಾಂತರ ಪ್ರದೇಶಗಳಲ್ಲಿ ಏನೇನು ಅಭಿವೃದ್ಧಿ ಸಾಧಿಸುವುದಕ್ಕೆ ಸಾಧ್ಯವಿಲ್ಲವೆಂದು ನಾನು ಈ ಸಮಯದಲ್ಲಿ ಸ್ಪಷ್ಟವಾಗಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮತ್ತೆ ಪಂಚಾಯಿತಿಗಳಲ್ಲಿ ಸೆಕ್ರೆಟರಿಗಳಿಗೆ ತಹಸಿಲ್‌ದಾರರೂ, ಆಡಳಿತ ಅಧಿಕಾರಿಗಳಿದ್ದಾರೆ ಆದುದರಿಂದ ಅವರು ಹೆಚ್ಚಾಗಿ ರೆವಿನ್ಯೂ ಕಲೆಕ್ಷನ್ ಮಾಡುತ್ತಾರೆಯೇ ವಿನಹ ಪಂಚಾಯಿತಿ ತೆರಿಗೆಗಳ ವಸೂಲಾತಿ ಬಹಳ ಕಡಿಮೆಯಾಗಿದೆ. ಅದರ ಬಗ್ಗೆ ಗಮನಕೊಟ್ಟು, ಅವರು ಸಂಬಂಧಪಟ್ಟ ಚೇರ್‌ಮನ್‌ರಿಂದ [illegible] ರೆಕಮೆಂಡೇಶನ್ ಲೆಟರ್ ತೆಗೆದು ಕೊಳ್ಳುವವರೆಗೆ ಅವರಿಗೆ ಸಂಬಳ ಕೊಡುವುದನ್ನು ತಡೆಮಾಡಬೇಕು. ಪಂಚಾಯಿತಿ ಕೆಲಸಗಳಿಗೂ ಕೂಡ ಅವರು ಆದ್ಯಗಮನ ಕೊಡಬೇಕು. ಅನೇಕ ಗ್ರಾಮಗಳಲ್ಲಿ ಅಕೌಂಟೆಂಟ್ ವಾಸ ಮಾಡುವುದಿಲ್ಲ. ಎಲ್ಲೋ ದೂರದಲ್ಲಿ ಇದ್ದುಕೊಂಡು ಒಂದೊಂದು ಗ್ರಾಮಕ್ಕೆ ಹೋದೆ ಎಂದು ಗ್ರಾಮದ ಹೆಸರನ್ನು ಹೇಳುತ್ತಾರೆಯೇ ವಿನಹ ಅವನು ಎಲ್ಲೂ ಜನರ ಕೈಗೆ ಸಿಕ್ಕದ ಪರಿಸ್ಥಿತಿಯನ್ನು ನಾವು ನೋಡುತ್ತಿದ್ದೇವೆ. ಪಂಚಾಯಿತಿಗಳು ಮತ್ತು ತಾಲ್ಲೂಕು ಬೋರ್ಡುಗಳು ಯಶಸ್ವಿಯಾಗಿ ಕೆಲಸ ಮಾಡದೆ ಇಳಿತಪಕ್ಷದಲ್ಲಿ ಜನರಿಗೆ ನಮ್ಮ ಯೋಜನೆಗಳ ಫಲವನ್ನು ಕೊಡುವುದಕ್ಕೆ ಸಾಧ್ಯವಿಲ್ಲ. ಸಮುದಾಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಯಬೇಕಾದರೂ ಕೂಡ ಹೆಚ್ಚಿಗೆ ಅದರಲ್ಲೂ ಮಹಿಳೆಯರು ಮತ್ತು ಮಕ್ಕಳು, ಹರಿಜನ, ಗಿರಿಜನರ ಯೋಜನೆಗಳಿಗೆ ಹೆಚ್ಚಿನ ಹಣ ಒದಗಿಸಬೇಕು. ಮತ್ತು ಸೋಶಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್ ಷೆಡ್ಯೂಲ್ ಕ್ಯಾಸ್ಟ್ ಮತ್ತು ಷೆಡ್ಯೂಲ್ ಟ್ರೈಬ್ಸ್‌ಗೆ ತಕ್ಕಮಟ್ಟಿಗೆ ಹಣ ಒದಗಿಸಿದ್ದಾರೆ. ಆದರೆ ಡಿನೋಟಿಫೈಡ್ ಟ್ರೈಬ್ಸ್‌ಗೆ ಕಮ್ಮಿ ಹಣ ಒದಗಿಸಿದ್ದೀರಿ ಹಿಂದುಳಿದ ವರ್ಗದವರಿಗೆ ಬರೇ ೮ ಲಕ್ಷ [illegible] ಸಾವಿರ ರೂಪಾಯಿಗಳನ್ನು ಪ್ಲಾನ್‌ನಲ್ಲಿ ತೋರಿಸಿದ್ದೀರಿ. ಅಗಸರು, ತಿಗಳರು, ಬೆಸ್ತರು, ಕಮ್ಮಾರ, ಕುಂಬಾರ ಇಂತಹ ನೂರಾರು ಕಮ್ಯುನಿಟಿಗಳಿಗೆ ಈ ದುಡ್ಡನ್ನು ಯಾವರೀತಿ ಉಪಯೋಗ ಮಾಡುತ್ತೀರಿ. ಆದರಿಂದ ಎಷ್ಟು ಜನರಿಗೆ ಇದರಿಂದ ಅನುಕೂಲವಾಗುತ್ತದೆ ಎಂದು ಯೋಚನೆ ಮಾಡಿ ನೋಡಬೇಕು. ಹರಿಜನ ಗಿರಿಜನರಿಗೆ ಒದಗಿಸಿರತಕ್ಕ ದುಡ್ಡಿನಲ್ಲಿ ಎಷ್ಟು ಹರಿಜನ ಮಹಿಳೆಯರು ಮುಂದೆ ಬಂದಿದ್ದಾರೆಂದು ಯೋಚನೆ ಮಾಡಬೇಕು. ಮೊನ್ನೆತಾನೆ ಮಂಡ್ಯದಲ್ಲಿ ಒಬ್ಬ ಹರಿಜನ ಮಹಿಳೆ ಹೇಳಿದರು, ನಮ್ಮಲ್ಲಿ ವಿದ್ಯಾವಂತರು ಮುಂದೆ ಬಂದು ಕೆಲಸ ಮಾಡುವುದು ಅಪರೂಪ, ಆದರೆ ನಮಗೆ ಎಲ್ಲೂ ಕೂಡ ಸ್ಥಾನಮಾನ ಸರಿಯಾಗಿ ಸಿಕ್ಕುತ್ತಾ ಇಲ್ಲ ಎಂದು ದೊಡ್ಡ ಪ್ರಶ್ನೆ ಹಾಕಿದಾಗ ಅದಕ್ಕೆ ಉತ್ತರ ಹೇಳಬೇಕಾದಾಗ ನನಗೆ ಸ್ವಲ್ಪ ಕಷ್ಟವಾಯಿತು. ಕೋಟಿಗಟ್ಟಲೆ ಹಣ ಖರ್ಚು ಮಾಡುವಾಗ, ಈ ವರ್ಗದ ಮಹಿಳೆಯರಿಗೆ ವಿದ್ಯಾಭ್ಯಾಸ ಮತ್ತು ಸ್ಥಾನಮಾನಗಳನ್ನು ಕೊಟ್ಟರೆ ಇಡೀ ಸಂಸಾರಗಳು ಇದರಿಂದ ಮುಂದೆ ಬಂದು ಅವರೂ ಕೂಡ ಆರ್ಥಿಕವಾಗಿ ಸಾಮಾಜಿಕವಾಗಿ ಪ್ರಗತಿ ಆಗುವುದರಲ್ಲಿ ಏನೇನು ಸಂಶಯವಿಲ್ಲ. ಆದುದರಿಂದ ಹರಿಜನ ಕಲ್ಯಾಣ ಯೋಜನೆಗಳಿಗೆ ಶೇಕಡಾ ೫೦ ರಷ್ಟು ಮಹಿಳೆಯರಿಗೆ ತೆಗೆದಿಟ್ಟರೆ ನಿಜವಾಗಿಯೂ ಹರಿಜನ ಮಹಿಳೆಯರ ಪ್ರಗತಿಯನ್ನು ಶೀಘ್ರವಾಗಿ ಮತ್ತು ಯಶಸ್ವಿಯಾಗಿ ಸಾಧಿಸುತ್ತಾರೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ಅಲೆಮಾರಿ ಜನಾಂಗದ ಅಥವಾ ಸಂಚಾರಿ ಜನಾಂಗದ ಬಗ್ಗೆ ಈಗತಾನೆ ಮಾನ್ಯ ಸದಸ್ಯರು ಹೇಳಿದರು. ಅವರಿಗೆ ಕುರಿ, ಕೋಳಿ, ಎತ್ತುಗಳನ್ನು ಕೊಡುವುದನ್ನು ಬಿಟ್ಟು ಅವರಿಗೆ ಹೆಚ್ಚಿಗೆ ಉದ್ಯಮಗಳಲ್ಲಿ ಅವಕಾಶ ಕೊಡಬೇಕು. ಹರಿಜನರು ಏನು ಇದ್ದಾರೆ ಅವರು ಜನರ ಜೊತೆಯಲ್ಲಿ ಹೆಚ್ಚಾಗಿ ಮಿಳಿತವಾಗಬೇಕಾದರೆ ಅವರಿಗೆ ಪ್ರತ್ಯೇಕವಾಗಿ ಬಾವಿ, ಸ್ಕೂಲು ಮತ್ತು ಹಾಸ್ಟಲುಗಳನ್ನು ಮಾಡುವುದು ತಪ್ಪಿಸಿ ಎಲ್ಲಾ ಕಡೆ ಜನರಲ್ ಹಾಸ್ಟೆಲ್‌ಗಳನ್ನು ಮಾಡಿ ಎಲ್ಲಾ ಕಡೆ ಹರಿಜನ ವಿದ್ಯಾರ್ಥಿಗಳಿಗೆ ಸಾಕಷ್ಟು ಸ್ಥಳ ಕಾದಿರಿಸಬೇಕು. ಅದನ್ನು ಬಿಟ್ಟು ಅವರಿಗೆ ಪ್ರತೇಕವಾಗಿ ಬಾವಿ, ಪ್ರತ್ಯೇಕವಾಗಿ ಸ್ಕೂಲು ಎಂದು ಹೇಳಿದರೆ ನಮ್ಮಲ್ಲಿ ಇನ್ನೂ ಸಾಕಷ್ಟು ಇನ್ನೂ ಪ್ರಗತಿಯಾಗಿಲ್ಲ ಎನ್ನುವುದಕ್ಕೆ ಅದು ಒಂದು ಸಂಕೇತವಾಗುತ್ತದೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಸಮಾಜ ಕಲ್ಯಾಣ ಇಲಾಖೆಯಲ್ಲಿ ಮಹಿಳೆಯರಿಗೆ ಮತ್ತು ಮಕ್ಕಳಿಗೆ ಅನೇಕ ಯೋಜನೆಗಳನ್ನು ತೆಗೆದುಕೊಂಡಿದ್ದೀರಿ. ನ್ಯೂಟ್ರಿಶನ್ ಪ್ರೋಗ್ರಾಮ್ ಯಶಸ್ವಿಯಾಗಿ ನಡೆಯಬೇಕಾದರೆ ಅದರಲ್ಲೂ ನಿಷ್ಠಾವಂತ ಕಾರ್ಯಕರ್ತರು ಅವಶ್ಯಕತೆ ಹೆಚ್ಚಾಗಿದೆ. ಇನ್ನು ಫ್ಯಾಮಿಲಿ ಮತ್ತು ಚೈಲ್ಡ್ ವೆಲ್‌ಫೇರ್ ಪ್ರಾಜೆಕ್ಟ್ ಇದೆ. ಇನ್ನು ವೆಲ್‌ಫೇರ್ ಆಫ್ ಪೂರ್ ಮತ್ತು ಇನ್‌ಸ್ಟಿಟ್ಯೂಟ್ಸ್ ಬಗ್ಗೆ ಬೆಂಗಳೂರು ನಗರದಲ್ಲಿ ಸಮಾಜಕಲ್ಯಾಣ ಇಲಾಖೆಯಿಂದ ನಡೆಯುತಕ್ಕ ಅನೇಕ ಸಂಘಸಂಸ್ಥೆಗಳು ಇವೆ. ಮೇಲಾಗಿ ಅನೇ

(ಶ್ರೀಮತಿ ದಮಯಂತಿ ಬೋರೇಗೌಡ)

ಸದಸ್ಯರು ಸಂಘ ಸಂಸ್ಥೆಗಳಿಗೆ ಭೇಟಿ ಕೊಟ್ಟಿದ್ದಾರೆ. ಒಂದು ಕಡೆ ಮೆಂಟಲಿ ರಿಟಾರ್ಡೆಡ್ ಚಿಲ್ಡ್ರನ್ಸ್ ೨೦ ಜನ ಇದ್ದಾರೆ. ಅಲ್ಲಿ ಸಾವಿರಾರು ರೂಪಾಯಿ ಬಾಡಿಗೆ ರೂಪದಲ್ಲಿ ಕೊಡುತ್ತಾ ಇದ್ದಾರೆ. ಅದಕ್ಕೆ ಬದಲು ವಿಶಾಲವಾದ ಸ್ಥಳಗಳಲ್ಲಿ ಒಂದು ಬಿಲ್ಡಿಂಗ್ ಕಾಂಪ್ಲೆಕ್ಸ್ ನಗರದ ಹೊರವಲಯದಲ್ಲಿ ಎಲ್ಲಾ ಸಂಘ ಸಂಸ್ಥೆಗಳು ಇರುವ ಹಾಗೆ ಅನುಕೂಲ ಮಾಡಿ ಚನ್ನಾಗಿ ಇರುತ್ತದೆ. ಈವತ್ತಿನ ದಿವಸ ವಾಸಕ್ಕೆ ಕೊಟ್ಟಿರತಕ್ಕ ಮನೆಗಳಲ್ಲಿ ಸಂಘ ಸಂಸ್ಥೆಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಮಕ್ಕಳ ಆಟಪಾಟಗಳಿಗೆ ಆಗಲಿ ಮನರಂಜನೆಗಾಗಲಿ ಸಾಕಷ್ಟು ವಿಸ್ತಾರವಾದ ಸ್ಥಳದ ಅಭಾವವನ್ನು ನಾವು ನೋಡುತ್ತಿದ್ದೇವೆ

ಮಹಿಳೆಯರಿಗೆ, ವಿಧವೆಯರಿಗೆ, ಅಬಲೆಯರಿಗೆ ಮತ್ತು ದುರ್ಬಲ ವರ್ಗದವರಿಗೆ ಅನೇಕ ಯೋಜನೆಗಳನ್ನು ಹಾಕಿಕೊಂಡಿದ್ದೀರಿ ಅವುಗಳನ್ನು ಕಾರ್ಯಗತಮಾಡುವುದಕ್ಕೂ ಕೂಡ ಒಂದು ಒಳ್ಳೆಯ ಕಟ್ಟಡದ ಅಭಾವದಿಂದ ತೊಂದರೆಯಾಗಿದೆ ಒಂದು ಕಡೆ ಅಂಗವಿಕಲರು ಮತ್ತು ಮೆಂಟಲಿ ರಿಟಾರ್ಡೆಡ್ ಮಹಿಳೆಯರು ಇದ್ದಾರೆ. ಇನ್ನೊಂದು ಕಡೆ ಸರಿಯಾಗಿ ಇರತಕ್ಕ ಮಹಿಳೆಯರು ಕೆಲವರು ಇದ್ದಾರೆ. ಇವರನ್ನೆಲ್ಲಾ ಒಟ್ಟುಗೂಡಿಸಿ ಒಂದು ಕಟ್ಟಡದಲ್ಲಿ ಅವರಿಗೆ ಅವಕಾಶ ಮಾಡಿಕೊಟ್ಟರೆ ಒಳ್ಳೆಯದಾಗುತ್ತದೆ ಎಂದು ಹೇಳುವುದಕ್ಕೆ ಬಯಸುತ್ತೇನೆ. ಅನೇಕ ಸಂಘ ಸಂಸ್ಥೆಗಳಿಗೆ ಮತ್ತು ಕಮಿಟಿಗಳಿಗೆ ನೀವು ಪ್ರಾತಿನಿಧ್ಯ ಕೊಡಬೇಕಾದರೆ ವಿದ್ಯಾವಂತ ಮಹಿಳೆಯರು ಪ್ರತಿಯೊಂದು ಊರಿನಲ್ಲಿಯೂ ಕೂಡ ಇದ್ದಾರೆ, ಅವರಿಗೆ ಸಾಕಷ್ಟು ಪ್ರಾತಿನಿಧ್ಯ ಕೊಡಿ ಎಂದು ನಾನು ಈ ಸಂದರ್ಭದಲ್ಲಿ ಬೇಡಿಕೊಳ್ಳುತ್ತೇನೆ. ಮೆಂಟಲಿ ರಿಟಾರ್ಡೆಡ್ ಮಹಿಳೆಯರು ಎರಡು ಮೂರು ಸಂಘ ಸಂಸ್ಥೆಗಳಲ್ಲಿ ಇರತಕ್ಕಂಥವರನ್ನು ಒಂದೇ ಕಡೆ ಇಡಬೇಕು. ಅಂಗವಿಕಲರ ಯೋಜನೆ ಬಗ್ಗೆ ಹೇಳಬೇಕಾದರೆ ಅವರಿಗೆ ಸಾಕಷ್ಟು ಉದ್ಯೋಗವಕಾಶಗಳು ಇಲ್ಲ. ಅವರಿಗೆ ಉದ್ಯೋಗಾವಕಾಶಗಳು ಹೆಚ್ಚಿಗೆ ದೊರೆಯುವ ರೀತಿಯಲ್ಲಿ ಮಾಡಿದರೆ ಒಳ್ಳೆಯದಾಗುತ್ತದೆ. ಸಮಾಜಕಲ್ಯಾಣ ಮಂಡಲಿಗೆ ಸರ್ಕಾರದವರು ಸ್ವಲ್ಪಮಟ್ಟಿಗೆ ನೆರವು ಕೊಡುತ್ತಾರೆ. ಆದರೆ ರಾಜ್ಯದ್ಯಂತ ಅನೇಕ ಸಂಘ ಸಂಸ್ಥೆಗಳು ಇರುವುದರಿಂದ ಕೇವಲ ಒಂದೊಂದು ಸಂಘ ಸಂಸ್ಥೆಗಳಿಗೆ ೫೦೦ ರೂ ಕೊಡುವುದಷ್ಟು ಆಗುವುದಿಲ್ಲ. ಅಲ್ಲಿರತಕ್ಕಂಥ ಎಲ್ಲರೂ ಕೂಡ ಆನರೆರಿ ವರ್ಕರ್ಸ್. ನಮ್ಮ ಅಧ್ಯಕ್ಷಣಿಯವರಿಂದ ಹಿಡಿದು ಇಬ್ಬರು ಮೂರುವರು ಎಂ. ಎಲ್. ಎ. ಗಳು ಸದಸ್ಯರು ಆಗಿದ್ದೇವೆ. ಈ ಒಂದು ಕೆಲಸಕ್ಕೆ ಸಮಾಜ ಕಲ್ಯಾಣ ಮಂಡಲಿಯವರು ಹೆಚ್ಚಿಗೆ ಹಣ ಸಹಾಯ ಮಾಡಬೇಕೆಂದು ಈ ಸಂದರ್ಭದಲ್ಲಿ ಬೇಡಿಕೊಂಡು ನನ್ನ ಭಾಷಣವನ್ನು ಮುಗಿಸುತ್ತೇನೆ.

† ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಅಧ್ಯಕ್ಷರೆ, ಮಾನ್ಯ ಸಮಾಜಕಲ್ಯಾಣ ಇಲಾಖೆ ಸಚಿವರು ಮಂಡಿಸಿರತಕ್ಕಂಥ ಬೇಡಿಕೆಗಳನ್ನು ವಿರೋಧಿಸಿ ಮಾತನಾಡುವುದಕ್ಕೆ ಇಚ್ಛೆಪಡುತ್ತೇನೆ. ಈಗಾಗಲೇ ಸಾಕಷ್ಟು ವಿಷಯಗಳನ್ನು ಸಮಾಜದಲ್ಲಿ ತುಳಿತಕ್ಕೆ ಸಿಕ್ಕಿರತಕ್ಕ ವರ್ಗಗಳ ಬಗ್ಗೆ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ನಾನೂ ಕೂಡ ಅವರ ಧ್ವನಿಗೆ ನನ್ನ ಧ್ವನಿಯನ್ನು ಸೇರಿಸುತ್ತೇನೆ. ಸಮಾಜದಲ್ಲಿ ಹರಿಜನರು, ಭೋವಿಗಳು, ಲಂಬಾಣಿಗಳು ಇತ್ಯಾದಿ ವರ್ಗಗಳನ್ನು ಬಹಳ ಕೀಳು ದರ್ಜೆಯಲ್ಲಿ ಕಂಡು ಒಬ್ಬ ಮಾನವ ಇನ್ನೊಬ್ಬ ಮಾನವನಿಗೆ ಕೊಡಬೇಕಾದಂಥ ಸ್ಥಾನಮಾನಗಳನ್ನು ಕೊಡದೆ ಮಾನವೀಯ ಮೌಲ್ಯಗಳನ್ನು ಮರೆತು ಜೀವನ ಮಾಡತಕ್ಕ ಪದ್ಧತಿಯನ್ನು ಶತಮಾನಗಳಿಂದ ಕಲ್ಪಿಸಿ ಇಟ್ಟಿದ್ದಾರೆ. ಇದನ್ನು ಸಂಪೂರ್ಣವಾಗಿ ವಿರೋಧ ಮಾಡಬೇಕಾಗುತ್ತದೆ. ನಾನು ಈ ಸಂದರ್ಭದಲ್ಲಿ ಪ್ರಾಮುಖ್ಯವಾದ ಒಂದೆರಡು ಅಂಶಗಳನ್ನು ಪ್ರಸ್ತಾಪ ಮಾಡುವುದಕ್ಕೆ ಇಚ್ಛಿಪಡುತ್ತೇನೆ. ಈ ಅಸ್ಪೃಶ್ಯತೆ ಎನ್ನತಕ್ಕ ವಿಷಯವನ್ನು ತೊಡೆದು ಹಾಕಬೇಕು ಎನ್ನುವ ದಿಶೆಯಲ್ಲಿ ಒಂದು ಕಾನೂನು ಇದೆ. ಅನೇಕ ಬಾರಿ ಈ ಸದನದಲ್ಲಿ ಅದರ ಪ್ರಸ್ತಾಪ ಬಂದಿದೆ, ಹೆಚ್ಚಾಗಿ ಪಾರ್ಲಿಮೆಂಟಿನಲ್ಲಿ ಕೂಡ ಈ ವಿಷಯ ಪ್ರಸ್ತಾಪವಾಗಿದೆ. ಈ ಅಸ್ಪೃಶ್ಯತೆಯನ್ನು ತೊಡೆದು ಹಾಕುವುದಕ್ಕೆ ಅಥವಾ ಯಾರೂ ಜಾರಿಯಲ್ಲಿ ಇಟ್ಟುಕೊಳ್ಳಬೇಕು ಎನ್ನುವ ಇಚ್ಛೆ ಇರುತ್ತದೆ ಅವರ ಮೇಲೆ ಉಗ್ರ ಕ್ರಮ ತೆಗೆದು ಕೊಳ್ಳುವುದಕ್ಕೆ ಕಾನೂನು ಇದೆ ಆದರೆ ನಮ್ಮ ಮುಂದೆ ಇರತಕ್ಕ ಪ್ರಶ್ನೆ ಈ ಕಾನೂನನ್ನು ಎಷ್ಟರಮಟ್ಟಿಗೆ ಸರ್ಕಾರದವರು ಜಾರಿಗೆ ಕೊಟ್ಟಿದ್ದಾರೆ ಎಂಬುದು. ನಾವೆಲ್ಲಾ ಗ್ರಾಮೀಣ ಪ್ರದೇಶಗಳಿಂದ ಬಂದಿರತಕ್ಕ ಜನ, ಅಲ್ಲಿ ಅತೀ ಮೂಲೆಯಲ್ಲಿ ಒಂದೊಂದು ಹೋಟಲು ಇರುತ್ತದೆ. ಅಲ್ಲಿ ಟೀ, ಕಾಫಿ ಕ್ಲಬ್ ಎಂದು [illegible] ಬೋರ್ಡ್ ಹಾಕಿಕೊಂಡಿರುತ್ತಾರೆ. ಈ ಸಣ್ಣ ಕಾಫಿ ಕಬ್ ನೋಡುವುದಕ್ಕೆ ಹುಲ್ಲು ಮನೆ ಇರುತ್ತದೆ. ಈ ಹುಲ್ಲುಮನೆಯಲ್ಲಿ ಕೆಟ್ಟ ಬುದ್ಧಿ ಇರತಕ್ಕಂಥ ವರ್ಗದವರು ಹರಿಜನರಾಗಲೀ, ಅಸ್ಪೃಶ್ಯರಾಗಲಿ [illegible] ಎನ್ನುವ ವರ್ಗದವರು, ಟೀ, ಕಾಫಿಗೆ ಅಲ್ಲಿ ಹೋದಾಗ ಅವರಿಗೆ ತೆಂಗಿನ ಚಿಪ್ಪಿನಲ್ಲಿ ಟೀ, ಕಾಫಿಯನ್ನು ಹಾಕಿರುವುದನ್ನು ನಾನು ಕಂಡಿದ್ದೇನೆ. ಈಗ ಅದು ಕಮ್ಮಿಯಾಗಿದೆ. ಆದರೂ ಕೂಡ ಅದು ಆ ಭಾಗದಲ್ಲಿ ನಮಗೆ ಇನ್ನೂ ಕಾಣಿಸುತ್ತವೆ. ಇದನ್ನು ಪತ್ತೆ ಹಚ್ಚುವುದಕ್ಕೆ ಕಾರ್ಯಕ್ರಮ ತೆಗೆದು ಕೊಳ್ಳಬೇಕು. ಈ ಸದನದಲ್ಲಿ ಈ ವಿಷಯ ಚರ್ಚೆಗೆ ಬಂದಾಗ, [illegible] ಸರ್ಕಾರದ ಗಮನಕ್ಕೆ ಬಂದಾಗ

ಕಾರ್ಯಕ್ರಮ ತೆಗೆದುಕೊಂಡಿದ್ದೇವೆ ಎನ್ನತಕ್ಕ ಮಾತನ್ನು ಹೇಳುತ್ತಾರೆ. ಅದು ಸರಿಯಲ್ಲ. ಅಂತಹ ಜನಸರ್ಕಾರಕ್ಕೆ ಕಂಪ್ಲೇಂಟ್ ಕೊಡುವುದಿಲ್ಲ. ಅದನ್ನು ನೋಡುತ್ತಾರೆ, ಬಿಡುತ್ತಾರೆ ಇದರ ಬಗ್ಗೆ ಯಾರೂ ವಿಚಕ್ಷಣೆಯಿಂದ ನೋಡಿ ಅಸ್ಪೃಶ್ಯರು ಎನ್ನುವ ಭಾವನೆಯಿಂದ ನೋಡುತ್ತಾರೋ ಅವರನ್ನು ಹಿಡಿದು ಹಾಕಿ ಕಾನೂನು ಪ್ರಕಾರ ಶಿಕ್ಷೆ ವಿಧಿಸಿ ಜೈಲಿಗೆ ಕಳಿಸಬೇಕು. ಈ ಕಾನೂನನ್ನು ಸ್ಪಷ್ಟವಾಗಿ ಜಾರಿಗೆ ಕೊಡತಕ್ಕ ವ್ಯವಸ್ಥೆ ಮಾಡಿ ಅದಕ್ಕೆ ತಕ್ಕ ಸಿಬ್ಬಂದಿ ಮತ್ತು ಅಧಿಕಾರಿಗಳನ್ನು ನೇಮಿಸಿ ಜವಾಬ್ದಾರಿಯಿಂದ ಈ ಕೆಲಸ ಮಾಡಬೇಕೆಂಬುದೇ ನನ್ನ ಒತ್ತಾಯದ ಆಸೆ. ಹಾಗೆ ಹರಿಜನರಿಗೆ ಮನೆ ಕಟ್ಟುವುದಕ್ಕೆ ಅನೇಕ ಸಂಘಸಂಸ್ಥೆಗಳನ್ನು ಮಾಡಿದ್ದಾರೆ, ಆ ಸಂಘಸಂಸ್ಥೆಗಳು ಸಹಾಯ ಮಾಡಿದ್ದಾರೆಯೋ ಇಲ್ಲವೇ ಎಂಬುದನ್ನು ಸ್ಪಷ್ಟವಾಗಿ ತಿಳಿದುಕೊಳ್ಳಬೇಕಾಗುತ್ತದೆ. ಹರಿಜನರಿಗೆ ಕೊಟ್ಟಿರತಕ್ಕ ಹಣ ದುರುಪಯೋಗವಾಗಿದೆ ಎನ್ನತಕ್ಕ ಅಪಾದನೆ ಕೂಡ ಉಂಟು, ಅಂತಹ ಕೆಲವಾರು ಪ್ರಕರಣಗಳು ಕೂಡ ಬೆಳಕಿಗೆ ಬಂದಿವೆ. ಅಂತಹ ಕೆಲವಾರು ದುರುಪಯೋಗ ಆಗಿರತಕ್ಕ ಪ್ರಕರಣಗಳನ್ನು ಮುಂದಿಟ್ಟು, ರಾಜ್ಯಾಂಗದಲ್ಲಿ ಏನು ಸೌಲಭ್ಯಗಳಿವೆ ಅವು ಸ್ವಾತಂತ್ರ್ಯ ಬಂದಮೇಲೆ ಇಷ್ಟು ವರ್ಷಗಳಿಂದ ಅನುಭವಿಸಿಕೊಂಡು ಬಂದಿದ್ದಾರೆ, ಅದುದರಿಂದ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ಗೆ ೧೮ ಪರ್ಸೆಂಟ್ ರಿಸರ್ವೇಷನ್ ಏನು ಇದೆ ಅದು ಕೊಟ್ಟಿರುವುದು ಸಾಕು ಎನ್ನತಕ್ಕ ವಾದ ಇದೆ. ಅದು ಮಾನ್ಯ ಮಂತ್ರಿಗಳ ಗಮನಕ್ಕೆ ಬಂದಿರಬೇಕು. ಈ ವಾದ ದೇಶದಲ್ಲಿ ಆಗಲೇ ಪ್ರಾರಂಭವಾಗಿದೆ, ಸಾಕಷ್ಟು ಅವಕಾಶಗಳನ್ನು ಕೊಟ್ಟಿರುವುದನ್ನು ಅವರು ಉಪಯೋಗ ಮಾಡದಿದ್ದರೆ ನಾವು ಏನು ಮಾಡಬೇಕು ಎಂಬ ವಾದ ಇಟ್ಟಿದ್ದಾರೆ. ನಾವು ವಿಚಾರ ಮಾಡಬೇಕು. ಯಾವ ಒಂದು ವರ್ಗಕ್ಕೆ ರಾಜ್ಯಾಂಗದ ಪ್ರಕಾರ ಸೌಲಭ್ಯ ಕೊಟ್ಟಿದ್ದಾರೆ, ಆ ಸೌಲಭ್ಯಗಳನ್ನು ನಿಜವಾಗಿಯೂ ಕೊಟ್ಟಿದ್ದಾರೆಯೇ? ಎಷ್ಟು ಪ್ರಮಾಣದಲ್ಲಿ ಕೊಟ್ಟಿದ್ದಾರೆ? ಎಷ್ಟು ಸದುಪಯೋಗವಾಗಿದೆ? ಆ ಸೌಲಭ್ಯಗಳನ್ನು ಕೊಟ್ಟಿದ್ದರೆ ಅದು ಯಾರಿಗೆ ಹೋಯಿತು? ಇದರ ಬಗ್ಗೆ ಸರ್ಕಾರದವರು ಏನೇನು ಕ್ರಮಗಳನ್ನು ತೆಗೆದುಕೊಂಡಿದ್ದಾರೆ ಎನ್ನುವ ಪ್ರಶ್ನೆಯನ್ನು ಕೂಡ ವಿಚಾರ ಮಾಡಬೇಕಾಗುತ್ತದೆ. ಇಲ್ಲಿ ಅನ್ಯಾಯಗಳು ನಡೆಯುತ್ತಿವೆ. ಸಮಾಜದಲ್ಲಿ ಅಸ್ಪೃಶ್ಯ ವರ್ಗ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಇವರಿಗೆ ೧೮ ಪರ್ಸೆಂಟ್ ರಿಸರ್ವೇಷನ್ ಇದೆ. ಅನೇಕ ಇಲಾಖೆಗಳಿಗೆ ಸಂಬಂಧಪಟ್ಟ ಹಾಗೆ ಸರ್ಕಾರಿ ಕ್ಷೇತ್ರದಲ್ಲಿ ಇದನ್ನು ತೆಗೆದು ಹಾಕಬೇಕು ಎನ್ನುವ ವಾದವನ್ನು ನಾನು ವಿರೋಧಿಸುತ್ತೇನೆ. ಹರಿಜನರಿಗೆ ಇದು ತಲುಪದಿದ್ದರೆ ಆಡಳಿತ ಯಂತ್ರ ತಪ್ಪು ಇರುತ್ತದೆ. ಕಾನೂನು ಸರಿ ಇಲ್ಲದಿದ್ದರೆ ಕಾನೂನು ತಪ್ಪು ಇರುತ್ತದೆ. ಸದುದ್ದೇಶದ ಒಂದು ಗುರಿ ಇರುವುದರಿಂದ ಅದನ್ನು ಮುಂದುವರಿಸಿಕೊಂಡು ಹೋಗ ಬೇಕೆಂದು ನನ್ನ ವಾದ ಇದೆ. ಸರ್ಕಾರದವರು ಈವತ್ತು ರಾಜ್ಯಾಂಗಬದ್ಧವಾಗಿ ಕೊಟ್ಟ ಸೌಲಭ್ಯಗಳು ಉಪಯೋಗವಾಗದಿದ್ದರೆ ಇದಕ್ಕೆ ಸರ್ಕಾರದವರೇ ಹೊಣೆ ಎಂದು ಹೇಳುತ್ತೇನೆ. ಸಂವಿಧಾನದ ಪ್ರಕಾರ ಇವರಿಗೆ ೧೮ ಪರ್ಸೆಂಟ್ ರಿಸರ್ವೇಷನ್ ಏನು ಇದೆ, ಅದನ್ನು ಮುಂದುವರಿಸಬೇಕು. ಈ ವರ್ಗ ಇನ್ನೂ ಮುಂದೆ ಬಂದಿಲ್ಲ. ಈವತ್ತು ಶ್ರೀಮಾನ್ ರಾಚಯ್ಯನವರು ಒಬ್ಬ ಮಂತ್ರಿಯಾಗಿದ್ದಾರೆ, ಇನ್ನು ಕೆಲವರು ಎಂ.ಎಲ್.ಎ ಗಳಾಗಿದ್ದಾರೆ ಡೆಪ್ಯುಟಿ ಕಮಿಷನರ್ ಆಗಿದ್ದಾರೆ ಸೆಕ್ರೆಟರಿ ಅಗಿದ್ದಾರೆ ಎಂದು ಹೇಳಿದರೂ ಕೂಡ...

ಶ್ರೀ ಎಂ. ಬಿ. ರಾಮಸ್ವಾಮಿ.—ಯಾರೂ ಸೆಕ್ರೆಟರಿ ಆಗಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಇಲಾಖೆಯಲ್ಲಿ ಒಬ್ಬ ಸೆಕ್ರೆಟರಿ ಮಾಡಬೇಕು. ಹಿಂದುಳಿದಿರತಕ್ಕ ಪರಿಶಿಷ್ಟ ಜಾತಿಗಳು ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್‌ಗಳು ಇವರಿಗೆ ಸೇರಿದವರೊಬ್ಬರನ್ನು ಸೆಕ್ರೆಟರಿಯಾಗಿ ಮಾಡಿ ಹಾಕಬೇಕು. ಏತಕ್ಕೆ ಹಾಕಬಾರದು? ಒಬ್ಬ ಮಂತ್ರಿಗಳನ್ನು ಮಾಡುವುದಕ್ಕೆ ಸಾಧ್ಯ ಇರಬೇಕಾದರೆ ಸೆಕ್ರೆಟರಿಯನ್ನು ಏತಕ್ಕೆ ಮಾಡಲಿಲ್ಲ ?

ಶ್ರೀ ಎಂ. ಬಿ. ರಾಮಸ್ವಾಮಿ.—ಸೆಕ್ರೆಟರಿ ಆಗಲು ಅರ್ಹತೆ ಇದ್ದೂ ಸಹ ಎಲ್ಲಾ ಕ್ವಾಲಿಫಿಕೇಷನ್ ಇದ್ದರೂ ಸಹ, ಸೆಕ್ರೆಟರಿ ಆಗಬಾರದು ಎಂದು ಮಾಡಿದ್ದಾರೆ. ಹರಿಜನರಿಗೆ ಅಂತಹ ಅನ್ಯಾಯವಾಗಿದೆ.

ಶ್ರೀ ಎಸ್ ಬಂಗಾರಪ್ಪ — ಮಾನ್ಯ ಅಧ್ಯಕ್ಷರೆ, ಸಂವಿಧಾನದಲ್ಲಿ ಏನು ಸೌಲಭ್ಯಗಳು ಇವೆಯೋ ಅವು ಮುಂದುವರಿಯಬೇಕು ಎಂಬ ಸಲಹೆಯನ್ನು ಈ ಸಂದರ್ಭದಲ್ಲಿ ಕೊಡುತ್ತೇನೆ. ಸಂಘಸಂಸ್ಥೆಗಳಲ್ಲಿ ಸೊಸೈಟಿಗಳಲ್ಲಿ ದುರುಪಯೋಗವಾಗದ ಹಾಗೆ ರೀತಿಯಲ್ಲಿ ನಡೆಯಬೇಕು. ಮಾನ್ಯ ಕೊಂಡಜ್ಜಿ ಬಸಪ್ಪ ಲಿಂಗಪ್ಪನವರ ಗಮನಕ್ಕೆ ಮಾನ್ಯ ಸಚಿವರ ಗಮನಕ್ಕೆ ಒಂದು ವಿಷಯವನ್ನು ತರಬೇಕು. ನಾನು ಸಿರಸಿಯಲ್ಲಿ ಹೋದಾಗ ನೋಡಿದೆ. ಅಲ್ಲಿ ಒಂದು ಬೋರ್ಡ್ ಹಾಕಿದ್ದಾರೆ. ಬಹಳ ಚೆನ್ನಾಗಿದೆ. ಏನೆಂದರೆ' ತೊಗಲು ಹದ ಮಾಡುವ ಸೊಸೈಟಿ' ಎಂದು. ಯಾವ ರೀತಿ ಬೋರ್ಡ್ ಬರೆಯಬೇಕು ಎಂದು ಪ್ರಜ್ಞೆ ಇರಬೇಕಾಗಿತ್ತು. ಏನು ಬರೆದಿದ್ದಾರೆ ಹರಿಜನರ ತೊಗಲು ಹದ ಮಾಡುವ ಸಂಘ ಎಂಬ

(ಶ್ರೀ ಎಸ್. ಬಂಗಾರಪ್ಪ)

ಇದೆ. ಇದು ನಾಚಿಕೆಗೇಡಿನ ಪ್ರಸಂಗ. ಹರಿಜನರ ಸಂಘ ಎಂದು ಇರಲಿ. ತೊಗಲು ಎನ್ನುವ ಪದವನ್ನು ಹಾಕಬಾರದಾಗಿತ್ತು. ಹರಿಜನರಿಗೆ ತೊಗಲು ಹದ ಮಾಡುವುದಕ್ಕೆ ನಾವು ಕೊಟ್ಟಿಲ್ಲ

5-30 P.M.

ಶ್ರೀ ಎಂ. ಬಿ. ರಾಮಸ್ವಾಮಿ.—ತಾವು ಸಿರಸಿಯಲ್ಲಿ ಏನು ವೈಶಿಷ್ಟ್ಯ ಕಂಡಿರಿ, ಅದರಲ್ಲಿ ಅರ್ಥವಿದೆ. ಹರಿಜನರ ತೊಗಲು ತೆಗೆದು ಹರಾಜು ಹಾಕುತ್ತಾರೆ. ನಮ್ಮ ಒಪ್ಪಿಗೆ ತೆಗೆದುಕೊಂಡು ಅಧಿಕಾರ ಗದ್ದುಗೆಗೆ ಬಂದ ಮೇಲೆ ಸವಾರಿ ಹೋಗುತ್ತಾರೆ. ನಾನಂತೂ ಹೇಳುತ್ತೇನೆ. ಸವರ್ಣೀಯರು ಹರಿಜನರಿಗೆ ಅನ್ಯಾಯ ಮಾಡುತ್ತಿದ್ದಾರೆ. ಇದರ ಬಗ್ಗೆ ಸರ್ಕಾರ ಕಾರ್ಯಕ್ರಮ ತೆಗೆದುಕೊಳ್ಳಬೇಕು.

ಶ್ರೀ ಎಸ್. ಬಂಗಾರಪ್ಪ.—ಅನ್ಯಾಯ ಮಾಡುವ ಸಂಘಸಂಸ್ಥೆಗಳು, ಸೊಸೈಟಿಗಳಲ್ಲಿ ಹರಿಜನರೂ ಸೇರಿಕೊಂಡಿದ್ದಾರೆ. ಅವರು ಉದ್ಧಾರವಾಗುವುದಕ್ಕೆ ಹಣ ಕೊಡಬೇಕು. ಎನ್ನುವ ವಾದ ಇಟ್ಟಿದ್ದಾರೆ; ಹಣಕೊಡಬೇಕು, ಅದು ಸದುಪಯೋಗವಾಗಬೇಕು, ದುರುಪಯೋಗವಾಗಬಾರದು ಎನ್ನುವ ಅಭಿಪ್ರಾಯ ನಮ್ಮದಿದೆ. ಅವರಿಗೆ ಹಣ ಕೊಟ್ಟಿರಬೇಕಾದರೆ, ಹರಿಜನ ಒಬ್ಬ ಟ್ಯಾಕ್ಸ್ ಕೊಟ್ಟಿರುವುದನ್ನು ಅವರಿಗೆ ಕೊಡುವುದಿಲ್ಲ. ಸಾರ್ವಜನಿಕರು ಸಾವಿರಾರು ಜನರು ಕೊಟ್ಟಿರುವ ಟ್ಯಾಕ್ಸನ್ನು ಅವರಿಗೆ ಕೊಡುತ್ತೇವೆ. ಆ ಜವಾಬ್ದಾರಿಯನ್ನು ಹರಿಜನರು ತಿಳಿದುಕೊಳ್ಳಬೇಕು. ಇನ್ನೊಂದು ವಿಷಯ ಅವರಿಗೆ ಸಂವಿಧಾನದಲ್ಲಿ ಏನು ಸವಲತ್ತು ಕೊಟ್ಟಿದ್ದೇವೆ, ಅದರ ದುರುಪಯೋಗ ಮಾಡಿಕೊಂಡಿದ್ದಾರೆ. ಕೆಲವರು ಡೆಪ್ಯುಟಿಕಮಿಷನರು ಆಗಿದ್ದಾರೆ. ಡೆಪ್ಯುಟಿಕಮಿಷನರು ಆದಮೇಲೆ ಬೇರೆ ಉಚ್ಚ ಜಾತಿಯವರನ್ನು, ಬೇರೆ ದೊಡ್ಡ ಶ್ರೀಮಂತರು ನೋಡಿರುತ್ತಾರೆ. ಸಮಾಜದಲ್ಲಿ ಬರೀ ಶ್ರೀಮಂತರಿಗೆ ಬೆಲೆ ಕೊಡುವ ಪ್ರವೃತ್ತಿ ಬಂದಿರುವುದರಿಂದ, ಬೆಂಗಳೂರಿನಲ್ಲಿ ೪ ಮನೆಗಳನ್ನು ಕಟ್ಟುವುದಕ್ಕೆ ಹೋಗುವುದು, ದೊಡ್ಡ ಲಕ್ಷಾಧೀಶನ ಹಾಗೆ ಅವನ ಹೆಂಡತಿ ಕೈಗೆ ೨೮ ಬಂಗಾರದ ಬಳೆಗಳನ್ನು ಹಾಕುವುದು, ಪೀತಾಂಬರ ಉಟ್ಟುಕೊಂಡಿರುವುದನ್ನು ನೋಡಿದರೆ ಅವರನ್ನು ಹರಿಜನರು ಎಂದು ಪತ್ತೆ ಹಚ್ಚುವುದಕ್ಕೇ ಆಗುವುದಿಲ್ಲ. ದೇವಸ್ಥಾನಕ್ಕೆ ಹೋಗುವುದು, ಕಾರ್ ಸ್ಟೀರಿಂಗ್ ತಿರುಗಿಸುವುದು, ಇವನ್ನು ನೋಡಿದರೆ ಯಾರೂ ಇವರು ಹರಿಜನರು ಎಂದು ಪತ್ತೆ ಹಚ್ಚುವುದಕ್ಕೆ ಆಗುವುದಿಲ್ಲ. ಇವರನ್ನು ನೋಡಿ ಹರಿಜನರು ಬಹಳ ಉದ್ಧಾರವಾಗಿದ್ದಾರೆ ಎಂದು ತಿಳಿದುಕೊಳ್ಳುತ್ತೇವೆ. ಬೇರೆ ಕಡೆ ಹರಿಜನರು ಗಿರಿಜನರು ಲಕ್ಷಾಂತರ ಮಂದಿ ಇದ್ದಾರೆ. ಅವರನ್ನು ಉದ್ಧಾರ ಮಾಡಬೇಕಾಗಿದೆ. ಅನುಕೂಲ ಸಿಕ್ಕತಕ್ಕ ವರ್ಗ ಮೇಲೆ ಬಂದಿದ್ದಾರೆ. ಇತರರಿಗೆ ಏನು ಸಿಕ್ಕಿಲ್ಲ. ಇನ್ನೊಂದು ವಿಷಯವನ್ನು ತಮ್ಮ ಗಮನಕ್ಕೆ ತರಬೇಕು. ಹರಿಜನರ ಮತಾಂತರದ ಬಗ್ಗೆ ಮಾನ್ಯ ಸದಸ್ಯರಾದ ದೊಡ್ಡತಿಮ್ಮಯ್ಯನವರು ಪ್ರಸ್ತಾಪಮಾಡಿದರು. ಮತಾಂತರ ಆಗತಕ್ಕ ಯೋಚನೆ ಮಾಡಿಬಿಟ್ಟರು ಎನ್ನತಕ್ಕ ಧೋರಣೆಯಿಂದ ಹೇಳಿದರು. ಯಾರೂ ಮತಾಂತರ ಆಗುವುದಕ್ಕೆ ತಯಾರಾಗಿಲ್ಲ. ಹಿಂದೂಗಳ ಹೆಸರಿನಲ್ಲಿ ಉಳಿದುಕೊಂಡಿದ್ದಾರೆ.

ಶ್ರೀ ದೊಡ್ಡತಿಮ್ಮಯ್ಯ.—ನಮ್ಮ ಪೊಜಿಷನ್‌ನಲ್ಲಿ ನೀವು ಇದ್ದರೆ ಏನು ಹೇಳುತ್ತಿದ್ದಿರಿ? ದಿನಾ ಹಿಂಸೆ ಕೊಟ್ಟರೆ ಯಾರು ಇರುವುದಕ್ಕೆ ಇಷ್ಟಪಡುತ್ತಾರೆ.

ಶ್ರೀ ಎಸ್. ಬಂಗಾರಪ್ಪ.—ನಾನೂ ಅದನ್ನೇ ಹೇಳುತ್ತಾ ಇದ್ದೇನೆ. ಮಾನ್ಯ ಅಧ್ಯಕ್ಷರೇ, ೧೯೩೫ ಅಥವಾ ೧೯೩೬ನೇ ಸಾಲಿನಲ್ಲಿ ಬಿಹಾರ ಅಥವಾ ಒರಿಸ್ಸಾದ ಗುಡ್ಡಗಾಡು ಪ್ರದೇಶದಲ್ಲಿ ಸಾವಿರಾರು ಜನ ಹರಿಜನರು ಕ್ರಿಶ್ಚಿಯನ್ ಜಾತಿಗೆ ಮತಾಂತರ ಹೋಗಬೇಕು ಎನ್ನುವ ಕಾರ್ಯಕ್ರಮ ನಡೆಯಿತು. ಕ್ರಿಶ್ಚಿಯನ್ ಪಾದ್ರಿಗಳು ಬೇರೆಯವರನ್ನು ಕ್ರಿಶ್ಚಿಯನ್ ಧರ್ಮಕ್ಕೆ ತೆಗೆದುಕೊಳ್ಳಬೇಕು ಎಂದು ಹೋದರು. ಹರಿಜನರು ಯೋಚನೆ ಮಾಡಿದರು, ಇಲ್ಲಿ ಇದ್ದರೆ ನಮ್ಮ ಮೈ ಮುಟ್ಟಿಸಿಕೊಳ್ಳುವುದಿಲ್ಲ ನೀರು ಕೊಡುವುದಿಲ್ಲ, ಲೋಟ ಕಪ್ಪು ಮುಟ್ಟಿಸಿಕೊಳ್ಳುವುದಿಲ್ಲ ಊರ ಹೊರಗೆ ಬೇರೆ ಕೇರಿ ಮಾಡಿ ದೂರ ಇಟ್ಟಿದ್ದಾರೆ, ಕಾಮನ್ ವೆಲ್‌ನಿಂದ ನೀರನ್ನು ತರುವುದಕ್ಕೆ ಬಿಡುವುದಿಲ್ಲ, ಕ್ರಿಶ್ಚಿಯನ್ ಜಾತಿಗೆ ಸೇರಿದರೆ, ಮೈ ಮುಟ್ಟಿಸಿಕೊಳ್ಳುತ್ತಾನೆ, ಜೊತೆಗೆ ಹೋಗಿ ನೀರು ಕುಡಿಯಬಹುದು, ಅನ್ನ ತಿನ್ನಬಹುದು. ಈ ದೃಷ್ಟಿಯಿಂದ ಕ್ರಿಶ್ಚಿಯನ್ ಮತಕ್ಕೆ ಹೋಗುವುದರಲ್ಲಿ ಅರ್ಥವಿದೆ ಎಂದು ಯೋಚನೆ ಮಾಡಿದರು. ಹಿಂದೂಗಳು ಇದನ್ನು ಪ್ರಬಲವಾಗಿ ವಿರೋಧಮಾಡಿ, ಹರಿಜನರು ಮತಾಂತರ ಮಾಡಬಾರದು, ಇದು ಅನ್ಯಾಯ, ಹಿಂದೂಧರ್ಮವನ್ನು ಹಾಳು ಮಾಡುತ್ತಾರೆ, ಎಂದು ಒಂದು ದೊಡ್ಡ ಬೊಬ್ಬೆಯನ್ನು ಎಬ್ಬಿಸಿದರು. ಅನಂತರ ದೊಡ್ಡ ಫಂಕ್ಷನ್ ಆಯಿತು, ಹರಿಜನರು ಹೋಗದ ಹಾಗೆ ನೋಡಿಕೊಂಡು, ಅವರನ್ನು

ಹಿಂದೂಧರ್ಮದಲ್ಲೇ ಉಳಿಸಿಕೊಂಡರೂ ಅದೆ ಹಿಂದೂಗಳು ಹರಿಜನರನ್ನು ಮತ್ತೆ ಊರಿನ ಹೊರಗೆ ಇಟ್ಟರು, ಮುಟ್ಟುವುದಕ್ಕೆ ತಯಾರಿಲ್ಲ. ಮೊದಲು ಹೇಗಿತ್ತೊ ಹಾಗೇ ಇದೆ. ಈ ವಿಷಯ ಪ್ರಸ್ತಾಪ ಮಾಡುತ್ತಿದ್ದೇನೆಂದರೆ, ಮಾನ್ಯ ಅಧ್ಯಕ್ಷರಿಗೆ ಗೊತ್ತಿದೆ, ಹರಿಜನರೂ ಕೂಡ ಮಾನವರು ಎನ್ನುವ ಭಾವನೆಯಿಂದ ಅವರನ್ನು ಕಾಣದ ಮೇಲೆ ಹಿಂದೂಧರ್ಮವನ್ನು ಕಟ್ಟಿಕೊಂಡು ಏನು ಪ್ರಯೋಜನ? ಇಷ್ಟು ವಿಷಯವನ್ನು ಈ ಸಂದರ್ಭದಲ್ಲಿ ಹೇಳಿದ್ದೇನೆ.

ಕೊನೆಯದಾಗಿ ಪಂಚಾಯಿತಿಗಳು ಮತ್ತು ತಾಲ್ಲೂಕು ಬೋರ್ಡುಗಳ ಬಗೆ ಎರಡು ಮಾತುಗಳನ್ನು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ. ಮಾನ್ಯ ಅಧ್ಯಕ್ಷರೇ, ಪ್ರಜಾಪ್ರಭುತ್ವದಲ್ಲಿ ಅಧಿಕಾರ ವಿಕೇಂದ್ರೀಕರಣವಾಗಬೇಕು. ಸಮಾಜವಾದ ಜಾರಿಗೆ ಬರಬೇಕು. ಅಧಿಕಾರ ವಿಕೇಂದ್ರೀಕರಣ ವಾದವನ್ನು ಮೊದಲು ಒಪ್ಪಬೇಕು. ಪ್ರತಿಯೊಂದಕ್ಕೂ ಡೆಲ್ಲಿಗೆ ಹೋಗಬೇಕು. ೪ ರೂಪಾಯಿ ಬೇಕು ಎಂದರೆ, ವಿಮಾನ ಹತ್ತಿ ಡೆಲ್ಲಿಗೆ ಹೋಗಬೇಕಾಗುತ್ತದೆ. ಹಳ್ಳಿ ಜನ ಪ್ರತಿಯೊಂದಕ್ಕೂ ಬೆಂಗಳೂರಿಗೆ ಬರುವುದಕ್ಕೆ ಆಗುವುದಿಲ್ಲ. ಪ್ರತಿಯೊಂದಕ್ಕೂ ಮಿನಿಸ್ಟರ ಹತ್ತಿರ ಹೋಗುವ ಪ್ರವೃತ್ತಿಯನ್ನು, ಪ್ರತಿಯೊಂದಕ್ಕೂ ಡೆಲ್ಲಿಗೆ ಹೋಗುವಂಥ ಪ್ರವೃತ್ತಿಯನ್ನು ತಪ್ಪಿಸಬೇಕು. ಮಹಾರಾಷ್ಟ್ರ ಮತ್ತು ಆಂಧ್ರ ರಾಜ್ಯಗಳಲ್ಲಿ ಜಿಲ್ಲಾ ಪರಿಷತ್ತು ಇದೆಯೆಂದು ಕೇಳಿದ್ದೇನೆ. ಶ್ರೀಮಾನ್ ವಿರೇಂದ್ರ ಪಾಟೀಲರ ಸರ್ಕಾರ ಇದ್ದಾಗ, ಇಲ್ಲೂ ಕೂಡ ಜಿಲ್ಲಾಪರಿಷತ್ತು ಮಾಡಬೇಕು ಎಂದು ಬಿಲ್ಲನ್ನು ಸಭೆಯ ಮುಂದೆ ಇಟ್ಟಿದ್ದರು. ಅದು ಏನಾಯಿತೋ ಗೊತ್ತಿಲ್ಲ. ಈಗ ಜಿಲ್ಲಾ ಪರಿಷತ್ತು ಮಾಡತಕ್ಕ ಉದ್ದೇಶ ಸರ್ಕಾರ ಇಟ್ಟುಕೊಂಡಿದೆಯೋ, ಇಲ್ಲವೇ, ಆ ಬಿಲ್ ಏನಾಯಿತು ಎನ್ನುವುದನ್ನು ಸ್ಪಷ್ಟವಾಗಿ ತಿಳಿಸಬೇಕು. ಈ ತಾಲ್ಲೂಕ್ ಬೋರ್ಡ್ ಆಕ್ಟ್, ಪಂಚಾಯಿತಿ ಆಕ್ಟ್ ಇವೆಯೆಲ್ಲಾ, ಅವು ಈ ಕಾನೂನು ಪ್ರಕಾರ ಅಧಿಕಾರಗಳು ಸರಿಯಾಗಿಲ್ಲ. ಹೆಚ್ಚಿನ ಅಧಿಕಾರಗಳನ್ನು ಪಂಚಾಯಿತಿಗಳಿಗೆ, ತಾಲ್ಲೂಕು ಬೋರ್ಡುಗಳಿಗೆ, ಜಿಲ್ಲಾ ಪರಿಷತ್ತಿಗೆ ಹಂಚುವುದಕ್ಕೆ ವ್ಯವಸ್ಥೆ ಮಾಡತಕ್ಕ ಕಾನೂನು ಮಾಡುತ್ತೀರಿ ಎನ್ನುವ ಸಲಹೆಯನ್ನಿಟ್ಟು ಮಾನ್ಯ ಮಂತ್ರಿಗಳು ಉತ್ತರದಲ್ಲಿ ಇದರ ಬಗ್ಗೆ ತಿಳಿಸುತ್ತಾರೆ ಎನ್ನುವ ಅಭಿಪ್ರಾಯ ಹೊಂದಿ, ಈ ಎರಡು ಮಾತುಗಳನ್ನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಪಿ. ಪಿ. ಹೆಗಡೆ (ಚಿಕ್ಕೋಡಿ).—ಮಾನ್ಯ ಅಧ್ಯಕ್ಷರೇ, ಸಮಾಜ ಕಲ್ಯಾಣ ಮಂತ್ರಿಗಳು ಈ ಸದನದ ಮುಂದೆ ಇಟ್ಟ ೩೪, ೪೯ ಮತ್ತು ೬೦ನೇ ನಂಬರ್ ಬೇಡಿಕೆಗಳಿಗೆ ನಾನು ಸಂಪೂರ್ಣವಾದ ಬೆಂಬಲ ವಿತ್ತು ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಬಯಸುತ್ತೇನೆ. ಸಮಾಜ ಕಲ್ಯಾಣದ ಬಗ್ಗೆ ಈಗಾಗಲೇ ನನ್ನ ಹಲವು ಮಿತ್ರರು ಮಾತನಾಡಿದ್ದಾರೆ, ಸಾಕಷ್ಟು ಅಂಕಿಅಂಶಗಳನ್ನು ಕೊಟ್ಟಿದ್ದಾರೆ. ಕೆಲವರು ಹರಿಜನರು ಗಿರಿಜನರು ಬಡತನದಿಂದ, ಅಪಮಾನದಿಂದ ಜೀವನ ಮಾಡುತ್ತಾ ಇರುವುದನ್ನು ದುಃಖದಿಂದ ಸ್ಪಷ್ಟ ಶಬ್ದದೊಳಗೆ, ನಿರುತ್ಸಾಹಭಾವನೆಯಿಂದ, ಸಿಟ್ಟಿನಿಂದ ಹೇಳಿದ್ದಾರೆ.

ಹರಿಜನ ಗಿರಿಜನ ಪ್ರಶ್ನೆ ಬಂದಾಗ ನಿಜವಾಗಿಯೂ ಹರಿಜನ ಗಿರಿಜನರೆಂದು ತಿಳಿದ ಪ್ರತಿಯೊಬ್ಬನಿಗೂ ಹೊಟ್ಟೆಯಲ್ಲಿ ಬೆಂಕಿ ಬೀಳುತ್ತದೆ. ನಮ್ಮ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ಮೇಲಿಂದ ಮೇಲೆ ಘೋಷಣೆಗಳನ್ನು ಮಾಡುತ್ತಾ ಇದ್ದಾರೆ. ಹರಿಜನರ ಕಲ್ಯಾಣವು ಎಲ್ಲಕ್ಕಿಂತಲೂ ದೊಡ್ಡ ಸಮಸ್ಯೆ. ಇದನ್ನು ಮಾಡಲೇ ಬೇಕು. ಅಸ್ಪೃಶ್ಯತೆ ಹೋಗಲೇ ಬೇಕು. ವಿಷಮತೆ ದೂರವಾಗಲೇ ಬೇಕು. ಆಗ ಇದನ್ನು ನೋಡಿ ನಮಗೂ ಸಮಾಧಾನವಾಗುತ್ತದೆ. ಶೆಡ್ಯೂಲ್ ಕ್ಯಾಸ್ಟ್, ಶೆಡ್ಯೂಲ್ ಟ್ರೈಬ್, ಎಂ. ಎಲ್. ಎ. ಗಳಿಗೂ ಸಮಾಧಾನವಾಗುತ್ತದೆ. ಆದರೆ ಅವರಿಗೆ ಮಾಡಿದಂಥ ಕಾರ್ಯಗಳ ಚಿತ್ರ ಕಣ್ಮುಂದೆ ಬಂದಾಗ ಮತ್ತೆ ಹೊಟ್ಟೆಯಲ್ಲಿ ಬೆಂಕಿ ಬೀಳುತ್ತದೆ. ೨೫ ವರ್ಷಗಳ ಹಿಂದೆ ಸ್ವಾತಂತ್ರ್ಯ ಪೂರ್ವದಲ್ಲಿ ಮಹಾತ್ಮಾಗಾಂಧಿಯವರು ಪುಕಾರ್ ಮಾಡಿದರು, ಹರಿಜನ ಗಿರಿಜನರಿಗೆ ಇಂಥಿಂಥ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತೇವೆಂಬ ಪುಕಾರನ್ನು ಮಾಡಿದ್ದರು, ಅದನ್ನೇ ನಾವೆಲ್ಲರೂ ಹೇಳುತ್ತಾ ಬಂದಿದ್ದೇವೆ. ೨೫ ವರ್ಷಗಳಿಂದ ಪ್ರಗತಿಯನ್ನು ಹೇಗೆ ಮಾಡಬೇಕೆಂದು ಸಂವಿಧಾನದಲ್ಲಿ ಬರೆದು ಹೇಳುತ್ತಾ ಬಂದಿದ್ದೇವೆ ಆದರೆ ಇಲ್ಲಿಯವರೆಗೆ ಏನೂ ಪ್ರಗತಿಯಾಗಿಲ್ಲ. ಇಷ್ಟೆಲ್ಲಾ ಮಾಡಿದ್ದರೂ ಏನೂ ಆಗಿಲ್ಲವೆಂದು ಹೇಳುತ್ತಿದ್ದೇನೆ ಇದನ್ನು ತಾವು ತಪ್ಪಾಗಿ ತಿಳಿದುಕೊಳ್ಳಬಾರದು, ದಯವಿಟ್ಟು ಕ್ಷಮಿಸಬೇಕು. ಏಕೆಂದರೆ ನಾನು ಒಬ್ಬ ಅನುಭವ ಪಡೆದ ಮನುಷ್ಯ, ಸುಖ, ದುಃಖ, ಕಷ್ಟ ಸುಖಗಳನ್ನು, ಅಪಮಾನವನ್ನೆಲ್ಲಾ ಅನುಭವಿಸಿದ್ದೇನೆ. ಕೆಲವೊಂದು ಪ್ರಸಂಗದೊಳಗೆ ವಿಚಾರ ಮಾಡಬೇಕಾದರೆ ಸ್ವಾತಂತ್ರ್ಯ ಪೂರ್ವದಲ್ಲಿ ಎಷ್ಟು ಸುಖವಾಗಿದ್ದೆವೋ ಅಷ್ಟು ಸುಖವಾಗಿಲ್ಲ. ಅದಕ್ಕಿಂತಲೂ ಹೆಚ್ಚು ದಾರಿದ್ರ್ಯ ಬಂದಿದೆ, ಅದಕ್ಕಿಂತ ಹೆಚ್ಚು ಅಪಮಾನವನ್ನು ಹೊಂದುವಂಥ ಪ್ರಸಂಗಗಳು ಬಂದಿವೆ. ಏನೋ ಕೆಲವು ಶಿಕ್ಷಣದ ದೃಷ್ಟಿಯಿಂದ ನಾವು ಶಿಕ್ಷಣವನ್ನು ಪಡೆದಿದ್ದೇವೆ. ನಾನು ವಿಶೇಷವಾಗಿ ಉತ್ತರ ಕರ್ನಾಟಕವನ್ನು ಕಣ್ಮುಂದೆ ಇಟ್ಟುಕೊಂಡು ಮಾತನಾಡುತ್ತೇನೆ. ಸರ್ಕಾರದ ಅವರಿಗೆ ಹೇಳಬಯಸುತ್ತೇನೆ. ಹಳೆಯ ಮೈಸೂರು ಭಾಗದಲ್ಲಿ ಮೈಸೂರು ಮಹಾರಾಜರು ಹರಿಜನರ ಸಲುವಾಗಿ ಕೆಲಸ ಮಾಡಿದ್ದಾರೆ. ಇಲ್ಲಿ ಹರಿಜನರ ಅಭಿವೃದ್ಧಿಯಾಗಿದೆ, ಶಿಕ್ಷಣ ದೃಷ್ಟಿ

(ಶ್ರೀ ಪಿ. ಪಿ. ಹೆಗರೆ)

ಯಿಂದಲೂ ಪ್ರಗತಿಯಾಗಿದೆ, ಆದರೆ ಮುಂಬೈ ಕರ್ನಾಟಕದಲ್ಲಿ ಹರಿಜನರ ಪರಿಸ್ಥಿತಿ ಸ್ವಾತಂತ್ರ್ಯ ಪೂರ್ವದಲ್ಲಿ ಹೇಗೆ ಇತ್ತೋ, ಅದಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಏನೂ ಸುಧಾರಿಸಿಲ್ಲ. ಆರ್ಥಿಕ ಸ್ಥಿತಿಯಲ್ಲಿ ಕೆಳಮಟ್ಟಕ್ಕೆ ಹೋಗಿದ್ದಾರೆ. ಈ ಸಮಸ್ಯೆ ೨೫ ವರ್ಷಗಳಿಂದಲೂ ಕಾಂಗ್ರೆಸ್ ಸರ್ಕಾರವೇ ಇದ್ದಾಗ್ಯೂ ಸಹ ಸರಿಪಡಿಸಲಿಕ್ಕೆ ಸಾಧ್ಯವಾಗಲಿಲ್ಲ ಇದು ಸೋಚನೀಯವೆನಿಸುತ್ತದೆ. ನಮ್ಮ ಸರ್ಕಾರ, ಕೇಂದ್ರ ಸರ್ಕಾರ ೧೯೮೦ ರಷ್ಟ್ರೊಳಗೆ ಈ ಸಮಾಜವನ್ನು ಉಳಿದ ಸಮಾಜದ ಸಮರಿಗೆ ತರುತ್ತೇವೆಂದು ಹೇಳಿಕೊಂಡಿದ್ದಾರೆ. ಅದನ್ನು ಓದಿ ಆಶ್ಚರ್ಯವೆನಿಸುತ್ತದೆ. ೨೫ ವರ್ಷಗಳಿಂದ ಪ್ರಗತಿ ಮಾಡುವುದಕ್ಕೆ ಆಗದೇ ಇರುವುದನ್ನು ಮುಂದಿನ ೫-೬ ವರ್ಷಗಳಲ್ಲಿ ಈ ಸಮಾಜವನ್ನು ಸಮಾಜದೊಳಗೆ ಹೇಗೆ ಕಟ್ಟುತ್ತಾರೆ? ಇದರ ಬಗ್ಗೆ ಸರ್ಕಾರದವರು ಏನಾದರೂ ಕಾರ್ಯಕ್ರಮ ಹಾಕಿಕೊಂಡಿದ್ದಾರೆಯೋ ? ಇವತ್ತಿನ ಬಜೆಟ್‌ನಲ್ಲಿ ೨ ಕೋಟಿ ರೂಪಾಯಿ ಕೇಳಿದ್ದೀರಿ ಇದರಿಂದ ಏನು ಮಾಬಹುದು ? ರಾಷ್ಟ್ರ ಮಟ್ಟದಲ್ಲಿರುವಂಥ ಹರಿಜನ ಸಮಸ್ಯೆ, ಅಸ್ಪೃಶ್ಯತೆ, ದಾರಿದ್ರ್ಯ, ಈ ಸಮಾಜದೊಳಗೆ ಇರುವಂಥ ವಿಷಮತೆಯನ್ನು ಹೋಗಲಾಡಿಸಬೇಕಾದರೆ ಎರಡು ಕೋಟಿ ರೂಪಾಯಿಗಳಿಂದ ಏನು ಮಾಡಬೇಕು. ನಮ್ಮ ಮುಂದೆ ದೊಡ್ಡ ಪ್ರಾಬ್ಲಂ ಬಂದಿದೆ. ಆ ದಿಶೆಯಿಂದ ಇಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮೊದಲನೆಯ ಸಂಗತಿ ಏನೆಂದರೆ, ಈ ಸಮಾಜದವರು ನಾವು ಉನ್ನತ ಮಟ್ಟಕ್ಕೆ ಏರಬೇಕು, ನಮ್ಮ ಸಮಾಜವೂ ಮುಂದೆ ಬರಬೇಕು ಎನ್ನುವ ವಿಚಾರವೇನಿದೆ ಅದು ಸರ್ಕಾರದವರ ಮನಸ್ಸಿನಲ್ಲಿಯೂ ಬಂದು, ಸಮಾಜವನ್ನು ಮೇಲೆತ್ತಬೇಕು ಎನ್ನುವ ವಿಚಾರ ಸರಣಿ ಇದೆ. ಹಾಗೆ ಇದ್ದದ್ದರೆ ಏನು ಮಾಡಬೇಕಾಗಿತ್ತು, ಏನೇ ಮಾಡಲಿಲ್ಲ ಎನ್ನುವಂಥದ್ದನ್ನು ವಿಚಾರ ಮಾಡಬೇಕು. ಇದನ್ನು ಸ್ಪಷ್ಟವಾದ ಶಬ್ದದೊಳಗೆ ಹೇಳಬೇಕಾದರೆ ಸಂವಿಧಾನ ಹಿಡಿದುಕೊಂಡು ಹರಿಜನರ ಕಲ್ಯಾಣ ಸಲುವಾಗಿ ಮಾಡುತ್ತೇವೆ ಒಳ್ಳೆಯ ವ್ಯವಸ್ಥೆ ಮಾಡುತ್ತೇವೆ, ನಿಮ್ಮ ಪಕ್ಕ ಇದೆ ಎಂದು ಹೇಳಿಸಿತ್ತಾರೆ. ಫಂಡಮೆಂಟಲ್ ರೈಟ್ ಎಂದು ಹೇಳುತ್ತಾರೆ. ಆಸ್ತಿವಂತರ ವಂತರ ಆಸ್ತಿಯನ್ನು ರಕ್ಷಣೆ ಮಾಡುವ ಸಲುವಾಗಿ ಫಂಡಮೆಂಟಲ್ ರೈಟ್ ಇದೆ. ಡೈರೆಕ್ಟಿವ್ ಪ್ರಿನ್ಸಿಪಲ್ ಕೊಟ್ಟಿದ್ದಾರೆ ಇದು ನಮ್ಮ ಕೇಂದ್ರ ಸರ್ಕಾರ ಸುಪ್ರಿಂ ಕೋರ್ಟಿನ ಮುಂದೆ ನಮ್ಮ ಬ್ಯಾಂಕ್ ನ್ಯಾಶನಲೈಜೇಷನ್ ಕೇಸಿನೊಳಗೆ, ಮತ್ತು ರಾಜಧನ ರದ್ದುಗೊಳಿಸುವ ಕೇಸಿನೊಳಗೆ ಆರ್ಗ್ಯು ಮಾಡಿದ್ದಾರೆ. "Directive principles are more fundamental the fundamental rights." ಈ ಫಂಡಮೆಂಟಲ್ ಪ್ರಿನ್ಸಿಪಲ್‌ನ್ನು ಬರೀ ತೋರಿಕೆಗೆ ಮಾಡುವುದು. ಕೇಂದ್ರ ಸರ್ಕಾರದ ವತಿಯಿಂದ ಸುಪ್ರಿಂ ಕೋರ್ಟಿನಲ್ಲಿ ವಕೀಲರು ಆರ್ಗ್ಯು ಮಾಡುವ ಕಾಲಕ್ಕೆ Directive principles are more fundamental than the fundameetal rights. ಅಂದ ಬಳಿಕ, ಆ ಪ್ರಕಾರ ಘೋಷಣೆ ಮಾಡಿದ್ದಾರೆ. ಸರ್ಕಾರದ ವತಿಯಿಂದ ಆ ರೀತಿ ಅಂದ ಬಳಿಕ ಡೈರೆಕ್ಟಿವ್ ಪ್ರಿನ್ಸಿಪಲ್ ಆಫ್ ಫಂಡಮೆಂಟಲ್ ರೈಟ್ಸ್ ಅದಕ್ಕಿಂತ ಹೆಚ್ಚು ಮಹತ್ವವಿದ್ದರೂ ಸಹ ಅಷ್ಟೇ ಮಹತ್ವವಿದೆಂದು ತಿಳಿದುಕೊಳ್ಳುತ್ತಿದ್ದಾರೆ. ಈಗ ಏನು ಎರಡು ಕೋಟಿ ರೂಪಾಯಿಗಳನ್ನು ಇಟ್ಟಿದ್ದೀರಿ. ೨೦ ಕೋಟಿ ಏತಕ್ಕೆ ಇಡಲಿಲ್ಲ. ೧೯೮೦ರೊಳಗೆ ಈ ಸಮಾಜವನ್ನು ಮೇಲ್ಮಟ್ಟದ ಸಮಾಜದೊಳಕ್ಕೆ ಕಟ್ಟಬೇಕೆಂದು ನೀವು ನಿರ್ಣಯ ಮಾಡಿದ್ದೀರಿ ಅಂದಬಳಿಕ ೨ ಕೋಟಿ ರೂಪಾಯಿಯಿಂದ ಏನು ಪ್ರಗತಿ ಮಾಡುವುದು ಎಂಬುದು ತಿಳಿಯುವುದಿಲ್ಲ. ೧೯೮೦ ರ ಕಾಲಕ್ಕೆ ನಮ್ಮ ಸರ್ಕಾರದವರು ಜನತೆಗೆ ಏನು ಉತ್ತರ ಕೊಡುವರು ನಿಮ್ಮ ಹಿಂದಿನ ಪ್ರಕಾರ್, ಪಬ್ಲಿಸಿಟಿ ಏನಾಯಿತು ? ಎಂದು ಕೇಳಿದರೆ ಏನು ಹೇಳಬೇಕು ? ನನ್ನ ಮಟ್ಟಿಗೆ ಹೇಳಬೇಕಾದರೆ ಇದು ಒಂದು ದೊಡ್ಡ ಪ್ರಶ್ನೆಯಾಗಿದೆ. ಏತಕ್ಕೆಂದರೆ ಇವತ್ತು ಹರಿಜನರ, ಗಿರಿಜನರ ಅಸ್ಪೃಶ್ಯತೆ ಹಳ್ಳಿಗಳಲ್ಲಿ ಸಾಕಷ್ಟು ಇದೆ. ದಾರಿದ್ರ್ಯವಿದೆ, ಅಜ್ಞಾನವಿದೆ. ಅವರ ಪ್ರಗತಿಯನ್ನು ಮಾಡಬೇಕಾದರೆ ಏನು ಮಾಡಬೇಕು ? ಈ ಪ್ರಶ್ನೆಯನ್ನು ಸಾಮಾನ್ಯ ಮನುಷ್ಯ ವಿಚಾರ ಮಾಡುವ ಕಾಲಕ್ಕೆ, ಇದಕ್ಕೆ ಒಂದೇ ಒಂದು ಮಾರ್ಗವೆನ್ನಿಸುತ್ತದೆ. ಮನುಷ್ಯ ಜೀವನವನ್ನು ಸಾಗಿಸಬೇಕಾದರೆ ಏನನ್ನಾದರೂ ಮಾಡಬೇಕು, ಸಾಧನೆ ಮಾಡಬೇಕು ಇವತ್ತು ಹರಿಜನರ ಗಿರಿಜನರಿಗೆ ಭೂ ಸುಧಾರಣೆಯ ಕಾಯಿದೆ ಇಂದಲಾದರೂ ಜಮೀನು ಸಿಕ್ಕಬಹುದೆಂಬ ಆಶೆ ಒಂದು ಕಲ್ಪನೆ ಇತ್ತು, ಆದರೆ ಏನೂ ಸಿಕ್ಕುವುದಿಲ್ಲ ಏನೂ ದೊರೆಯುವುದಿಲ್ಲ. ನಾಳೆ ನೀವು ಇದರ ಅಭಿವೃದ್ಧಿಗಾಗಿ ಯಾವ ರೀತಿಯ ಕಾರ್ಯಕ್ರಮವನ್ನು ಕೈಗೊಳ್ಳುತ್ತೀರಿ ? ಇವತ್ತು ನಮ್ಮ ಸಮಾಜದ ಜನರನ್ನು ಸಾಕಷ್ಟು ಸುಶಿಕ್ಷಿತರನ್ನಾಗಿ ಮಾಡಬೇಕು. ಶಿಕ್ಷಿತರನ್ನಾಗಿ ಮಾಡುವ ಜವಾಬ್ದಾರಿ ಸರ್ಕಾರದ ಮೇಲೆ ಇದೆ. ಆ ರೀತಿ ಡೆಮಾಕ್ರಸಿಯಲ್ಲಿಯೂ ಇದೆ. We have every right to live like other people ni a democracy.

ಇವತ್ತು ಪ್ರಜಾಪ್ರಭುತ್ವವನ್ನು ಯಶಸ್ವಿಯಾಗಿ ಜಾರಿ ಮಾಡಬೇಕಾದರೆ ಈ ಸಮಸ್ಯೆಗೆ ಒಂದು ಸೂಚನೆ ಮಾಡುತ್ತೇನೆ. ಇದನ್ನು ಜಾರಿ ಮಾಡುವ ಕಾಲಕ್ಕೆ ಅಸ್ಪೃಶ್ಯತೆಯನ್ನು ಕಾಯಬೇಕೆಂದು, ವಿಷಮತೆಯನ್ನು ಕಾಯಬೇಕೆಂದು, ಡೆಮಾಕ್ರಸಿಯನ್ನು ಕಾಯಬೇಕೆಂದು, ಸಮಾಜವನ್ನು ಕಾಯ

ಬೇಕೆಂದು ಹೇಳುವುದು ಸರಿಯಲ್ಲ, ಇತ್ತೀಚಿನ ಕಾಲದಲ್ಲಿ ನಡೆಯುತ್ತಿರುವಂಥದ್ದನ್ನು ನೋಡಿದರೆ, ಸಂಪು ಹರತಾಳ, ಸ್ಟ್ರೈಕ್‌ಗಳು ನಡೆಯುತ್ತಿವೆ. ಇದಕ್ಕೆ ಕಾರಣವೇನೆಂದರೆ ದಾರಿದ್ರ್ಯದ ಸಲುವಾಗಿ ಇದನ್ನೆಲ್ಲಾ ಮಾಡುತ್ತಾರೆ ಎಂದೇನಲ್ಲ. ಬುದ್ಧಿವಂತರು, ಅವರು ತಮ್ಮ ಹಕ್ಕಿನ ಸಲುವಾಗಿ ಹೆಚ್ಚಿನ ಸುಖಕ್ಕಾಗಿ ಹೋರಾಟ ಮಾಡುತ್ತಾರೆ. ಹರಿಜನರು ಗಿರಿಜನರಿಗೆ ಭೂಮಿ ಇದೆಯೇ? ಅವರು ಏನು ಮಾಡಲಿಕ್ಕೆ ಹತ್ತಿದ್ದಾರೆ? ಏನು ಮಾಡಲಿಕ್ಕೆ ಸಾಧ್ಯವಿದೆ? ಏನೂ ಇಲ್ಲ. ಅವರು ನಾಳೆ ಬುದ್ಧಿವಂತರಾಗಿ, ನಾವು ಮಾನವರು ನಮಗೂ ಹಕ್ಕಿದೆ ಎಂದು ಜ್ಞಾಪಕಕ್ಕೆ ಬಂದರೆ ಆಗ ಸರ್ಕಾರವನ್ನು ಅವರು ಏನಾದರೂ ಕೇಳಲಿಕ್ಕೆ ಶಬ್ದ ಬಂದೀತು, ಸಾಧ್ಯವಾದೀತು ನನ್ನ ಮಟ್ಟಿಗೆ ಹೇಳುವುದಾದರೆ, ಈ ಸಮಾಜವನ್ನು ಮುಂದೆ ತರುವುದಕ್ಕೆ ಏನು ಮಾಡಬೇಕೆಂದರೆ ಮೊದಲನೆಯದಾಗಿ ಶಿಕ್ಷಣಕ್ಕಾಗಿ ಸಾಕಷ್ಟು ಹಣವನ್ನು ಖರ್ಚು ಮಾಡಬೇಕು. ಆದರೆ ತಾವು ಏನು ಖರ್ಚು ಮಾಡುತ್ತೀರಿ. ಕೆಲವೊಂದು ಹುಡುಗರಿಗೆ ಮಾತ್ರ ಸ್ಕಾಲರ್‌ಶಿಪ್ಪನ್ನು ಬೋರ್ಡಿಂಗ್‌ನ್ನು ಕೊಡುತ್ತೀರಿ. ಆದರೆ ಉಳಿದವರು ಏನು ಮಾಡಬೇಕು ?

ಉಪಾಧ್ಯಕ್ಷರು.—ತಾವು ಬೇಗ ಮುಗಿಸಬೇಕು.

ಶ್ರೀ ಪಿ. ಪಿ. ಹೆಗರೆ.—ಸ್ವಾಮಿ, ನಾನು ಬೇರೆ ಯಾವ ಡಿಮ್ಯಾಂಡ್ ಮೇಲೂ ಮಾತನಾಡಲಿಲ್ಲ, ಈ ಒಂದು ವಿಷಯದ ಮೇಲೆ ಮಾತ್ರ ಮಾತನಾಡುತ್ತಿದ್ದೇನೆ. ಆದುದರಿಂದ ತಾವು ಈ ವಿಷಯದ ಮೇಲೆ ಮಾತನಾಡುವುದಕ್ಕೆ ಇನ್ನೊಂದು ೫ ನಿಮಿಷಗಳ ಕಾಲ ನನಗೆ ಅವಕಾಶ ಮಾಡಿಕೊಡಬೇಕು ತಾವು ಈ ವಿಷಯದ ಮೇಲೆ ಮಾತನಾಡುವುದಕ್ಕೆ ನನಗೆ ಸ್ವಲ್ಪ ಹೆಚ್ಚು ಅವಕಾಶ ಕೊಡದೇ ಹೋದರೆ ಇಲ್ಲೂ ನಾನು ಅಸ್ಪೃಶ್ಯನೇ ಎಂದು ಹೇಳಬೇಕಾಗುತ್ತದೆ.

MR DEPUTY SPEAKER.— That charge will have to be withdrawn by the hon. Member I have been as Sympathetic and as considerate as possible. I have the least desire hurt an boby bacause it pains. me to hurt anybody. But, if the hon. Member says that he has not spoked on any other Demand, I would say that I am not resp nsi. ble for that. If he had mentioned his desire to speak on the other demands, we could have certainly helped him and accommodated. As it is, we have to close the discussitn to-day and there are not less than six members. What am I to do ? It is a very harsh imputation and it is difficult to adjust.

ಶ್ರೀ ಪಿ. ಪಿ. ಹೆಗರೆ.— ಮಾನ್ಯ ಅಧ್ಯಕ್ಷರೇ, ಆರೀತಿ ಹೇಳಿದ್ದಕ್ಕಾಗಿ ನಾನು ವಿಷಾದಪಡುತ್ತೇನೆ. ನಾನು ತಮ್ಮ ಮೇಲೆ ಆರೋಪಣೆ ಮಾಡಬೇಕು ಅನ್ನುವ ಉದ್ದೇಶದಿಂದ ಈಅಸ್ಪೃಶ್ಯತೆ ಅನ್ನುವ ಪದವನ್ನು ಬಳಸಲಿಲ್ಲ. ನಾನು ಈ ಅಸ್ಪೃಶ್ಯತೆ ಎನ್ನುವ ಶಬ್ದವನ್ನು ಉಪಯೋಗಿಸಿದ ಉದ್ದೇಶ ಸುಧಾರಣೆ ಮಾಡಬೇಕು ಎನ್ನುವ ಉದ್ದೇಶದಿಂದ ಈ ಬಗ್ಗೆ ಮಾತನಾಡಿದೆ.

ನಾನು ಇನ್ನು ಹೆಚ್ಚು ಕಾಲಾವಕಾಶ ತೆಗೆದುಕೊಳ್ಳದೆ ಇನ್ನು ಎರಡು ವಿಷಯಗಳ ಬಗ್ಗೆ ಮಾತನಾಡುತ್ತೇನೆ. (೧) ಹರಿಜನರ ಮತ್ತು ಗಿರಿಜನರ ಶಿಕ್ಷಣದ ಬಗ್ಗೆ (೨) ಅವರುಗಳ ರಿಸರ್ವೇಷನ್ ಆಫ್ ಪೋಸ್ಟ್ಸ ಬಗ್ಗೆ ಮಾತ್ರ ಮಾತನಾಡುತ್ತೇನೆ.

ಮೊದಲನೆಯದಾಗಿ ಹೇಳಬೇಕಾದರೆ ಮಾನವ ಜೀವಿಸಬೇಕಾದರೆ ಏನಾದರೂ ಒಂದು ಸಾಧನ ಬೇಕು. ನಮಗೆ ಆ ರೀತಿಯಾದ ಯಾವ ಸಾಧನವೂ ಇಲ್ಲ ಎಂದು ಹೇಳುತ್ತೇನೆ. ಸರ್ಕಾರಗಳು ಹಾಸ್ಟೆಲ್‌ನಲ್ಲಿ ರತಕ್ಕಂಥ ಈ ವಿದ್ಯಾರ್ಥಿಗಳಿಗೆ ೧೨೫ ರೂಪಾಯಿ ಸ್ಕಾಲರ್‌ಷಿಪ್ ಮತ್ತು ಡೇ ಸ್ಕಾಲರ್ಸ್‌ಗೆ ತಿಂಗಳಿಗೆ ೨೨ ರೂಪಾಯಿ ಕೊಡುತ್ತಿದ್ದಾರೆ. ಇದನ್ನು ಏರಿಸಬೇಕು ಮತ್ತು ಹಾಸ್ಟೆಲಿಗೂ ಸಹ ಹೆಚ್ಚು ಹಣವನ್ನು ಪ್ರೊವೈಡ್ ಮಾಡಬೇಕು ಎಂದು ಹೇಳುತ್ತೇನೆ.

ಶ್ರೀ ಎಂ. ಹೆಚ್. ಜಯಪ್ರಕಾಶನಾರಾಯಣ್.— ೧೯೫೨ರಲ್ಲಿ ಗೌರ್ನಮೆಂಟ್ ಆಫ್ ಇಂಡಿಯಾ ಸ್ಕಾಲರ್‌ಷಿಪ್ ಜಾರಿಗೆ ತಂದಾಗ ೨೨ ರೂಪಾಯಿ ಫಿಕ್ಸ್ ಮಾಡಿದ್ದರು. ಈಗಲೂ ಅದೇ ಇದೆ.

ಶ್ರೀ ಪಿ. ಪಿ. ಹೆಗರೆ.—ಇನ್ನು ಎರಡನೆಯದಾಗಿ ಹೇಳಬೇಕಾದರೆ ಇವರುಗಳ ಅಪಾಯಿಂಟ್‌ಮೆಂಟ್ ವಿಷಯ. ಈ ವಿಷಯವನ್ನು ಗಾಂಭೀರ್ಯದಿಂದ ಹೇಳಬೇಕಾಗಿದೆ. ಸರ್ಕಾರದ ಹುದ್ದೆಯಲ್ಲಿ ಹರಿಜನ ಮತ್ತು ಗಿರಿಜನರಿಗೆ ಯಾವರೀತಿ ಅಪಾಯಿಂಟ್‌ಮೆಂಟ್ ಕೊಟ್ಟಿದ್ದಾರೆ ಎನ್ನುವುದನ್ನು ನಮ್ಮ ಮಾನ್ಯ

(ಶ್ರೀ ಪಿ. ಪಿ. ಹೆಗಡೆ)

ಮಿತ್ರರುಗಳು ಈಗಾಗಲೇ ಹೇಳಿದ್ದಾರೆ. ಕೆಲವು ವರ್ಗದಲ್ಲಿ ೨ ಪರ್ಸೆಂಟ್, ಕೆಲವು ವರ್ಗದಲ್ಲಿ ೬ ಪರ್ಸೆಂಟ್ ಕೆಲವು ವರ್ಗದಲ್ಲಿ ೪ ಪರ್ಸೆಂಟ್ ಇದರ ಮೇಲೆ ಹೋಗಿಲ್ಲ. ೩ನೇ ದರ್ಜೆಯಲ್ಲಿ ೬ ಪರ್ಸೆಂಟ್‌ಗೆ ಹೋಗಿದೆ. ೪ ನೇ ದರ್ಜೆಯಲ್ಲಿ ೧೮ ಪರ್ಸೆಂಟ್ ಅಷ್ಟು ಕೂಡ ಕೊಟ್ಟಿಲ್ಲ. ಈ ಬಗ್ಗೆ ಇನ್ನೊಂದು ಸಂಗತಿ ಹೇಳಬೇಕಾಗಿದೆ. ಅದು ಏನೆಂದರೆ ಹರಿಜನ ಮತ್ತು ಗಿರಿಜನರಿಗೆ ಅನ್ಯಾಯವಾಗಿರುವುದು ಸರ್ಕಾರೀ ಕ್ಷೇತ್ರ ಒಂದರಲ್ಲೇ ಅಲ್ಲ, ಖಾಸಗೀ ಕ್ಷೇತ್ರದಲ್ಲೂ ಕೂಡ ಅನ್ಯಾಯವಾಗಿದೆ. ಈವತ್ತಿನ ದಿವಸ ರಾಜ್ಯದಲ್ಲಿ ಸರ್ಕಾರೀ ಕ್ಷೇತ್ರದಲ್ಲಿ ಒಂದು ಹೈಸ್ಕೂಲ್ ಇದ್ದರೆ ಖಾಸಗೀ ಕ್ಷೇತ್ರದಲ್ಲಿ ೧೦ ಹೈಸ್ಕೂಲ್‌ಗಳು ಇವೆ. ಆದರಲ್ಲೂ ಈ ವರ್ಗದವರಿಗೆ ರಿಸರ್ವೇಷನ್ ಇಲ್ಲ. ಮತ್ತು ಹಾಗೆಯೇ ಸರ್ಕಾರೀ ಕ್ಷೇತ್ರದಲ್ಲಿರತಕ್ಕಂಥ ಕೈಗಾರಿಕೆ ತೆಗೆದುಕೊಳ್ಳಿ, ಖಾಸಗೀ ಕ್ಷೇತ್ರದಲ್ಲಿರುವ ಕೈಗಾರಿಕೆ ತೆಗೆದುಕೊಳ್ಳಿ, ಅದರಲ್ಲೂ ಕೂಡ ರಿಸರ್ವೇಷನ್ ಇಲ್ಲ. ಬಹಳ ಅನ್ಯಾಯ ಮಾಡುತ್ತಾ ಇದ್ದಾರೆ. ಅದೂ ಅಲ್ಲದೆ ಈ ಖಾಸಗೀ ಕ್ಷೇತ್ರದಲ್ಲಿರತಕ್ಕಂಥ ಶಿಕ್ಷಣ ಕ್ಷೇತ್ರಕ್ಕೆ ಸರ್ಕಾರದ ದುಡ್ಡು ಕೊಟ್ಟರೂ ಕೂಡ ಅವರ ಮೇಲೆ ಸರ್ಕಾರದ ಒಂದು ಹತೋಟಿ ಇಲ್ಲ ಎಂದು ಹೇಳುತ್ತೇನೆ. ಆದ್ದರಿಂದ ಸಮಾಜ ಕಲ್ಯಾಣ ಇಲಾಖಾ ಮಂತ್ರಿಗಳು ಈ ಬಗ್ಗೆ ಗಮನ ತೆಗೆದುಕೊಂಡು ಈ ಶಿಕ್ಷಣ ಸಂಸ್ಥೆಗಳು ಸರ್ಕಾರೀ ಕ್ಷೇತ್ರದಲ್ಲೇ ಇರಲಿ ಅಥವಾ ಖಾಸಗೀ ಕ್ಷೇತ್ರದಲ್ಲೇ ಇರಲಿ ಹರಿಜನ ಮತ್ತು ಗಿರಿಜನರಿಗೆ ರಾಜ್ಯಾಂಗ ಬದ್ಧವಾಗಿ ೧೮ ಪರ್ಸೆಂಟ್ ರಿಸರ್ವೇಷನ್ ಏನು ಕೊಡಬೇಕೋ ಅದನ್ನು ಕೊಡಿಸಿ ಕೊಡಬೇಕು ಎಂದು ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ಮೂರನೆಯದಾಗಿ ಯೂನಿವರ್ಸಿಟಿ ವಿಷಯ. ಈ ಯೂನಿವರ್ಸಿಟಿ ನಿಜವಾಗಿಯೂ ಜನರಿಗೆ ಬುದ್ಧಿಯನ್ನು, ಹೆಚ್ಚಿನ ಒಂದು ಜ್ಞಾನವನ್ನು ಕಲಿಸಿಕೊಡತಕ್ಕಂಥ ಒಂದು ಸ್ಥಳ. ಇದು ಒಂದು ಅಟಾನಮಸ್ ಬಾಡಿ ಆಗಿ ಸರ್ಕಾರದವರದ್ದು ಒಂದು ಹೆಚ್ಚಿನ ಪ್ರವೇಶ ಇಲ್ಲ. ಆದ್ದರಿಂದ ಈ ಯೂನಿವರ್ಸಿಟಿಯಲ್ಲಿ ಶೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಅವರಿಗೆ ಹೆಚ್ಚಿಗೆ ಪ್ರವೇಶ ಸಿಕ್ಕುತ್ತಾ ಇಲ್ಲ. ಈ ಬಗ್ಗೆ ಮಾನ್ಯ ಮಂತ್ರಿಗಳು ಹೆಚ್ಚಿನ ಒಂದು ನಿಗಾ ಕೊಟ್ಟು ಅವರಿಗೆ ಅನುಕೂಲವಾಗುವ ಹಾಗೆ ಮಾಡಿಕೊಡಬೇಕು ಎಂದು ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ನಮ್ಮ ಸರ್ಕಾರದ ಕೆಲವು ಕಾಯಿದೆ ಹುಕುಂಗಳನ್ನು ನೋಡಿದರೆ ಕಾಂಟ್ರಡಿಕ್ಟರಿ ಆಗಿರುತ್ತದೆ. ಈಗ ನಮ್ಮ ಸರ್ಕಾರದವರು ಒಂದು ಯೋಜನೆ ಹಾಕಿಕೊಂಡಿದ್ದಾರೆ. ಅದು ಯಾವುದೆಂದರೆ ಬಡ ಜನರಿಗೆ ಮನೆಗಳನ್ನು ಕಟ್ಟಿಕೊಡುವುದು ಮತ್ತು ಲ್ಯಾಂಡ್ ಲೆಸ್ ಪೀಪಲ್‌ಗೆ ಸೈಟುಗಳನ್ನು ಕೊಡುವ ಒಂದು ಯೋಜನೆ. ಆದರೆ ನಮ್ಮ ಉತ್ತರ ಕರ್ನಾಟಕದಲ್ಲಿ ಲ್ಯಾಂಡ್‌ಲೆಸ್ ಪೀಪಲ್ ಅಂಡ್ ಹೌಸ್‌ಲೆಸ್ ಪೀಪಲ್ ಯಾರ್‍ಯಾರು ಇದ್ದಾರೆ ಅಂತ ನಿಗದಿ ಮಾಡಿಲ್ಲ. ಅಲ್ಲಿ ಎಷ್ಟೋ ಹರಿಜನರಿಗೆ ಭೂಮಿ ಇಲ್ಲ ಮತ್ತು ಮನೆ ಇಲ್ಲ. ಮತ್ತು ಅಲ್ಲಿ ಯಾವ ಹರಿಜನರಿಗಾದರೂ ಸ್ವಲ್ಪ ಲ್ಯಾಂಡ್ ಇದ್ದರೆ, ಒಂದು ಸಣ್ಣ ಮನೆ ಇದ್ದರೆ ಅವನಿಗೆ ಎಷ್ಟೋ ಮನೆ ಇದೆ, ಎಷ್ಟೋ ಲ್ಯಾಂಡ್ ಇದೆ ಎಂದು ಹೇಳಿಬಿಡುತ್ತಾರೆ ಆದುದರಿಂದ ನಾನು ಈ ಬಗ್ಗೆ ಸರ್ಕಾರವನ್ನು ಬೆನ್ನು ಹತ್ತಿ who is the landless person ಅಂತ ಕೇಳಿದರೆ a person who is landless is a landl ss person ಅಂತ ಹೇಳುತ್ತಾರೆ.

ಇನ್ನು ಸರ್ಕಾರದವರು ಈಗಾಗಲೇ ಒಂದು ಆರ್ಡರ್ ಮಾಡಿದ್ದಾರೆ. ಅದು ಯಾವುದೆಂದರೆ ವಿಲೇಜ್ ಪಂಚಾಯತ್ ಮತ್ತು ಟೌನ್ ಪಂಚಾಯತಿಯ ಉತ್ಪನ್ನದಲ್ಲಿ ೧೮ ಪರ್ಸೆಂಟ್ ಅಷ್ಟು ಹಣವನ್ನು ಹರಿಜನರ ಅಭಿವೃದ್ಧಿಗಾಗಿ ಮೀಸಲಾಗಿಡಬೇಕು ಎಂದು ಸರ್ಕಾರದವರು ಒಂದು ಆರ್ಡರ್ ಮಾಡಿದ್ದಾರೆ. ಸರ್ಕಾರದವರು ಮಾಡಿರತಕ್ಕಂಥ ಒಂದು ಆರ್ಡರ್‌ನ್ನೇ ಓದುತ್ತೇನೆ. ಅದು ಈ ರೀತಿ ಇದೆ. "that .8% of the net Income of th Village Panchayat/ and Town Panchayat whose financial position is sound enough"... ಎಂದು ಈವತ್ತಿನ ದಿವಸ ಆ ಶಬ್ದಗಳು ಏನು ಇದೆ ಅದು ನಾಶವಾಗಿದೆ. ಅದು ಹೇಗೆಂದರೆ ತಾವು ಇದರಲ್ಲಿ whose financial position is sound enough ಅಂತ ಕೊಟ್ಟಿರುವುದರಿಂದ ಲ್ಯಾಂಡ್ ಲೆಸ್ ಪೀಪಲ್‌ಗೂ ಇದೇ ಕಾನೂನು ಅನ್ವಯಿಸುತ್ತದೆ, ಮತ್ತು ಯಾರು ಫೈನಾನ್ಷಿಯಲ್ ಪೊಸಿಷನ್ ಸೌಂಡ್ ಆಗಿರುತ್ತಾರೋ ಅವರೂ ಕೂಡ ಈ ಕಾಯಿದೆ ಒಳಗೆ ಬರುತ್ತಾರೆ ಅನ್ನುವ ಅರ್ಥವನ್ನು ಅಧಿಕಾರಿ ವರ್ಗದವರು ಉಪಯೋಗಿಸಿ they used it as a weapon against these poor people. ಆದ್ದರಿಂದ ನಾನು ಹೇಳುವುದು ಸರ್ಕಾರದವರು ಯಾವುದೇ ಕಾನೂನು ಮಾಡುವಾಗ, ಅಥವಾ ಯಾವುದೇ ಹುಕುಂ ಮಾಡುವಾಗ ಸ್ಪಷ್ಟವಾದ ಶಬ್ದಗಳನ್ನು ಉಪಯೋಗಿಸಿ ಆ ಬಗ್ಗೆ ಚೆನ್ನಾಗಿ ಸ್ಪಷ್ಟೀಕರಿಸಬೇಕು ಎಂದು ಹೇಳುತ್ತೇನೆ. ಮತ್ತು ಈ ಬೇಡಿಕೆಯ ಮೇಲೆ ನಾನು ಇನ್ನೂ ಬಹಳ ವಿಷಯಗಳ ಮೇಲೆ ಮಾತನಾಡಬೇಕಾಗಿತ್ತು. ಇದು ಸಮಯ ಇನ್ನೂ ಬೇಕಾದಷ್ಟು ಇರುವುದರಿಂದ ಅವುಗಳ ಮೇಲೆ ಮಾತನಾಡುವುದಕ್ಕೆ ಕಾಲ ಸಾಕಾಗಲಿಲ್ಲ. ಆದುದರಿಂದ

ನಾನು ನನ್ನ ಭಾಷಣವನ್ನು ಇಷ್ಟಕ್ಕೇ ಮುಕ್ತಾಯಮಾಡಿ ಮಾನ್ಯ ಉಪಾಧ್ಯಕ್ಷರು ನನಗೆ ಇಷ್ಟು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಸಿದ್ದಯ್ಯ (ಸಂತೇಮಾರನಹಳ್ಳಿ)—ಮಾನ್ಯ ಅಧ್ಯಕ್ಷರೇ ಇವೊತ್ತಿನ ದಿವಸ ಮಾನ್ಯ ಮಂತ್ರಿಗಳು ಮಂಡಿಸಿರತಕ್ಕಂಥ ಬೇಡಿಕೆಗಳನ್ನು ನಾನು ಸ್ವಾಗತಿಸುತ್ತೇನೆ. ಮತ್ತು ಅವರ ಬಗ್ಗೆ ಕೆಲವು ಸಲಹೆಗಳನ್ನು ಕೂಡ ಕೊಡುವುದಕ್ಕೆ ಇಚ್ಛೆಪಡುತ್ತೇನೆ.

ಮೊಟ್ಟ ಮೊದಲನೆಯದಾಗಿ ಹೇಳುವುದಾದರೆ ಹಿಂದುಳಿದ ಸಮಾಜದಲ್ಲಿ ಹಿಂದುಳಿದ ವರ್ಗದಲ್ಲಿರತಕ್ಕಂಥ ಜನಗಳು ಶೈಕ್ಷಣಿಕವಾಗಿ ಮತ್ತು ಆರ್ಥಿಕವಾಗಿ ಅವರ ಒಂದು ಕ್ಷೇಮವನ್ನು ಅಭಿವೃದ್ಧಿ ಮಾಡಿಕೊಳ್ಳಬೇಕು ಎಂದು ಹೇಳುತ್ತೇನೆ. ರಾಜ್ಯಾಂಗದಲ್ಲೂ ಸಹ ಇವರಿಗೋಸ್ಕರ ಒಂದು ಆದೇಶವನ್ನೂ ಕೂಡ ಇತ್ತಿದೆ. ಮತ್ತು ಈ ದಿಶೆಯಲ್ಲಿ ಸರ್ಕಾರದವರೂ ಕೂಡ ನಾನಾ ರೀತಿಯ ಕ್ರಮಗಳನ್ನು ತೆಗೆದುಕೊಂಡಿದ್ದಾರೆ. ಅದರಲ್ಲೂ ಹೇಳಬೇಕಾದರೆ ನನ್ನ ಹಿಂದೆ ಮಾತನಾಡಿರತಕ್ಕಂಥ ಅನೇಕ ಮಾನ್ಯ ಸದಸ್ಯರುಗಳು ಈ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಬಗ್ಗೆ ವಿವರವಾಗಿ ಹೇಳಿದ್ದಾರೆ. ನಾನು ಈ ಬಗ್ಗೆ ಹೇಳುವುದು ಏನೆಂದರೆ ಈ ಹಿಂದುಳಿದ ವರ್ಗದಲ್ಲಿ ಬರೇ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ಗಳು ಅಲ್ಲದೆ ಇನ್ನೂ ಇತರ ಹಿಂದುಳಿದ ವರ್ಗದ ಜನಗಳು ಸಹ ಇದ್ದಾರೆ ಎಂದು ಹೇಳಬಯಸುತ್ತೇನೆ. ಅವರುಗಳ ಕ್ಷೇಮವೂ ಸಹ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಅವರ ಕ್ಷೇಮ ಎಷ್ಟು ಪ್ರಾಮುಖ್ಯವಾದುದೋ ಅಷ್ಟೇ ಪ್ರಾಮುಖ್ಯವಾದುದು ಅವರಲ್ಲೂ ಕೂಡ ಹಿಂದೂ ಸಮಾಜದಲ್ಲಿ ಅನೇಕ ಜಾತಿ ಮತ್ತು ಇತರ ದಿಶೆಯಲ್ಲಿ ಕೆಲವು ವರ್ಗದ ಜನಗಳು ಹೆಚ್ಚು ಕಡಿಮೆ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ ಟ್ರೈಬ್ಸ್‌ಗಳು ಎಷ್ಟು ಹಿಂದುಳಿದಿದ್ದಾರೋ ಇವರೂ ಕೂಡ ಅಷ್ಟೇ ಹಿಂದುಳಿದಿದ್ದಾರೆ. ಆದರೆ ಈ ಹಿಂದುಳಿದವರ ವರ್ಗದಲ್ಲಿರುವ ಜನಗಳಿಗೂ ಮತ್ತು ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ನಲ್ಲಿ ಇರುವಂಥ ಜನಗಳಿಗೂ ಇರುವ ಒಂದೇ ಒಂದು ವ್ಯತ್ಯಾಸ ಏನೆಂದರೆ ಅಸ್ಪೃಶ್ಯತೆ. ಈ ಅಸ್ಪೃಶ್ಯತೆಯ ಒಂದು ಕಾರಣದಿಂದ ಈ ಜನಗಳಿಗೆ ಈ ರೀತಿಯ ತೊಂದರೆ ಬಂದಿವೆ. ಅಲ್ಲದೆ ಇವರು ಸಾಮಾಜಿಕವಾಗಿ, ಆರ್ಥಿಕವಾಗಿ, ಶಿಕ್ಷಣಿಕವಾಗಿ, ಹಿಂದುಳಿದಿರುವುದರಿಂದ, ಸಮಾಜದ ಈ ಒಂದು ನ್ಯೂನತೆ ಇರುವುದರಿಂದ ಇವರಿಗೂ ಸಹ ತೊಂದರೆ ಬಂದಿವೆ. ಆದುದರಿಂದ ಸರ್ಕಾರದವರು ಈ ಹಿಂದುಳಿದ ವರ್ಗದವರಿಗೆ ಸಾಕಷ್ಟು ಸಹಾಯ ಮಾಡಿ ಅವರ ಕಡೆಯೂ ಗಮನ ಹರಿಸಬೇಕು ಎಂದು ಮನವಿ ಮಾಡಿಕೊಳ್ಳುತ್ತೇನೆ ಬಹುಶಃ ಇದರಲ್ಲಿ ನಾನು ಹೇಳಬೇಕಾಗಿದ್ದರೆ ಹಿಂದೂ ಸಮಾಜದಲ್ಲೇ ಕೆಲವು ಹಿಂದುಳಿದಿರತಕ್ಕಂಥ ಜಾತಿಗಳು ಇವೆ. ಅವರ ಕಡೆಯೂ ಕೂಡ ಸಾಕಷ್ಟು ಹೆಚ್ಚಿನ ಗಮನ ಕೊಡುತ್ತಾ ಇಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಏತಕ್ಕೆಂದರೆ ಅನೇಕ ಕಡೆಗಳಲ್ಲಿ ನಾವು ನೋಡಿದ್ದೇವೆ ಅವರಿಗೆ ಒಂದು ಎಜುಕೇಷನ್ ಫೆಸಿಲಿಟೀಸ್‌ನಲ್ಲಿಯೇ ಆಗಲಿ ಅಥವಾ ಇನ್ನು ಯಾವುದಾದ್ದರೂ ಆರ್ಥಿಕ ಪರಿಸ್ಥಿತಿಯಲ್ಲಿಯಾಗಲಿ ಅವರಿಗೆ ಅಷ್ಟೊಂದು ಪ್ರಯೋಜನಕಾರಿಯಾದ ರೀತಿಯಲ್ಲಿ ದೊರೆಯುತ್ತಾ ಇಲ್ಲ.

6–00 P.M.

ಈ ಬಗ್ಗೆ, ಹೆಚ್ಚಾಗಿ ವಿದ್ಯಾಭ್ಯಾಸದಲ್ಲಿಯಾದರೂ ಅವರ ಕಡೆ ಗಮನಕೊಡಬೇಕು ಎಂದು ನಾನು ಸರ್ಕಾರದವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಕ್ಷೇಮಾಭಿವೃದ್ಧಿ ಅಷ್ಟೇ ಅಲ್ಲ, ಇನ್ನಿತರ ಹಿಂದುಳಿದ ಜನಗಳ ಕ್ಷೇಮಾಭಿವೃದ್ಧಿಯ ವಿಚಾರದಲ್ಲಿಯೂ ಸಹ ಸರ್ಕಾರದವರು ಅನೇಕ ಕೆಲಸ ಕಾರ್ಯಗಳನ್ನು ಕೈಗೊಂಡಿದ್ದಾರೆ. ಆದರೆ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ ಟ್ರೈಬ್ಸ್ ಹೈಯರ್ ಎಜುಕೇಷನ್ ಅನ್ನು ಒದಗಿಸುವ ವಿಚಾರದಲ್ಲಿ ಸರ್ಕಾರದವರು ಆಲೋಚನೆ ಮಾಡಬೇಕು. ಹಿಂದಿನ ಬಡ್ಜೆಟ್ಟಿನಲ್ಲಿ ಇವರಿಗೆ ಫಾರಿನ್ ಸ್ಕಾಲರ್‌ಷಿಪ್ಸ್ ಕೊಡತಕ್ಕ ಒಂದು ಪ್ರಾವಿಷನ್ ಇತ್ತು. ಆದರೆ ಕರೆಂಟ್ ಬಡ್ಜೆಟ್ಟಿನಲ್ಲಿ ಇಂಥ ಒಂದು ಅವಕಾಶವನ್ನು ಒದಗಿಸಲ್ಲ ದಯಮಾಡಿ ಸರ್ಕಾರದವರು ಇದನ್ನು ಕನ್‌ಸಿಡರ್ ಮಾಡಿ, ಈ ಒಂದು ಸೌಲಭ್ಯವನ್ನು ಅವರಿಗೆ ಒದಗಿಸಬೇಕು ಎಂದು ನಾನು ತಮ್ಮ ಮೂಲಕ ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ. ಏಕೆಂದರೆ ಈ ದೇಶದಲ್ಲಿ ಫಾರೀನ್ ಎಜುಕೇಷನ್ ಪ್ರಾಮುಖ್ಯವಾದದು ಎಂದು ನಾನು ಭಾವಿಸಿದ್ದೇನೆ ಇಂಥ ವಿದ್ಯಾಭ್ಯಾಸವನ್ನು ಅವರಿಗೆ ಕೊಡುವುದರ ಜೊತೆಗೆ, ಟೆಕ್ನಿಕಲ್ ಎಜುಕೇಷನ್ ಕೊಡತಕ್ಕಂಥ ಸೌಲಭ್ಯವನ್ನು ಒದಗಿಸಬೇಕು ಟೆಕ್ನಿಕಲ್ ಎಜುಕೇಷನ್ ಮತ್ತು ವೊಕೇಷನಲ್ ಎಜುಕೇಷನ್ ಅನ್ನು ಕೊಟ್ಟರೆ ಇವರಿಗೆ ಉದ್ಯೋಗಗಳನ್ನು ಒದಗಿಸುವುದಕ್ಕೆ ಅವಕಾಶವಾಗುತ್ತದೆ. ಇದರಲ್ಲಿ ಮುಖ್ಯವಾಗಿ

(ಶ್ರೀ ಕೆ. ಸಿದ್ದಯ್ಯ)

ಆಟೋರಿಕ್ಷ ಡ್ರೈವಿಂಗ್ ಸ್ಕಾಲರ್‌ಷಿಪ್ಸ್ ಅನ್ನು ಇವರಿಗೆ ಕೊಟ್ಟು, ಒಂದು ಹಾಸ್ಟೆಲನ್ನು ಸ್ಟಾರ್ಟ್ ಮಾಡಿದರೆ, ಅವರಿಗೆ ಉದ್ಯೋಗಗಳನ್ನು ದೊರಕಿಸುವುದರಿಂದ ಸಾಧ್ಯ. ಹೆವಿ ಮೋಟಾರ್ ವೆಹಿಕಲ್ಸ್ ಡ್ರೈವಿಂಗ್ ಕಲಿತಿದ್ದ ಪಕ್ಷದಲ್ಲಿ ಅನೇಕ ಉದ್ಯೋಗದ ಅವಕಾಶಗಳು ಸಿಕ್ಕುವುದಕ್ಕೆ ಅವಕಾಶವಿದೆ. ನಮ್ಮ ಕೆ.ಎಸ್.ಆರ್.ಟಿ.ಸಿ. ಯಲ್ಲಿ ಡ್ರೈವರ್ಸ್ ಕೆಟಗರಿಯಲ್ಲಿ ನಮ್ಮ ಜನಗಳ ಜನಸಂಖ್ಯೆ ಕಡಿಮೆ ಇದೆ. ಆದ್ದರಿಂದ ಸರ್ಕಾರದವರು ಈ ಬಗ್ಗೆ ಹೆಚ್ಚು ಗಮನ ಕೊಡಬೇಕು. ಈ ಸಾರಿಯಾದರೂ ಸಹ ಹೆವಿ ಮೋಟಾರ್ ಟ್ರೈನಿಂಗ್ ಕೊಡುವುದಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ. ಎಂಪ್ಲಾಯ್‌ಮೆಂಟ್ ಮತ್ತು ಟ್ರೈನಿಂಗ್ ಇನ್‌ಸ್ಟಿಟ್ಯೂಷನ್ಸ್‌ಗಳಲ್ಲಿ ಹಿಂದುಳಿದ ವರ್ಗಗಳ ಅಭ್ಯರ್ಥಿಗಳನ್ನು ಸೆಲೆಕ್ಟ್ ಮಾಡುವಾಗ, ಅಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ ರೆಪ್ರೆಸೆಂಟೆಟೀವ್ಸ್ ಇದ್ದರೆ ಇದರಿಂದ ಬಹುಶಃ ಬಹಳ ಮಟ್ಟಿಗೆ ಸಹಾಯವಾಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಸೆಲೆಕ್ಷನ್ ಕಮಿಟಿಗಳಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ ರೆಪ್ರೆಸೆಂಟೆಟೀವ್ಸ್‌ಗಳನ್ನು ಇಟ್ಟುಕೊಳ್ಳುವುದರಿಂದ ಹೆಚ್ಚಿನ ಪ್ರಯೋಜನವಾಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ಈ ಬಗ್ಗೆ ಸರ್ಕಾರದವರು ಪರಿಶೀಲನೆ ಮಾಡಿ ಇವರಿಗೆ ಪ್ರಾತಿನಿಧ್ಯ ಕೊಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಎರಡನೆಯದಾಗಿ, ಇವರ ಆರ್ಥಿಕ ಅಭಿವೃದ್ಧಿಯ ಬಗ್ಗೆ ಅನೇಕ ಕೆಲಸಕಾರ್ಯಗಳನ್ನು ಸರ್ಕಾರದವರು ತೆಗೆದುಕೊಂಡಿದ್ದಾರೆ. ಆದರೆ ಅದು ಸಾಕಷ್ಟು ಮಟ್ಟಿಗೆ ಅವರ ಜನಸಂಖ್ಯೆಗೆ ಅನುಗುಣವಾಗಿ, ಅವರಿಗೆ ಇರತಕ್ಕಂಥ ಅವಶ್ಯಕತೆಗೆ ಅನುಗುಣವಾಗಿ ದೊರೆಯದೆ ಇದೆ. ಮುಖ್ಯವಾಗಿ, ತಾವು ಅಗ್ರಿಕಲ್ಚರಲ್ ಕಾಲೋನಿಗಳನ್ನು ಅನೇಕ ಕಡೆ ಮಾಡಿದ್ದೀರಿ. ಅವುಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ; ಇದರಿಂದಾಗಿ, ಅವರ ಒಂದು ಗುರಿ ಸಾಧನೆಯಾಗುವುದಿಲ್ಲ; ಮತ್ತು ಜನಗಳಿಗೂ ಯಾವ ಪ್ರಯೋಜನವೂ ಇದರಿಂದ ಆಗುತ್ತಿಲ್ಲ ಇದರ ಬಗ್ಗೆ ಹೆಚ್ಚಾಗಿ ಸರ್ಕಾರದವರು ಗಮನ ಕೊಟ್ಟು ಅಲ್ಲಿ ಕೊರತೆ ಏನು ಇದೆ ಎನ್ನುವುದನ್ನು ತಿಳಿದು, ಕಾಲೋನಿಗಳು ಸರಿಯಾಗಿ ಕೆಲಸ ಮಾಡಿ, ಅದರ ಪ್ರತಿಫಲ ಜನಗಳಿಗೆ ದೊರೆಯುವ ರೀತಿಯಲ್ಲಿ ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ತಮ್ಮ ಬಜೆಟ್ಟಿನಲ್ಲಿ ಅಗ್ರಿಕಲ್ಚರಲ್ ಕಾಲೋನಿಗೆ ಯಾವ ಒಂದು ಸೌಲಭ್ಯವನ್ನೂ ಒದಗಿಸಿಕೊಟ್ಟಿಲ್ಲದೆ: ಇದಕ್ಕೆ ಅವಕಾಶ ಮಾಡಿ ಕೊಡಬೇಕು, ಮತ್ತು ಇದರ ಕಡೆ ಆದ್ಯ ಗಮನಕೊಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ ಏಕೆಂದರೆ, ಸರ್ಕಾರದವರು ಒದಗಿಸತಕ್ಕಂಥ ಆರ್ಥಿಕ ಸಹಾಯ, ಇವೆಲ್ಲದರ ಜೊತೆಗೆ ಇದೂ ಸಹ ಬಹಳ ಪ್ರಾಮುಖ್ಯವಾದದು. ಈ ದಿಸೆಯಲ್ಲಿ ಜನಗಳ ಬಡತನವನ್ನು ನೀಗಿಸುವುದಕ್ಕೆ ಹೆಚ್ಚು ಅವಕಾಶ ಇದೆ. ಇಂಥ ಕಾಲೋನಿಗಳನ್ನು ಸಾಧ್ಯವಾದ ಮಟ್ಟಿಗೆ ಜಾಸ್ತಿ ತೆರೆಯಬೇಕು ಎಂದು ನಾನು ಸರಕಾರದವರನ್ನು ಕೇಳಿಕೊಳ್ಳುತ್ತೇನೆ. ಹರಿಜನಗಿರಿಜನರಿಗೆ ಜಮೀನನ್ನು ಕೊಡುವ ಬಗ್ಗೆ ಮಾನ್ಯ ರೆವಿನ್ಯೂ ಸಚಿವರು ಉತ್ತರ ಕೊಡುವಾಗ, ಕನಿಷ್ಟ ಪಕ್ಷ ೫೦ ಪರ್ಸೆಂಟ್ ಜಮೀನನ್ನಾದರೂ ಇವರಿಗೆ ಕೊಡುತ್ತೇವೆಂದು ಹೇಳಿದ್ದಾರೆ. ಈ ರೀತಿಯಲ್ಲಿ ಜಮೀನನ್ನು ಕೊಡುವಾಗ, ಒಂದು ಗ್ರಾಮದಲ್ಲಿ ಸ್ವಲ್ಪ ಭಾಗ, ಇನ್ನೊಂದು ಭಾಗದಲ್ಲಿ ಸ್ವಲ್ಪ ಭಾಗ ಕೊಟ್ಟರೆ ಪ್ರಯೋಜನವಾಗುವುದಿಲ್ಲ. ಒಂದೇ ಕಡೆ ಅರ್ಧ ಭಾಗ ಜಮೀನನ್ನು ಕೊಡುವುದರಿಂದ ಅವರ ಆರ್ಥಿಕ ಅಭಿವೃದ್ಧಿಯಾಗುವುದಕ್ಕೆ ಹೆಚ್ಚಿನ ಅವಕಾಶ ಇದೆಯೆಂದು ನಾನು ತಿಳಿದುಕೊಂಡಿದ್ದೇನೆ. ಕೆಲವು ಕಡೆಗಳಲ್ಲಿ ಅರ್ಧ ಭಾಗ ಜಮೀನನ್ನು ಕೊಡಬೇಕು ಎಂದರೆ ಅನೇಕ ತೊಂದರೆಗಳು ಇರಬಹುದು. ಎಲ್ಲಿ ಇಂಥ ತೊಂದರೆಗಳಿಲ್ಲವೋ ಅಂಥ ಕಡೆ ಎನ್‌ಬ್ಲಾಕ್ ಆಗಿ ಇವರಿಗೆ ಜಮೀನನ್ನು ಕೊಟ್ಟರೆ ಕಮ್ಯೂನಿಟಿ ವೆಲ್ಸ್ ಮಾಡಲಿಕ್ಕಾಗಲೀ ಇರಿಗೇಷನ್ ಫೆಸಿಲಿಟೀಸ್ ಮಾಡುವುದಕ್ಕಾಗಲೀ, ಇದರಿಂದ ಅವರ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸುವುದಕ್ಕೆ ಅವಕಾಶವಾಗುತ್ತದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ — ಮಾನ್ಯ ಸದಸ್ಯರು ಹರಿಜನಗಿರಿಜನರಿಗೆ ಒಂದೇ ಕಡೆ ಜಮೀನನ್ನು ಕೊಡಬೇಕು ಎನ್ನುವ ವಿಷಯವನ್ನು ತಿಳಿಸಿದರು. ಅಲ್ಲಿ ಪರಿಸ್ಥಿತಿ ಏನಾಗಿದೆ ಎಂದರೆ, ಸರ್ವೇ ನಂಬರ್ ವೈಸ್ ಇವರಿಗೆ ಭೂಮಿಯನ್ನು ರಿಸರ್ವೇಷನ್ ಮಾಡುವುದರಿಂದ ಉತ್ತಮವಾಗಿರುವುದನ್ನು ಬೇರೆಯವರಿಗೆ ಕೊಡುತ್ತಾರೆ. ಖಾರೀಫ್ ಜಮೀನನ್ನು ಇವರಿಗೆ ಕೊಡುತ್ತಾರೆನ್ನುವ ಆಕ್ಷೇಪಣೆ ಬಂದಿದೆ. ಇದನ್ನು ನಾನು ಆಲೋಚನೆ ಮಾಡಿ, ಸರ್ವೇ ನಂಬರ್ಸ್ ಪ್ರಕಾರ ರಿಸರ್ವೇಷನ್ ಮಾಡುವುದು ಸೂಕ್ತವಲ್ಲ, ಅನೇಕರು ಇದನ್ನು ದುರುಪಯೋಗಮಾಡಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ ಎಂದು ತಿಳಿದು ನಾನು ಆ[illegible]ವಾಗಿ ತಿಳಿಸಿದ್ದೇನೆ.

ಶ್ರೀ ಎಂ. ಬಿ. ರಾಮಸ್ವಾಮಿ — ಹರಿಜನ ಗಿರಿಜನರಿಗೆ ಎಲ್ಲಾ ಕಡೆಗಳಲ್ಲಿಯೂ ಹಳ್ಳಕೊಳ್ಳ ಇರುವಂಥ ಭೂಮಿಯು ಸಿಕ್ಕುತ್ತಿದೆ. ಬಹುಶಃ ತಾವು ಇವರಿಗೆ ಒಳ್ಳೆಯ ಭೂಮಿಯನ್ನು ಕೊಡಬೇಕು ಎಂದು ಆದೇಶ ಕೊಟ್ಟರೆ ಒಳ್ಳೆಯದು. ಇಲ್ಲದೆ ಹೋದರೆ, ಅಧಿಕಾರಿಗಳ ಕೈವಾಡದಿಂದ ಇವರಿಗೆ ಯೋಗ್ಯ ಭೂಮಿ ಸಿಕ್ಕದೇ ಇರುವುದು ಸಹಜವಾಗಿದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಹರಿಜನ ಗಿರಿಜನರಿಗೇ ಒಳ್ಳೆಯ ಭೂಮಿಯನ್ನು ಕೊಡಿ ಎಂದು ಆದೇಶ ಕೊಡಲಿಕ್ಕಾಗುತ್ತದೆಯೇ? ಇದು ಯೋಗ್ಯವೇ ಎನ್ನುವುದನ್ನು ಮಾನ್ಯ ಸದಸ್ಯರು ಆಲೋಚನೆ ಮಾಡಬೇಕು.

ಶ್ರೀ ಎಂ. ಬಿ. ರಾಮಸ್ವಾಮಿ.—ಒಳ್ಳೆಯ ಜಮೀನನ್ನು ಬೇರೆಯವರು ಲಪಟಾಯಿಸಿದ್ದರಿಂದ ಈ ಒಂದು ನಿರ್ಣಯ ತೆಗೆದುಕೊಳ್ಳಬೇಕು ಎಂದು ಹೇಳಬೇಕಾಗಿದೆ. ಇದು ಗ್ರಾಮಾಂತರ ಪ್ರದೇಶಗಳಲ್ಲಿ ನಡೆಯತಕ್ಕದ್ದು.

ಅಧ್ಯಕ್ಷರು.—ಅಂಥ ಭಯ ಇದ್ದರೆ, ಮಾನ್ಯ ಮಂತ್ರಿಗಳ ಜೊತೆಯಲ್ಲಿ ತಾವು ಚರ್ಚೆ ಮಾಡಿದರೆ ಒಳ್ಳೆಯದು, ಈ ರೀತಿ ಇಂಟರಪ್‌ಷನ್ ಮಾಡುವುದರಿಂದ ಪ್ರಯೋಜನ ಆಗುವುದಿಲ್ಲ.

ಶ್ರೀ ಕೆ. ಸಿದ್ದಯ್ಯ.—ಮಾನ್ಯ ಮಂತ್ರಿಗಳು ಹೇಳಿದ ರೀತಿಯಲ್ಲಿ ಕೆಲವು ಕಡೆ ಇಂಥ ತೊಂದರೆಗಳು ಇರಬಹುದು. ಕೊನೆಯ ಪಕ್ಷ, ಒಳ್ಳೆಯ ಜಮೀನಿನಲ್ಲಿ ಇವರಿಗೆ ಅರ್ಧ ಭಾಗವನ್ನಾದರೂ ಕೊಡಬೇಕು ಎನ್ನುವುದನ್ನು ಸರ್ಕಾರದವರು ಪರಿಶೀಲನೆ ಮಾಡಬಹುದು. ಬಹುಶಃ ಇದು ಬಗೆಹರಿಸಲಾಗದ ಸಮಸ್ಯೆ ಏನೂ ಅಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ತಾಲ್ಲೂಕು ಮಟ್ಟದಲ್ಲಿ ಲ್ಯಾಂಡ್‌ಗ್ರಾಂಟ್ ಸಮಿತಿಗಳು ಇವೆ. ಶಾಸಕರುಗಳು ಇದ್ದಾರೆ; ಉಳಿದ ಪ್ರತಿನಿಧಿಗಳು ಇದ್ದಾರೆ. ಭೂಮಿಯ ಹಂಚುವಾಗ ಇಬ್ಬರಿಗೂ ಸಮಾನ ದೃಷ್ಟಿಯಿಂದ ಯಾವುದು ಒಳ್ಳೆಯದು ಎಂದು ತೀರ್ಮಾನ ಮಾಡುವುದಕ್ಕೆ ಸಾಧ್ಯವಿದೆ. ಉತ್ತಮವಾದ ಜಮೀನನ್ನು ಇಂಥವರಿಗೆ ಕೊಡಿ ಎಂದು ಸರ್ಕಾರದ ಆದೇಶ ಕೊಡುವುದು ಸೂಕ್ತವೇ ಎನ್ನುವುದು ಮುಖ್ಯ ಪ್ರಶ್ನೆಯಾಗಿದೆ.

ಶ್ರೀ ಕೆ. ಸಿದ್ದಯ್ಯ.—ಉತ್ತಮವಾಗಿರುವ ಜಮೀನಿನಲ್ಲಿ ಅರ್ಧ ಭಾಗವನ್ನು ಇವರಿಗೆ ಕೊಡಿ ಬೇರೆಯವರಿಗೆ ಇನ್ನರ್ಧ ಭಾಗವನ್ನು ಕೊಡಿ ಎಲ್ಲಾ ಒಳ್ಳೆಯ ಜಮೀನನ್ನು ಇವರಿಗೆ ಕೊಡಿ ಎಂದು ನಾನು ಹೇಳುತ್ತಿಲ್ಲ. ಸರ್ಕಾರದಿಂದ ಈ ರೀತಿಯ ಆದೇಶ ಹೋದರೆ, ಲ್ಯಾಂಡ್ ಗ್ರಾಂಟ್ ಕಮಿಟಿಯವರು ಇದನ್ನು ಪರ್ಯಾಲೋಚನೆ ಮಾಡುವುದಕ್ಕೆ ಸಾಧ್ಯವಿದೆ. ನಿಜವಾಗಿಯೂ ಇದನ್ನು ಪರಿಶೀಲನೆ ಮಾಡಿದರೆ ಇದಕ್ಕೆ ಒಂದು ಪರಿಹಾರವನ್ನು ಕಂಡುಹಿಡಿಯಬಹುದು.

ಪರಿಹಾರವಾದರೆ ಜನಗಳಿಗೆ ಆರ್ಥಿಕವಾಗಿ ಅನುಕೂಲವಾಗುತ್ತದೆ. ಇಲ್ಲದೇ ಇದ್ದ ಪಕ್ಷದಲ್ಲಿ ನಿಜವಾದ ಪರಿಣಾಮಕಾರಿಯಾದಂಥ ಯೋಜನೆಯಾಗುವುದಿಲ್ಲವೆಂದು ನಾನು ಭಾವಿಸಿಕೊಂಡಿದ್ದೇನೆ. ಜನರಲ್ ಸ್ಕೀಂ ಕೆಳಗೆ ಅಥವಾ ಸ್ಪೆಷಲ್ ಸ್ಕೀಂ ಕೆಳಗೆ ಹರಿಜನರು ಎಲ್ಲಿ ಕಾನ್‌ಸಂಟ್ರೇಟ್ ಆಗಿದ್ದಾರೋ, ಅಂತಹ ಕಡೆ ಸರಕಾರ ಹೆಚ್ಚಿಗೆ ಇನ್‌ಷಿಯೇಟಿವ್ ತೆಗೆದುಕೊಂಡು ಅವರಿಗೆ ಕಮ್ಯೂನಿಟಿ ವೆಲ್ ಸೌಲಭ್ಯ ಮಾಡಿಕೊಟ್ಟರೆ, ದೇಶದಲ್ಲೆ ಅವರ ಆರ್ಥಿಕಾಭಿವೃದ್ಧಿಯಾಗುವುದಕ್ಕೆ ಅವಕಾಶ ಇದೆ. ಸರಕಾರ ಇದನ್ನು ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಜೊತೆಗೆ, ಈ ನಮ್ಮ ಕಾನ್‌ಸ್ಟಿಟ್ಯೂಷನ್ ಉದ್ದೇಶ ಸಾರ್ಥಕವಾಗಬೇಕಾದರೆ, ಜನಗಳನ್ನು ಒಂದು ಸಾಮಾಜಿಕ ಶೋಷಣೆಯಿಂದ ರಕ್ಷಣೆ ಮಾಡತಕ್ಕದ್ದು ಸರಕಾರದ ಒಂದು ಕರ್ತವ್ಯವಾಗಿದೆ. ಹರಿಜನರು ಗ್ರಾಮಾಂತರ ಪ್ರದೇಶಗಳಲ್ಲಿ ನಾನಾ ರೀತಿಯ ಶೋಷಣೆಗೆ ಸಿಕ್ಕಿ ಹಾಕಿಕೊಂಡಿದ್ದಾರೆ. ಇದರಲ್ಲಿ ಫೋರ್ಸ್‌ಡ್ ಲೇಬರ್ ಮತ್ತು ಸೋಶಿಯಲ್ ಬೈಕಾಟ್‌ನಿಂದ ಅವರು ಕಷ್ಟದಲ್ಲಿ ಸಿಕ್ಕಿಹಾಕಿಕೊಂಡಿದ್ದಾರೆ. ಜೀತಸಿಸ್ಟಂ ದೆಸೆಯಿಂದ ಸಣ್ಣ ಮಕ್ಕಳೂ ಸಹ ಫೋರ್ಸ್‌ಡ್ ಲೇಬರ್‌ನಿಂದ ಕಷ್ಟಕ್ಕೆ ಸಿಕ್ಕಿಕೊಂಡಿದ್ದಾರೆ. ಅವರುಗಳನ್ನು ಶಾಲೆಗಳಿಗೆ ಕಳುಹಿಸುವುದಕ್ಕೆ ಆಗುತ್ತಿಲ್ಲ. ಸ್ಕೂಲ್ ಮಾಸ್ಟರುಗಳು ಇವರ ಬಗ್ಗೆ ಸೆನ್ಸಸ್ ತೆಗೆದುಕೊಳ್ಳುವುದಕ್ಕೆ ಅವಕಾಶ ಕೊಡುವುದಿಲ್ಲ. ಅವರು ಬಹಳ ಸಂಖ್ಯೆಯಲ್ಲಿ ಇರುವುದರಿಂದಾ, ಬಡತನದಲ್ಲಿರುವುದರಿಂದ, ಈ ಜನಗಳು ತಮ್ಮ ಜೀವನಕ್ಕೆ ಬೇರೆಯವರನ್ನು ಅವಲಂಬಿಸಿಕೊಂಡಿರುವ ಸನ್ನಿವೇಶದಲ್ಲೆ ಅವರು ತಮ್ಮ ಹಕ್ಕನ್ನು ಚಲಾಯಿಸತಕ್ಕ ಶಕ್ತಿ ಇರುವುದಿಲ್ಲ. ಅವರು ಈ ಜೀತಾ ಸಿಸ್ಟಂನಲ್ಲಿ ಸಿಕ್ಕಿಕೊಂಡು ಸಣ್ಣ ಮಕ್ಕಳನ್ನು ವಿದ್ಯಾಭ್ಯಾಸಕ್ಕೆ ಕಳುಹಿಸುವುದಕ್ಕೆ ಆಗದೇ ಇರತಕ್ಕ ಸನ್ನಿವೇಶಗಳು ಇವೆ. ಇವರಿಗೆ ಕೊಡತಕ್ಕ ಕೂಲಿಯೂ ಬಹಳ ಕಡಿಮೆ ಇದೆ. ಆದುದರಿಂದ, ಸರಕಾರ ಈ ಜೀತಾ ಸಿಸ್ಟಂ ಬಗ್ಗೆ ಒಂದು ಸ್ಪೆಷಲ್ ಕಮಿಟಿ ಮಾಡಿ, ಇದರ ಬಗ್ಗೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂದು ನಾನು ಸರಕಾರವನ್ನು ಕೇಳಿಕೊಳ್ಳುತ್ತೇನೆ ಇದರ ಜೊತೆಗೆ ಹಳ್ಳಿ ಕಡೆಗಳಲ್ಲಿ ಸೋಶಿಯಲ್ ಬೈಕಾಟ್ ಇದೆ. ರಾಜ್ಯಾಂಗದಲ್ಲಿ ಅನೇಕ ರೀತಿಯಲ್ಲಿ ಸೌಕರ್ಯಗಳನ್ನು ಕೊಟ್ಟು ಪ್ರತಿಯೊಬ್ಬ ಪ್ರಜೆಗೂ ತನ್ನ ಸಿವಿಲ್ ಹಕ್ಕನ್ನು ಚಲಾಯಿಸತಕ್ಕ ಅವಕಾಶ ಇದ್ದರೂ ಸಹ, ಸಮಾಜದ ಹಿಡಿತಕ್ಕೆ ಸಿಕ್ಕತಕ್ಕ ಜನಗಳು ತಮ್ಮ ಸಿವಿಲ್ ಹಕ್ಕುಗಳನ್ನು ಚಲಾಯಿಸತಕ್ಕ ಸನ್ನಿವೇಶ ಇರುವುದಿಲ್ಲ. ಏಕೆಂದರೆ, ಅವರಲ್ಲಿ ಬಹು ಭಾಗದ ಜನ ಬಡವರು, ತಮ್ಮ ಜೀವನಕ್ಕಾಗಿ ಬೇರೆಯವರನ್ನು ಅವಲಂಬಿಸತಕ್ಕ

(ಶ್ರೀ ಕೆ. ಸುಬ್ಬಯ್ಯ)

ಸನ್ನಿವೇಶ ಇದೆ. ತಮ್ಮ ಹಕ್ಕನ್ನು ಚಲಾವಣೆ ಮಾಡುವ ಸಂದರ್ಭದಲ್ಲಿ ಸಮಾಜದ ಬಹಿಷ್ಕಾರಕ್ಕೆ ಸಿಕ್ಕುತ್ತಾರೆ. ಇಂತಹ ಸಂದರ್ಭದಲ್ಲಿ ರಾಜ್ಯಾಂಗದಲ್ಲಿ ಕೊಟ್ಟಿರುವ ಹ್ಯೂಮನ್ ರೈಟ್ಸನ್ನು ಎನ್ಫೋರ್ಸ್ ಮಾಡುವುದಕ್ಕೆ ಹೇಗೆ ಸಾಧ್ಯ? ಸಾಧ್ಯವಾಗುವುದಿಲ್ಲ. ಮಾನ್ಯ ರೆವಿನ್ಯೂ ಮಂತ್ರಿಗಳು ಇದರ ಬಗ್ಗೆ ಕೆಲವು ವಿಷಯಗಳನ್ನು ಹೇಳಿದ್ದಾರೆ.

ಟೆಂಪಲ್ಸ್ ವಿಚಾರದಲ್ಲಿ, ಸಾಮಾಜಿಕ, ಧಾರ್ಮಿಕ ಸಂಸ್ಥೆಗಳ ವಿಚಾರದಲ್ಲಿ ಸುಪ್ರೀಂ ಕೋರ್ಟಿನವರು ಒಪ್ಪಿಕೊಂಡಿದ್ದಾರೆ, ಇರತಕ್ಕ ಕಸ್ಟಂ ಟ್ರೆಡಿಷನ್ ಲಾ ಮತ್ತು ರಾಜ್ಯಾಂಗವನ್ನು ಓವರ್ ರೈಡ್ ಮಾಡುತ್ತದೆ ಎಂದು ಸಮಾಜನ ಒಂದು ಸ್ಥಿತಿ, ಒಂದು ಸ್ಟ್ರಕ್ಚರ್ ಹಿಂತ ಇಷ್ಟರ ಮಟ್ಟಿಗೆ ಇದೆ. ಅಂತಹ ಸನ್ನಿವೇಶದಲ್ಲಿ ಲಾ ಇದ್ದರೂ ಸಹ, ಅದು ಏನೂ ಮಾಡುವುದಕ್ಕಾಗುವುದಿಲ್ಲ. ಕಸ್ಟಂ ಟ್ರೆಡಿಷನ್‌ಗೆ ಸಿಕ್ಕಿಬಿಟ್ಟು ಕಾನೂನು ಇನ್ಎಫೆಕ್ಟೀವ್ ಆಗಿ ಹೋಗುತ್ತದೆ. ಈ ದೆಸೆಯಿಂದ ಸೋಷಿಯಲ್ ಬಾಯ್ ಕಾಟ್ ಬಗ್ಗೆ ಪೀನಲ್ ಪ್ರಾವಿಷನ್ಸ್ ಇರಬೇಕು, ಈ ರೀತಿ ಸೋಷಿಯಲ್ ಬಹಿಷ್ಕಾರ ಮಾಡುವ ಜನಗಳ ಮೇಲೆ ಕಾನೂನು ರೀತ್ಯಾ ಕ್ರಮ ತೆಗೆದುಕೊಳ್ಳಬೇಕು. ಆ ಜನಗಳಿಗೆ ಈ ಬಹಿಷ್ಕಾರದ ದೆಸೆಯಿಂದ ತಮ್ಮ ಜೀವನ ನಡೆಸುವುದಕ್ಕೆ ಕಷ್ಟವಾಗಿದೆ. ಅಂತಹ ಸಂದರ್ಭದಲ್ಲಿ ಸರಕಾರದ ಸಹಾಯ ಇದುವರೆಗೂ ಇಲ್ಲ. ನಾನು ಇರತಕ್ಕ ಕಾನ್ಸ್ಟಿಟ್ಯೂಯನ್ಸಿಯಲ್ಲಿ ಇಂತಹ ಅನೇಕ ಸನ್ನಿವೇಶಗಳು ಒದಗಿದ್ದು, ಜನಗಳು ಊರನ್ನು ಬಿಟ್ಟು ಅಲೆದಾಡುತ್ತಿರುವ ವಿಷಯವನ್ನೂ ಅನೇಕ ಸಲ ಹೇಳಿದ್ದೇನೆ. ಈಗಲೂ ಹೇಳುತ್ತೇನೆ, ಚಾಮರಾಜನಗರ, ಕೋಗಿಲೆವಾಡಿ ಮತ್ತು ಚಾಸಕಲು ಊರುಗಳಲ್ಲಿ ಜನಗಳು ಊರು ಬಿಟ್ಟು ಹೋಗಿದ್ದಾರೆ. ಇಂತಹ ಸನ್ನಿವೇಶಗಳ ಬಗ್ಗೆ ಸೂಕ್ತ ಪರಿಹಾರವನ್ನು ಸರಕಾರದವರು ಕೊಡಬೇಕು. ಈ ದೃಷ್ಟಿಯಿಂದ ನಮ್ಮ ಸ್ನೇಹಿತರಾದ ದೊಡ್ಡತಿಮ್ಮಪ್ಪನವರು ಸಪರೇಟ್ ವಿಲೇಜಸ್ ಇರಬೇಕೆಂದು ಹೇಳುತ್ತಿದ್ದರು. ನಾನೇ ಆಗಲೀ, ಯಾರೇ ಆಗಲಿ, ಇದನ್ನು ಒಪ್ಪಬೇಕು. ಅವರಿಗೆ ಪ್ರತ್ಯೇಕವಾಗಿ ಅಗ್ರಿಕಲ್ಚರಲ್ ಕಾಲೊನಿ ಮಾಡಿದರೆ ಒಳ್ಳೆಯದು. ಇದು ನಿಜವಾದ ಪರಿಹಾರ ಮಾರ್ಗ ಎಂದು ನಾನು ತಿಳಿದುಕೊಂಡಿದ್ದೇನೆ. ಹಾಗೆ ನಾನು ತಿಳಿದುಕೊಳ್ಳುವುದರ ಜೊತೆಗೆ ಅನೇಕ ಜನ ವಿದ್ವಾಂಸರು ಈ ಬಗ್ಗೆ ತಮ್ಮ ಅಭಿಪ್ರಾಯವನ್ನು ಹೇಳಿದ್ದಾರೆ. ಆ ಪ್ರದೇಶದಲ್ಲಿ ಪ್ರತ್ಯೇಕ ವಿಲೇಜನ್ ಮಾಡುವುದರಿಂದ ಸೂಕ್ತ ಪರಿಹಾರ ಮಾತ್ರವಲ್ಲದೆ, ನಮ್ಮ ದೇಶದ ಭದ್ರತೆ ಕೂಡ ಆಗುತ್ತದೆ ಎಂದು ತಿಳಿದುಕೊಂಡಿದ್ದೇನೆ. ಇದರಿಂದ ನಮ್ಮ ಹಿಂದೂ ಸಮಾಜದ ಭದ್ರತೆ ಇನ್ನೂ ಹೆಚ್ಚಾಗುತ್ತದೆಂದು ತಿಳಿದುಕೊಂಡಿದ್ದೇನೆ. ಒಬ್ಬರಿಗೊಬ್ಬರಿಗೆ ಇರತಕ್ಕ ಹೇಟ್ರೆಡೆನೆಸ್ ಕಡಮೆಯಾಗುತ್ತದೆ. ಇದರ ಜೊತೆಗೆ ಸವರ್ಣ ಹಿಂದೂ ಸಹೋದರರ ಜೊತೆಗೆ ಘರ್ಷಣೆಯ ಅವಕಾಶ ಕಡಮೆಯಾಗುತ್ತದೆಂದು ತಿಳಿದುಕೊಂಡಿದ್ದೇನೆ. ಈ ದೃಷ್ಟಿಯಿಂದ ಬಹುಶಃ ನಾವು ಸಾಧಾರಣವಾಗಿ ಸಾಧ್ಯವಾದ ಕಡೆಗಳಲ್ಲೆಲ್ಲಾ ಇಂತಹ ಅಗ್ರಿಕಲ್ಚರ್ ಕಾಲೋನಿಗಳನ್ನು ಮಾಡಬೇಕು. ಆಗ ಹಿಂದುಳಿದಿರತಕ್ಕ ಜನಗಳು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಅಭಿವೃದ್ಧಿಯಾಗುತ್ತಾರೆ. ಅನ್‌ಟಚಬಿಲಿಟಿ ಹೋಗಬೇಕಾದರೆ, ನಿಜವಾಗಿಯೂ ಇದು ಒಂದು ಎಫೆಕ್ಟೀವ್ ಮೆಜರ್ ಎಂದು ನಾನು ತಿಳಿದುಕೊಂಡಿದ್ದೇನೆ. ಇದಕ್ಕೆ ಸಕಾರಣವೂ ಇದೆ. ಕಳೆದ ೨೫ ವರ್ಷಗಳಿಂದ ನೋಡುವುದಾದರೆ, ಸರಕಾರ ನಾನಾ ರೀತಿಯಲ್ಲಿ ಕ್ರಮ ತೆಗೆದುಕೊಂಡಿರುವುದು ಎಲ್ಲರಿಗೂ ಗೊತ್ತಿದೆ. ಕಳೆದ ೨೫ ವರ್ಷಗಳಿಂದ ನಡೆಸಿದ ಪ್ರಚಾರದಲ್ಲಿ ಇಂಡಿಯಾದೇಶದ ೨೫ಗ್ರಾಮಗಳಲ್ಲಿಯಾದರೂ ಇದು ಹೋಗಿದೆಯೋ? ಅವರಿಗೆ ಭೂಮಿಯನ್ನು ಕೊಟ್ಟಿದ್ದಾರೆ, ೧೦-೧೫ ಸಾವಿರ ರೂಪಾಯಿಗಳನ್ನು ಕೊಟ್ಟಿದ್ದೀರಿ. ಈ ರೀತಿ ಕ್ರಮಗಳಿಂದ ಅದು ಸಾಧ್ಯವಲ್ಲ. ಸಾಧ್ಯವಾಗುವುದೂ ಇಲ್ಲ. ಅನೇಕ ಸ್ನೇಹಿತರು ಹೇಳಿದರು, ಹಿಂದೂ ಸಮಾಜದಲ್ಲಿ ಇವರಿಗೆ ಏನೂ ಅನುಕೂಲವಾಗುವುದಿಲ್ಲ ಎಂದು. ಆ ರೀತಿ ಬ್ಲೇಮ್ ಮಾಡುವುದರಿಂದ, ಪ್ರಯೋಜನವಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಹಿಂದೂ ಸಹೋದರರು ಡಾಮಿನೇಷನ್ ಮತ್ತು ಡಿಸ್ಕ್ರಿಮಿನೇಷನ್ ಮಾಡುವುದು ಅವರ ತಪ್ಪು ಅಲ್ಲವೆಂದು ಹೇಳುತ್ತೇನೆ. ಈ ರೀತಿ ಮಾಡಬೇಕಾಗಿದ್ದರೆ, ಅದಕ್ಕೆ ಕಾರಣ ಬೇರೆ ಇದೆ. ಅದಕ್ಕೆ ಹೊಂದಿಕೊಂಡು ಯಾವುದೋ ಒಂದು ನ್ಯಾಚರಲ್ ಕೋರ್ಸಿನಲ್ಲಿ ಉತ್ತೇಜನವಿದೆ, ಅದಕ್ಕೆ ತತ್ವಗಳು ಇವೆ. ಅವನ್ನು ಜಗದ್ಗುರುಗಳು ಮತ್ತು ಮಠಾಧಿಪತಿಗಳು ಮತ್ತು ಅನೇಕರು ಸಹ ಎತ್ತಿ ಹಿಡಿದಿದ್ದಾರೆ. ಯಾವ ಒಂದು ತತ್ವವನ್ನು ಹಿಂದೂ ಸಮಾಜವಲ್ಲಿ ಒಪ್ಪಿಕೊಂಡಿದ್ದಾರೆ, ಆ ತತ್ವದಲ್ಲಿ ನಂಬಿಕೆ ಇಲ್ಲದೇ ಹೋದ ಪಕ್ಷದಲ್ಲಿ ಹಿಂದೂಗಳಾಗಿರುವುದು ಸರಿಯಲ್ಲವೆಂದು ಮಹಾತ್ಮಾ ಗಾಂಧೀಜಿಯವರೂ ಕೂಡ ಒಂದು ಕಡೆ ಹೇಳಿದ್ದಾರೆ. ಕುರಾನಿನಲ್ಲಿ ಮುಸಲ್ಮಾನರು ನಂಬಿಕೆ ಬಿಟ್ಟರೆ, he ceases to be Muslim. In a similar manner, if he does not believe in Hindu Scriptures, in Hindu faiths, he ceases to be a Hindu. ಅದನ್ನು ಬಿಟ್ಟುಬಿಡಿ ಎಂದರೆ ಅದು ಹೇಗೆ ಸಾಧ್ಯ?

ಆದಕಾರಣ ಇದಕ್ಕೆ ರೆಮಿಡಿ ಏನು ಎಂದರೆ ಈ ಜನರನ್ನು ಬೇರೆ ಇಡುವುದು. ಈ ಬಗ್ಗೆ ನಮ್ಮ ಮಾನ್ಯ ಸ್ನೇಹಿತರು ಹೇಳಿದಂಥ ಅಭಿಪ್ರಾಯವನ್ನು ನಾನು ಪೂರ್ತಿಯಾಗಿ ಸಮರ್ಥನೆ ಮಾಡುತ್ತೇನೆ.

ಇನ್ನು ಕೊನೆಯದಾಗಿ ಪಂಚಾಯತ್ ರಾಜ್ ಬಗ್ಗೆ ಹೇಳಬೇಕೆಂದರೆ, ಇದರಲ್ಲಿ ಮಾಡಿರತಕ್ಕಂಥ ತತ್ವಗಳು ಏನೋ ಚೆನ್ನಾಗಿವೆ. ಮತ್ತು ಹರಿಜನ ಮತ್ತು ಗಿರಿಜನರಿಗೆ ಎಷ್ಟೋ ಗ್ರಾಂಟ್‌ಗಳನ್ನು ಸಹ ಕೊಟ್ಟಿದ್ದಾರೆ. ಆದರೆ ಆ ರೀತಿ ಕೊಟ್ಟಂತಹ ಗ್ರಾಂಟ್‌ಗಳು ಪೂರ್ತಿಯಾಗಿ ಖರ್ಚಾಗುತ್ತಿಲ್ಲ. ಈ ಬಗ್ಗೆ ಸರ್ಕಾರದವರು ಸೂಕ್ತವಾದ ಕ್ರಮ ತೆಗೆದುಕೊಂಡು ಏನು ಗ್ರಾಂಟನ್ನು ಅಲಾಟ್ ಮಾಡಲಾಗಿರುತ್ತದೋ, ಅದು ಪೂರ್ತಿಯಾಗಿ ಅವರಿಗೇ ಸೇರುವಂತೆ ನೋಡಿಕೊಳ್ಳಬೇಕು. ಮತ್ತು ಯಾವುದೇ ಕಾರಣದಿಂದಲೂ ಆ ಹಣ ಬೇರೆ ಕಡೆಗೆ ಡೈವರ್ಟ್ ಆಗದಂತೆ ನೋಡಿಕೊಳ್ಳಬೇಕು, ಮುಖ್ಯವಾಗಿ ಹಿಂದುಳಿದಿರತಕ್ಕಂಥ ಹರಿಜನ ಮತ್ತು ಗಿರಿಜನರಿಗೆ ಈ ಹಣದಿಂದ ಕುಡಿಯುವ ನೀರಿನ ಸೌಕರ್ಯವನ್ನು ಒದಗಿಸಿಕೊಡಬೇಕು ಎಂದು ಕೇಳಿಕೊಂಡು, ನನಗೆ ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

[*Madam Speaker in Chair*]

† ಶ್ರೀ ಪಿ. ಡಿ. ಬಂಗೇರ (ಸುಳ್ಯ).—ಸನ್ಮಾನ್ಯ ಅಧ್ಯಕ್ಷಿಣಿಯವರೇ, ಇಂದು ಸಮಾಜ ಕಲ್ಯಾಣ ಇಲಾಖೆಯ ಸಚಿವರು ಮಂಡಿಸಿರತಕ್ಕಂಥ ಬೇಡಿಕೆಗಳನ್ನು ಅನುಮೋದಿಸುತ್ತಿರುವುದು ಇದೇ ಪ್ರಥಮವಾದ್ದರಿಂದ ನನಗೆ ಮಾತನಾಡಲು ಸ್ವಲ್ಪ ಹೆಚ್ಚು ಕಾಲ ಕೊಡಬೇಕು. ಈ ಸಾಲಿನಲ್ಲಿ ಸಮಾಜ ಕಲ್ಯಾಣ ಇಲಾಖೆಗೆ ಒದಗಿಸಿರುವ ಹಣ ಕಡಿಮೆಯಾಗಿದ್ದರೂ ಸಹ ೧೯೭೩ನೇ ಸಾಲಿನಲ್ಲಿ ಸರ್ಕಾರದವರು ಒಂದು ಸಂತೋಷದ ಕೆಲಸವನ್ನು ಮಾಡಿದ್ದಾರೆ. ಅದಕ್ಕಾಗಿ ನಾನು ಪ್ರಥಮವಾಗಿ ಮಾನ್ಯ ಬಸವಲಿಂಗಪ್ಪನವರನ್ನು ಅಭಿನಂದಿಸುತ್ತೇನೆ. ಅವರು ಮಾಡಿದಂಥ ಒಂದು ಒಳ್ಳೆಯ ಕೆಲಸವೆಂದರೆ ತಲೆಮೇಲೆ ಮಲ ಹೊರುವ ಪದ್ಧತಿಯನ್ನು ತಪ್ಪಿಸಿದ್ದು. ಇದನ್ನು ತಪ್ಪಿಸಬೇಕೆಂದು ನಾವು ಹಲವಾರು ವರ್ಷಗಳಿಂದ ಚಳುವಳಿ ಮಾಡಿದೆವು ಮತ್ತು ಸರ್ಕಾರಕ್ಕೆ ಬೇಡಿಕೆಗಳನ್ನು ಸಹ ಸಲ್ಲಿಸಿದ್ದೆವು ಆದರೆ ಆ ಕೆಲಸ ಇವರ ಕಾಲದಲ್ಲಿ ಆಯಿತು. ಅದಕ್ಕಾಗಿ ಅವರಿಗೆ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಇನ್ನು ನಮ್ಮಲ್ಲಿ ಷೆಡ್ಯೂಲ್ ಟ್ರೈಬ್‌ಗೆ ಸೇರಿದಂಥ ಮತ್ತು ಹಿಂದುಳಿದಂಥ ಕೊರಗ ಜಾತಿಯ ಜನರು ಇದ್ದಾರೆ. ಇವರು ನಿಜವಾಗಿಯೂ ಮಾನವರಾಗಿ ಬದುಕುತ್ತಿಲ್ಲ. ಏಕೆಂದರೆ ಹಿಂದುಗಳು ಊಟ ಮಾಡಿ ಬಿಸಾಕಿದ ಎಂಜಲನ್ನವನ್ನು ತಿಂದು ಇವರು ಬದುಕುತ್ತಿದ್ದಾರೆ. ಇದು ಭಾರತೀಯರಾದ ನಮಗೆ ಅಪಮಾನದ ಸಂಗತಿಯಾಗಿದೆ. ಮಾನ್ಯ ರಾಚಯ್ಯನವರು ೧೯೭೧ರಲ್ಲಿ ನಮ್ಮ ಜಿಲ್ಲೆಗೆ ಬಂದಿದ್ದಾಗ ಇದನ್ನು ಅವರ ಗಮನಕ್ಕೆ ತಂದಿದ್ದೇವೆ. ಆದಕಾರಣ ಈ ಪದ್ಧತಿಯನ್ನು ಕಾನೂನು ಮೂಲಕವಾದರೂ ತಪ್ಪಿಸುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಮತ್ತೊಂದು ಮುಖ್ಯವಾದ ಅಂಶವೆಂದರೆ, ಸರ್ಕಾರೀ ಕೆಲಸದಲ್ಲಿರುವ ಹರಿಜನರು ಮತ್ತು ಗಿರಿಜನರು ನಮ್ಮ ದಕ್ಷಿಣ ಕನ್ನಡ ಜಿಲ್ಲೆಗೆ ವರ್ಗವಾಗಿ ಬಂದರೆ ಹಿಂದುಗಳು ಅವರಿಗೆ ಮನೆಗಳನ್ನು ವಾಸಮಾಡಲು ಬಾಡಿಗೆಗೆ ಕೊಡುತ್ತಿಲ್ಲ. ಇದರಿಂದ ಅವರು ನಗರದಿಂದ ಹೊರಗೆ ಹೋಗಿ ಕಾಡಿನಲ್ಲಿ ವಾಸಮಾಡುವಂತಹ ಪರಿಸ್ಥಿತಿ ಬಂದಿದೆ. ಇಂತಹ ಕೆಲವು ನಿದರ್ಶನಗಳನ್ನು ಮಾನ್ಯ ಪ್ರಭಾಕರ್ ಅವರ ಗಮನಕ್ಕೂ ಸಹ ತಂದಿದ್ದೇನೆ. ಒಂದು ಸಲ ಮಂಗಳೂರಿಗೆ ವರ್ಗವಾಗಿ ಬಂದ ತಂದೆ ಮತ್ತು ಮಗ ಇಬ್ಬರಿಗೂ ಸಹ ಮನೆ ಸಿಗದ ಕಾರಣ ಅವರು ಸರ್ಕಾರೀ ಕೆಲಸವನ್ನೇ ಬಿಡಬೇಕಾಗಿ ಬಂತು. ಈ ರೀತಿಯಲ್ಲಿ ಹರಿಜನ ಮತ್ತು ಗಿರಿಜನರಿಗೆ ಹಿಂದುಗಳಾದವರು ಹಿಂಸೆ ಕೊಡುತ್ತಿದ್ದಾರೆ ಮತ್ತು ಉಪದ್ರವ ಕೊಡುತ್ತಿದ್ದಾರೆ. ಮುಸ್ಲಿಂ ಜನಾಂಗದವರು ಮತ್ತು ಕ್ರಿಶ್ಚಿಯನ್ ಜನಾಂಗದವರು ಮಾತ್ರ ಇವರಿಗೆ ಮನೆ ಕೊಡುತ್ತಿದ್ದಾರೆಯೇ ಹೊರತು ಹಿಂದುಗಳು ಕೊಡುತ್ತಿಲ್ಲ. ಈ ಜನರಿಗೆ ಕೇವಲ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾತ್ರವಲ್ಲ, ಇನ್ನಿತರ ಜಿಲ್ಲೆಗಳಲ್ಲಿಯೂ ಸಹ ವಾಸಕ್ಕೆ ಮನೆಗಳು ಸಿಗುತ್ತಿಲ್ಲ. ಮೈಸೂರು ಕಡೆಯಿಂದ ಕಾರ್ಕಳ, ಉಡುಪಿ, ಮಂಗಳೂರು ಮುಂತಾದ ನಗರಗಳಿಗೆ ಹರಿಜನರು ವರ್ಗವಾಗಿ ಬಂದರೆ ಹಿಂದುಗಳು ವಾಸಕ್ಕೆ ಮನೆಯನ್ನು ಕೊಡುವುದಿಲ್ಲ. ಈ ಕಾರಣದಿಂದ ಇನ್ನು ಮುಂದೆ ಸರ್ಕಾರದವರು ಸರ್ಕಾರೀ ಮನೆಗಳನ್ನು ಸರ್ಕಾರೀ ನೌಕರರಿಗೆ ಕೊಡಬೇಕೆಂದು ಸರ್ಕಾರದವರಲ್ಲಿ ಕೇಳಿಕೊಳ್ಳುತ್ತೇನೆ. ಜೊತೆಗೆ ಈ ಇಲಾಖೆಗೆ ಈಗ ಸಮಾಜ ವಿಕಾಶ ಯೋಜನೆ ಎಂದು ಏನು ಹೆಸರು ಇದೆ, ಅದನ್ನು ಬದಲಾಯಿಸಿ ಮಾನವ ವಿಕಾಶ ಯೋಜನೆ ಎಂದು ಮಾಡಬೇಕು. ಆ ರೀತಿ ಮಾಡಿದರೆ ಮಾತ್ರ ಈ ಜನರು ಮುಂದೆ ಬರಲು ಸಾಧ್ಯವಾಗುತ್ತದೆ. ಈಗ ನಮ್ಮ ಜಿಲ್ಲೆಯಲ್ಲಿ ಜಿಲ್ಲಾ ಸೋಸಿಯಲ್ ವೆಲ್‌ಫೇರ್ ಆಫೀಸ್ ಎಂಬುದು ಇದೆ. ಅಲ್ಲಿ ಒಬ್ಬರಾದರೂ ಸಿಬ್ಬಂದಿ ಇದ್ದಾರೆಯೇ ಎಂಬುದನ್ನು ತಾವು ಬಂದು ನೋಡಬೇಕು. ಹರಿಜನರ

(ಶ್ರೀ ಪಿ. ಡಿ. ಬಂಗೇರ)

ಮತ್ತು ಗಿರಿಜನರ ಮಕ್ಕಳಿಗಾಗಿ ರೆಸಿಡೆನ್ಷಿಯಲ್ ಸ್ಕೂಲನ್ನು ತೆರೆದಿದ್ದಾರೆ. ಅಲ್ಲಿ ಮಕ್ಕಳನ್ನು ಸರಿಯಾಗಿ ನೋಡಿಕೊಳ್ಳುತ್ತಿಲ್ಲ; ಒಂದು ಸಲ ನಾನು ಮತ್ತು ಮಾನ್ಯ ಕಕ್ಕಿಲ್ಲಾಯ ಅವರು ಅಲ್ಲಿಗೆ ಹೋಗಿ ಆ ಮಕ್ಕಳನ್ನು ನೋಡಿದಾಗ ನಮ್ಮ ಮನಸ್ಸು ಕಲಗಿಹೋಯಿತು. ಮತ್ತು ಮಾನ್ಯ ಕಕ್ಕಿಲ್ಲಾಯ ಅವರು ಆ ಮಕ್ಕಳ ಸ್ಥಿತಿಯನ್ನು ನೋಡಿ ಬಹಳ ಪಶ್ಚಾತ್ತಾಪ ಪಟ್ಟರು. ಆ ಮಕ್ಕಳಿಗೆ ಸರಿಯಾಗಿ ಸ್ನಾನವನ್ನೇ ಮಾಡಿಸಲಿಕ್ಕೆ ಕೆಲವು ದಿವಸಗಳಿಗೆ ಒಮ್ಮೆ ಸಹ ಬರುತ್ತಿಲ್ಲ. ಅಲ್ಲಿ ಕೆಲಸ ಮಾಡುವ ಟೀಚರ್‌ಗಳು ಮಕ್ಕಳನ್ನು ಮುಟ್ಟುವುದಿಲ್ಲ; ಅಸ್ಪೃಶ್ಯತೆ ಎಂಬುದು ಇನ್ನೂ ಜಾರಿಯಲ್ಲಿದೆ. ಅಡಿಗೆ ಮಾಡುವ ನೌಕರರು ಸಹ ಈ ಮಕ್ಕಳನ್ನು ಮುಟ್ಟುವುದಿಲ್ಲ. ಯಾರಾದರು ಅಧಿಕಾರಿಗಳು ಅಥವಾ ಮಂತ್ರಿಗಳು ಆ ಶಾಲೆಗಳನ್ನು ನೋಡುವುದಕ್ಕೆ ಬರುತ್ತಾರೆ ಎಂದು ಗೊತ್ತಾದಾಗ ಮಾತ್ರ ಆ ಮಕ್ಕಳಿಗೆ ಇಸ್ತ್ರಿ ಮಾಡಿಸಿದ ಯೂನಿಫಾರಂ ಬಟ್ಟೆಗಳನ್ನು ತೊಡಿಸುತ್ತಾರೆ. ಬಾಕಿ ಕಾಲದಲ್ಲಿ ಆ ಯೂನಿಫಾರಂ ಬಟ್ಟೆಯನ್ನು ಸಹ ಹಾಕುವುದಿಲ್ಲ. ಅದೇ ಕ್ರಿಶ್ಚಿಯನ್ ಇನ್‌ಸ್ಟಿಟ್ಯೂಷನ್‌ಗಳು ಕೆಲವು ಇವೆ. ಅಲ್ಲಿ ಕ್ಲೀನ್ ಬಹಳ ಚೆನ್ನಾಗಿ ಇರುತ್ತದೆ ಮತ್ತು ಮಕ್ಕಳಿಗೆ ಒಳ್ಳೇ ನೀತಿ ಮತ್ತು ನಿಯಮಗಳನ್ನು ಕಲಿಸುತ್ತಾರೆ. ಮಕ್ಕಳನ್ನು ಚೆನ್ನಾಗಿ ನೋಡಿಕೊಳ್ಳುತ್ತಾರೆ. ನಮ್ಮ ಮಂಗಳೂರಿನಲ್ಲಿ ಆರ್ಯ ಸಮಾಜ ಎಂಬತಕ್ಕಂಥ ಒಂದು ಆಶ್ರಮ ಉಂಟು. ಅವರು ಯಾರಾದರು ಬಿಸಾಡಿದ ಮಕ್ಕಳನ್ನು ಸಹ ಅವುಗಳಿಗೆ ಪ್ರಾಣ ಇದ್ದರೆ ತೆಗೆದುಕೊಂಡು ಹೋಗಿ ಸಾಕುತ್ತಾರೆ. ಅಂತಹ ಮಕ್ಕಳನ್ನು ಒಳ್ಳೇ ರೀತಿಯಲ್ಲಿ ತಾಯಿಗೆ ಸಮನಾಗಿ ಕಾಪಾಡುತ್ತಾರೆ. ಆದರೆ ಈ ಇಲಾಖೆಯವರು ನಡೆಸುತ್ತಿರುವ ಆಶ್ರಮ ಶಾಲೆಗಳಿಗೆ ೭ ವರ್ಷದ ನಂತರ ಬಾಲಕ ಬಾಲಕಿಯರನ್ನು ಕಳುಹಿಸಿದರೂ ಸಹ ಸರಿಯಾಗಿ ನೋಡಿಕೊಳ್ಳುತ್ತಿಲ್ಲ. ಈ ವಿಷಯವನ್ನು ನಾನು ಅತ್ಯಂತ ವಿಷಾದದಿಂದ ಹೇಳುತ್ತಿದ್ದೇನೆ.

ಇನ್ನು ಬ್ಯಾಕ್‌ವರ್ಡ್ ಕಮಿಷನ್ ರಿಪೋರ್ಟ್ ಸರಕಾರಕ್ಕೆ ಬರುವುದು ನಿಧಾನವಾಗಬಹುದು. ಆದಕಾರಣ ಅವರು ಕೊಟ್ಟಿರುವ ಇಂಟೀರಿಯಂ ರಿಪೋರ್ಟನ್ನು ಆದರೂ ಸಹ ಆದಷ್ಟು ಬೇಗ ಜಾರಿಗೆ ಕೊಡಬೇಕು ಎಂದು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಕೆಲವು ಕಡೆಗಳಲ್ಲಿ ಹರಿಜನರು ಮತ್ತು ಗಿರಿಜನರನ್ನು ಶೋಷಣೆ ಮಾಡತಕ್ಕಂಥ ಜನರು ಏನು ಮಾಡಿದ್ದಾರೆಂದರೆ, ಶ್ರೀಮತಿ ಯಶೋಧರಮ್ಮ ದಾಸಪ್ಪ ಅವರ ಕಾಲದಲ್ಲಿ ಸರ್ಕಾರದಿಂದ ಕೆಲವರಿಗೆ ಕೊಟ್ಟಿದ್ದ ಜಮೀನುಗಳನ್ನು ಇಂದು ಭೂಮಾಲೀಕರೇ ಪಡೆದುಕೊಂಡು ಬಿಟ್ಟಿದ್ದಾರೆ. ರಾಮ ಎನ್ನತಕ್ಕವನು ಒಂದು ತೋಟದ ಒಡೆಯನಾಗಿದ್ದರೆ, ಅವನಿಗೆ ಭೂಮಾಲೀಕರಾದವರು ೧೦೦ ಅಥವಾ ೨೦೦ ರೂಪಾಯಿಗಳ ಅಡ್ವಾನ್ಸ್ ಕೊಟ್ಟು ಮದುವೆ ಮಾಡಿಸಿ ಬೇರೆ ಊರಿಗೆ ಕಳುಹಿಸಿಬಿಟ್ಟು, ತಾವೇ ಅನುಭೋಗದಾರರಿಗೆ ಪ್ರತಿವರ್ಷ ಆ ಜಮೀನಿಗೆ ತೀರ್ವೆಯನ್ನು ಕಟ್ಟಿ, ಅದನ್ನು ಕಾಂಕಿ ಲ್ಯಾಂಡ್ ಎಂದು ತಾವೇ ಇಟ್ಟುಕೊಂಡಿದ್ದಾರೆ. ಮಾನ್ಯ ರೆವಿನ್ಯೂ ಸಚಿವರು ಈಗ ಇಲ್ಲಿ ಇದ್ದಾರೆ. ಅವರಿಗೆ ಇದರ ಬಗ್ಗೆ ವಿವರವಾಗಿ ಬರೆದುಕೊಡುತ್ತೇನೆ.

ಅದನ್ನು ಪರಿಶೀಲನೆ ಮಾಡಿ ಸರ್ಕಾರದವರು ವಶ ಪಡಿಸಿಕೊಂಡರೆ ಎಷ್ಟೋ ಎಕರೆ ಜಮೀನು ಸಿಕ್ಕುತ್ತದೆ ಎಂದು ನಾನು ಆಶೆ ಮಾಡುತ್ತೇನೆ. ಅದಲ್ಲದೆ ಗೇರುಬೀಜ ಉತ್ಪಾದನೆ ಮಾಡುವುದಕ್ಕೆ ಕೆಲವು ಜಮೀನುಗಳನ್ನು ಕೆಲವರಿಗೆ ಕೊಟ್ಟಿದ್ದರು. ಆ ಜಮೀನಿನಲ್ಲಿ ಯಾರು ಇಲ್ಲಿಯವರೆಗೂ ಗೇರುಬೀಜವನ್ನು ಉತ್ಪಾದನೆ ಮಾಡಿಲ್ಲ ಅಂಥಾ ಜಮೀನುಗಳನ್ನು ಸರ್ಕಾರದವರು ಹರಿಜನಗಿರಿಜನರಿಗೆ ಯಾರಿಗೆ ದರಖಾಸ್ತು ಜಮೀನು ಸಿಕ್ಕಿಲ್ಲವೋ ಅಂಥವರಿಗೆ ಕೊಡಬೇಕು ಎಂದು ನನ್ನ ವಿನಂತಿ.

೬-೩೦ ಪಿ. ಎಮ್.

ಮತ್ತೆ ಕೊರಗರನ್ನು ಷೆಡ್ಯೂಲ್ಡ್ ಟ್ರೈಬ್ಸ್ ಲಿಸ್ಟಿನಲ್ಲಿ ಸೇರಿಸಿ ಅವರಿಗೆ ಬಹಳ ಅನ್ಯಾಯವಾಗುತ್ತಿದೆ ಆದ್ದರಿಂದ ಷೆಡ್ಯೂಲ್ಡ್ ಟ್ರೈಬಿನವರಿಗೆ ಅಪಾಯಿಂಟ್‌ಮೆಂಟ್ ಕೊಡುವಾಗ ಈ ಕೊರಗ ಜನಾಂಗದವರಿಗೆ ಒಂದು ಪರ್ಸೆಂಟೇಜ್ ಫಿಕ್ಸ್ ಮಾಡಿ ಕೆಲಸಗಳನ್ನು ಕೊಡುವುದು ಉತ್ತಮ. ಏಕೆಂದರೆ ಷೆಡ್ಯೂಲ್ಡ್ ಟ್ರೈಬಿನಲ್ಲಿ ಮರಾಠಿಯವರು ಹಾಗೂ ಇನ್ನೂ ಕೆಲವು ಜನಾಂಗವನ್ನು ಸೇರಿಸಿದ್ದಾರೆ ಇದರಿಂದಾಗಿ ಕೊರಗ ಸಬ್ ಕ್ಯಾಸ್ಟಿನವರಿಗೆ ಅನ್ಯಾಯವಾಗುತ್ತಿದೆ. ಆ ಕಾರಣ ಕೊರಗ ಕಮ್ಯೂನಿಟಿ ಷೆಡ್ಯೂಲ್ಡ್ ಕ್ಯಾಸ್ಟಿನ್ ಒಂದು ಸಬ್ ಕ್ಯಾಸ್ಟ್ ಎಂದು ಹೇಳಿ ಅವರಿಗೆ ಒಂದು ಪರ್ಸೆಂಟೇಜ್ ಗೊತ್ತು ಮಾಡಿ ಅವರಿಗೆ ಕೆಲಸಗಳನ್ನು ಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಪ್ರತಿ ಪಂಚಾಯಿತಿಯ ಮೀಟಿಂಗ್ ಆಗುವಾಗ ಪಂಚಾಯಿತಿಯ ಪ್ರೆಸಿಡೆಂಟರು ಆ ಪಂಚಾಯಿತಿಯಲ್ಲಿರುವ ನಾಮಿನೇಟ್ ಮಾಡಿರುವ ಹರಿಜನಗಿರಿಜನ ಸದಸ್ಯರನ್ನು ಮೀಟಿಂಗ್ ನಡೆಯುವಾಗ ದೂರ, ಕಂಳಿ

ತುಕೊಳ್ಳಿ ಎಂದು ಹೇಳುತ್ತಾರೆ ಡಿಸ್ಟ್ರಿಕ್ಟ್ ಡೆವೆಲಪ್‌ಮೆಂಟ್ ಕೌನ್ಸಿಲ್‌ನಲ್ಲಿ ಕೂಡ ಇದೇ ರೀತಿ ಮಾಡುತ್ತಿದ್ದರು. ನಾನು ಆ ರೀತಿ ಮಾಡಕೂಡದು ಅವರನ್ನು ನಮ್ಮೆಲ್ಲರ ಜೊತೆಯಲ್ಲಿ ಮೀಟಿಂಗ್‌ನಲ್ಲಿ ಕುಳಿತುಕೊಳ್ಳುವಂತೆ ವ್ಯವಸ್ಥೆ ಮಾಡಬೇಕು ಎಂದು ಹೇಳಿದ ಮೇಲೆ ಈಗ ಅಲ್ಲಿ ಅವರನ್ನೂ ಜೊತೆಯಲ್ಲಿ ಕುರಿಸಿಕೊಂಡು ಮೀಟಿಂಗ್ ನಡೆಸುತ್ತಿದ್ದಾರೆ. ಆದರೆ ಪಂಚಾಯಿತಿಯಲ್ಲಿ ಇರತಕ್ಕ ಹರಿಜನ ಸದಸ್ಯರು ಒಳ್ಳೆಯ ವಿದ್ಯಾವಂತರು ಮತ್ತು ಒಳ್ಳೆಯ ಕೆಲಸಗಾರರು ಇದ್ದಾರೆ. ಹಾಗೆಯೇ ಕೆಲವರು ವಿದ್ಯಾವಂತರೂ ಇದ್ದಾರೆ. ಅಂಥವರನ್ನು ಪಂಚಾಯಿತಿಯ ಮೀಟಿಂಗ್ ಮಾಡುವಾಗ ಹೊರಗಡೆ ಕೂರಿಸುವಂಥಾದ್ದು ಮತ್ತು ಗರೆಟೆಯಲ್ಲಿ (ತೆಂಗಿನ ಚಿಪ್ಪಿನಲ್ಲಿ) ಕಾಫಿಯನ್ನು ಕೊಡುವ ಪ್ರಸಂಗ ಇದೆ. ಇದು ಸರಿಯಲ್ಲ ಸಮಾಜ ಕಲ್ಯಾಣ ಇಲಾಖೆಯವರು ಇನ್‌ಸ್ಪೆಕ್ಟರು ಮತ್ತು ಆಫೀಸರು ಸರಿಯಾಗಿ ಕೆಲಸ ಮಾಡುವುದಿಲ್ಲ. ಈ ಬಗ್ಗೆ ಮಾನ್ಯ ಮಂತ್ರಿಗಳಾದ ಶ್ರೀಮಾನ್ ಮಲ್ಲಿಕಾರ್ಜುನಸ್ವಾಮಿಯವರಿಗೂ ನಾನು ತಿಳಿಸಿದ್ದೇನೆ ಆದರೂ ಸಹ ಈ ಬಗ್ಗೆ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ನಮ್ಮ ಜಿಲ್ಲೆಯಲ್ಲಿ ನಾನು ಒಂದು ಕಡೆ ಸೋಷಿಯಲ್ ವೆಲ್‌ಫೇರ್ ಸೆಂಟರ್ ಸ್ಕೂಲಿಗೆ ಭೇಟಿ ಕೊಟ್ಟಾಗ ಅಲ್ಲಿ ಟೀಚರ್ಸ್ ಇರಲಿಲ್ಲ. ಸರ್ವೆಂಟ್ಸ್ ಇರಲಿಲ್ಲ. ಎಂ. ಎಲ್. ಎ. ವಿಜಿಟ್ ಮಾಡುವುದಕ್ಕೆ ಬಂದಿದ್ದಾರೆ ವಿಸಿಟಿಂಗ್ ಬುಕ್ ಕೊಡಿ ಎಂದು ಕೇಳಿದರೂ ಕೊಡಲಿಲ್ಲ ಈ ವಿಚಾರವನ್ನು ಕೂಡಲೇ ಸೋಷಿಯಲ್‌ವೆಲ್‌ಫೇರ್ ಆಫೀಸರಿಗೆ ರಿಪೋರ್ಟ್ ಮುಖಾಂತರ ಕೊಟ್ಟಿದ್ದು ಇದನ್ನು ಡೆಪ್ಯುಟಿ ಕಮಿಷನರ ಗಮನಕ್ಕೂ ತಂದಿದೆ. ಮತ್ತು ಮಾನ್ಯ ಸಚಿವರ ಗಮನಕ್ಕೂ ತಂದಿದೆ. ಆದರೆ ಆ ವಿಚಾರದಲ್ಲಿ ಇದುವರೆಗೂ ಯಾವ ಉತ್ತರವೂ ಬರಲಿಲ್ಲ, ಸಮಾಜಕಲ್ಯಾಣ ಇಲಾಖೆಯವರು ನಡೆಸುತ್ತಿರುವ ಹಾಸ್ಟಲುಗಳನ್ನು ಅಸೆಂಬ್ಲಿ ಸದಸ್ಯರು ಎಂದರೆ ಎಂ. ಎಲ್. ಎ.ಗಳು ವಿಜಿಟ್ ಮಾಡುವ ಪವರ್ ಇದೆಯೋ ಇಲ್ಲವೋ ಎಂಬುದನ್ನು ನಾನು ಕೇಳುವುದಕ್ಕೆ ಇಷ್ಟ ಪಡುತ್ತೇನೆ.

ಇದೂ ಅಲ್ಲದೆ ಮಂಗಳೂರಿನಲ್ಲಿರುವ ಟೈಲರಿಂಗ್ ಸೆಂಟರ್‌ನಲ್ಲಿ ಬಹಳ ದುರುಪಯೋಗವಾಗುತ್ತಿದೆ. ಇದನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತಂದು ವಿಜಿಲೆನ್ಸ್ ಕಮಿಷನ್ನಿಗೆ ಕೂಡ ಕಳುಹಿಸಿದೆ, ಅಲ್ಲಿಂದ ಇನ್ನು ಉತ್ತರ ಬಂದಿಲ್ಲ. ಹೀಗಿರುವಾಗ ಅಂಥಾ ವ್ಯಕ್ತಿಗೆ ಪ್ರಮೋಷನ್ ಕೊಟ್ಟು ಅಕೌಂಟೆಂಟ್ ಮಾಡಿ ಮಂಗಳೂರ ಸಮಾಜಕಲ್ಯಾಣ ಆಫೀಸಿನಲ್ಲಿ ಕೂರಿಸಿರುತ್ತಾರೆ, ಆ ವ್ಯಕ್ತಿಯ ಮೇಲೆ ಇರತಕ್ಕ ಆಪಾದನೆ ಇನ್ನೂ ಇತ್ಯಾರ್ಥವಾಗದೇ ಇರುವಾಗ ಆ ವ್ಯಕ್ತಿಯನ್ನು ಈ ರೀತಿ ಪ್ರಮೋಷನ್ ಕೊಟ್ಟು ಕೂರಿಸಿದ್ದಾರೆ ಎಂದು ಮಾನ್ಯ ಸಚಿವರ ಗಮನಕ್ಕೂ ತಂದಿದ್ದೇನೆ. ಅದನ್ನು ಪರಾಂಬರಿಸಿ ನೋಡಿ ಎಂದು ಹೇಳಿದ್ದಾನೆ. ಆದ್ದರಿಂದ ಇದನ್ನು ಮಾನ್ಯ ಮಂತ್ರಿಗಳು ಗಮನಿಸಬೇಕು ಎಂದು ಹೇಳಿ ನನಗೆ ಮಾನ್ಯ ಅಧ್ಯಕ್ಷರು ಮಾತನಾಡುವುದಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

BUSINESS OF THE HOUSE

MADAM SPEAKER —I have an anouncement to make. The Bussiness Advisory Committee at a sitting held to-day has recommended that the present sittings of the House may continue till Tuesday, the 14th May, 1974 and that there may be two sittings tommorrow the 10th May 1974. The Committee has suggested the following programme of business ;

Friday, the 10th May, 1974	Morning sitting ; Legislative Business. i) The Karnataka Agricultural Credit Operations and Miscellaneous Provisions Bill, 1974. ii) The Karnataka Motor Vehicles Taxation (Amendment) Bill, 1974. iii) Reply to the Debate on the Demands for Grants relating to the Minister for Comunity Devolopment and Social welfare.